ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ನಿಮ್ಮ ಡೈರಿಯ ನಿನ್ನೆಯ ಪುಟ ತುಂಬಿ ಹೋಗಿದೆ. ಅಲ್ಲಿ ಬರೆಯಲು ಸ್ಥಳವೇ ಇಲ್ಲ. ನಾಳಿನ ಪುಟ ಖಾಲಿಯಾಗಿದೆ. ಆ ಪುಟದಲ್ಲಿ ನೀವು ಏನನ್ನು ಬೇಕಾದರೂ ಬರೆಯಬಹುದು. ಎಲ್ಲರೂ ಮೆಚ್ಚುವ, ಎಲ್ಲರಿಗೂ ಪ್ರೇರಣೆ ಸಿಗುವ ಕಥೆಯನ್ನು ಬರೆಯಬಹುದು.

ವಕ್ರತುಂಡೋಕ್ತಿ

ಮಕ್ಕಳನ್ನು ಹೇಗೆ ಬೆಳೆಸಬೇಕು ಎಂಬುದು ಎಲ್ಲರಿಗೂ ಗೊತ್ತಿರುತ್ತದೆ. ಆದರೆ ತಂದೆ-ತಾಯಿಗೆ ಗೊತ್ತಿರುವುದಿಲ್ಲ.

ಮುಖ್ಯಮಂತ್ರಿಗಳೇ, ಸಾವಿರಾರು ಕೋಟಿ ಲೂಟಿ ಬಗ್ಗೆ ಒಪ್ಪಿ ಕೊಂಡು ರಾಜೀನಾಮೆ ಕೊಡಿ. ಮುಡಾ ಹಗರಣದಲ್ಲಿ 5 ಸಾವಿರ ಕೋಟಿಯ ಅವ್ಯವಹಾರ ವಾಗದಿದ್ದರೆ ನೀವ್ಯಾಕೆ ಸದನದಿಂದ ಓಡಿಹೋಗಿದ್ದೀರಿ? ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳು ಪ್ರತಿಪಕ್ಷಕ್ಕೆ ಗೊಡ್ಡು ಬೆದರಿಕೆ ಹಾಕಿದ್ದು ಏಕೆ?

- **ಬಿ.ವೈ.ವಿಜಯೇಂದ್ರ** ಬಿಜೆಪಿ ರಾಜ್ಯಾಧ್ಯಕ್ಷ

ನಿಮ್ಮಲ್ಲಿ ತಾಕತ್ತಿದ್ದರೆ ವಿಧಾನಸಭೆ ವಿಸರ್ಜಿಸಿ ಚುನಾವಣೆಗೆ ಬನ್ನಿ. ಆಗ ರಾಜ್ಯದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬರಲಿದೆ. ಸಿದ್ದ ರಾಮಯ್ಯನವರೇ ನನ್ನ ಬದುಕಿನ ಕೊನೆಯ ಉಸಿರು ಇರುವವರೆಗೂ ರಾಜಕೀಯದಲ್ಲಿದ್ದು, ನಿಮ್ಮನ್ನು ಮನೆಗೆ ಕಳಿಸುವೆ. ಈ ಸರಕಾರ ದಿವಾಳಿ ಯಾಗಿದೆ. ನೀವು ನಿಮ್ಮ ಭವಿಷ್ಯದ ಬಗ್ಗೆ ಯೋಚಿಸಿ.

-**ಯಡಿಯೂರಪ್ಪ** ಮಾಜಿ ಸಿಎಂ

ಸಿದ್ದರಾಮಯ್ಯ ಪರ ಬಂಡೆ ಥರ ಇದ್ದೇನೆ ಎಂದು ಶಿವಕುಮಾರ್ ಹೇಳಿದ್ದು, ಆ ಬಂಡೆಯನ್ನು ನಂಬಿ ನಾನು ಕೆಟ್ಟಿದ್ದೆ. ವಿಧಾನಸಭೆ ಚುನಾವಣೆಯಲ್ಲಿ 136 ಸ್ಥಾನ ಪಡೆದ ಕಾಂಗ್ರೆಸ್ ಲೋಕಸಭಾ ಚುನಾವಣೆಯಲ್ಲಿ 8 ಸ್ಥಾನ ಪಡೆದಿದ್ದು ಯಾಕೆ? ಆದರೆ, 9ನೇ ಸ್ಥಾನ ಹೇಗೆ ಬಂತೆಂದು ಗೊತ್ತಿದೆ.

- **ಎಚ್.ಡಿ.ಕುಮಾರಸ್ವಾಮಿ** ಕೇಂದ್ರ ಸಚಿವ

ಕಾಂಗ್ರೆಸ್ ಸರಕಾರದಿಂದ, ಸರಕಾರದ ಹಣ ಖರ್ಚು ಮಾಡಿ ಸರಕಾರವನ್ನು ಉಳಿಸಲು ರ‍್ಯಾಲಿ ನಡೆದಿತ್ತು. ಇದೊಂದು ಅಂಜುಬುರುಕ, ಹೇಡಿಗಳ ಸರಕಾರ. ಲೂಟಿಕೋರರ ಸರಕಾರ ಇದಾಗಿದೆ. ಡಿ.ಕೆ. ಶಿವಕುಮಾರರ ಅಪರಾಧ, ಭ್ರಷ್ಟಾಚಾರ, ಲೂಟಿಯ ಇತಿಹಾಸ ಯಾರಿಗೆ ಗೊತ್ತಿಲ್ಲ? ನಮ್ಮದು ಜನರಿಂದ, ಜನರಿಗಾಗಿ, ಜನರಿಗೋಸ್ಕರ ನಡೆಸಿದ ಪಾದಯಾತ್ರೆ. ನಮ್ಮ ಸಂಘರ್ಷ ಜನಾಂದೋಲನವಾಗಿ ಪರಿವರ್ತನೆ ಆಗಲಿದೆ.

-**ಡಾ. ರಾಧಾಮೋಹನ್‌ದಾಸ್** ಅಗರವಾಲ್ ರಾಜ್ಯ ಬಿಜೆಪಿ ಉಸ್ತುವಾರಿ

ಪಾದಯಾತ್ರೆ ಸಮಾರೋಪ ಸಮಾರಂಭದಲ್ಲಿ '5000 ನಿವೇಶನಗಳ ನುಂಗಿದ ಆ 14 ನಿವೇಶನಗಳು' ಪುಸ್ತಕವನ್ನು ಬಿಡುಗಡೆಗೊಳಿಸಿದ ಬಿಜೆಪಿ-ಜೆಡಿಎಸ್ ನಾಯಕರು.

ಕೇಂದ್ರ ನಾಯಕರ ಅನುಪಸ್ಥಿತಿಯಲ್ಲಿ ಸಮಾರೋಪ ಸಮಾರಂಭ

ನಾಲ್ಕೂವರೆ ಗಂಟೆ ಸರಕಾರದ ವಿರುದ್ಧ ಅಬ್ಬರಿಸಿದ ದೋಸ್ತಿ ಪಡೆ

ಸಿಎಂ ತವರಲ್ಲಿ ರಣಕಹಳೆ

ಮೈಸೂರು: ರಾಜ್ಯ ಸರಕಾರ ಹಾಗೂ ಮುಡಾ, ವಾಲ್ಮೀಕಿ ಹಗರಣದ ವಿರುದ್ಧ ಸಮರ ಸಾರಿ ಬೆಂಗಳೂರು-ಮೈಸೂರು ಪಾದಯಾತ್ರೆ ಆರಂಭಿಸಿದ್ದ ಬಿಜೆಪಿ-ಜೆಡಿಎಸ್ ನಾಯಕರ ಪಾದಯಾತ್ರೆ ಸಂಪೂರ್ಣಗೊಂಡಿದ್ದು, ರಾಜ್ಯ ಸರಕಾರದ ಭ್ರಷ್ಟಾಚಾರದ ವಿರುದ್ಧದ ಹೋರಾಟ ಕೊನೆಯಾಗುವುದಿಲ್ಲ ಎಂದು ಎಚ್ಚರಿಕೆ ರವಾನಿಸಿದ್ದಾರೆ.

ಶನಿವಾರ ಬೆಳಗ್ಗೆ ಮೈಸೂರಿನ ರಾಮಸ್ವಾಮಿ ವೃತ್ತದಿಂದ ಪಾದಯಾತ್ರೆ ಆರಂಭಗೊಂಡು, ಮಹಾರಾಜ ಕಾಲೇಜಿನವರೆಗೂ ಮುಂದುವರಿಯಿತು. ಕಾಂಗ್ರೆಸ್‌ನಿಂದ ಜನಾಂದೋಲನ ಸಭೆ ನಡೆದಿದ್ದ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲೇ ಸಮಾವೇಶ ನಡೆಸುವ ಮೂಲಕ ದೋಸ್ತಿ ಪಡೆ ಶಕ್ತಿ ಪ್ರದರ್ಶನ ನಡೆಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಮೈಸೂರು ಚಲೋ ಪಾದಯಾತ್ರೆಯ ಸಮಾರೋಪ ಸಮಾವೇಶದಲ್ಲಿ ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ರಣಕಹಳೆ ಮೊಳಗಿಸಿ ಭ್ರಷ್ಟ ಸರಕಾರ ಕಿತ್ತೊಗೆಯುವವರೆಗೂ ಹೋರಾಟ ನಿಲ್ಲದು, ಒಂದು ತಾರ್ಕಿಕ ಅಂತ್ಯಕ್ಕೆ ತಗೆದುಕೊಂಡು ಹೋಗುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಕೇಂದ್ರ ನಾಯಕರ ಗೈರು: ಬಿಜೆಪಿ-ಜೆಡಿಎಸ್‌ನ ಮೈಸೂರು ಚಲೋ ಪಾದಯಾತ್ರೆಯ ಸಮಾರೋಪ ಸಮಾವೇಶದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಜೆಡಿಎಸ್ ವರಿಷ್ಠ ದೇವೇಗೌಡರು ಭಾಗವಹಿಸುತ್ತಾರೆ ಎನ್ನಲಾಗಿತ್ತು. ಆದರೆ ಬಿಜೆಪಿಯ ಕೇಂದ್ರದ ಯಾವ ನಾಯಕರೂ ಭಾಗವಹಿಸಲಿಲ್ಲ. ದೇವೇಗೌಡ ಅವರೂ ಸಮಾವೇಶದಿಂದ ದೂರ ಉಳಿದರು. ಪಾದಯಾತ್ರೆ ಸಮಾರೋಪ ಸಮಾವೇಶಕ್ಕೆ ಅಪಾರ ಸಂಖ್ಯೆಯಲ್ಲಿ ಎರಡೂ ಪಕ್ಷಗಳ ಕಾರ್ಯಕರ್ತರು ಸೇರಿದ್ದು, ರಾಜ್ಯದ ವಿವಿಧೆಡೆಯಿಂದ ದೊಡ್ಡ ಸಂಖ್ಯೆಯಲ್ಲಿ ಜನ ಸಮಾವೇಶಕ್ಕೆ ಆಗಮಿಸಿದ್ದರು.

ಸಮಾರೋಪ ಸಮಾವೇಶದಲ್ಲಿ ಪಾಲ್ಗೊಂಡ ಎರಡೂ ಪಕ್ಷಗಳ ನಾಯಕರು, ಕಾಂಗ್ರೆಸ್ ನಾಯಕರ ವಿರುದ್ಧ ಸತತ ನಾಲ್ಕೂವರೆ ಗಂಟೆಗಳ ಕಾಲ ಒಬ್ಬರಾದ ನಂತರ ಮತ್ತೊಬ್ಬರು ಅಬ್ಬರಿಸಿದರು. ಕಾಂಗ್ರೆಸ್ ನಾಯಕರು ಬಿಡುಗಡೆಗೊಳಿಸಿದ್ದ ಮುಡಾ ಪುಸ್ತಕಕ್ಕೆ ಪ್ರತಿಯಾಗಿ, '5000 ನಿವೇಶನಗಳ ನುಂಗಿದ ಆ 14 ನಿವೇಶನಗಳು' ಎಂಬ ಪುಸ್ತಕ ಬಿಡುಗಡೆಗೊಳಿಸಿ ಕಾಂಗ್ರೆಸ್‌ಗೆ ಸಡ್ಡು ಹೊಡೆದರು.

ವೇದಿಕೆಯಲ್ಲಿ ಎರಡೂ ಪಕ್ಷಗಳ ಪ್ರಮುಖರಾದ ಬಿ.ಎಸ್.ಯಡಿಯೂರಪ್ಪ, ಎಚ್.ಡಿ.ಕುಮಾರಸ್ವಾಮಿ, ಬಿ.ವೈ.ವಿಜಯೇಂದ್ರ, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿ.ಟಿ.ದೇವೇಗೌಡ, ನಿಖಿಲ್ ಕುಮಾರಸ್ವಾಮಿ, ಪ್ರಲ್ಹಾದ್ ಜೋಶಿ, ರಾಧಾ ಮೋಹನ್ ದಾಸ್, ಸದಾನಂದಗೌಡ, ಆರ್.ಅಶೋಕ ಸೇರಿದಂತೆ ಹಲವರಿದ್ದರು.

ಕಾಂಗ್ರೆಸ್ ರೀತಿಯಲ್ಲಿಯೇ ವಿಡಿಯೊ ಪ್ರದರ್ಶನ

ಶುಕ್ರವಾರ ಕಾಂಗ್ರೆಸ್ ಸಮಾರೋಪ ಕಾರ್ಯಕ್ರಮದಲ್ಲಿ ಬಿಜೆಪಿ-ಜೆಡಿಎಸ್ ನಾಯಕರ ವಿಡಿಯೊಗಳನ್ನು ಪ್ರದರ್ಶನ ಮಾಡಿದರ ರೀತಿಯಲ್ಲಿಯೇ, ಶನಿವಾರ ದೋಸ್ತಿಗಳು ಕಾಂಗ್ರೆಸಿಗರ ಹಲವು ವಿಡಿಯೊಗಳನ್ನು ಪ್ರದರ್ಶನ ಮಾಡಿದರು. ಕುಮಾರಸ್ವಾಮಿಯವರ ಸೂಚನೆಯಂತೆ ಹಲವು ವಿಡಿಯೊಗಳನ್ನು ಪ್ರದರ್ಶನ ಮಾಡಲಾಯಿತು. ಪ್ರಮುಖವಾಗಿ ಡಿ.ಕೆ. ಶಿವಕುಮಾರ್, ಕೊತ್ವಾಲ್ ರಾಮಚಂದ್ರನ ಕೈಕಾಲು ಒತ್ತಿದ್ದ ಕುರಿತಾದ ವಿಡಿಯೊ, ತಿಹಾರ್ ಜೈಲು ಸೇರಿದ ಡಿಕೆಶಿ ಕುರಿತ ವಿವರವನ್ನು ವಿಡಿಯೊ ಮೂಲಕ ಜನರ ಮುಂದಿಡಲಾಯಿತು.

ಆಧಾರರಹಿತ ಹೋರಾಟಕ್ಕೆ, ಕಾನೂನಾತ್ಮಕ ಹೋರಾಟ: ಸಿಎಂ ಸಿದ್ದು
ಅಭಿಯೋಜನೆಗೆ ಅವಕಾಶ ನೀಡಿದರೆ ಕಾನೂನು ಹೋರಾಟ; ಪರಂ

ಪಾದಯಾತ್ರೆ ಸಂಪನ್ನ
ಕಾನೂನು ಹೋರಾಟ ಶುರು

ಬೆಂಗಳೂರು: ಮುಡಾ, ವಾಲ್ಮೀಕಿ ಅಭಿವೃದ್ಧಿ ಹಗರಣಗಳನ್ನು ಮುಂದಿಟ್ಟುಕೊಂಡು ಬಿಜೆಪಿ-ಜೆಡಿಎಸ್ ಪಾದಯಾತ್ರೆ ಮುಕ್ತಾಯ ಗೊಂಡಿದೆ. ಇದಕ್ಕೂ ಮೊದಲೇ ಕಾಂಗ್ರೆಸ್‌ನ ಜನಾಂದೋಲನ ಸಮಾವೇಶ ಸಂಪನ್ನ ಗೊಂಡಿದೆ. ಆದರೆ ಮುಡಾ ಕಾವು ಇನ್ನೂ ಆರುವ ಸಾಧ್ಯತೆಯಿಲ್ಲದೇ ಇರುವುದರಿಂದ, ಮುಂದಿನ ದಿನದಲ್ಲಿ ಕಾನೂನು ಹೋರಾಟಕ್ಕೆ ಕಾಂಗ್ರೆಸ್ ಸಿದ್ಧತೆ ನಡೆಸಿಕೊಂಡಿದೆ ಎನ್ನಲಾಗಿದೆ.

- **ರಾಜ್ಯಪಾಲರ ಮುಂದಿನ ನಡೆ ಮೇಲೆ ಕಾಂಗ್ರೆಸ್ ನಡೆ ತೀರ್ಮಾನ**
- **ಬಿಜೆಪಿ ನಾಯಕರ ಹಗರಣಗಳನ್ನು ಬಹಿರಂಗಗೊಳಿಸಲು ಸಿದ್ಧತೆ**
- **ಮುಂದಿನ ಬೆಳವಣಿಗೆ ನೋಡಿಕೊಂಡು ರಾಷ್ಟ್ರಪತಿ ಭೇಟಿಗೆ ನಿರ್ಧಾರ**

ಈ ಪ್ರಕರಣಗಳನ್ನು ಮುಂದಿಟ್ಟುಕೊಂಡು ಬಿಜೆಪಿ-ಜೆಡಿಎಸ್ ಪಾದಯಾತ್ರೆ ಆರಂಭಿಸುವ ಮೊದಲೇ ಕಾಂಗ್ರೆಸ್ ಜನಾಂದೋಲನ ಯಾತ್ರೆ ಆರಂಭಿಸುವ ಮೂಲಕ, ಪಾದಯಾತ್ರೆಯ ವೇಳೆ ಡ್ಯಾಮೇಜ್ ಆಗದಂತೆ ಎಚ್ಚರವಹಿಸಿತ್ತು. ಇದೀಗ ರಾಜಕೀಯ ಹೋರಾಟದ ಬಳಿಕ ಕಾನೂನು ಹೋರಾಟಕ್ಕೆ ವೇದಿಕೆ ಸಿದ್ಧಪಡಿಸಿಕೊಳ್ಳಲು ಕಾಂಗ್ರೆಸ್ ಮುಂದಾಗಿದೆ ಎನ್ನಲಾಗಿದೆ.

ಈ ಬಗ್ಗೆ ಮೈಸೂರಿನಲ್ಲಿ ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬಿಜೆಪಿ-ಜೆಡಿಎಸ್ ಮಾಡುತ್ತಿರುವ ಆಧಾರರಹಿತ ಆರೋಪಗಳ ವಿರುದ್ಧ ರಾಜಕೀಯವಾಗಿ ಮತ್ತು ಕಾನೂನಾತ್ಮಕವಾಗಿ ಹೋರಾಟ ನಡೆಸುತ್ತೇವೆ ಎಂದು ಎಚ್ಚರಿಸಿದ್ದಾರೆ. ಸಿದ್ದರಾಮಯ್ಯ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯಬೇಕು ಎಂಬ ಉದ್ದೇಶದಿಂದ ಆಧಾರರಹಿತ ಆರೋಪ ಮಾಡಿ ಪಾದಯಾತ್ರೆ ಮಾಡಿದ್ದಾರೆ. ಪ್ರತಿಪಕ್ಷಗಳು ಮಾಡುತ್ತಿರುವ ಆರೋಪದಲ್ಲಿ ಹುರುಳಿಲ್ಲ ಎಂಬ ಕಾರಣಕ್ಕೆ ಜನಾಂದೋಲನ ಸಮಾವೇಶ ಮಾಡಲಾಯಿತು. ಸುಳ್ಳು ಆರೋಪ ಮಾಡುತ್ತಿರುವ ಅವರ ಹಗರಣಗಳು ಬೇಕಾದಷ್ಟು ಇವೆ. ಈಗಾಗಲೇ ಕೆಲವನ್ನು ಹೇಳಿದ್ದೇವೆ. ಕೆಲವು ಇನ್ನೂ ವಿಚಾರಣೆ ಹಂತದಲ್ಲಿವೆ. ವರದಿ ಬಂದ ನಂತರ ಅವುಗಳನ್ನು ಬಹಿರಂಗ ಪಡಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

→ 4

ಸಿದ್ದರಾಮಯ್ಯ ಅವರ ವ್ಯಕ್ತಿತ್ವಕ್ಕೆ ಕಪ್ಪು ಮಸಿ ಬಳಿಯಬೇಕು ಎಂಬ ಉದ್ದೇಶದಿಂದ ಆಧಾರ ರಹಿತ ಆರೋಪ ಮಾಡಿ ಪಾದಯಾತ್ರೆ ಮಾಡಿದ್ದಾರೆ. ಪ್ರತಿಪಕ್ಷಗಳು ಮಾಡುತ್ತಿರುವ ಆರೋಪದಲ್ಲಿ ಹುರುಳಿಲ್ಲ ಎಂಬ ಕಾರಣಕ್ಕೆ ಜನಾಂದೋಲನ ಸಮಾವೇಶ ಮಾಡಲಾಯಿತು. ಆಧಾರರಹಿತವಾಗಿ ಬಿಜೆಪಿ-ಜೆಡಿಎಸ್ ಮಾಡುತ್ತಿರುವ ಆರೋಪಗಳಿಗೆ ಕಾನೂನಾತ್ಮಕ ಹೋರಾಟ ನಡೆಸುತ್ತೇವೆ.

- **ಸಿದ್ದರಾಮಯ್ಯ** ಮುಖ್ಯಮಂತ್ರಿ

ರಾಜ್ಯಪಾಲರು ಅಭಿಯೋಜನೆಗೆ ಅವಕಾಶ ನೀಡು ವುದಿಲ್ಲ ಎನ್ನುವ ವಿಶ್ವಾಸವಿದೆ. ಒಂದು ವೇಳೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ, ಕಾನೂನು ಹೋರಾಟ ನಡೆಸುತ್ತೇವೆ. ಕಾನೂನು ಹೋರಾಟ ಪ್ರಾರಂಭವಾದ ಬಳಿಕ ಮುಂದಿನ ಬೆಳವಣಿಗೆ ಏನೆಂಬುದನ್ನು ಗಮನಿಸಿ ರಾಷ್ಟ್ರಪತಿಯವರನ್ನು ಭೇಟಿ ಮಾಡಲು ನಿರ್ಧರಿಸಲಾಗುವುದು.

- **ಡಾ.ಜಿ.ಪರಮೇಶ್ವರ್** ಗೃಹ ಸಚಿವ

ಬಿಜೆಪಿ ಪಾದ ಯಾತ್ರೆ ಯನ್ನು ವರ್ಷದ 365 ದಿನವೂ ನಡೆ ಸಲಿ. ಸಿಎಂ ರಾಜೀನಾಮೆ ಕೊಡುವ ಪ್ರಶ್ನೆ, ಪರಿಸ್ಥಿತಿಯಿಲ್ಲ. ಇದು ರಾಜಕೀಯ ಷಡ್ಯಂತ್ರ. ಕುಮಾರಸ್ವಾಮಿ, ಯಡಿಯೂರಪ್ಪನವರಿಗೆ ಅಶೋಕ್, ವಿಜಯೇಂದ್ರ ಅವರಿಗೆ ಭ್ರಮೆ, ಹಗಲುಗನಸು ಕಾಣುತ್ತಿದ್ದಾರೆ.

- **ಡಿ.ಕೆ.ಶಿವಕುಮಾರ್** ಡಿಸಿಎಂ

ವಿನೇಶ್ ತೀರ್ಪು ಇಂದು

ಪ್ಯಾರಿಸ್: 100ಗ್ರಾಂ ತೂಕ ಹೆಚ್ಚಿರುವುದಕ್ಕೆ ಫೈನಲ್‌ನಿಂದ ಅನರ್ಹರಾಗಿದ್ದ ಕುಸ್ತಿಪಟು ವಿನೇಶ್ ಫೋಗಾಟ್ ಅವರು ಬೆಳ್ಳಿಗಾಗಿ ಸಿಎಎಸ್‌ಗೆ ಸಲ್ಲಿಸಿದ್ದ ಅರ್ಜಿಯ ತೀರ್ಪನ್ನು ಕೋರ್ಟ್ ಭಾನುವಾರ ನೀಡುವ ಸಾಧ್ಯತೆ ಇದೆ. ಈ ಹಿಂದೆ ಫೈನಲ್‌ಗೇರಿ ಪದಕ ಖಚಿತ ಪಡಿಸಿಕೊಂಡಿದ್ದರೂ, ಅನರ್ಹರಾಗಿದ್ದ ಫೋಗಾಟ್ ತಮಗೆ ಬೆಳ್ಳಿ ನೀಡಬೇಕೆಂದು ಅರ್ಜಿ ಸಲ್ಲಿಸಿದ್ದರು. ಈ ವಿಚಾರವಾಗಿ ಶುಕ್ರವಾರವೇ ವಾದ-ಪ್ರತಿವಾದ ನಡೆದಿದ್ದು, ತೀರ್ಪನ್ನು ಶನಿವಾರ ಪ್ರಕಟಿಸುವುದಾಗಿ ತಿಳಿಸಿದ್ದರು. ಆದರೆ ಶನಿವಾರ ತೀರ್ಪನ್ನು ಮುಂದೂಡಿದ್ದು, ಭಾನುವಾರ ಸಂಜೆ 6ಗಂಟೆಗೆ ಪ್ರಕಟಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಪುಟ ತೆರೆದಂತೆ...

ಬಾಂಗ್ಲಾದಲ್ಲಿ ಮರುಕಳಿಸಿದ ಸ್ಥಿತಿ: ತಂದೆ-ಮಗಳಿಗೆ ಒಂದೇ ಗತಿ
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ಹೀಗೊಂದು ರಾಜಕೀಯ ಟೂರು
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
ಸಂ.ಗಮ | 7



78ನೇ ಸ್ವಾತಂತ್ರ್ಯ ದಿನಾಚರಣೆ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಪರ್ವತಾರೋಹಿಗಳ ತಂಡವೊಂದು, ರಕ್ಷಣಾ ಸಚಿವಾಲಯದ ನೆರವು ಪಡೆದು, 7,800 ಚದರ ಅಡಿ ಗಾತ್ರದ ತ್ರಿವರ್ಣ ಧ್ವಜವನ್ನು ಆಫ್ರಿಕಾ ಖಂಡದ ಕಿಲಿಮಂಜಾರೊದ ಉಹುರು ಪರ್ವತದ ಶೃಂಗದಲ್ಲಿ ಅನಾವರಣ ಮಾಡಿದೆ.

ಪ್ರಧಾನಿಯಿಂದ ಚೂರಲ್‌ಮಲಾ, ಮುಂಡಕ್ಕೈ, ಪುಂಚಿರಿಮಟ್ಟಂ ಗ್ರಾಮ ವೀಕ್ಷಣೆ

ವಯನಾಡಲ್ಲಿ ವೈಮಾನಿಕ ಸಮೀಕ್ಷೆ

ವಯನಾಡ್: ಕೇರಳಕ್ಕೆ ಶನಿವಾರ ಬೆಳಗ್ಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ, ತೀವ್ರ ಸ್ವರೂಪದ ಭೂಕುಸಿತ ದಿಂದ ಅಪಾರ ಸಾವು-ನೋವು ಕಂಡು ತತ್ತರಿಸಿರುವ ಕೇರಳದ ಉತ್ತರ ಭಾಗದಲ್ಲಿನ ವಯನಾಡ್ ಜಿಲ್ಲೆಯ ಸಂತ್ರಸ್ತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದರು. ಧಾರಾಕಾರ ಮಳೆ, ಪ್ರವಾಹ, ಭೂಕುಸಿತ ಸೇರಿದಂತೆ ಸರಣಿ ಪ್ರಾಕೃತಿಕ ವಿಪತ್ತುಗಳಿಂದ 2 ಗ್ರಾಮಗಳು ನಾಮಾವಶೇಷ ವಾಗಿದ್ದರೆ, ಇನ್ನೆರಡು ಗ್ರಾಮಗಳು ಬಹುತೇಕ ಹಾನಿಗೀಡಾಗಿವೆ. ಈ ಪ್ರದೇಶದಲ್ಲಿ ಪುನರ್ವಸತಿ ಮತ್ತು ಪರಿಹಾರ ಕಾರ್ಯಗಳಿಗಾಗಿ ದೊಡ್ಡ ಮೊತ್ತದ ಅಗತ್ಯವಿದೆ ಎಂದಿರುವ ಕೇರಳ ಸರಕಾರ, ಕೇಂದ್ರ ಸರಕಾರದ ವಿಪತ್ತು ಪರಿಹಾರ ನಿಧಿಯಿಂದ 2,000 ಕೋಟಿ ರು.ಗಳ ನೆರವು ಕೋರಿದೆ.

ಸರಣಿ ಭೂಕುಸಿತದಿಂದ ತತ್ತರಿಸಿರುವ ವಯನಾಡು ಜಿಲ್ಲೆಯಲ್ಲಿ ಪರಿಹಾರ ಕಾರ್ಯಗಳನ್ನು ನಡೆಸಲು ಸಾಧ್ಯವಿರುವ ಎಲ್ಲ ರೀತಿಯ ನೆರವನ್ನು ನೀಡಲಾಗುವುದು. ದುರಂತದಿಂದ ಎಲ್ಲವನ್ನೂ ಕಳೆದುಕೊಂಡವರಿಗೆ ಪುನರ್ವಸತಿ ಕಲ್ಪಿಸಲು ಕೇರಳ ಸರಕಾರದೊಂದಿಗೆ ಕೇಂದ್ರ ನಿಲ್ಲಲಿದೆ.

- **ನರೇಂದ್ರ ಮೋದಿ** ಪ್ರಧಾನಿ

ಪ್ರಧಾನಿ ನರೇಂದ್ರ ಮೋದಿ ಮತ್ತು ಕೇರಳ ಸಿಎಂ ಪಿಣರಾಯಿ ವಿಜಯನ್ ಅವರು ಕೇರಳದ ಉತ್ತರ ಭಾಗದಲ್ಲಿನ ವಯನಾಡ್ ಜಿಲ್ಲೆಯ ಸಂತ್ರಸ್ತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದರು.

ಗಾಜಾದ ಶಾಲೆ ಮೇಲೆ ಇಸ್ರೇಲ್ ದಾಳಿ

ನೂರಕ್ಕೂ ಹೆಚ್ಚು ಮಂದಿ ಪ್ಯಾಲೆಸ್ಟೀನಿಯರು ಸಾವು

ಗಾಜಾ: ನಿರಾಶ್ರಿರಿಗೆ ಆಶ್ರಯ ನೀಡಿದ್ದ ಶಾಲೆಯೊಂದರ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ 100ಕ್ಕೂ ಹೆಚ್ಚು ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆ.

ಅಲ್-ತಬಾಯೀನ್ ಶಾಲೆಯಲ್ಲಿ ಮುಂಜಾನೆ ಪ್ರಾರ್ಥನೆ ನಡೆಯುತ್ತಿರುವ ವೇಳೆ ವೈಮಾನಿಕ ದಾಳಿ ನಡೆದಿದೆ. ಇದು ಸಾವು ನೋವುಗಳ ಹೆಚ್ಚಳಕ್ಕೆ ಕಾರಣವಾಗಿದೆ. ದಾಳಿ ಕುರಿತಂತೆ ಪ್ರತಿಕ್ರಿಯಿಸಿರುವ ಇಸ್ರೇಲ್ ವಾಯುಪಡೆ (ಐಎಫ್), ಹಮಾಸ್ ಕಮಾಂಡ್ ಸೆಂಟರ್‌ಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿತ್ತು. ಅಲ್-ತಬಾಯೀನ್ ಶಾಲೆಯಲ್ಲಿ ಅಡಗಿಕೊಂಡಿರುವ ಹಮಾಸ್ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಭಯೋತ್ಪಾದಕರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ದಾಳಿಗೂ ಮುನ್ನ ನಾಗರಿಕರಿಗೆ ಅಪಾಯವಾಗುದನ್ನು ತಪ್ಪಿಸಲು ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು ಎಂದು ಹೇಳಿದೆ.

ಮಾತಂದ್ರೆ ಮಾತು

ನಾನು ಕುಮಾರಸ್ವಾಮಿಯವರ ತಂದೆ ವಿರುದ್ಧ 1985ರಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದೆ. ಬಂಗಾರಪ್ಪನವರ ಸಂಪುಟದಲ್ಲಿ ಸಚಿವನಾಗಿದ್ದೆ. ನನ್ನ ಹಾಗೂ ಎಸ್.ಎಂ.ಕೃಷ್ಣ ಅವರ ನಡುವಣ ಸಂಬಂಧ ಕುರಿತು ಕುಮಾರಸ್ವಾಮಿಗೆ ಏನು ಗೊತ್ತಿದೆ? ಅವರಿಗೆ ಹುಚ್ಚು ಹಿಡಿದಿದೆ. ಅವರಿಗೆ ಸೂಕ್ತ ಚಿಕಿತ್ಸೆ ಕೊಡಿಸಿ ಎಂದು ಅವರ ಪಕ್ಷದವರಿಗೆ, ನಾಯಕರಿಗೆ, ಹಿತೈಷಿಗಳಿಗೆ ಹೇಳೋಣ.

-**ಡಿ.ಕೆ.ಶಿವಕುಮಾರ್**
ಉಪಮುಖ್ಯಮಂತ್ರಿ

ಯುಪಿಐ: ಭಾರತ, ಮಾಲ್ದೀವ್ಸ್ ಒಪ್ಪಂದ

ಮಾಲೆ: ಯುಪಿಐ ಪಾವತಿ ವ್ಯವಸ್ಥೆಯನ್ನು ಮಾಲ್ದೀವ್ಸ್‌ನಲ್ಲಿ ಜಾರಿಗೊಳಿಸುವ ಕುರಿತು ಉಭಯ ದೇಶಗಳು ಒಪ್ಪಂದಕ್ಕೆ ಸಹಿ ಹಾಕಿವೆ. ಇದು, ಪ್ರವಾಸೋದ್ಯಮದ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಆಶಿಸಿದ್ದಾರೆ.



ಭಾರತದ ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಮತ್ತು ಮಾಲ್ದೀವ್ಸ್‌ನ ಆರ್ಥಿಕ ಅಭಿವೃದ್ಧಿ ಸಚಿವಾಲಯದ ನಡುವೆ ಡಿಜಿಟಲ್ ಪಾವತಿ ವ್ಯವಸ್ಥೆ ಜಾರಿಗೆ ಒಪ್ಪಂದವಾಗಿದೆ ಎಂದು ಜೈಶಂಕರ್ ಎಕ್ಸ್ ಖಾತೆಯಲ್ಲಿ ಸಂದೇಶ ಹಂಚಿಕೊಂಡಿದ್ದಾರೆ.

ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳ ಆಯೋಜನೆ

ಪ್ಯಾರಿಸ್ ಒಲಿಂಪಿಕ್ಸ್‌ಗೆ ಇಂದು ತೆರೆ

ಬೆಂಗಳೂರು: ಜುಲೈ 26ರಂದು ಶುಭಾರಂಭಗೊಂಡ ಪ್ಯಾರಿಸ್ ಒಲಿಂಪಿಕ್ ಭಾನುವಾರ ಮುಕ್ತಾಯಗೊಳ್ಳಲಿದ್ದು, ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳು ಆಯೋಜನೆ ಗೊಂಡಿವೆ ಎಂದು ಪ್ಯಾರಿಸ್ ಒಲಿಂಪಿಕ್ಸ್ ಸಂಘಟನಾ ಸಮಿತಿ ಹೇಳಿದೆ. ಆಯಾ ದೇಶಗಳ ಧ್ವಜಗಳ ಪರೇಡ್ ನೊಂದಿಗೆ ಸಮಾ ರೋಪ ಸಮಾರಂಭ ಪ್ರಾರಂಭವಾಗುತ್ತದೆ. ಇದರಲ್ಲಿ ಪ್ರತಿ ರಾಷ್ಟ್ರದ ಕ್ರೀಡಾಪಟುಗಳು ತಮ್ಮ ಧ್ವಜದೊಂದಿಗೆ ಕ್ರೀಡಾಂಗಣಕ್ಕೆ ಬರಲಿದ್ದಾರೆ. ಒಲಿಂಪಿಕ್ಸ್ ಗ್ರೀಸ್‌ನಲ್ಲಿ ಹುಟ್ಟಿಕೊಂಡಿದ್ದರಿಂದ, ಗ್ರೀಕ್ ಧ್ವಜವು ಮೆರವಣಿಗೆಯನ್ನು ಮುನ್ನಡೆಸಲಿದೆ ಸಮಿತಿ ತಿಳಿಸಿದೆ.

- **ಭಾರತದ ಧ್ವಜಧಾರಿಗಳಾಗಿ ಪಿ.ಆರ್.ಶ್ರೀಜೇಶ್, ಮನು ಭಾಕರ್ ಭಾಗಿ**

ಇಬ್ಬರು ಯೋಧರು ಹುತಾತ್ಮ

ಶ್ರೀನಗರ: ಜಮ್ಮು-ಕಾಶ್ಮೀರದ ಆನಂತನಾಗ್ ಜಿಲ್ಲೆಯಲ್ಲಿ ಶನಿವಾರ ನಡೆದ ಉಗ್ರ ನಿಗ್ರಹ ಕಾರ್ಯಾಚರಣೆಯಲ್ಲಿ ಇಬ್ಬರು ಯೋಧರು ಹುತಾತ್ಮರಾಗಿದ್ದಾರೆ. ನಾಲ್ವರು ಯೋಧರು ಗಾಯಗೊಂಡಿದ್ದಾರೆ. ಅಲ್ಲದೇ ಕಾರ್ಯಾಚರಣೆ ವೇಳೆ ಇಬ್ಬರು ನಾಗರಿಕರಿಗೆ ಗುಂಡು ತಗುಲಿ ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಶನಿವಾರ ರಾತ್ರಿ ಕೂಡ ಸ್ಥಳದಲ್ಲಿ ಭದ್ರತಾ ಪಡೆಗಳು ಉಳಿದುಕೊಂಡಿವೆ. ಹೆಚ್ಚಿನ ಯೋಧರನ್ನು ಕರೆಸಿಕೊಂಡು ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಸೇನೆ ತಿಳಿಸಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ರಾಜ್ಯ ಸರ್ಕಾರದ 25 ಅಧಿಕಾರಿಗಳಿಗೆ 15 ತಿಂಗಳಿಂದ ಸುಮ್ಮನೇ ಕೂರಿಸಿ ಸಂಬಳ ಸುದ್ದಿ



ಬಾಂಗ್ಲಾ ಸಿಜೆಐ, ಕೇಂದ್ರ ಬ್ಯಾಂಕ್ ಗವರ್ನರ್ ರಾಜೀನಾಮೆ

ಪ್ರತಿಭಟನೆಗೆ ಹೆದರಿ ರಾಜೀನಾಮೆ

ಢಾಕಾ: ಮೀಸಲು ನೀತಿ ವಿರುದ್ಧದ ಹೋರಾಟದ ಕಿಚ್ಚು ಬಾಂಗ್ಲಾದೇಶದಲ್ಲಿ ಧಗಧಗಿಸುತ್ತಲೇ ಇದೆ. ಮಧ್ಯಂತರ ಸರಕಾರ ರಚನೆ ಬಳಿಕವೂ ಪ್ರತಿಭಟನಾ ಕಾರರ ಕೋಪ ತಣಿದಿಲ್ಲ. ಶನಿವಾರವೂ ಪ್ರತಿಭಟನಾ ಕಾರರು ತಮ್ಮ ಹೋರಾಟ ಮುಂದುವರಿಸಿದ್ದಾರೆ. ದೇಶದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾ.ಒಬೈದುಲ್ ಹಸನ್ ಅವ ರಿಗೇ ರಾಜೀನಾಮೆ ನೀಡು ವಂತೆ ಪ್ರತಿಭಟನಾಕಾರರ ಒತ್ತಾಯಿಸಿದ್ದು, ಸಿಜೆಐ ರಾಜೀನಾಮೆ ನೀಡಲು ನಿರ್ಧರಿಸಿದ್ದಾರೆಂದು 'ಡೈಲಿ ಸ್ಟಾರ್' ಪತ್ರಿಕೆ ಶನಿವಾರ ವರದಿ ಮಾಡಿದೆ. ಮುಖ್ಯ ನ್ಯಾ. ಒಂದೊಮ್ಮೆ ರಾಜೀನಾಮೆ ನೀಡದೇ ಇದ್ದರೆ ಸುಪ್ರೀಂಕೋರ್ಟ್‌ನ ಇತರೆ ಜಡ್ಜ್‌ಗಳ ಮನೆಗಳನ್ನು ಧ್ವಂಸಗೊಳಿಸುವುದಾಗಿ ಪ್ರತಿಭಟನಾಕಾರರು ಎಚ್ಚರಿಕೆ ನೀಡಿದ್ದಾರೆ.

→ 4

ಬ್ಯಾಂಕ್ ಗವರ್ನರ್ ರಾಜೀನಾಮೆ

ಇನ್ನೊಂದೆಡೆ ಬಾಂಗ್ಲಾದೇಶ ಕೇಂದ್ರ ಬ್ಯಾಂಕ್‌ನ ಗವರ್ನರ್ ಅಬ್ದುಲ್ ರವೂಫ್ ತಲುಕ್ದೇರ್ ಅವರೂ ರಾಜೀನಾಮೆ ನೀಡಿದ್ದಾರೆ. ಅಬ್ದುಲ್ ಅವರ ಅಧಿ ಕಾರವಧಿ ಇನ್ನೂ 2 ವರ್ಷವಿತ್ತು. ಅಬ್ದುಲ್ ಅವರು ತಮ್ಮ ರಾಜೀನಾಮೆಗೆ ವೈಯಕ್ತಿಕ ಕಾರಣ ನೀಡಿದ್ದಾರೆ ಎಂದು ವರದಿಯಾ ಗಿದೆ. ಆದರೆ, ಕೇಂದ್ರ ಬ್ಯಾಂಕ್ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಮಧ್ಯಂತರ ಸರಕಾರದ ವಿರುದ್ಧ ಆದೇಶಕ್ಕೆ ಸಂಚು

ಶೇಖ್ ಹಸೀನಾ ಅವರಿಗೆ ಆಪ್ತರಾಗಿರುವ ಸಿಜೆಐ ಒಬೈದುಲ್ ಹಸನ್, ಮಧ್ಯಂತರ ಸರಕಾರ ಕಾನೂನು ಬಾಹಿರ ಎಂದು ಘೋಷಿಸುವ ಉದ್ದೇಶ ಹೊಂದಿದ್ದರು ಎಂದು ಪ್ರತಿಭಟನಾ ಕಾರರಲ್ಲಿ ಒಬ್ಬರಾದ ಅಬ್ದುಲ್ ಮೊಖ್ದಿಂ ಆರೋಪಿಸಿದ್ದಾರೆ. ಹಾಗಾಗಿಯೇ ಅವರ ರಾಜೀನಾಮೆ ಕೇಳುವುದು ಅನಿವಾರ್ಯವಾ ಯಿತು ಎಂದಿದ್ದಾರೆ. ಸಿಜೆಐ ಒಳಸಂಚಿನ ವಿಷಯ ತಿಳಿದ ಮೇಲೆ ಕೋರ್ಟ್ ಆವರಣಕ್ಕೆ ನುಗ್ಗಿ ರಾಜೀನಾಮೆ ನೀಡಲು ಗಡುವು ವಿಧಿಸಿದ್ದಾಗಿ ಅಬ್ದುಲ್ ತಿಳಿಸಿರುವುದಾಗಿ ದ ಡೈಲಿ ಸ್ಟಾರ್ ವರದಿ ಮಾಡಿದೆ.

ವರುಣಾಘಾತಕ್ಕೆ ತುತ್ತಾದ ಅತ್ತಿಗುಂಡಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ

ಬಾಡಿತು ಅಪ್ಪು ನೆನಪಿನ ಬೆಟ್ಟದ ಹೂವು ಶಾಲೆ!

ಚಿಕ್ಕಮಗಳೂರು: ಶೀತವೇರಿದ ಗೋಡೆ, ಪಾದ ಕೊರೆಯುವ ನೆಲ, ತುಕ್ಕು ಹಿಡಿದ ಪಕಾಸು, ಪಾಚಿ ಬೆಳೆದು ನಿಂತ ಹೆಂಚಿನ ಮೇಲೆ ಹರಡಿರುವ ಟಾರ್ಪಲ್....

ಹೌದು, ಇದು 'ಬೆಟ್ಟದ ಹೂವು' ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ತಂದುಕೊಟ್ಟಿದ್ದ ಚಿಕ್ಕಮಗಳೂರು ತಾಲೂಕಿನ ಅತ್ತಿಗುಂಡಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ದುಸ್ಥಿತಿ. ಪುನೀತ್ ರಾಜ್‌ಕುಮಾರ್ ಎಂದ ತಕ್ಷಣವೇ ನೆನಪಾಗುವುದು ಕಾಫಿ ನಾಡಿನ ಈ ಶಾಲೆ. ಶರ್ಲಿ ಮೇಡಂಗೆ ಹೂವು ತರುವೆ ಎಂದು ಶಾಲೆಯಲ್ಲಿ ಹೇಳುತ್ತಿದ್ದ ಶಾಲೆ ಇದು. ಆ ಶಾಲೆಗೆ ಈಗ ವರುಣಾಘಾತವಾಗಿದೆ. ಇರುವ ಎರಡು ಕೊಠಡಿಗಳು ಸೋರುತ್ತಿದ್ದು ಟಾರ್ಪಲ್ ಹಾಕಿ ಪಾಠ ಕೇಳುವಂತಾಗಿದೆ.

1985ರಲ್ಲಿ ತೆರೆಕಂಡು, ರಾಷ್ಟ್ರ ಪ್ರಶಸ್ತಿ ಪಡೆದ ಬೆಟ್ಟದ ಹೂವು ಚಿತ್ರದಲ್ಲಿ ಅಪ್ಪು ಓದಿದ ಪಾಠ ಶಾಲೆ ಇವತ್ತಿಗೂ ಇದೆ. ಆದರೆ ಆ ಶಾಲೆಯ ಪರಿಸ್ಥಿತಿಯನ್ನು ನೋಡಿದರೆ ನಿಜಕ್ಕೂ ಬೇಸರವಾಗುತ್ತದೆ. ಇದೇ ಶಾಲೆಯಲ್ಲಿ ಬೆಟ್ಟದ ಹೂವು ಚಿತ್ರದಲ್ಲಿ ಅಪ್ಪು ವಿದ್ಯಾಭ್ಯಾಸದ ಚಿತ್ರೀಕರಣ ನಡೆದಿದ್ದು, ಚಿಕ್ಕಮಗಳೂರಿನ ಚಂದ್ರದ್ರೋಣ ಪರ್ವತ ಸಾಲಿನ ಅತ್ತಿಗುಂಡಿಯಲ್ಲಿರುವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸದ್ಯ ವರುಣಾಘಾತಕ್ಕೆ ತತ್ತರಿಸಿ ಹೋಗಿದೆ.

→ 4

11 ಮಕ್ಕಳು, ಒಬ್ಬರೇ ಶಿಕ್ಷಕರು

ಇತಿಹಾಸ ಹೊಂದಿರುವ ಚಿಕ್ಕಮಗಳೂರು ತಾಲೂಕಿನ ಅತ್ತಿಗುಂಡಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಈಗ ಒಂದರಿಂದ ಐದನೇ ತರಗತಿಯವರೆಗೆ 11 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ಒಬ್ಬ ಶಿಕ್ಷಕರಿದ್ದಾರೆ. ಮಳೆಗಾಲ ಬಂದರೆ, ಹಗಲು ರಾತ್ರಿ ಎನ್ನದೇ ಭಾರಿ ಮಳೆ ಸುರಿಯುತ್ತದೆ. ಆದರೆ, ಕಳೆದ ಬೇಸಿಗೆಯಲ್ಲಿಯೇ ಶಾಲೆಯ ದುಸ್ಥಿತಿಯ ಬಗ್ಗೆ ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗೆ ಎಸ್‌ಡಿಎಂಸಿ ಸದಸ್ಯರು ಮನವಿ ಸಲ್ಲಿಸಿದರೂ ಈವರೆಗೆ ಶಾಲೆ ದುರಸ್ತಿ ಕಾರ್ಯ ಮಾಡದ ಕಾರಣ ಈಗ ಮಕ್ಕಳು ಶೀತವೇರಿದ ಗೋಡೆಗಳ ಮಧ್ಯೆ ಸೋರುವ ಶಾಲೆಯಲ್ಲಿ ಕೂತು ಪರಿತಪಿಸುವಂತಾಗಿದೆ.

ಮುಖ್ಯಾಂಶಗಳು

- ಅಪ್ಪು ಶರ್ಲಿ ಮೇಡಂಗೆ ಹೂವು ತರುತ್ತೇನೆ ಎಂದು ಹೇಳಿದ್ದ ಶಾಲೆ
- ರಾಷ್ಟ್ರಪ್ರಶಸ್ತಿ ತಂದುಕೊಟ್ಟ ಶಾಲೆ ಬಗ್ಗೆ ನಿರ್ಲಕ್ಷ್ಯ
- ಟಾರ್ಪಲ್ ಹಾಕಿ ಪಾಠ ಹೇಳಿಕೊಡುವ ದುಸ್ಥಿತಿ
- ಶಾಲಾ ಕಟ್ಟಡ ಮಳೆಯಿಂದಾಗಿ ಶಿಥಿಲಾವಸ್ಥೆಗೆ
- ಬಿಸಿಯೂಟ, ಕುಡಿಯುವ ನೀರಿಗೂ ಸಮಸ್ಯೆ

ಸಮಾಚಾರ ಸಣ್ಣದಲ್ಲ

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಚಳ್ಳಕೆರೆ: ತಾಲೂಕಿನ ಸಿದ್ದಾಪುರ ಗ್ರಾಮದ ಶ್ರೀ ಶಾರದಾಂಬ ಗ್ರಾಮಾಂತರ ಪ್ರೌಢಶಾಲೆಯ ಆವರಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಆಯೋಜಿಸಿದ್ದ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಶಾಲೆಯ ಮುಖ್ಯ ಶಿಕ್ಷಕಿ ಶಿಲ್ಪ ಅವರು ಪರಿಸರವನ್ನು ಸಂರಕ್ಷಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದ್ದು ಇದನ್ನು ಮಾಡಿದರೆ ಮಾತ್ರ ನಾವು ಉಳಿಯಲು ಸಾಧ್ಯ ಎಂದು ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಬಗ್ಗೆ ಕಿವಿಮಾತು ಹೇಳಿದರು. ಈ ಸಸಿ ನೆಡುವ ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರಾದ ಅಂಜಿನಪ್ಪ, ಕೆಂಚಮ್ಮ, ಬಸವರಾಜ್, ಮಂಜುನಾಥ,ಶೋಭ, ತಿಪ್ಪೇಸ್ವಾಮಿ ,ಯತೀಶ್ ಎಂ ಸಿದ್ದಾಪುರ,ಮೋನಿಕ, ಸಿಬ್ಬಂದಿ ವರ್ಗದವರಾದ ನಾಗಭೂಷಣ,ಅನಿತ, ಹಾಗೂ ಶಾಲೆಯ ವಿದ್ಯಾರ್ಥಿಗಳಾದ ಲೋಹಿತ್, ರೋಹಿತ್,ಅಜಿತ್, ಪ್ರಜ್ವಲ್ ಮುಂತಾದ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಪ್ರತಿಭಾ ಕಾರಂಜಿ: ಶಾಲಾ ಮಕ್ಕಳ ಸಾಧನೆ

ಹೊಸದುರ್ಗ: ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಹುಣವಿನಡು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಹೊಸದುರ್ಗ ನಗರದ ಡಿಪೋ ಬಳಿ ಇರುವ ಎ-ಒನ್ ಪ್ರಾಥಮಿಕ ಶಾಲೆಯ ಮಕ್ಕಳು ಉತ್ತಮ ಸಾಧನೆ ಮಾಡಿದ್ದಾರೆ. ಧಾರ್ಮಿಕ ಪಠಣದಲ್ಲಿ ಅನಿಸ್, ಹಿಂದಿ ಕಂಠಪಾಠದಲ್ಲಿ ಮೆಹರ್ ನಾಜ್, ಉರ್ದು ಕಂಠಪಾಠದಲ್ಲಿ ಮೊಹಮ್ಮದ್ ಅಜಾನ್ ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಛದ್ಮವೇಷ ಲೈಭಾ ಫಿರ್ದೋಸ್, ಚಿತ್ರಕಲೆ ಮಾಹೆನೂರ್, ದೇಶಭಕ್ತಿ ಫಲಕ್ ನಾಜ್, ಅಭಿನಯಗೀತೆ ಉಮ್ಮೆಹಾನಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಕ್ಲೇ ಮಾಡಲಿಂಗ್ ಸಯ್ಯದ್ ಉಮರ್ ಫಾರೂಕ್ ತೃತಿಯ ಸ್ಥಾನ ಪಡೆದು ವಿಜೇತರು ಬಹುಮಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಈ ಯಶಸ್ಸಿಗೆ ಶ್ರಮಿಸಿದ ಶಿಕ್ಷಕರಿಗೆ ಮತ್ತು ಪೋಷಕರಿಗೆ ಉಸ್ಮಾನಿಯಾ ಹಿಂದ್ ಎಜುಕೇಷನಲ್ ಅಂಡ್ ಚಾರಿಟೇಬಲ್ ಟ್ರಸ್ಟ್ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.

ಬಾರ್‌ನಲ್ಲಿ ಕೆಲಸ: ಬಾಲ ಕಾರ್ಮಿಕ ರಕ್ಷಣೆ

ಚಿತ್ರದುರ್ಗ: ಪಾನ್-ಇಂಡಿಯಾ ರೆಸ್ಕ್ಯೂ ಅಂಡ್ ರಿಹ್ಯಾಬಿಲಿಟೇಶನ್ ಕ್ಯಾಂಪೇನ್ ಅಂಗವಾಗಿ ಹಿರಿಯೂರು ನಗರದಲ್ಲಿ ಬಾಲ್ಯ ಮತ್ತು ಕಿಶೋರಾವಸ್ಥೆ ಕಾರ್ಮಿಕ ನಿಷೇಧ ಕುರಿತು ಶುಕ್ರವಾರ ಅಧಿಕಾರಿಗಳ ತಂಡ ದಾಳಿ ನಡೆಸಿತು. ಹಿರಿಯೂರು ನಗರದ ವಿವಿಧ ವಾಣಿಜ್ಯ ಸಂಸ್ಥೆಗಳು ಹಾಗೂ ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ಭೇಟಿ ಮಾಡಿ ಪರಿಶೀಲಿಸಲಾಗಿ ಬಾರ್‌ನಲ್ಲಿ ಕೆಲಸ ಮಾಡುತ್ತಿದ್ದ ಬಾಲಕಾರ್ಮಿಕನನ್ನು ಕೆಲಸದಿಂದ ಬಿಡುಗಡೆಗೊಳಿಸಿ, ಚಿತ್ರದುರ್ಗ ಸರಕಾರಿ ಬಾಲಕರ ಬಾಲಮಂದಿರ ದಾಖಲು ಮಾಡಲಾಯಿತು. ನಂತರ ಮಾಲೀಕರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ. ತಂಡದಲ್ಲಿ ಕಾರ್ಮಿಕ ನಿರೀಕ್ಷಕ ಅಲ್ಲಾಭಕ್ಷಿ, ಬಾಲಕಾರ್ಮಿಕ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ಪಿ.ಸತೀಶ್ ಕುಮಾರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ ರಾಘವೇಂದ್ರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಿಬ್ಬಂದಿ ಶಿಲ್ಪಾ, ಪೊಲೀಸ್ ಇಲಾಖೆಯ ವಿಕಾಸ್, ಮಕ್ಕಳ ಸಹಾಯವಾಣಿ ಸಿಬ್ಬಂದಿ ಇದ್ದರು.

2ರಿಂದ ನಶಾ ಮುಕ್ತ ಭಾರತ ಅಭಿಯಾನ

ಚಿತ್ರದುರ್ಗ: 78ನೇ ಸ್ವಾತಂತ್ರ್ಯ ಮಹೋತ್ಸವದ ಅಂಗವಾಗಿ ಆಗಸ್ಟ್ 12 ರಿಂದ 15 ವರೆಗೆ ನಶಾ ಮುಕ್ತ ಭಾರತ ಅಭಿಯಾನ ಆಯೋಜಿಸಲಾಗಿದೆ. ಇದರ ಅಂಗವಾಗಿ ಆಗಸ್ಟ್ 12 ರಂದು ಬೆಳಗ್ಗೆ 9 ಗಂಟೆಗೆ ಜಿಲ್ಲೆಯ ಎಲ್ಲಾ ಶಾಲಾ ಕಾಲೇಜು, ಮಹಾವಿದ್ಯಾಲಯಗಳಲ್ಲಿ ಮಾದಕ ವಸ್ತು ಸೇವನೆ ಮಾಡದಿರಲು ಪ್ರತಿಜ್ಞಾ ಸ್ವೀಕರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಗಸ್ಟ್ 15 ವರೆಗೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು, ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ವಿಚಾರಗೋಷ್ಠಿ, ಕಾರ್ಯಾಗಾರ, ರ್‍ಯಾಲಿ, ಮ್ಯಾರಥಾನ್ ಹಾಗೂ ಬೀದಿ ನಾಟಕಗಳನ್ನು ಪ್ರಸ್ತುತಪಡಿಸಲಾಗುವುದು. ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆಯ ಮುಖ್ಯ ಅತಿಥಿಗಳ ಭಾಷಣದಲ್ಲಿ ನಶಾ ಮುಕ್ತ ಭಾರತ ಅಭಿಯಾನದ ಕುರಿತು ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದ್ದಾರೆ. ಕಾರ್ಯಕ್ರಮಗಳನ್ನು ಆಯೋಜಿಸಿರುವ ಕುರಿತು ಫೋಟೊ ವಿಡಿಯೋ ಹಾಗೂ ವರದಿಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಇ-ಮೇಲ್ ಐಡಿ ಛಿಛಿಡಿಟಟ್ಠಿಛಿಃ ಜಚಿಚಿಟ್ಟ.ಟಿಞ ಅಥವಾ ವಾಟ್ಸ್‌ಪ್ ಸಂಖ್ಯೆ 9731282405 ಕಳುಹಿಸಲು ತಿಳಿಸಿದೆ.

ಗೆಜೆಟಿಯರ್ ಪ್ರತಿ ಮಂಗಳವಾರ ಇದು ಅನುಕ್ಷಣದ ಆ್ಯಪ್

{ಗೋವಿಂದ ಕಾರಜೋಳ } ಸಂಸದ

ಸಿಎಂ ಸಿದ್ದರಾಮಯ್ಯ ಬಹುಮತ ಸಾಬೀತು ಮಾಡಬೇಕು, ರಾಜ್ಯದಲ್ಲಿ ಸರಕಾರವಾಗಿ ಉಳಿದಿಲ್ಲ, ಮೂರು ಭಾಗಗಳಾಗಿದೆ. ಒಂದು ಸಿದ್ದರಾಮಯ್ಯನವರ ಗುಂಪು, ಎರಡನೆಯದು ಡಿಕೆ ಶಿವಕುಮಾರ್ ಗುಂಪು, ಮೂರನೆಯದು ದಲಿತರ ಗುಂಪು. ವೀರಶೈವ ಲಿಂಗಾಯತರದೊಂದು ಗುಂಪು, ಅವರು ನಮಗೆ ಸಿದ್ದರಾಮಯ್ಯ ಸ್ಥಾನಗಳನ್ನು ಬಿಟ್ಟು ಕೊಡಬೇಕು ಅಂತ ಒತ್ತಾಯ ಮಾಡುತ್ತಿದ್ದಾರೆ.

ಜನಪ್ರಿಯತೆ ಸಹಿಸದ ಮೈತ್ರಿ ಪಕ್ಷಗಳಿಂದ ಪಾದಯಾತ್ರೆ | 15 ಬಾರಿ ಬಜೆಟ್ ಮಂಡಿಸಿದ ಹಿರಿಮೆ

ಸಿಎಂ ರಾಜಕೀಯ ಪಯಣ ಭ್ರಷ್ಟಾಚಾರ ಮುಕ್ತ

ದಾವಣಗೆರೆ: ನಲವತ್ತು ವರ್ಷಗಳ ಮುಖ್ಯಮಂತ್ರಿ ಸಿದ್ದರಾಮಯ್ಯನವರ ರಾಜಕೀಯ ಪಯಣ ಭ್ರಷ್ಟಾಚಾರ ಮುಕ್ತವಾಗಿದೆ. ಸಿದ್ದರಾಮಯ್ಯರ ಜನಪ್ರಿಯತೆ, ಉತ್ತಮ ಆಡಳಿತ ಸಹಿಸದೇ ಬಿಜೆಪಿ ಜೆಡಿಎಸ್ ಪಾದಯಾತ್ರೆ ನಡೆಸುತ್ತಿದೆ. ಅಹಿಂದ ವರ್ಗದವರನ್ನು ರಾಜಕೀಯವಾಗಿ ಮುಗಿಸುವ ಷಡ್ಯಂತ್ರ ಅಡಗಿದೆ ಎಂದು ಇನ್ಸೈಟ್ಸ್ ಸಂಸ್ಥೆ ಸಂಸ್ಥಾಪಕ ಜಿ.ಬಿ.ವಿನಯ್ ಕುಮಾರ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯರ ನಾಲ್ಕು ದಶಕಗಳ ರಾಜಕಾರಣ ಪಾರದರ್ಶಕ, ಘನತೆಯಿಂದ ಕೂಡಿದೆ. ಎರಡು ಬಾರಿ ಮುಖ್ಯಮಂತ್ರಿಯಾಗಿ, ಎರಡು ಬಾರಿ ಡಿಸಿಎಂ ಆಗಿ, ಹದಿನೈದು ಬಾರಿ ಬಜೆಟ್ ಮಂಡನೆ ಮಾಡಿರುವ ಸಿದ್ದರಾಮಯ್ಯರು ಭ್ರಷ್ಟಾಚಾರ ರಹಿತದಿಂದಲೇ ಹೆಸರು ಮಾಡಿದವರು. ಅಹಿಂದ ವರ್ಗದ ನಾಯಕನ ವಿರುದ್ಧ ಪಿತೂರಿ ನಡೆಸುತ್ತಿದ್ದು, ಎಲ್ಲರೂ ಒಟ್ಟಾಗಿ ಎದುರಿಸಬೇಕಾದ ಪರಿಸ್ಥಿತಿ ಬಂದಿರುವುದು ಆತಂಕಕಾರಿ ವಿಚಾರ ಎಂದು ಬೇಸರ ವ್ಯಕ್ತಪಡಿಸಿದರು.

ಸಿದ್ದರಾಮಯ್ಯರಂಥ ಮಹಾನ್ ನಾಯಕರನ್ನು ರಾಜಕಾರಣದಿಂದ ಹತ್ತಿಕ್ಕಲು ಹಲವು ಕಾರಣಗಳಿವೆ. ಸಿದ್ಧರಾಮಯ್ಯರಂತಹ ಮೌಲ್ಯಧಾರಿತ ಜನಪರ ಕಾಳಜಿ, ಸಿದ್ಧಾಂತ ಆಧಾರಿತ, ಪ್ರಾಮಾಣಿಕರು ಪ್ರಸ್ತುತ ರಾಜಕಾರಣದಲ್ಲಿ ಮುಂದುವರಿದರೆ ಭ್ರಷ್ಟಾಚಾರಕ್ಕೆ ಕಡಿವಾಣ ಬೀಳಲಿದೆ. ಭ್ರಷ್ಟಾಚಾರಿಗಳು, ಬಂಡವಾಳಶಾಹಿಗಳು, ಹಣ, ಅಧಿಕಾರ ದಾಹ ಹಾಗೂ ರಾಜಕೀಯವನ್ನು ಉದ್ದಿಮೆ ಮಾಡಿಕೊಂಡ ಪಾಳೇಗಾರಿಕೆ ಮನಸ್ಥಿತಿಯವರ ಇಷ್ಟಾರ್ಥಗಳು ಈಡೇರಲು ಸಾಧ್ಯವಾಗುವುದಿಲ್ಲ. ಹಾಗಾಗಿ ಇವರನ್ನು ಅಧಿಕಾರದಿಂದ ಕೆಳಗಿಳಿಸಿದರೆ ಎಲ್ಲವೂ ಸಲೀಸಾಗುತ್ತದೆ ಎಂಬ ಭಾವನೆ ಅವರಲ್ಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಇನ್ಸೈಟ್ಸ್ ಸಂಸ್ಥೆ ಸಂಸ್ಥಾಪಕ ಜಿ.ಬಿ.ವಿನಯ್ ಕುಮಾರ್ ಅವರು ಮಾತನಾಡಿದರು.

ಸಿದ್ದರಾಮಯ್ಯನವರು ತಮ್ಮ ಕಳೆದ ನಾಲ್ಕು ದಶಕಗಳ ರಾಜಕೀಯದಲ್ಲಿ ದೊಡ್ಡ ದೊಡ್ಡ ಟೆಕ್ ಪಾರ್ಕ್ ಗಳಾಗಲಿ , ಮೆಡಿಕಲ್ ಇಂಜಿನಿಯರಿಂಗ್ ಕಾಲೇಜಿನಂತಹ ಸಂಸ್ಥೆಗಳನ್ನಾಗಲಿ ಸ್ವಂತಕೋಸ್ಕರ ಏನನ್ನು ಮಾಡಿಕೊಳ್ಳದೇ ತಮ್ಮದೇ ಆದ ಪರಂಪರೆಯನ್ನು ಹುಟ್ಟು ಹಾಕಿದ್ದಾರೆ . ಈ ಪರಂಪರೆಯನ್ನು ಕೊನೆಗಾಣಿಸುವುದೇ ಪಟ್ಟಭದ್ರ ಶಕ್ತಿಗಳು ಅಜೆಂಡಾ ಎಂದು ದೂರಿದರು. ಗೋಷ್ಠಿಯಲ್ಲಿ ಸ್ವಾಭಿಮಾನಿ ಬಳಗದ ಯುವ ಮುಖಂಡ ಶರತ್ ಕುಮಾರ್, ಪುರಂದರ ಲೋಕಿಕೆರೆ, ಅಯ್ಯಣ್ಣ, ಸಾದಿಕ್ ಹಾಜರಿದ್ದರು.

ಸಿಎಂ ಪರ ನಿಲ್ಲದ ಶಾಮನೂರು ಕುಟುಂಬ: ಆರೋಪ

ಸಿಎಂ ಸಿದ್ದರಾಮಯ್ಯರು ರಾಜ್ಯ ಕಂಡ ಅಹಿಂದ ವರ್ಗದ ಜನಪ್ರಿಯ ನಾಯಕ. ದಾವಣಗೆರೆಯಲ್ಲಿ ಕಳೆದ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಆದ್ರೆ, ಅವರು ಕಷ್ಟದಲ್ಲಿದ್ದಾಗ ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಬೆಂಬಲಕ್ಕೆ ನಿಲ್ಲದಿರುವುದು ಶೋಚನೀಯ ಎಂದು ಸ್ವಾಭಿಮಾನಿ ಬಳಗದ ಯುವ ನಾಯಕ ಜಿ. ಬಿ. ವಿನಯ್ ಕುಮಾರ್ ಆರೋಪಿಸಿದರು

ಲೋಕಸಭೆಯಲ್ಲಿ ಮಾತನಾಡಲು ಅವಕಾಶ ಸಿಕ್ಕರೂ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ರಾಜ್ಯಪಾಲರ ನಡೆ ಖಂಡಿಸಿಲ್ಲ, ವಿರೋಧಿಸಿಲ್ಲ. ಮೈಸೂರಿನಲ್ಲಿ ನಡೆದ ಜನಾಂದೋಲ ರ್‍ಯಾಲಿಯಲ್ಲಿಯೂ ಪ್ರಭಾ ಮಲ್ಲಿಕಾರ್ಜುನ್ ಪಾಲ್ಗೊಂಡಿಲ್ಲ. ದಾವಣಗೆರೆಯಲ್ಲಿ ಅಹಿಂದ ಮುಖಂಡರು ಸಿದ್ದರಾಮಯ್ಯರ ಪರ ಪ್ರತಿಭಟನೆ ನಡೆಸಿದರೂ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಹಾಗೂ ಶಾಮನೂರು ಶಿವಶಂಕರಪ್ಪರು ಪಾಲ್ಗೊಂಡಿಲ್ಲ. ಸಿದ್ದರಾಮಯ್ಯ ವಿರುದ್ಧದ ರಾಜ್ಯಪಾಲರ ನಡೆ ಖಂಡಿಸಿಲ್ಲ ಎಂದು ಹೇಳಿದರು.

ಜಾತಿ ವಿಚಾರಕ್ಕೆ ಬಂದರೆ ಅಪೂರ್ವ ರೆಸಾರ್ಟ್‌ನಲ್ಲಿ ನಡೆದ ಸಭೆಗೆ ಹೋಗಿ ಶಾಮನೂರು ಶಿವಶಂಕರಪ್ಪರು ವಿರೋಧ ವ್ಯಕ್ತಪಡಿಸುತ್ತಾರೆ. ಆದರೆ ಅವರೇ ಶಾಸಕರಾಗಿರುವ ಪಕ್ಷದವರೇ ಸಿಎಂ ಆಗಿದ್ದರೂ ಬೆಂಬಲಿಸುವ ಗೋಜಿಗೆ ಹೋಗಿಲ್ಲ. ಸಿದ್ದರಾಮಯ್ಯರ ಪರ ಇದ್ದೇವೆ ಎಂಬ ಸಂದೇಶವನ್ನು ಶಾಮನೂರು ಶಿವಶಂಕರಪ್ಪ, ಎಸ್.ಎಸ್.ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ನೀಡಬೇಕು ಎಂದು ಮನವಿ ಮಾಡಿದರು.

ಸುತ್ತೂರು ಮಠದಲ್ಲಿ ಶಿವಶಂಕರಪ್ಪ ಅತಿಥಿ ಗೃಹ ಲೋಕಾರ್ಪಣೆ

ದಾವಣಗೆರೆ: ಮೈಸೂರು ಜಿಲ್ಲೆ ಶ್ರೀಕ್ಷೇತ್ರ ಸುತ್ತೂರಿನ ಜಗದ್ಗುರು ಶ್ರೀವೀರ ಸಿಂಹಾಸನ ಮಹಾಸಂಸ್ಥಾನ ಮಠದಲ್ಲಿ ಶಾಸಕ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಡಾ.ಶಾಮನೂರು ಶಿವಶಂಕರಪ್ಪ ನಿರ್ಮಿಸಿರುವ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಅತಿಥಿ ಗೃಹ ಲೋಕಾರ್ಪಣೆಗೊಳಿಸಲಾಯಿತು.

ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಅತಿಥಿ ಗೃಹವನ್ನು ಶಾಮನೂರು ಶಿವಶಂಕರಪ್ಪ ಉದ್ಘಾಟಿಸಿದರು. ತೋಟಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ, ಮಠದ ಆಡಳಿತ ಅಧಿಕಾರಿ ಸಿ.ಜಿ.ಬೇಟಸೂರಮಠ, ಬೆಂಗಳೂರು ಮಾಜಿ ಮೇಯರ್ ಪುಟ್ಟರಾಜು, ಉದ್ಯಮಿ ಇಂದೂಧರ್, ವರುಣ ಮಹೇಶ್, ಸುನಂದಾ ಗಿರೀಶ್ ಇದ್ದರು.

ಎಸ್‌ಇಪಿ, ಟಿಎಸ್‌ಪಿಗೆ 36 ಕೋಟಿ ರು.ಮೀಸಲು

ಹಿರಿಯೂರು: ಎಸ್‌ಇಪಿ ಟಿಎಸ್‌ಪಿ ಯೋಜನೆಯಲ್ಲಿ 36 ಕೋಟಿ ಹಣ ಮೀಸಲಿಡಲಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ನಗರದ ಎಂ ಕೃಷ್ಣಪ್ಪ ರೋಟರಿ ಸಭಾ ಭವನದಲ್ಲಿ ಶನಿವಾರ ತಾಲೂಕು ವಾಲ್ಮೀಕಿ ನಾಯಕ ಸಮಾಜ ಹಾಗೂ ವಾಲ್ಮೀಕಿ ನಾಯಕ ನೌಕರರ ಸಂಘ ಮತ್ತು ವಾಲ್ಮೀಕಿ ನಾಯಕ ನಿವೃತ್ತ ನೌಕರರ ಸಂಘ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

> ಗಂಗಾ ಕಲ್ಯಾಣ ಯೋಜನೆಗೆ ಶ್ರಮಿಸಿದ್ದೇನೆ ಹಿಂದಿನ ಅಧಿಕಾರ ಅವಧಿಯಲ್ಲಿ ಹಿರಿಯೂರು ತಾಲೂಕಿನ ವಾಲ್ಮೀಕಿ ಸಮುದಾಯದ ಜನತೆಗೆ ಗಂಗಾ ಕಲ್ಯಾಣ ಯೋಜನೆ ಹಾಗೂ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಇಂದಿನ ಪಂಚ ಗ್ಯಾರಂಟಿ ಯೋಜನೆಯಿಂದ ನಾಯಕ ಸಮಾಜ ಅಭಿವೃದ್ಧಿ ಸ್ವಲ್ಪ ಹಿನ್ನೆಡೆ ಆಗಿದೆ.
> -ಡಿ.ಸುಧಾಕರ್, ಸಚಿವ

ಸಮುದಾಯದ ಜನರು ಮಕ್ಕಳನ್ನು ಸರಕಾರಿ ನೌಕರಿಯನ್ನೆ ನಂಬಿಕೊಂಡು ಇರದೇ ಇತರೇ ಉದ್ಯೋಗ ಅವಕಾಶಗಳನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ನಗರದ ಎಂ ಕೃಷ್ಣಪ್ಪ ರೋಟರಿ ಸಭಾ ಭವನದಲ್ಲಿ ತಾಲೂಕು ವಾಲ್ಮೀಕಿ ನಾಯಕ ಸಮಾಜದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಸಚಿವ ಸತೀಶ್ ಜಾರಕಿಹೊಳಿ ಅವರು ಮಾತನಾಡಿದರು.

ತಾಲೂಕಿನ ವಾಲ್ಮೀಕಿ ನಾಯಕ ಸಮಾಜದ ಸುಮಾರು 70 ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ದೀವ್ಯ ಸಾನಿಧ್ಯವನ್ನು ವಾಲ್ಮೀಕಿ ಗುರುಪೀಠದ ಶ್ರೀಪ್ರಸನ್ನ ನಂದ ಸ್ವಾಮೀಜಿ ವಹಿಸಿದ್ದರು. ಶಾಸಕ ಟಿ ರಘುಮೂರ್ತಿ ದ್ರಾಕ್ಷಿ ರಸ ಮಂಡಳಿ ಅಧ್ಯಕ್ಷ ಯೋಗೇಶ್ ಬಾಬು.ಸೊಂಡೇಕೆರೆ ನಾಗರಾಜ್ ವಾಣಿಜ್ಯ ತೆರಿಗೆ ಅಧಿಕಾರಿ ಮಂಜುನಾಥ್ ಹತ್ತಿಕೋಟೆ ವಿರೇದ್ರ ಸಿಂಹ,ಡಾ.ಹೇಮಣ್ಣ ಶಿವಮೂರ್ತಿ ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ ನಾಯಕ ಸಮಾಜದ ಮುಖಂಡರು ಮಹಿಳೆಯರು ವಿದ್ಯಾರ್ಥಿಗಳು ಹಾಜರಿದ್ದರು.

ವ್ಯಸನ ಮುಕ್ತ ಸಮಾಜಕ್ಕೆ ಆರೋಗ್ಯಕರ ಹವ್ಯಾಸಗಳಿರಲಿ

ದಾವಣಗೆರೆ: ಮಕ್ಕಳು ವ್ಯಸನ ಮುಕ್ತರಾಗಿ ಆರೋಗ್ಯಯುತ ಸಮಾಜ ನಿರ್ಮಾಣಕ್ಕಾಗಿ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಂಡು ತಮ್ಮ ದೈಹಿಕ ಹಾಗೂ ಮಾನಸಿಕ ವಿಕಸನಕ್ಕಾಗಿ ಸದಾ ಕ್ರಿಯಾಶೀಲರಾಗಿರಬೇಕೆಂದು ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಕರೆ ನೀಡಿದರು.

ಅವರು ರಾಮನಗರದಲ್ಲಿನ ಗಾಂಧಿ ಭವನದಲ್ಲಿ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಚಿಗಟೇರಿ ಜಿಲ್ಲಾ ಆಸ್ಪತ್ರೆ, ಎನ್.ಎಸ್.ಎಸ್, ಭಾರತ ಸೇವಾದಳ, ಗ್ರಾಮ ಸ್ವರಾಜ್ ಅಭಿಯಾನ, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ವ್ಯಸನ ಮುಕ್ತ ದಿನಾಚರಣೆ ಅಂಗವಾಗಿ ಏರ್ಪಡಿಸಲಾದ ವ್ಯಸನ ಮುಕ್ತ ಶಿಬಿರ ಮತ್ತು ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಏರ್ಪಡಿಸಲಾದ ಕ್ವಿಟ್ ಇಂಡಿಯಾ ಚಳುವಳಿ ಒಂದು ನೆನಪು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಕ್ಕಳು ವ್ಯಸನಗಳಿಗೆ ಬಲಿಯಾಗದೆ ತಮ್ಮ ದೈಹಿಕವಾದ ಬೆಳವಣಿಗೆಗೆ ಬೇಕಾದ ಆಟ ಮತ್ತು ಮಾನಸಿಕ ಬೆಳವಣಿಗೆಗೆ ಬೇಕಾದ ಜ್ಞಾನಾರ್ಜನೆ ಕಡೆ ಹೆಚ್ಚು ಒತ್ತು ಕೊಡಬೇಕು. ಈಗಿನ ಮಕ್ಕಳು ಮೊಬೈಲ್ ಹೆಚ್ಚು ಬಳಸುತ್ತಿದ್ದು ಇದು ಸಹ ಒಂದು ರೀತಿಯ ವ್ಯಸನವಾಗಿದೆ. ಇದರಿಂದ ಆರೋಗ್ಯಕ್ಕೆ ಅಪಾಯವಾಗಲಿದ್ದು ಮುಂದೊಂದು ದಿನ ಕುತ್ತಿಗೆ, ಬೆನ್ನು, ಕೈ ನೋವು ಎಂದು ಹೇಳಬಹುದು. ಕಳೆದಿಪ್ಪತ್ತು ವರ್ಷಗಳಿಂದ ಮೊಬೈಲ್ ಬಂದಿದ್ದು ಈಗಿನ ಮಕ್ಕಳಿಗೆ ಹುಟ್ಟಿನಿಂದಲೇ ಮೊಬೈಲ್ ಗೀಳು ಬೆಳೆಸಿಕೊಳ್ಳುವ ಅವಕಾಶವಿದೆ. ಇದರಿಂದ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಕುಂಠಿತವಾಗುವ ಜೊತೆಗೆ ಒತ್ತಡವು ಹೆಚ್ಚಲಿದೆ. ಈ ನಿಟ್ಟಿನಲ್ಲಿ ಅನಾವಶ್ಯಕ ಮೊಬೈಲ್ ಬಳಕೆ ಕಡಿಮೆ ಮಾಡಿ ತಮ್ಮ ಆರೋಗ್ಯ ಮತ್ತು ಮಾನಸಿಕ ಸದೃಢತೆಗೆ ಹೆಚ್ಚಿನ ಒತ್ತು ನೀಡಲು ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರಾದ ಧನಂಜಯ.ಬಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿವೃತ್ತ ಪ್ರಾಂಶುಪಾಲರಾದ ದಾದಾಪೀರ್ ನವಿಲೇಹಾಳ್, ಮನೋವೈದ್ಯರಾದ ಡಾ; ಮರುಳಸಿದ್ದಪ್ಪ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕರಿಸಿದ್ದಪ್ಪ, ಜಿಲ್ಲಾ ಮುಖ್ಯ ಗ್ರಂಥಾಲಯಾಧಿಕಾರಿ ಪಿ.ಆರ್.ತಿಪ್ಪೇಸ್ವಾಮಿ, ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ; ಮಂಜುನಾಥ ಪಾಟೀಲ್, ಪದವಿ ಪೂರ್ವ ಶಿಕ್ಷಣ ಇಲಾಖೆ ಕಾಲೇಜು ಪ್ರಾಂಶುಪಾಲರ ಸಂಘದ ಅಧ್ಯಕ್ಷರಾದ ಪ್ರದೀಪ್ ಕುಮಾರ್, ಗ್ರಾಮ ಸ್ವರಾಜ್ ಅಭಿಯಾನದ ಅವರಗೆರೆ ರುದ್ರಮುನಿ, ಜಿಲ್ಲಾ ಸ್ವಾತಂತ್ರ್ಯ ಯೋಧರ ಉತ್ತರಾಧಿಕಾರಿಗಳ ಸಂಘದ ಅಧ್ಯಕ್ಷರಾದ ಐಗೂರು ತಿಮ್ಮಣ್ಣ, ರೈತ ಮುಖಂಡರಾದ ತೇಜಸ್ವಿ ಪಟೇಲ್ ಹಾಗೂ ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಮನಗರದಲ್ಲಿನ ಗಾಂಧಿ ಭವನದಲ್ಲಿ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ವ್ಯಸನ ಮುಕ್ತ ದಿನಾಚರಣೆ ಅಂಗವಾಗಿ ಏರ್ಪಡಿಸಲಾದ ವ್ಯಸನ ಮುಕ್ತ ಶಿಬಿರ ಮತ್ತು ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಏರ್ಪಡಿಸಲಾದ ಕ್ವಿಟ್ ಇಂಡಿಯಾ ಚಳುವಳಿ ಒಂದು ನೆನಪು ಕಾರ್ಯಕ್ರಮ ಉದ್ಘಾಟಿಸಿ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರು ಮಾತನಾಡಿದರು.

ಆಂಜನೇಯ ಸ್ವಾಮಿ ಕಾರ್ಣೀಕ

ಶುಕ್ರವಾರ ತುಂಗಭದ್ರ ನದಿ ಸಮೀಪದ ಸಂಗಮೇಶ್ವರ ದೇವಸ್ಥಾನ ಆವರಣದಲ್ಲಿ ತಾಲೂಕಿನ ಯಲವಟ್ಟಿ ಆಂಜನೇಯ ಸ್ವಾಮಿಯಕಾರ್ಣಿಕದಲ್ಲಿ ಭಾಗವಹಿಸಿದ್ದ ಸಾವಿರಾರು ಭಕ್ತರು.

ಹರಿಹರ: ಬಂಗಾರದ ಮಣ್ಣಿನಲ್ಲಿ ಬೆಳ್ಳಿ ಲಿಂಗ ಒಡಮೂಡಿತು, ಆ ಲಿಂಗದ ಮೇಲೆ ಕಾಳಿಂಗ ಸರ್ಪಕುಂತಿತು, ಆಸರ್ಪಕ್ಕೆ ಗರುಡ ಕುಕ್ಕಿತಲೇ ಎಚ್ಚರ ಎಂದು ತಾಲೂಕಿನ ಯಲವಟ್ಟಿ ಆಂಜನೇಯ ಸ್ವಾಮಿಯಕಾರ್ಣಿಕ ವಾಯಿತು.

ನಗರದ ತುಂಗಭದ್ರ ನದಿಯದಡದ ಶ್ರೀಸಂಗಮೇಶ್ವರ ದೇವಸ್ಥಾನದ ಆವರಣದಲ್ಲಿ ನಾಗಪಂಚಮಿಯೆಂದು ತಾಲೂಕಿನಯ ಲವಟ್ಟಿಗ್ರಾಮದ ಶ್ರೀಆಂಜನೇಯ ಸ್ವಾಮಿಯ ಕಾರ್ಣಿಕ ನುಡಿಯುವುದು ಪ್ರತಿ ವರ್ಷದ ಪ್ರತೀತಿಯಾಗಿದೆ. ಈ ಬಾರಿ ಶುಕ್ರವಾರ ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ತಾಲೂಕಿನ ಯಲವಟ್ಟಿ ಆಂಜನೇಯ ಸ್ವಾಮಿಯ ಕಾರ್ಣಿಕವು ಬಂಗಾರದ ಮಣ್ಣಿನಲ್ಲಿ ಬೆಳ್ಳಿ ಲಿಂಗ ಒಡಮೂಡಿತು, ಆ ಲಿಂಗದ ಮೇಲೆ ಕಾಳಿಂಗ ಸರ್ಪಕುಂತಿತು, ಆಸರ್ಪಕ್ಕೆ ಗರುಡಕುಕ್ಕಿತಲೇ ಎಚ್ಚರ ಎಂದು ದೈವವಾಣಿಯನ್ನುಪೂಜಾರಪ್ಪ ನುಡಿದರು. ಹರಿಹರತಾಲೂಕು ಸೇರಿದಂತೆ ಅಕ್ಕಪಕ್ಕದತಾಲೂಕಿನ ಹಲವು ಗ್ರಾಮಗಳ ವಿವಿಧದೇವತಾ ಮೂರ್ತಿಗಳು ತುಂಗಭದ್ರ ನದಿಯಲ್ಲಿ ಪೂಜೆ ಸಲ್ಲಿಸಿ ನಂತರ ನದಿಯದಡದಲ್ಲಿರುವ ಸಂಗಮೇಶ್ವರದೇವಸ್ಥಾನಆವರಣದಲ್ಲಿ ಸೇರುತ್ತವೆ. ಸಾವಿರಾರು ಸಂಖ್ಯೆಯಲ್ಲಿ ಸೇರಿದ ಭಕ್ತರುಕಾರ್ಣಿಕ ಮುಗಿದ ನಂತರಗೋವಿಂದಾಗೋವಿಂದಎನ್ನುತ್ತಾಜಯಘೋಷವನ್ನು ಹಾಕಿದರು.

ಹನಗವಾಡಿ ಗ್ರಾಮದ ಶ್ರೀಮಾತಂಗಮ್ಮ ದೇವಸ್ಥಾನ ಅಭಿವೃದ್ಧಿಗೆ ಶ್ರೀಕ್ಷೇತ್ರ ಧರ್ಮಸ್ಥಳದಿಂದ ಹೊನ್ನಾಳಿ ತಾಲೂಕಿನ ಯೋಜನಾಧಿಕಾರಿಗಳು ಗ್ರಾಮಸ್ಥರ ಸಮ್ಮುಖದಲ್ಲಿ 50000 ರು.ಗಳು ಚೆಕ್ ವಿತರಿಸಿದ್ದಾರೆ ದೇವಸ್ಥಾನ ಈ ಸಮಯದಲ್ಲಿ ದೇವಸ್ಥಾನದ ಸಮಿತಿಯ ಅಧ್ಯಕ್ಷರು ಕಾರ್ಯದರ್ಶಿಗಳು ಸದಸ್ಯರು ಮತ್ತು ಗ್ರಾಮ ಹಿರಿಯರಾದ ಎಚ್. ಕೆ. ಸುರೇಶ, ಜಿ.ರಂಗಪ್ಪ ಬಿ. ಎಂ. ಸತೀಶ, ಎ.ಕೆ. ಪ್ರಭು, ಎಚ್.ಎಂ. ರಾಘವೇಂದ್ರ, ಡಿ.ಎಂ.ಮಹೇಶ್ವರಪ್ಪ, ಸಿ.ಎಚ್.ಮಹೇಶ್ವರಪ್ಪ , ಬಿ.ಎಂ.ರಂಗಪ್ಪ, ಎಂ.ಆರ್.ಶಶಿಧರ, ಎಚ್.ಜಿ. ಕೃಷ್ಣಮೂರ್ತಿ ಶೆಟ್ಟಿ ಎ. ಕೆ. ಚಂದ್ರಪ್ಪ, ಹನುಮಂತಪ್ಪ ಭೋವಿ ಮತ್ತಿತರರು ಉಪಸ್ಥಿತರಿದ್ದರು.

ಪಂಚಮಿ ಹಬ್ಬದ ಹೆಸರಿನಲ್ಲಿ ಹಾಲು ವ್ಯರ್ಥ ಬೇಡ

ಮೊಳಕಾಲ್ಮೂರು: ನಾಗರ ಪಂಚಮಿಯ ಹೆಸರಿನಲ್ಲಿ ಮಣ್ಣಿನ ಹುತ್ತಕ್ಕೆ ಹಾಲು ಎರೆದು ಪೌಷ್ಟಿಕ ಆಹಾರವನ್ನು ವ್ಯರ್ಥ ಮಾಡುವ ಬದಲು ಹಸಿದ ಮಕ್ಕಳಿಗೆ ನೀಡಿದರೆ ಪಂಚಮಿ ಹಬ್ಬ ಸಾರ್ಥಕವಾಗುವುದು ಎಂದು ಸಿದ್ದಯ್ಯನಕೋಟೆ ಮಠದ ಶ್ರೀಬಸವಲಿಂಗ ಸ್ವಾಮೀಜಿ ಅಭಿಪ್ರಾಯಪಟ್ಟರು.

ಶಿವಶರಣೆ ಅಕ್ಕನಾಗಮ್ಮ ಅಂಗವಾಗಿ ತಾಲೂಕಿನ ಸಿದ್ದಯ್ಯನ ಕೋಟೆ ಚಿತ್ತರಗಿ ಶ್ರೀವಿಜಯ ಮಹಾಂತೇಶ್ವರ ಶಾಖಾ ಮಠದಲ್ಲಿ ಚಿತ್ತರಗಿ ಚಿಜ್ಯೋತಿ ಸಾಂಸ್ಕೃತಿಕ ಕಲಾ ವೇದಿಕೆ ಆಶ್ರಯದಲ್ಲಿ ಜರುಗಿದ ಬಸವ ಪಂಚಮಿ ಹಾಲು ಕುಡಿಯುವ ಹಬ್ಬ ಕಾರ್ಯಕ್ರಮದಲ್ಲಿ ಆಶೀರ್ವಚನ ಮಾತನಾಡಿದರು. ಹಾಲು ಹಾವಿನ ಆಹಾರವಲ್ಲ ಎಂಬುವುದನ್ನು ಡಾ.ನಾಗಲೋತಿ ಮಠರವರು ವೈಜ್ಞಾನಿಕ ಅಧ್ಯಯನದ ಮೂಲಕ ತಿಳಿಸಿದ್ದಾರೆ ಎಂದರು. ಶ್ರೀಮಠದ ಕಾರ್ಯದರ್ಶಿ ಪಿ.ಆರ್.ಕಾಂತರಾಜ್ , ಕೆ.ಬಸಣ್ಣ, ಪಟೇಲ್ ಜಿ.ಪಾಪ ನಾಯಕ, ಅಕ್ಕನ ಬಳಗ ಅಧ್ಯಕ್ಷ ಎಂ.ಭೀಮಕ್ಕ,ಭೀಮಪ್ಪ ಸೇರಿದಂತೆ ಸೇರಿದಂತೆ ವಿದ್ಯಾರ್ಥಿಗಳಿದ್ದರು.

ಪತ್ರಿಕಾಲಯಗಳಲ್ಲಿ ತರಬೇತಿಗೆ ಅರ್ಜಿ

ಚಿತ್ರದುರ್ಗ: ಕರ್ನಾಟಕ ಮಾಧ್ಯಮ ಅಕಾಡೆಮಿಯು ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಪದವಿ ಪಡೆದಿರುವ ಮಹಿಳಾ ವಿದ್ಯಾರ್ಥಿಗಳಿಗೆ ಪತ್ರಿಕಾಲಯದಲ್ಲಿ ತರಬೇತಿ ಪಡೆಯಲು ಅರ್ಜಿ ಆಹ್ವಾನಿಸಿದೆ.

ಪ್ರಸಕ್ತ ಸಾಲಿನಲ್ಲಿ 5 ಮಂದಿ ಮಹಿಳಾ ವಿದ್ಯಾರ್ಥಿಗಳಿಗೆ ಪ್ರಮುಖ ದಿನಪತ್ರಿಕೆಗಳ ಕಾರ್ಯಾಲಯಗಳಲ್ಲಿ 2 ತಿಂಗಳ ಕಾಲ ತರಬೇತಿ ಪಡೆಯಲು, ಮಾಸಿಕ ತಲಾ 20,000 ರೂ. ಗಳನ್ನು ಶಿಷ್ಯವೇತನ ನೀಡಲಾಗುವುದು.

ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ/ಪದವಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗಿದೆ.ಮಹಿಳಾ ವಿದ್ಯಾರ್ಥಿಗಳು ಆಗಸ್ಟ್ 26 ರೊಳಗೆ ತಮ್ಮ ಸ್ವವಿವರ, ದೂರವಾಣಿ ಸಂಖ್ಯೆ, ಇ-ಮೇಲ್ ವಿಳಾಸ, ಆರ್ಥಿಕ ಸ್ಥಿತಿ, ಅಂಕಪಟ್ಟಿಗಳ ಫೋಟೋ ಪ್ರತಿಯನ್ನು ಸ್ಕ್ಯಾನ್ ಮಾಡಿ karnatakamediaacademy@gmail.cಟಇಗೆ ಇಮೇಲ್ ಮೂಲಕ ಕಳುಹಿಸಬಹುದು.

28 ವರ್ಷದೊಳಗಿನ ಮಹಿಳಾ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಬಹುದು. ಅರ್ಹತಾ ಪರೀಕ್ಷೆ ನಡೆಸಲಿದೆ ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿಯ ಕಚೇರಿ ಪ್ರಕಟಣೆ ತಿಳಿಸಿದೆ.

ಫಲಾನುಭವಿಗಳಿಗೆ ನಿವೇಶನ ಹಂಚಿಕೆ

ಚಳ್ಳಕೆರೆ: ಸೋಮವಾರದಿಂದಲೇ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ ಗ್ರಾಮದ ನಿವೇಶನ ಹಂಚಿಕೆಗೆ ನಿವೇಶನ ಪಡೆಯಲು ತಾಲೂಕು ದಂಡಾಧಿಕಾರಿಗಳು ಸರ್ವೆ ಆಫೀಸಿನ ಅಧಿಕಾರಿಗಳು ಸರ್ವೇ ಮಾಡಿ ವಂಚಿತ ಫಲಾನುಭವಿಗಳಿಗೆ ಖಂಡಿತ ನಿವೇಶನ ನೀಡುತ್ತೇವೆ ಎಂದು ಅಪಾರ ಜಿಲ್ಲಾಧಿಕಾರಿ ಕುಮಾರಸ್ವಾಮಿ ತಿಳಿಸಿದರು.

ಇವರು ನಗರದ ತಾಲೂಕು ಕಚೇರಿಯ ಮುಂಭಾಗದ ಆವರಣದಲ್ಲಿ ನಾಲ್ಕು ದಿನಗಳ ಕಾಲ ಆಶ್ರಯ ಯೋಜನೆ ನಿವೇಶನಕ್ಕಾಗಿ ಅನಿರ್ಧಿಷ್ಟ ಧರಣಿಯಲ್ಲಿ ಭಾಗವಹಿಸಿ ಸಂತ್ರಸ್ತರಿಗೆ ಮನವೊಲಿಸಿ ಮಾತನಾಡಿದ ಇವರು, ಆಶ್ರಯ ನಿವೇಶನಕ್ಕಾಗಿ ಗಂಜಿಗುಂಟೆ ಗ್ರಾಮದ ದಲಿತ ಸಮುದಾಯದವರು ಸತತ ನಾಲ್ಕು ದಿನಗಳ ಕಾಲ ಧರಣಿ ಮಾಡುತ್ತಿದ್ದೀರಿ, ನಿಮ್ಮ ಗ್ರಾಮದ ಐದು ಎಕರೆ ಸರಕಾರ ಮೀಸಲಿಟ್ಟಿರುವ ಜಾಗವನ್ನು ಕೆಲವರು ಬಣವೆಗಳನ್ನು ಮಾಡಿಕೊಂಡು ನಿವೇಶನ ನಿರ್ಮಿಸಿಕೊಂಡಿದ್ದಾರೆ, 2016-17 ರಲ್ಲಿ ಅಂದಿನ ಸರಕಾರ ಆಶ್ರಯ ಯೋಜನೆ ವಸತಿಗಾಗಿ ಸರಕಾರ ಗೋಮಾಳ ಜಾಗವನ್ನು ನಿಗದಿಪಡಿಸಿತ್ತು.

ಈ ಹಿನ್ನಲೆಯಲ್ಲಿ ಸ್ಥಳೀಯ ಶಾಸಕರಾದ ಟಿ ರಘುಮೂರ್ತಿ ರವರು ಈ ವಿಷಯವಾಗಿ ಚರ್ಚಿಸಿ ಫಲಾನುಭವಿಗಳಿಗೆ ನಿವೇಶನ ನೀಡಿ ಎಂದು ಹೇಳಿದ್ದರು ಈ ಒಂದು ನಿಟ್ಟಿನಲ್ಲಿ ಜಿಲ್ಲಾಡಳಿತ ಹಾಗೂ ತಾಲೂಕ ಆಡಳಿತ ಜೊತೆಗೂಡಿ ನಿಮ್ಮ ಗ್ರಾಮಕ್ಕೆ ಅರ್ಹ ಫಲಾನುಭವಿಗಳಿಗೆ ನಿವೇಶ ಹಂಚಿಕೆ ಮಾಡುತ್ತೇವೆ ಎಂದು ಖಡಕ್ ಭರವಸೆ ನೀಡಿದರು. ಇನ್ನು ಈ ಸಂದರ್ಭದಲ್ಲಿ ತಹಸಿಲ್ದಾರ್ ರಹಾನ್ ಪಾಷಾ, ತಾಲೂಕು ಪಂಚಾಯಿತಿಯ ಇಒ ಶಶಿಧರ್, ರಂಗಸ್ವಾಮಿ ಪ್ರಕಾಶ್ ವಿ ಎ ತಿಪ್ಪೇಸ್ವಾಮಿ ಸೋಮಶೇಖರ್ ಸೇರಿದಂತೆ ಅನೇಕ ತಾಲೂಕ ಆಡಳಿತದ ಅಧಿಕಾರಿಗಳು ಜಿಲ್ಲಾ ಆಡಳಿತ ಅಧಿಕಾರಿಗಳು ಪ್ರತಿಭಟನಾಕಾರರು ಭಾಗಿಯಾಗಿದ್ದರು.

ನಗರದ ತಾಲೂಕು ಕಚೇರಿಯ ಮುಂಭಾಗದ ಆವರಣದಲ್ಲಿ ನಾಲ್ಕು ದಿನಗಳ ಕಾಲ ಆಶ್ರಯ ಯೋಜನೆ ನಿವೇಶನಕ್ಕಾಗಿ ಧರಣಿ ನಡೆಸುತ್ತಿದ್ದು, ಈ ಹಿನ್ನೆಲೆಯಲ್ಲಿ ಸಂತ್ರಸ್ತರಿಗೆ ಮನವೊಲಿಸಿ ಜಿಲ್ಲಾಧಿಕಾರಿ ಕುಮಾರಸ್ವಾಮಿ ಅವರು ಮಾತನಾಡಿದರು.

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಿತ್ರದುರ್ಗ: 2024-25ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ ಹೊಸದಾಗಿ ಪ್ರವೇಶಾತಿ ಕಲ್ಪಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಗಸ್ಟ್ 9 ರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪ್ರಾರಂಭವಾಗಿದ್ದು, ಸೆಪ್ಟೆಂಬರ್ 4 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳು https://shp.karnataka.gov.in/bcwd ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಪ್ರವರ್ಗ-1, ಎಸ್.ಸಿ ಮತ್ತು ಎಸ್.ಟಿ ವರ್ಗಗಳಿಗೆ ವಾರ್ಷಿಕ ಆದಾಯ 2.50 ಲಕ್ಷ ಹಾಗೂ ಪ್ರವರ್ಗ-2ಎ, 2ಬಿ, 3ಎ, 3ಬಿ ವರ್ಗಗಳ ವಾರ್ಷಿಕ ಆದಾಯ ರೂ.1ಲಕ್ಷ ಹೊಂದಿರಬೇಕು. ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ದಾಖಲೆಗಳ ವಿವರ ಮತ್ತು ಸರ್ಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್ comಇ-ಮೇಲ್ ಮುಖಾಂತರ ಅಥವಾ ಹಿಂದುಳಿದ ವರ್ಗಗಳ ಜಿಲ್ಲಾ, ತಾಲ್ಲೂಕು ಅಧಿಕಾರಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 8050770004, 8050770005 ಗೆ ಸಂಪರ್ಕಿಸಬಹುದು.

ಚಂದ್ರಗುತ್ತಿ ಸುಕ್ಷೇತ್ರ ಸಮಗ್ರ ಅಭಿವೃದ್ಧಿಗೆ ಕ್ರಮ

ಸಚಿವ ಮಧು ಎಸ್.ಬಂಗಾರಪ್ಪ ಅಧಿಕಾರಿಗಳೊಂದಿಗೆ ಸಮಾಲೋಚನೆ | ಮೂಲ ಸೌಲಭ್ಯಗಳ ವ್ಯವಸ್ಥೆಗೆ ಸೂಚನೆ

ಶಿವಮೊಗ್ಗ : ಮಲೆನಾಡಿನ ಜನರ ಪ್ರತಿ ಮನೆಯ ಅಧಿದೇವತೆಯಾಗಿರುವ ಚಂದ್ರಗುತ್ತಿಯ ಪ್ರಸಿದ್ಧ ಶ್ರೀ ರೇಣುಕಾ ದೇವಿ ಶ್ರೀ ಕ್ಷೇತ್ರ ಸರ್ವಾಂಗೀಣ ವಿಕಾಸಕ್ಕೆ ಸರಕಾರದ ವತಿಯಿಂದ ಎಲ್ಲ ರೀತಿಯ ನೆರವನ್ನು ಒದಗಿಸಲಾಗುವುದು ಎಂದು ರಾಜ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಎಸ್. ಬಂಗಾರಪ್ಪ ಅವರು ಹೇಳಿದರು.

ಶನಿವಾರ ಸೊರಬ ಸಮೀಪದ ಚಂದ್ರಗುತ್ತಿಯ ಶ್ರೀ ರೇಣುಕಾದೇವಿಯ ದರ್ಶನ ಪಡೆದ ನಂತರ ಅವರು ಶ್ರೀ ಕ್ಷೇತ್ರದ ಆಡಳಿತಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಅಧಿಕಾರಿಗಳ ಸಭೆಯಲ್ಲಿ ಸುದೀರ್ಘ ಸಮಾಲೋಚನೆ ನಡೆಸಿದರು.

ಶ್ರೀ ಕ್ಷೇತ್ರದಲ್ಲಿನ ಸ್ವಚ್ಛತೆ, ಶೌಚಾಲಯ, ಶುದ್ಧ ಕುಡಿಯುವ ನೀರು, ವಸತಿ ಮತ್ತಿತರ ವಿಷಯಗಳ ಕುರಿತು ಸುದೀರ್ಘ ಸಮಾಲೋಚನೆ ನಡೆಸಿದ ಅವರು ಯಾತ್ರಾರ್ಥಿಗಳ ಅನುಕೂಲಕ್ಕಾಗಿ ತುರ್ತು ಕೈಗೊಳ್ಳ ಬೇಕಾದ ಕ್ರಮಗಳ ಕುರಿತು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರಸ್ತುತ ದೇವಸ್ಥಾನದ ಮೂಲ ಕಟ್ಟಡದ ಪ್ರದೇಶ ಅರಣ್ಯ ಇಲಾಖೆಯ ವ್ಯಾಪ್ತಿಗೊಳಪಟ್ಟಿದೆ. ಅದಕ್ಕಾಗಿ ನಿಯಮಾನುಸಾರ ಇಲಾಖೆಯ ಅನುಮತಿ ಪಡೆದು ಕಟ್ಟಡದ ಜೀರ್ಣೋದ್ಧಾರಕ್ಕೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು. ದೇವಸ್ಥಾನದ ಸುತ್ತಮುತ್ತಲು

ಶ್ರೀ ಕ್ಷೇತ್ರದ ಆಡಳಿತಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಧು ಎಸ್.ಬಂಗಾರಪ್ಪ ಸಮಾಲೋಚನೆ ನಡೆಸಿದರು.

10 ಎಕರೆ ಪ್ರದೇಶವನ್ನು ಗುರುತಿಸಲಾಗಿದೆ ಈ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರು ನೆರಳು, ವಿದ್ಯುತ್ ಮತ್ತಿತರ ಸೌಲಭ್ಯಗಳನ್ನು ಒದಗಿಸಲು ಸೂಚಿಸಲಾಗಿದೆ.

ದೇವಸ್ಥಾನದ ಸುತ್ತಮುತ್ತಲ ಹತ್ತು ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಯಿಂದ ಪಡೆದುಕೊಂಡ ನಂತರ ಅದಕ್ಕೆ ಪರ್ಯಾಯವಾಗಿ 20 ಎಕರೆ ಭೂಪ್ರದೇಶವನ್ನು ಅರಣ್ಯ ಇಲಾಖೆಗೆ ವಹಿಸಿ ಕೊಡಲಾಗುವುದು. ಈ ದೇಶದಲ್ಲಿ ನಿತ್ಯ ಪೂಜಾ ಕೈಂಕರ್ಯಗಳು ನಿರಂತರವಾಗಿರುವಂತೆ ನೋಡಿಕೊಳ್ಳಲುಯಾಗ ಶಾಲೆಯನ್ನು ಸಾಂಪ್ರ ದಾಯಿಕ ಹಾಗೂ ಪಾರಂಪರಿಕ ಶೈಲಿಯಲ್ಲಿ ನಿರ್ಮಿಸಲು ಹೇಳಿದರು.

ದೇವಸ್ಥಾನಕ್ಕೆ ಬರುವ ಯಾತ್ರೆಗಳ ಅನುಕೂಲಕ್ಕೆ ಅಲ್ಲಲ್ಲಿ ಮಾರ್ಗಸೂಚಿಗಳನ್ನು, ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಮನವಿ ಮಾಡುವ ಭಕ್ತಾದಿಗಳ ಪಾದರಕ್ಷಗಳನ್ನು ಕೌಂಟರ್‌ಗಳನ್ನು ತೆರೆಯಲು ಸೂಚಿಸಿದ ಅವರು ಹಾಲುಣಿಸುವ ತಾಯಂದಿರ ಅನುಕೂಲಕ್ಕಾಗಿ ಪ್ರತ್ಯೇಕ ಕೊಠಡಿಯೊಂದನ್ನು ನಿರ್ಮಿಸಲು ಸೂಚಿ ಸಿದರು.

ಪ್ರಸ್ತುತ ಈಗಿರುವ ಶೌಚಾಲಯಗಳ ಸಂಖ್ಯೆ ಅತ್ಯಂತ ಕನಿಷ್ಠ ವಾಗಿದ್ದು ಮಹಿಳೆಯರು ಹಾಗೂ ಪುರುಷರ ಅನುಕೂಲಕ್ಕಾಗಿ ಪ್ರತ್ಯೇಕವಾಗಿ 25 ಶೌಚ ಹಾಗೂ ಸ್ನಾನ ಗೃಹಗಳನ್ನು ನಿರ್ಮಿಸಲು ಸೂಚಿಸಿದರು. ಸ್ಥಳೀಯ ಗ್ರಾಮ ಪಂಚಾಯಿತಿ ಹಾಗೂ ಆಡಳಿ ತಾಧಿಕಾರಿಗಳ ಕಾರ್ಯಾಲಯದಿಂದ ಕೇವಲ ಆದಾ ಯ ನಿರೀಕ್ಷೆಕ್ಕೆ ಗಮನ ಹರಿಸಿದೆ ಜನರಿಗೆ ಸೌಲಭ್ಯ ಕಲ್ಪಿಸಿಕೊಡಲು ಹಣಕಾಸಿನ ಅಗತ್ಯವಿದ್ದಲ್ಲಿ ಸರಕಾರದ ನೆರವನ್ನು ಒದಗಿಸಲಾಗುವುದು.ಈ ಪುಣ್ಯ ಭೂಮಿಗೆ ಬಂದು ದೇವರ ದರ್ಶನ ಪಡೆಯುವ ಯಾತ್ರಾ ರ್ಥಿಗಳಿಗೆ ಧನ್ಯತಾಭಾವ ಮೂಡಬೇಕು ಅಂತ ಹ ವಾತಾವರಣ ಇಲ್ಲಿ ನಿರ್ಮಾಣಗೊಳ್ಳಬೇಕು ಎಂದು ಅವರು ಮುಂದಿನ ದಿನಗಳಲ್ಲಿ ಸರಕಾರದಿಂದಲೇ ಪ್ರಾಧಿಕಾರ ರಚಿಸಿ ನಿರ್ವಹಣೆಗೆ ಕ್ರಮವಹಿಸಲಾ ಗುವುದು ಎಂದರು.

ಸಭೆಯಲ್ಲಿ ಸಾಗರದ ಒಬ್ಬ ವಿಭಾಗಾಧಿಕಾರಿ ಯತೀಶ್, ತಹಸೀಲ್ದಾರ್ ಮಂಜುಳಾ ಹೆಗಡಾಳ, ತಾಲೂಕು ಕಾರ್ಯ ನಿರ್ವಾಹಕ ಅಧಿಕಾರಿ ಡಾ. ಪ್ರದೀಪ್ ಕುಮಾರ್, ದೇವಾಲಯದ ಆಡಳಿತಾಧಿಕಾರಿ ಪ್ರಮೀಳಾ, ಗ್ರಾಮ ಪಂಚಾಯತ್ ಅಧ್ಯಕ್ಷ ಸರಿತಾ, ಉಪಾಧ್ಯಕ್ಷ ರೇಣುಕಾ ಪ್ರಸಾದ್ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಅಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

> ಪಾರಂಪರಿಕವಾಗಿರುವ ಮೂಲ ಕಟ್ಟಡವು ಶಿಥಿಲಗೊಂಡಿದೆ ಮಾತ್ರವಲ್ಲದೆ ಮಳೆಯಿಂದ ಸೋರುತ್ತಿದೆ. ದೇವಸ್ಥಾನದ ಬಾಗಿಲುಗಳು ಸಡಿಲಗೊಂಡಿವೆ. ಅದರ ತುರ್ತು ಕಾರ್ಯವನ್ನು ಕೈಗೊಳ್ಳಲು ಭಾರತೀಯ ಪರಂಪರಿಕ ಕಟ್ಟಡಗಳ ನಿರ್ವಹಣಾ ಸಮಿತಿಯ ಅಧಿಕಾರಿಗಳಿಗೆ ಸೂಚಿಸಲಾಗಿದೆ ಅಲ್ಲದೆ ಕೈಗೊಳ್ಳಬಹುದಾದ ತುರ್ತು ಕಾಮಗಾರಿಗಳಿಗೆ ಆರ್ಥಿಕ ನೆರವನ್ನು ಸರಕಾರ ಅಥವಾ ಸ್ಥಳೀಯ ಆಡಳಿತ ಅಧಿಕಾರಿಗಳ ಕಚೇರಿಯಿಂದ ಒದಗಿಸಿಕೊಡಲಾಗುವುದು.
>
> -ಮಧು ಎಸ್.ಬಂಗಾರಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ಕೆರೆಕಟ್ಟೆ ದುರಸ್ತಿಗೆ ಕ್ರಮ

ಮುಂಗಾರು ಮಳೆಯಿಂದಾಗಿ ಕೆರೆಕಟ್ಟೆ ಕಾಲುವೆಗಳು ಅಲ್ಲಲ್ಲಿ ಹಾಳಾಗಿದ್ದು, ಅವುಗಳನ್ನು ದುರಸ್ತಿಗೊಳಿಸಲು ತುರ್ತು ಕ್ರಮ ಕೈಗೊಳ್ಳಲಾಗುವುದು. ಸೊರಬ, ಜಡೆ ಹಾಗೂ ಆನವಟ್ಟಿಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಶೀಘ್ರದಲ್ಲಿ ಮೇಲ್ದರ್ಜೆಗೇರಿಸಲಾಗುವುದು ಹಾಗೆಯೇ ಕೊರತೆ ಇರುವ ಎಲ್ಲ ತಜ್ಞ ವೈದ್ಯರು ಹಾಗೂ ಸ್ತ್ರೀರೋಗ ಹಾಗೂ ಪ್ರಸೂತಿ ತಜ್ಞರನ್ನು ಮುಂದಿನ ಒಂದು ತಿಂಗಳೊಳಗಾಗಿ ನೇಮಿಸಲಾಗುವುದು.

ಸಮಾಚಾರ ಸಣ್ಣದಲ್ಲ

ವರ್ತಕರ ಸಂಘಕ್ಕೆ ಹಾಲಸ್ವಾಮಿ ಅಧ್ಯಕ್ಷ

ಶಿವಮೊಗ್ಗ: ದಿನಸಿ ವರ್ತಕರ ಜಿಲ್ಲಾ ಸಂಘದ ಕಾರ್ಯಕಾರಿ ಮಂಡಳಿಗೆ ಪಿ.ಎಸ್. ಹಾಲಸ್ವಾಮಿ ಅವರು ಅಧ್ಯಕ್ಷರಾಗಿ ಎರಡನೇ ಬಾರಿ ಅವಿರೋಧ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿಯಾಗಿ ಎಂ.ಪಿ. ನಾಗರಾಜ ಆಯ್ಕೆಯಾಗಿದ್ದಾರೆ. ಉಪಾಧ್ಯ ಕ್ಷರಾಗಿ ಆರ್.ಬಿ.ಕಡದಕಟ್ಟಿ(ಬಣಕಾರ್), ಸಹ ಕಾರ್ಯ ದರ್ಶಿ ಎಚ್.ಜೆ. ದೇವರಾಜ, ಖಜಾಂಚಿ ವೈ.ಎ. ಅಶೋಕ್ ಕುಮಾರ ಆಯ್ಕೆಯಾಗಿದ್ದಾರೆ.ಸಂಘದ ನಿರ್ದೇಶಕರಾಗಿ ಸಿ.ಆನಂದ, ಎಚ್.ಎನ್.ರಘು ಪ್ರಸಾದ್, ಬಿ.ಎನ್.ನಂ ದನ್ ಕುಮಾರ್,ಎ.ಬಿ.ಪ್ರಸನ್ನ, ಬಿ.ಎ. ಪ್ರಕಾಶ್, ಎಂ. ಜಿ. ಸಿದ್ದಪ್ಪ, ಎ.ಎಸ್. ಶ್ರೀ ಕಾಂತ್, ಬಿ.ಎನ್. ಶಿವ ಪ್ರಕಾಶ, ಕೆ.ಎಸ್.ನಟರಾಜ, ಎ.ಎಸ್.ರವಿ ಆಯ್ಕೆ ಯಾ ಗಿದ್ದಾರೆ.

ಆ.14 ರಿಂದ 3ದಿನ ಸಾಂಸ್ಕೃತಿಕ ಸಂಭ್ರಮ

ಶಿವಮೊಗ್ಗ: ರಾಷ್ಟ್ರೀಯ ಶಿಕ್ಷಣ ಸಮಿತಿ, ಕಮಲಾ ನೆಹರು ಸ್ಮಾರಕ ರಾಷ್ಟ್ರೀಯ ಮಹಿಳಾ ಕಾಲೇಜು ವತಿಯಿಂದ ಇಲ್ಲಿನ ಕಾಲೇಜು ಆವರಣದಲ್ಲಿ ಆ.14, 15, 16 ರಂದು ಸಾಂಸ್ಕೃತಿಕ ಸಂಘದಿಂದ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕಾಲೇಜು ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ. ಆ. 14ರಂದು ಮಧ್ಯಾಹ್ನ 12.30ಕ್ಕೆ ಶ್ರಾವಣ ಸಂಭ್ರಮ ಮತ್ತು ಸಾಂಸ್ಕೃತಿ ನಡಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ಸಮಿತಿ ಕಾರ್ಯದರ್ಶಿ ಎಸ್.ಎನ್. ನಾಗರಾಜ ಉದ್ಘಾಟಿಸುವರು. ಸಾಂಸ್ಕೃತಿಕ ಸಂಘ ಸಂಚಾಲಕರಾದ ಎ.ಪಿ.ಓಂಕಾರಪ್ಪ, ಕಾವ್ಯಶ್ರೀ ಉಪಸ್ಥಿತರಿವರು. ಡಾ.ಆರ್.ಎಂ.ಜಗದೀಶ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸುವರು.ಆ.15ರಂದು ಮಧ್ಯಾ ಹ್ನ 2.30ಕ್ಕೆ ಗ್ರಾಜುಯಂಡ್ಸ್ ಡೇ ಮತ್ತು ಬಿಳ್ಕೊಡಿಗೆ ಕಾರ್ಯಕ್ರಮ, ಆ. 16ರಂದು ಬೆಳಿಗ್ಗೆ 10.30ಕ್ಕೆ ಇಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸಮಾರೋಪ ಸಮಾರಂಭ ನಡೆಯಲಿದೆ. ಅಂದು ರಂಗಭೂಮಿ ಕಲಾವಿದ ಶ್ರೀಹರ್ಷ ಗೋಭಟ್ ಕಾರ್ಯಕ್ರಮದ ಸಮರೋಪ ನುಡಿಗಳನ್ನಾಡುವರು.

ಸಹಕಾರ ಸಂಘದ ಮಹಾಸಭೆ ಇಂದು

ಶಿವಮೊಗ್ಗ : ಶ್ರೀಗಂಗಾಪರಮೇಶ್ವರಿ ಸಹಕಾರ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆ ಬಾಪೂಜಿ ನಗರದಲ್ಲಿರುವ ಗಂಗಾಮತ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಆ.11ರಂದು ಬೆಳಿಗ್ಗೆ 11ಕ್ಕೆ ನಡೆಯಲಿದೆ. ಜಿಲ್ಲಾ ಮುಖ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಟರಾಜ್ ಕಾರ್ಯ ಕ್ರಮ ಉದ್ಘಾಟಿಸುವರು. ನಿವೃತ್ತ ಸರ್ಕಲ್ ಇನ್ಸ್‌ಫೆಕ್ಟರ್ ಹೆಚ್. ಎಂ. ಜಗನಾಥ್, ಸಂಘದ ಜಿಲ್ಲಾಧ್ಯಕ್ಷ ಡಿ.ಬಿ. ಕೆಂಚಪ್ಪ, ನೌಕರರ ಸಂಘದ ಅಧ್ಯಕ್ಷ ಚಂದ್ರ ಶೇಖರ್ ಉಪಸ್ಥಿತರಿರುವರು.ಸಹಕಾರ ಸಂಘದ ಅಧ್ಯಕ್ಷ ಎ. ಹಾಲೇಶಪ್ಪ ಅಧ್ಯಕ್ಷತೆ ವಹಿಸುವರು. ಕಾರ್ಯಕಾರಿ ಸಮಿತಿಯ ನಿರ್ದೇಶಕರುಗಳು ಹಾಜರಿ ರುವರು. ಸದಸ್ಯರು ಸರಿಯಾದ ಸಮಯಕ್ಕೆ ಹಾಜರಿ ರಬೇಕು ಎಂದು ಅಧ್ಯಕ್ಷ ಎ.ಹಾಲೇಶಪ್ಪ ಕೋರಿದ್ದಾರೆ.

ಬಾಲಕಿಗೆ ಲೈಂಗಿಕ ದೌರ್ಜನ್ಯ: ದೂರು

ಭದ್ರಾವತಿ: ಅಪ್ರಾಪ್ತ ಬಾಲಕಿಗೆ ಲೈಂಗಿಕ ದೌರ್ಜನ್ಯ ನಡೆಸಿದ (73) ವರ್ಷದ ವೃದ್ಧನ ವಿರುದ್ಧ ಆರೋಪ ಸಾಬೀತಾದ ಬೆನ್ನಲ್ಲೇ ನ್ಯಾಯಾಲಯ ಜೀವಾವಧಿ ಶಿಕ್ಷೆ ಮತ್ತು 2.5 ಲಕ್ಷ ರು. ದಂಡ ವಿಧಿಸಿ ತೀರ್ಪು ನೀಡಿದೆ. 2023ನೇ ಸಾಲಿನಲ್ಲಿ 73 ವರ್ಷದ ವ್ಯಕ್ತಿ 10 ವರ್ಷದ ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ್ದಾನೆಂದು ನೊಂದ ಬಾಲಕಿ ನೀಡಿದ ದೂರಿನ ಮೇರೆಗೆ ಹೊಳೆಹೊನ್ನೂರು ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕಾಯಿದೆ ಪ್ರಕರಣ ದಾಖಲಿಸಲಾಗಿತ್ತು.ಆರೋಪಿಯ ವಿರುದ್ಧ ಆರೋಪ ದೃಢಪಟ್ಟ ಹಿನ್ನೆಲೆಯಲ್ಲಿ, ನ್ಯಾಯಾಧೀಶರಾದ ಮೋಹನ್ ಜೆ.ಎಸ್ ರವರು ಆ.08. ರಂದು ಪ್ರಕರಣದ ಆರೋಪಿಗೆ ಜೀವಾವಧಿ ಶಿಕ್ಷೆ ಮತ್ತು ರು. 2,50,000/–ದಂಡ ವಿಧಿಸಿ ತೀರ್ಪು ನೀಡಿದ್ದಾರೆ.

ಅಗಲಿದ ಜೀವ

ಚನ್ನಜ್ಜಿ ಶೇಖರಪ್ಪ

ಶಿಕಾರಿಪುರ: ನಿವೃತ್ತ ಪೋಸ್ಟ್ ಮಾಸ್ಟರ್ ಚನ್ನಜ್ಜಿ ಶೇಖರಪ್ಪ (93) ಅನಾರೋಗ್ಯದಿಂದಾಗಿ ತಾಲೂಕಿನ ಚಿಕ್ಕಜೋಗೀಹಳ್ಳಿ ಗ್ರಾಮದ ಸ್ವಗೃಹದಲ್ಲಿ ಶುಕ್ರವಾರ ಬೆಳಿಗ್ಗೆ ನಿಧನರಾದರು.ಮೃತರು ಪತ್ನಿ, ನಾಲ್ಕು ಪುತ್ರರು,ಮೂವರು ಪುತ್ರಿಯರ ಸಹಿತ ಬಂಧು ಬಳಗ ಅಗಲಿದ್ದಾರೆ. ನಿವೃತ್ತಿ ನಂತರದಲ್ಲಿ ಹಿತ್ತಲ ವಿಎಸ್‌ಎಸ್‌ಎನ್ ಅಧ್ಯಕ್ಷರಾಗಿ, ಧರ್ಮದರ್ಶಿ ಸಮಿತಿ ಅಧ್ಯಕ್ಷರಾಗಿ ಹಲವು ವರ್ಷ ಅವರು ಸೇವೆ ಸಲ್ಲಿಸಿದ್ದರು. ಶನಿವಾರ ಬೆಳಿಗ್ಗೆ ಸ್ವಗ್ರಾಮದಲ್ಲಿ ಅಂತ್ಯ ಸಂಸ್ಕಾರ ನಡೆಯಲಿದೆ.

> {ಮಧು ಎಸ್.ಬಂಗಾರಪ್ಪ, } ಸಚಿವ
>
> ದೇವಸ್ಥಾನದ ಬಾಗಿಲುಗಳು ಸಡಿಲಗೊಂಡಿವೆ. ಅದರ ತುರ್ತು ಕಾರ್ಯವನ್ನು ಕೈಗೊಳ್ಳಲು ಭಾರತೀಯ ಪರಂಪರಿಕ ಕಟ್ಟಡಗಳ ನಿರ್ವಹಣಾ ಸಮಿತಿಯ ಅಧಿಕಾರಿಗಳಿಗೆ ಸೂಚಿಸಲಾಗಿದೆ. ತುರ್ತು ಕಾಮಗಾರಿಗಳಿಗೆ ಆರ್ಥಿಕ ನೆರವನ್ನು ಸರಕಾರ ಅಥವಾ ಸ್ಥಳೀಯ ಆಡಳಿತ ಅಧಿಕಾರಿಗಳ ಕಚೇರಿಯಿಂದ ಒದಗಿಸಿಕೊಡಲಾಗುವುದು.

ನಕಲಿ ಪತ್ರಕರ್ತರ ವಿರುದ್ಧ ಕಠಿಣ ಕ್ರಮಕ್ಕೆ ಮನವಿ

ಶಿವಮೊಗ್ಗ: ಜಿಲ್ಲೆಯಲ್ಲಿ ಪತ್ರಕರ್ತರ ಸೋಗಿನಲ್ಲಿ ಕೆಲವು ಪತ್ರಿಕೆಗಳ ಹೆಸರಿನಲ್ಲಿ ಮತ್ತು ವಾಟ್ಸಾಪ್, ಫೇಸ್‌ಬುಕ್, ವೆಬ್ ಪೇಜ್, ಯೂಟ್ಯೂಬ್ ಸಾಮಾಜಿಕ ಜಾಲ ತಾಣಗಳನ್ನು ಬಳಸಿಕೊಂಡು ಸರಕಾರಿ ಅಧಿಕಾರಿಗಳು, ಖಾಸಗಿ ಉದ್ದಿಮೆ ದಾರರು, ವೈದ್ಯರು, ರಾಜಕಾರ ಣಿಗಳಿಗೆ ಹಣಕ್ಕಾಗಿ ಕಿರುಕುಳ ಕೊಡುವ, ಸಲ್ಲದ ಆರೋಪ ಮಾಡಿ ಬ್ಲಾಕ್‌ಮೇಲ್‌ನಿಂದ ಸುಲಿಗೆ ಮಾಡುತ್ತಿರುವ ಬಗ್ಗೆ ವ್ಯಾಪಕ ದೂರುಗಳು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ ದ ಜಿಲ್ಲಾ ಶಾಖೆ ವತಿಯಿಂದ ಇಂದು ಜಿಲ್ಲಾ ರಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಪತ್ರಕರ್ತರ ಸೋಗಿನಲ್ಲಿ ಭೂವ್ಯವಹಾರದಲ್ಲಿ ಮಧ್ಯಪ್ರವೇಶಿಸಿ ಸುಲಿಗೆ ಮಾಡುವುದು, ಹೊಸದಾಗಿ ನಿರ್ಮಾಣವಾಗುತ್ತಿರುವ ಕಟ್ಟಡ ಲೇಔಟ್‌ಗಳ ಬಗ್ಗೆ ದೂರುವ ನೆಪದಲ್ಲಿ ಮಾಲೀಕರಿಗೆ ಹಣಕ್ಕಾಗಿ ಕಿರುಕುಳ ನೀಡುವುದು. ಸರಕಾರಿ ಕಚೇರಿಗಳಿಗೆ ನುಗ್ಗಿ ಕೆಲಸದ ಅವಧಿಯಲ್ಲಿ ಅಧಿಕಾರಿ, ಸಿಬ್ಬಂದಿ ವಿಡಿಯೋ ಚಿತ್ರೀಕರಣ ಮಾಡುವುದು, ಮತ್ತು ಅವರನ್ನು ಬ್ಲಾಕ್‌ಮೇಲ್ ಮಾಡುತ್ತಿರುವ ಪ್ರಕರಣಗಳು ನಡೆಯುತ್ತಿರುವುದು ಸಂಘದ ಗಮನಕ್ಕೆ ಬಂದಿವೆ.

ಈ ಪ್ರಕರಣಗಳನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಶಿವಮೊಗ್ಗ ಜಿಲ್ಲಾಶಾಖೆಯು ಅತ್ಯಂತ ಗಂಭೀರ ವಾಗಿ ಪರಿಗಣಿಸಿದೆ.ಪತ್ರಕರ್ತರ ಹೆಸರಿನಲ್ಲಿ ಯಾರಾದರೂ ಹಣ ವಸೂಲಿ, ಬ್ಲಾಕ್ ಮೇಲ್ ಮಾಡುವುದು ಕಂಡು ಬಂದಲ್ಲಿ ಬಾಧಿತ ಸರಕಾರಿ ಅಧಿಕಾರಿಗಳು, ರಾಜಕಾರಣಿಗಳು,ಉ ದ್ದಿಮೆದಾರರು ಸಾರ್ವಜನಿಕ ಸೇವೆ ಯಲ್ಲಿ ರುವವರು ತಕ್ಷಣ ವೇ ಪೊಲೀಸ್ ಇಲಾಖೆಗೆ ದೂರು ನೀಡ ಬೇಕೆಂದು ಸಂಘವು ಮನವಿ ಮಾಡಿಕೊಳ್ಳುತ್ತದೆ.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷರಾದ ಕೆ.ವಿ ಶಿವಕುಮಾರ್, ಪ್ರದಾನ ಕಾರ್ಯದರ್ಶಿ ಅರುಣ್ ವಿ.ಟಿ., ರಾಜ್ಯ ಸಮಿತಿ ಸದಸ್ಯ ಎನ್.ರವಿ ಕುಮಾ ರ್, ಪದಾಧಿಕಾರಿಗಳಾದ ವೈದ್ಯ, ಕೆ.ಆರ್. ಸೋಮ ನಾಥ್ ಇದ್ದರು.

ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಶಾಖೆ ವತಿಯಿಂದ ಜಿಲ್ಲಾ ರಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಕಾನೂನು ಪ್ರಕಾರ ಕಠಿಣ ಕ್ರಮ

ಪೊಲೀಸ್ ಇಲಾಖೆ ಕೂಡ ಇಂತಹ ಪ್ರಕರಣಗಳಲ್ಲಿ ನಿರ್ದಾಕ್ಷಿಣ್ಯವಾಗಿ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಮತ್ತು ಜಿಲ್ಲೆಯಾದ್ಯಂತ ಪ್ರೆಸ್ (PRESS/MEDIA)ಸ್ಟಿಕರ್ ಹಾಕಿಕೊಂಡ ಎಲ್ಲಾ ಬಗೆಯ ವಾಹನಗಳನ್ನು ತಪಾಸಣೆ ನಡೆಸಿ ಪತ್ರಕರ್ತರು ಎಂಬುದರ ಬಗ್ಗೆ ನೋಂದಾಯಿತ ದಾಖಲೆ ಪರಿಶೀಲಿಸಬೇಕೆಂದು ಮನವಿಗೆ ಆಗ್ರಹಿಸಿದರು.

ಗಾಂಧಿ ತತ್ವ ಪ್ರಣೀತ ಯುವಜನ ಶಿಬಿರ

ಶಿವಮೊಗ್ಗ: ಬದುಕಿನ ಶಿಕ್ಷಣ ನೀಡುವಲ್ಲಿ ಗಾಂಧಿ ತತ್ವ ಮಹತ್ವದ್ದು ಎಂದು ಗಾಂಧೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾದ ನಾಡೋಜ ಡಾ. ವೂಡೇ.ಪಿ.ಕೃಷ್ಣ ಅವರು ಹೇಳಿದರು.

ಆಚಾರ್ಯ ತುಳಸಿ ಶಿಕ್ಷಣ ಸಮಿತಿ ಗಾಂಧಿ ಸ್ಮಾರಕ ಪ್ರತಿಷ್ಠಾನ ಬೆಂಗಳೂರು ರಾಷ್ಟ್ರೀಯ ಸೇವಾ ಯೋಜನೆ ವಿಭಾಗ ಹಾಗೂ ಕುವೆಂಪು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆ ವಿಭಾಗ ವತಿಯಿಂದ ಆಚಾರ್ಯ ತುಳಸಿ ರಾಷ್ಟ್ರೀ ಯ ವಾಣಿಜ್ಯ ಕಾಲೇಜಿನಲ್ಲಿ ನಡೆಯುವ ಏಳು ದಿನಗಳ ಕಾಲ ಗಾಂಧಿ ತತ್ವ ಪ್ರಣಿತ ಯುವಜನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಗಾಂಧಿ ಶಿವರದ ನಿರ್ದೇಶಕ ಜಿಬಿ ಶಿವರಾಜ್ ಮಾತನಾಡಿ, ಪ್ರಾಮಾಣಿಕ ಬದುಕು ರೂಪಿಸುವುದೇ ಗಾಂಧಿ ತತ್ವವಾ ಗಿದೆ ಗಾಂಧಿ ಮತ್ತು ಅಂಬೇಡ್ಕರ್ ಅವರ ವ್ಯಕ್ತಿತ್ವ ಬಹಳ ದೊಡ್ಡದ ಅಂತ ವ್ಯಕ್ತಿತ್ವ ಬೆಳೆಸಿಕೊಂಡ ವ್ಯಕ್ತಿಗಳ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದ ರು.

ಕಾರ್ಯಕ್ರಮದ ಮುಖ್ಯ ಅತಿಥಿ ಯಾಗಿ ಆಗಮಿಸಿದ ಕುವೆಂಪು ವಿಶ್ವ ವಿದ್ಯಾ ನಿಲಯ ಕಾರ್ಯಕ್ರಮ ಸಂಯೋಜ ನಾಧಿ ಕಾರಿಯಾಗದ ಡಾ. ಶುಭ ಮರವಂತೆ ಮಾತನಾಡಿ, ದೇಶದ ತುಂಬಾ ಗಾಂಧಿ ಪ್ರತಿಮೆ ಮಾಡಲಾಗಿದೆ ಆದರೆ ಗಾಂಧಿ ತತ್ವ ಆದರ್ಶಗಳು ಪಾಲಿಸಲಾಗುತ್ತಿಲ್ಲ ಗಾಂಧಿ ನೆಲೆಸಿದ ಈ ನಾಡಿನಲ್ಲಿ ಗಾಂಧಿ ತತ್ವದ ಪ್ರತಿಯೊಬ್ಬ ಭಾರತೀಯ ಪ್ರಜೆಯ ಬದುಕಿನ ಧ್ಯೇಯ ವಾಗಬೇಕು ಎಂದರು.

ಎಟಿ ಎನ್‌ಸಿ ಸಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ ಮಮತಾ ಅವರು ಪ್ರತಿಜ್ಞಾವಿಧಿ ಬೋಧಿಸಿದರು ಕಾರ್ಯಕ್ರಮದ ಸಂಚಾಲಕರದ ಪ್ರೊ ನಾಗರಾಜ್ ಕೆ ಎಂ ಅವರು ಅತಿಥಿಗಳನ್ನು ಸ್ವಾಗತಿಸಿದರು ತ್ರಿಶೂಲ್ ವಂದನಾರ್ಪಣೆ ಕಾ ರ್ಯವನ್ನ ನಿರ್ವ ಹಿಸಿದರು ಹರ್ಷ ಹಿರಿ ಯ ಸ್ವಯಂ ಸೇವಕ ಕಾರ್ಯಕ್ರಮವನ್ನು ನಿರೂಪಿಸಿ ದರು.

ಆಚಾರ್ಯ ತುಳಸಿ ರಾಷ್ಟ್ರೀಯ ವಾಣಿಜ್ಯ ಕಾಲೇಜಿನಲ್ಲಿ ನಡೆಯುವ ಏಳು ದಿನಗಳ ಕಾಲ ಗಾಂಧಿ ತತ್ವ ಪ್ರಣಿತ ಯುವಜನ ಶಿಬಿರ ಉದ್ಘಾಟಿಸಿದರು.

> ಗಾಂಧೀಜಿಯವರ ಸತ್ಯ, ಅಹಿಂಸೆ, ತಾಳ್ಮೆ, ಸಹನೆ, ಸರ್ವೋದಯ, ಅಸ್ಪೃಶ್ಯತೆ, ಜಾತ್ಯತೀತತೆ ಮುಂತಾದ ಗಾಂಧಿ ತತ್ವಗಳನ್ನು ಅಳವಡಿಸಿಕೊಳ್ಳಬೇಕು. ಗಾಂಧೀಜಿ ಮಾತನಾಡಿದರೆ ಪ್ರಪಂಚವೇ ಕೇಳುತ್ತದೆ ಅಂತ ದೊಡ್ಡ ಮೇರು ವ್ಯಕ್ತಿತ್ವ ಮಹಾತ್ಮ ಗಾಂಧೀಜಿಯವರದಾಗಿತ್ತು ಆದ್ದರಿಂದ ಈ ಶಿಬಿರದಲ್ಲಿ ಮಹಾತ್ಮ ಗಾಂಧೀಜಿಯವರ ತತ್ವ ಆದರ್ಶನ ಸಿದ್ಧಾಂತಗಳನ್ನು ಬೆಳೆಸಿಕೊಳ್ಳಿ ಎಂದರು.
>
> ಡಾ. ವೂಡೇ.ಪಿ.ಕೃಷ್ಣ, ಗಾಂಧೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ

ಎದೆ ಹಾಲು ಅಮೃತ ಸಮಾನ: ಗೀತಾ ಜಗದೀಶ್

ಶಿವಮೊಗ್ಗ : ತಾಯಿಯ ಎದೆ ಹಾಲು ಅಮೃತಕ್ಕೆ ಸಮಾನ ಇದರಲ್ಲಿ ಎಲ್ಲಾ ತರಹದ ವಿಟಮಿನ್‌ಗಳೊಂದಿಗೆ ನಮ್ಮ ದೇಹಕ್ಕೆ ಅಗತ್ಯವಾಗಿ ಬೇಕಾಗಿರುವ ಎಲ್ಲಾ ಶಕ್ತಿ ಸಿಗುತ್ತದೆ ಎಂದು ಆನ್ಸ್ ಕ್ಲಬ್‌ನ ಅಧ್ಯಕ್ಷ ಗೀತಾ ಜಗದೀಶ್ ಹೇಳಿದರು.

ರಾಗಿಗುಡ್ಡದ ಸರಕಾರಿ ಶಾಲೆಯಲ್ಲಿ ವಿಶ್ವ ಸ್ತನ್ಯಪಾನ ದಿನವನ್ನು ರೋಟರಿ ಕ್ಲಬ್ ಶಿವಮೊಗ್ಗ ಸೆಂಟ್ರಲ್ ಆನ್ಸ್ ಕ್ಲಬ್ ಮತ್ತು ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮದಲ್ಲಿ ಬಂದಂತಹ ಮಹಿಳೆಯರಿಗೆ ಪರ್ಸ್‌ಗಳನ್ನು ನೀಡಿ ಮಾತನಾಡಿಡ ಅವರು, ರೋಟರಿ ಕ್ಲಬ್ ಶಿವಮೊಗ್ಗ ಸೆಂಟ್ರಲ್ ವತಿಯಿಂದ ಸರ್ಜಿ ಆಸ್ಪತ್ರೆಯಲ್ಲಿ ಸ್ಥಾಪಿತವಾಗಿರುವ ಹ್ಯೂಮನ್ ಮಿಲ್ಕ್ ಬ್ಯಾಂಕ್ ನಿಂದ ತಾಯಂದಿರ ಎದೆಯ ಹಾಲು ಸರ್ಜಿ ಆಸ್ಪತ್ರೆ ಹಾಗೂ ಮೆಗನ್ ಆಸ್ಪತ್ರೆಯಲ್ಲಿ ಮಕ್ಕಳಿಗೆ ಉಪಯೋಗವಾಗುತ್ತಿದೆ ಎಂದು ತಿಳಿಸಿದರು.

ಜೆ ಸಿ ಇಂಟರ್ ನ್ಯಾಷನಲ್ ವೈಸ್ ಪ್ರೆಸಿಡೆಂಟ್ ಪುಷ್ಪ ಶೆಟ್ಟಿ ಕಾರ್ಯಕ್ರಮದಲ್ಲಿ ಬಂದಂತಹ ಮಹಿಳೆಯರನ್ನು ಉದ್ದೇಶಿಸಿ ಒಂದು ಹೆಣ್ಣು ಋತುಮತಿಯಾದಗಿನಿಂದ ಹಂತ ಹಂತವಾಗಿ ಅವಳ ದೇಹದಲ್ಲಿ ಆಗುವ ಬದಲಾವಣೆ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡಿದರು.ಸಿಸ್ಟರ್ ನಂದಿನಿ ಮಗುವಿಗೆ ಹಾಕುವ ಲಸಿಕೆಗಳ ವಿವರ ನೀಡಿದರು.

ರೊಟರಿಯನ್ ದೀಪಾ ಶೆಟ್ಟಿ, ರೊಟರಿಯನ್ ರಾಜಶ್ರೀ, ರೋಟೇರಿಯನ್ ಜ್ಯೋತಿ ಶ್ರೀರಾಮ್ ಹಾಗೂ ಎಫ್‌ಪಿಎಐ ನ ಸಿಬ್ಬಂದಿ ವರ್ಗದವರು ಮತ್ತು ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮ

ಮಹಿಳಾ ವಕೀಲರ ವೃತ್ತಿ ಯಶಸ್ಸಿಗೆ ಸಹಕಾರ ಅಗತ್ಯ

ಶಿವಮೊಗ್ಗ : ಮಹಿಳೆ ಯಶಸ್ವಿ ವಕೀಲೆಯಾಗಲು ಸಮಾಜದ ಸಹಕಾರ ಅತ್ಯಂತ ಅಗತ್ಯ ಎಂದು ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ಶಿವಮೊಗ್ಗ ಜಿಲ್ಲಾ ಆಡಳಿತಾತ್ಮಕ ನ್ಯಾಯಾಧೀಶ ಬಿ.ಎಂ.ಶ್ಯಾಂ ಪ್ರಸಾದ್ ಅಭಿಪ್ರಾಯ ಪಟ್ಟರು.

ಶನಿವಾರ ಸರಕಾರಿ ನೌಕರರ ಭವನದಲ್ಲಿ ಆಯೋಜಿಸಲಾಗಿದ್ದ ಕರ್ನಾಟಕ ಮಹಿಳಾ ನ್ಯಾಯವಾದಿಗಳ ಒಕ್ಕೂಟ, ಶಿವಮೊಗ್ಗ ಜಿಲ್ಲಾ ಮಹಿಳಾ ನ್ಯಾಯವಾದಿಗಳ ಸಮಿತಿ ಮತ್ತು ಶಿವಮೊಗ್ಗ ಜಿಲ್ಲಾ ನ್ಯಾಯವಾದಿಗಳ ಸಂಘ ಇವರ ಸಂಯುಕ್ತಾಶ್ರಯದಲ್ಲಿ ದಕ್ಷಿಣ ಕರ್ನಾಟಕ ಮಹಿಳಾ ನ್ಯಾಯವಾದಿಗಳ ಸಮ್ಮೇಳನವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಒಬ್ಬ ಮಹಿಳೆ ಕುಟುಂಬ ಮತ್ತು ಸಂದರ್ಭದ ಬಗ್ಗೆ ಯೋಚನೆ ಮಾಡಿ ಆಯ್ಕೆ ಮಾಡಬೇಕಾಗುತ್ತದೆ. ಯಾವುದೇ ಕೆಲಸವಾದರೂ ಸಹ ಕಷ್ಟ ಆದರೂ ಸಾಧ್ಯ. ಆದರೆ ಸಮತೋಲ ಮಾಡಬೇಕಾದದ್ದು ಅಗತ್ಯವಾಗುತ್ತದೆ.

ಸಮಾನತೆಯ ಕಡೆಗೆ ನಮ್ಮ ನಾಡಿಗೆ ಎನ್ನುವ ಹಾಗೆ. ಸೆ.28, 29 ರಂದು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಮಾತ್ರವಲ್ಲದೇ ಜಿಲ್ಲಾ ಮಟ್ಟದಲ್ಲೂ ಚರ್ಚೆ ಆಗುತ್ತಿದೆ ಎನ್ನುವ ರೀತಿಯಲ್ಲಿ ಕೊಂಡೊಯ್ಯಬೇಕು. ಕೆಲವು ಮಹಿಳಾ ವಕೀಲರು ಕೋರ್ಟ್ ನಲ್ಲಿ ಜೂನಿಯರ್ಸ್ ಬಂದಾಗ ಸೀನಿಯರ್ಸ್‌ನ ಕರ್ಕೊಂಡ್ ಬನ್ನಿ ಎನ್ನುವುದು ಸರಿಯಲ್ಲ ಇದನ್ನು ತಪ್ಪಿಸಿ ಎಂದು ಮನವಿ ಮಾಡಿದರು. ಯಾರೇ ಕಿರಿಯರಿದ್ದರೂ ಸರಿಯೇ ಧೈರ್ಯವಾಗಿ ಹೋಗಿ ವಾದ ಮಾಡಿ ಎಂದು ಕಿರಿಯರಿಗೆ ಧೈರ್ಯ ತುಂಬಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಉಮಾ ಮಾತನಾಡಿ, ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹ ಮಹಿಳೆ ತನ್ನ ಛಾಪನ್ನು ಖಂಡಿತವಾಗಿಯೂ ಮೂಡಿಸಿದ್ದಾಳೆ. ಜಿಲ್ಲಾ ಮಹಿಳಾ ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ಸರೋಜ ಪಿ.ಸಂಗೊಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿ, ಸುಮಾರು 20 ಜಿಲ್ಲೆಗಳಿಂದ ಈ ದಕ್ಷಿಣ ಪ್ರಾಂತೀಯ ಮಹಿಳಾ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಈ ವೇದಿಕೆಯನ್ನು ಬಳಸಿಕೊಂಡು ನಮ್ಮ ಸಮಸ್ಯೆಗಳನ್ನು ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇವೆ. ಇದು ಎಲ್ಲಾ ಮಹಿಳಾ ವಕೀಲ ವೃಂದಕ್ಕೆ ಸಹಕಾರಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಅಖಿಲ ಭಾರತ ಮಹಿಳಾ ನ್ಯಾಯವಾದಿಗಳ ಒಕ್ಕೂಟದ ಅಧ್ಯಕ್ಷರಾದ ಹೇಮಲತಾ ಮಹಿಷಿ, ಮಾಜಿ ಅಧ್ಯಕ್ಷರಾದ ಶೀಲ ಅನೀಶ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಜಿ.ಆರ್.ರಾಘವೇಂದ್ರ ಸ್ವಾಮಿ, ಕರ್ನಾಟಕ ರಾಜ್ಯ ಮಹಿಳಾ ನ್ಯಾಯವಾದಿಗಳ ಒಕ್ಕೂಟದ ಅಧ್ಯಕ್ಷರಾದ ಸಂಧ್ಯಾ ಬಸವರೆಡ್ಡಿ ಮದಿನೂರು, ಕಾರ್ಯದರ್ಶಿ ರೇಣುಕಮ್ಮ ಹೆಚ್.ಎಂ., ನ್ಯಾ.ಮರುಳ ಸಿದ್ಧರಾಧ್ಯ, ಸಂಪನ್ಮೂಲ ವ್ಯಕ್ತಿ ಹೆಚ್.ಡಿ.ಆನಂದ್ ಕುಮಾರ್, ಹಿರಿಯ ವಕೀಲರಾದ ಬಸಪ್ಪಗೌಡ, ಶಿವಮೂರ್ತಿ, ಮಾಜಿ ಶಾಸಕ ಹೆಚ್.ಎಂ. ಚಂದ್ರಶೇಖರಪ್ಪ, ಸೂಡಾ ಅಧ್ಯಕ್ಷ ಹೆಚ್.ಎಸ್. ಸುಂದರೇಶ್ ಇದ್ದರು.

> ಕುಟುಂಬ ವರ್ಗ, ಸ್ನೇಹಿತ ವರ್ಗ, ಸಮಾಜ ವರ್ಗ ಇದ್ದರು ನಮ್ಮ ಸಂದರ್ಭ ಬೇರೆ ಬೇರೆ ಇರುತ್ತದೆ. ಹಾಗಾಗಿ ಎಲ್ಲಾ ಸಂದರ್ಭಗಳನ್ನು ಎದುರಿಸಿ ಮುಂದೆ ಹೋಗಬೇಕಾಗುವುದು ಅನಿವಾರ್ಯವಾ ಗುತ್ತದೆ. ಒಬ್ಬ ಗಂಡಸು ವಕೀಲನಾಗಿ ಯಶಸ್ವಿಯಾಗಲು ಕುಟುಂಬದ ಸಹಕಾರ ಸಾಕಾಗುತ್ತದೆ. ಆದರೆ ಒಬ್ಬ ಮಹಿಳೆ ಯಶಸ್ವಿ ವಕೀಲೆಯಾ ಗಲು ಸಮಾಜದ ಸಹಕಾರ ಅತ್ಯಂತ ಅನಿವಾರ್ಯ ಮತ್ತು ಅಗತ್ಯ ಕೂಡ ಆಗಿರುತ್ತದೆ.
>
> -ಬಿ.ಎಂ.ಶ್ಯಾಂ ಪ್ರಸಾದ್, ನ್ಯಾಯಾಧೀಶ

ಅರಣ್ಯ ಭೂಮಿ ಅನಧಿಕೃತ ಒತ್ತುವರಿ ತೆರವು

ಹೊಸನಗರ: ಅರಣ್ಯ ಒತ್ತುವರಿ ಕುರಿತು ರಾಜ್ಯ ಸರಕಾರ ತಳೆದಿರುವ ಬಿಗಿ ನಿಲುವಿನ ಪರಿಣಾಮ ಅರಣ್ಯ ಇಲಾಖೆಯನ್ನು ಚುರುಕುಗೊಳಿಸಿದೆ. ತಾಲೂಕಿನ ಕಸಬಾ ಹೋಬಳಿಯಲ್ಲಿ ಆಗಿದ್ದ ಅರಣ್ಯ ಭೂಮಿ ಒತ್ತುವರಿಯ ಎರಡು ಪ್ರತ್ಯೇಕ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಾರ್ಯಚರಣೆ ನಡೆಸಿದ ಅಧಿಕಾರಿಗಳು ಅನಧಿಕೃತ ಒತ್ತುವರಿ ತೆರವುಗೊಳಿಸಿದ್ದಾರೆ.

ಹರಿದ್ರಾವತಿ ಗ್ರಾಮ ಪಂಚಾಯತ್ ವ್ಯಾಪ್ತಿಯದೊಂಬೆಕೊಪ್ಪ ಗ್ರಾಮದ ಸರ್ವೆ ನಂ.39 ಹಾಗೂ ಶುಂಠಿಕೊಪ್ಪ ಗ್ರಾಮದ ಸರ್ವೆ ನಂಬರ್ 33ರಲ್ಲಿ ಆಲಗೇರಿಮಂಡ್ರಿ ಮೀಸಲು ಅರಣ್ಯ ಪ್ರದೇಶದಲ್ಲಿ ಸುಮಾರು 2 ಎಕರೆ ಹಾಗೂ ಹಿರೇಮೈತಿ ಗ್ರಾಮದ ಸರ್ವೆ ನಂಬರ್ 1 ರಲ್ಲಿ ಅಂದಾಜು 2 ಎಕರೆ ಅರಣ್ಯ ಭೂ ಪ್ರದೇಶವನ್ನು ಒತ್ತುವರಿ ಮಾಡಿ ಸಾಗುವಳಿ ಮಾಡಲು ಮುಂದಾಗಿದ್ದರು. ತೆರವುಗೊಳಿಸಿದ ಪ್ರದೇಶವನ್ನು ವಶಕ್ಕೆ ಪಡೆದ ಅರಣ್ಯ ಇಲಾಖೆ ಅಧಿಕಾರಿಗಳು ಕಾಡುಜಾತಿಯ ಗಿಡಗಳನ್ನು ನೆಟ್ಟಿದ್ದಾರೆ. ವಲಯಅರಣ್ಯಾಧಿಕಾರಿ ರಾಘವೇಂದ್ರ ಅವರ ಸಮ್ಮುಖದಲ್ಲಿ ಕಾರ್ಯಾಚರಣೆ ನಡೆಯಿತು.

ಬಸವ ಪಂಚಮಿ ಕಾರ್ಯಕ್ರಮ ಸಂಪನ್ನ

ಆಯನೂರು: ಮೌಢ್ಯತೆ, ಕಂದಾಚಾರ, ಅಂಧ ಶ್ರದ್ಧೆ ಸಮಾಜದಲ್ಲಿ ಬಲವಾಗಿ ಬೇರೂರಿವೆ. ಅವುಗಳ ವಿರುದ್ಧ ಜಾಗೃತಿ ಮೂಡಿಸುವ ಕಾರ್ಯ ಪ್ರಜ್ಞಾವಂತರ ಜವಾಬ್ದಾರಿ ಎಂದು ಮಾನವ ಬಂಧುತ್ವ ವೇದಿಕೆ ಸೊರಬ ತಾಲೂಕು ಅಧ್ಯಕ್ಷ ರಾಜೇಶ್ ಸಿ. ಕಾನಡೆ ಹೇಳಿದರು. ಇಲ್ಲಿನ ಅಂಗನವಾಡಿ ಕೇಂದ್ರದಲ್ಲಿ ವಿಶ್ವ ಮಾನವ ಬಂಧುತ್ವ ವೇದಿಕೆ ನೇತೃತ್ವದಲ್ಲಿ ಆಸರೆ ಮಹಿಳಾ ಸಂಘ ಹಾಗೂ ವಿವಿಧ ಸಂಘಟನೆ ನೇತೃತ್ವದಲ್ಲಿ ಹಮ್ಮಿಕೊಂಡ ಬಸವ ಪಂಚಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನಾಗರ ಪಂಚಮಿ ಹಬ್ಬದ ಆಚರಣೆ ಹೆಸರಿನಲ್ಲಿ ಹುತ್ತ ಮತ್ತು ಕಲ್ಲು ನಾಗರ ಮೂರ್ತಿಗೆ ಹಾಲು, ನೈವೇದ್ಯ ಅರ್ಪಿಸಿ ದುಂದು ವೆಚ್ಚ ಮಾಡುವುದರಿಂದ ಲಕ್ಷಾಂತರ ಲೀಟರ್ ಹಾಲು ಮಣ್ಣು ಪಾಲು ಆಗುತ್ತಿದೆ. ಇದರಿಂದ ಯಾರಿಗೆ ಸಹ ಉಪಯೋಗವಿಲ್ಲ.ಇದೇ ಸಂದರ್ಭದಲ್ಲಿ ಅಂಗನವಾಡಿ ಮಕ್ಕಳಿಗೆ ಪಠ್ಯ ಪರಿಕರಗಳನ್ನು ಮಾನವ ಬಂಧುತ್ವ ವೇದಿಕೆಯಿಂದ ವಿತರಿಸಲಾಯಿತು. ಆಸರೆ ಮಹಿಳಾ ಸಂಘದ ಅಧ್ಯಕ್ಷೆ ಆರ್. ಶಿಲ್ಪಾ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ ಸದಸ್ಯೆ ಲತಾ, ಆಸರೆ ಮಹಿಳಾ ಸಂಘದ ಕಾರ್ಯದರ್ಶಿ ವಿಶಾಲಾಕ್ಷಮ್ಮ, ರಾಜ್ಯ ಮಾಹಿತಿ ಹಕ್ಕು ಸಾಮಾಜಿಕ ಕಾರ್ಯಕರ್ತರ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಟಿ. ನಾಗರಾಜಪ್ಪ, ಮಾನವ ಬಂಧುತ್ವ ವೇದಿಕೆ ಗುಡುಗಿನಕೊಪ್ಪ ಗ್ರಾಮ ಸಂಚಾಲಕ ವೀರಭದ್ರ ಸ್ವಾಮಿ, ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿ ಸೊರಬ ಕಾರ್ಯದರ್ಶಿ ಟಿ.ಎಚ್. ಲತಾ ಸೇರಿದಂತೆ ಅಂಗನವಾಡಿ ಸಿಬ್ಬಂದಿ ಮತ್ತು ಸ್ಥಳೀಯ ಗ್ರಾಮಸ್ಥರು ಉಪಸ್ಥಿತರಿದ್ದರು.

ಅರ್ಥಪೂರ್ಣವಾಗಿ ಹುಟ್ಟುಹಬ್ಬ ಆಚರಿಸಿ

ಶಿವಮೊಗ್ಗ : ನಮ್ಮ ವಿವಾಹ ವಾರ್ಷಿಕೋತ್ಸವ ಹಾಗೂ ಹುಟ್ಟುಹಬ್ಬಗಳನ್ನು ಸಮಾಜಮುಖಿಯಾಗಿ ಆಚರಿಸಿಕೊಳ್ಳೋಣ. ಸಮಾಜದ ಋಣ ಹಾಗೂ ಹೆತ್ತವರ ಋಣ ತೀರಿಸಲು ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಹಾಗೂ ಅನಾಥಾಶ್ರಮದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ಜತೆಯಲ್ಲಿ ಅರ್ಥ ಪೂರ್ಣವಾಗಿ ಆಚರಿಸಿಕೊಂಡರೆ ಅದು ಫಲಪ್ರದವಾಗುತ್ತದೆ ಎಂದು ರೋಟರಿ ಶಿವಮೊಗ್ಗ ಪೂರ್ವ ಇನ್ನರ್ ವೀಲ್ ಸದಸ್ಯೆ ವೀಣಾ ನರಹರಿ ಅವರು ಅಭಿಪ್ರಾಯಪಟ್ಟರು.ಅವರು ತಾಯಿ ಮನೆ ಮಕ್ಕಳ ಅನಾಥಾ ಶ್ರಮದಲ್ಲಿ ತಮ್ಮ 35ನೇ ವರ್ಷದ ವಿವಾಹ ವಾರ್ಷಿಕೋತ್ಸವ ಆಚರಣೆಯ ವೇಳೆ ತಾಯಿ ಮನೆ ಆಶ್ರಮಕ್ಕೆ ಐದು ಚೀಲ ಅಕ್ಕಿ ಹಾಗೂ ಅಗತ್ಯ ಸಾಮಗ್ರಿಗಳನ್ನು ವಿತರಣೆ ಮಾಡುತ್ತ ಮಾತನಾಡಿದ ಅವರು, ತಾಯಿ ಮನೆ ಆಶ್ರಮದಲ್ಲಿ ಇರುವ ಮಕ್ಕಳು ತುಂಬಾ ಪ್ರತಿಭಾವಂತರಿದ್ದು, ಸಾಂಸ್ಕೃತಿಕ ಹಾಗೂ ಕ್ರೀಡೆಗಳಲ್ಲಿ ತುಂಬಾ ಸಬಲರಾಗಿದ್ದಾರೆ. ಇಂತಹ ಮಕ್ಕಳಿಗೆ ಪ್ರೋತ್ಸಾಹ ಹಾಗೂ ಸಹಾಯ ಹಸ್ತ ಅಗತ್ಯ. ಇನ್ನರ್‌ವಿಲ್ ಶಿವಮೊಗ್ಗ ಅಧ್ಯಕ್ಷರಾದ ವಾಗ್ದೇವಿ ಬಸವರಾಜ್ ಮಾತನಾಡಿ, ಅನಾಥ ಮಕ್ಕಳಿಗೆ ನೀಡಿದ ಸಹಾಯ ಒಂದು ನಿಜವಾದ ಮನುಕುಲದ ಸೇವೆ. ಕಾರ್ಯಕ್ರಮದಲ್ಲಿ ಇನ್ನರ್‌ವೀಲ್ ಮಾಜಿ ಅಧ್ಯಕ್ಷರಾದ ಶ್ವೇತಾ ಆಶಿತ್ ಮಾತನಾಡಿ, ಮಕ್ಕಳನ್ನು ಹುರಿದುಂಬಿಸಿದರು.ಇದೇ ಸಂದರ್ಭದಲ್ಲಿ ಮಕ್ಕಳಿಂದ ಸಾಂಸ್ಕೃತಿಕ ಚಟುವಟಿಕೆಗಳು ನೆರವೇರಿದವು.

ಅರಣ್ಯ ಅಧಿಕಾರಿಗಳ ಬಂಧನಕ್ಕೆ ಒತ್ತಾಯ

ಶಿವಮೊಗ್ಗ : ಸರಕಾರದ ಆದೇಶವಿರದೇ ಹಾಗೂ ನೋಟೀಸ್ ನೀಡದೇ ಶಿವಮೊಗ್ಗ ತಾಲೂಕಿನ ಆಲದೇವರ ಹೊಸೂರು ಗ್ರಾಮದ ಚೇತನಗೌಡ ಎಂಬುವರ ಜಮೀನಿಗೆ ನುಗ್ಗಿ ಬೇಲಿ ಕಿತ್ತು ಜೆಸಿಬಿಯಿಂದ ತೆಂಗಿನಮರಗಳನ್ನು ಧ್ವಂಸ ಮಾಡಿರುವ ಇದನ್ನು ಪ್ರಶ್ನಿಸಿದ ಮಾಲೀಕರಿಗೆ ಜೀವ ಬೆದರಿಕೆ ಹಾಕಿರುವ ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸಬೇಕು ಎಂದು ಮಲೆನಾಡು ರೈತರ ಹೋರಾಟ ಸಮಿತಿಯ ಅಧ್ಯಕ್ಷ ತಿ.ನಾ. ಶ್ರೀನಿವಾಸ್ ಒತ್ತಾ ಯಿಸಿದರು.ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ರೈತರನ್ನು ಕೇಂದ್ರ ಮತ್ತು ರಾಜ್ಯ ಸರಕಾರ ಕೊಲೆ ಮಾಡುತ್ತಿದ್ದರು. ಇದನ್ನು ನೋಡಿಕೊಂಡು ಜನಪ್ರತಿನಿಧಿಗಳು ಪಲಾಯನ ಮಾಡುತ್ತಿದ್ದಾರೆ ಎಂ ದು ದೂರಿದರು.ಜಮೀನಿನ ಮಾಲಿಕ ಚೇತನ್‌ಗೌಡ ಅವರ ಮೇಲೆ ಹಲ್ಲೆ ನಡೆಸಿ ಜೀವ ಬೆದರಿಕೆ ಹಾಕುವ ಅಧಿಕಾರಿಗಳ ಹಾಗೂ ಸಿಬ್ಬಂದಿ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಿ ಆಗಿರುವ ನಷ್ಟ ತುಂಬಿಸಿ ಅವರಿಗೆ ಜೀವ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿದರು.ರೈತರಿಗೆ ಆಗುತ್ತಿರುವ ಅನ್ಯಾಯ ಹಾಗೂ ದೌರ್ಜನ್ಯದ ವಿರುದ್ಧ ಆ.13ರಂದು ಜಿಲ್ಲಾ ಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ಎಂ.ಬಿ.ಕೃಷ್ಣಪ್ಪ, ಮಂಜಪ್ಪ, ದಿನೇಶ್ ಕುಮಾರ್, ಮಹಾದೇವ ಸಿದ್ದರಗುಡಿ, ಮೂರ್ತಿ, ಎಂ.ಚೇತನ್, ನಾಗರಾಜ ನಾಯಕ್, ವೆಂಕಟಚಲ ಗೌಡ ಇನ್ನಿತರರು ಉಪಸ್ಥಿತರಿದ್ದರು.

ಸಾಧನೆಯ ಹಾದಿ ಸುಲಭವಲ್ಲ: ಕಿಶನ್

ಸಾಗರ: ಸಾಧನೆಯ ಹಾದಿ ಸುಲಭವಾಗಿ ಇರುವುದಿಲ್ಲ. ಪುರಸ್ಕಾರ, ಸನ್ಮಾನ, ಶ್ಲಾಘನೆಗಳು ನಮ್ಮನ್ನು ಮೈ ಮರೆಸುವ ಬದಲು ಎಚ್ಚರಿಕೆ ಗಂಟೆ ಆಗಿರಬೇಕು ಎಂದು ಪ್ರಸಿದ್ಧ ಕೀಲು ಮತ್ತು ಮೂಳೆ ತಜ್ಞ ಡಾ. ಕಿಶನ್ ಭಾಗವತ ಹೇಳಿದರು.ಬ್ರಾಸಂ ಸಭಾಭವನದಲ್ಲಿ ಮಲೆ ನಾಡು ಅಭಿವೃದ್ಧಿ ಪ್ರತಿಷ್ಠಾನದ ಎಂ.ಡಿ.ಎಫ್ ಸ್ವತಂತ್ರ ಪದವಿಪೂರ್ವ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ಶನಿವಾರ ಹಮ್ಮಿಕೊಂಡಿದ್ದ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪುರಸ್ಕರಿಸಿ ಅವರು ಮಾತನಾಡಿದರು. ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನದ ಅಧ್ಯಕ್ಷ ಎಂ ಹರನಾಥ ರಾವ್ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯ ಡಾ.ಜಗದೀಶ್.ಎಂ. ಭಂಡಾರಿ, ಪ್ರಧಾನ ಕಾರ್ಯದರ್ಶಿ ಡಾ.ಎಚ್.ಎಮ್ ಶಿವ ಕುಮಾರ್ ಮಾತನಾಡಿದರು. ಕಾಲೇಜಿಗೆ ಪ್ರಥಮ ಸ್ಥಾನ ಪಡೆದ ಪ್ರಣವ್ ಕುಮಾರ್ ಟಿಎಸ್ ಮತ್ತು ಅಂ ಕಿತ ಎನ್ ಅವರಿಗೆ ಜಗದೀಶ ಒಡೆಯರ್ ಕೊಡ ಮಾಡುವ ದಿ.ಕೆ.ಜಿ.ಒಡೆಯರ್ ಪುರಸ್ಕಾರ ನೀಡ ಲಾಯಿತು. ಬಾ.ಬಿ.ಸಿ.ಶಶಿಧರ, ಪ್ರದೀಪ್ ಪ್ರಭು, ಪಿಡಿ ನಾರಾಯಣ ಮೂರ್ತಿ, ಉಪ ಪ್ರಾಚಾರ್ಯ ಶ್ರೀಪಾದ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಪ್ರತ್ಯೇಕ ಅಪಘಾತ: ಮೂವರು ಸಾವು

ಚಿಕ್ಕೋಡಿ: ಗೂಡ್ಸ್ ವಾಹನ ಹಾಗೂ ಕಾರಿನ ನಡುವೆ ಮುಖಾಮುಖಿ ಡಿಕ್ಕಿಯಾದ ಹಿನ್ನಲೆಯಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು ಇನ್ನುಳಿದ ಇಬ್ಬರು ಗಂಭೀರವಾಗಿ ಗಾಯಗೊಂಡ ಘಟನೆ ನಡೆದಿದೆ. ತಾಲೂಕಿನ ನಿಪ್ಪಾಣಿ-ಮುಧೋಳ ರಸ್ತೆಯ ಬೆಳಕುಡ ಗೇಟ್ ಶುಕ್ರವಾರ ತಡರಾತ್ರಿ ಸಂಭವಿಸಿದ ಅಪಘಾತದಲ್ಲಿ ಬಾಗಲಕೋಟೆಯ ಮುಧೋಳದ ರಾಕೇಶ ವಾಡೆಕರ (25) ಸೌರಭ (19) ಸಾವನ್ನಪ್ಪಿದ್ದಾರೆ. ಆನಂದ ಘಾಟಕೆ(29) ವಿಕಾಸ ಬೀಳಗಿ (19) ಗಂಭೀರವಾಗಿ ಗಾಯಗೊಂಡರನ್ನು ಬೆಳಗಾವಿ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ಚಿಕ್ಕೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅದೇ ರೀತಿ ಆಟೋ ಹಾಗೂ ಲಾರಿ ಮಧ್ಯೆ ಅಪಘಾತ ಸಂಭವಿಸಿದ್ದು ಹಿರೇಬಾಗೇವಾಡಿ ಗ್ರಾಮದ ಅಮಿನ್ ಯರಗಟ್ಟಿ (45) ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಶನಿವಾರ ಘಟನೆ ಸಂಭವಿಸಿದ್ದು ಹಿರೇಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಪ್ಪಾಣಿ-ಮುಧೋಳ ರಸ್ತೆಯ ಬೆಳಕುಡ ಗೇಟ್ ಶುಕ್ರವಾರ ತಡರಾತ್ರಿ, ಸಂಭವಿಸಿದ ಅಪಘಾತದ ಚಿತ್ರ.

ಅಗಲಿದ ಜೀವ

ಗಂಗಾದೇವಿ ಪಟ್ಟೇದ್

ಬೆಳಗಾವಿ: ರಾಣಿ ಚನ್ನಮ್ಮ ಮಹಿಳಾ ಬ್ಯಾಂಕಿನ ಮಾಜಿ ಉಪಾಧ್ಯಕ್ಷೆ ಗಂಗಾದೇವಿ ವಿಜಯ ಬಸಪ್ಪ ಪಟ್ಟೇದ್ (85) ಅವರು ಶನಿವಾರ ನಿಧನರಾದರು. ಮೃತರಿಗೆ ಮೂವರು ಪುತ್ರರು ಮತ್ತು ಓರ್ವ ಪುತ್ರಿ ಇದ್ದಾರೆ. ಕೆಎಲ್ಇ ನಿರ್ದೇಶಕ ಅನಿಲ ಪಟ್ಟೇದ ಮೃತರ ಪುತ್ರರಲ್ಲಿ ಒಬ್ಬರು. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 2ಗಂಟೆಗೆ ಸದಾಶಿವನಗರ ಸ್ಮಶಾನದಲ್ಲಿ ನಡೆಯಲಿದೆ.

ಮೊಟ್ಟೆ ವಂಚನೆ: ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಅಮಾನತು

ಮಕ್ಕಳ ತಟ್ಟೆಯಿಂದ ಮೊಟ್ಟೆ ತೆಗೆದ ವಿಡಿಯೊ ವೈರಲ್

ಕೊಪ್ಪಳ: ಮಕ್ಕಳ ತಟ್ಟೆಗೆ ಮೊಟ್ಟೆ ಹಾಕಿ, ವಿಡಿಯೊ ಮಾಡಿಕೊಂಡ ನಂತರ ಅದನ್ನು ವಾಪಸ್ ಪಡೆದ ಅಂಗನವಾಡಿ ಕಾರ್ಯಕರ್ತೆಯ ನಡೆ ವ್ಯಾಪಕ ಟೀಕೆಗೆ ಒಳಗಾಗಿದೆ. ಕಾರಟಗಿ ತಾಲೂಕು ಗುಂಡೂರು ಗ್ರಾಮದ 2ನೇ ಅಂಗನವಾಡಿ ಕೇಂದ್ರದಲ್ಲಿ ನಡೆದ ಈ ಘಟನೆಯ ವಿಡಿಯೊ ವ್ಯಾಪಕವಾಗಿ ಹರಡಿದ ಬೆನ್ನಲ್ಲೇ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯನ್ನು ಶುಕ್ರವಾರ ಅಮಾನತುಗೊಳಿಸಿ ಆದೇಶಿಸಲಾಗಿದೆ.

ಏನಿದು ಘಟನೆ?: ಸರಕಾರ ಅಪೌಷ್ಟಿಕತೆ ಹೋಗಲಾಡಿಸಲು ಅಂಗನವಾಡಿ ಮೂಲಕ ಮಕ್ಕಳು ಮತ್ತು ಗರ್ಭಿಣಿಯರಿಗೆ ಮೊಟ್ಟೆ ಸೇರಿ ವಿವಿಧ ಪೌಷ್ಟಿಕ ಆಹಾರ ವಿತರಿಸಲಾತ್ತದೆ. ಗುಂಡೂರು ಗ್ರಾಮದ 2ನೇ ಅಂಗನವಾಡಿ ಕೇಂದ್ರದಲ್ಲಿ, ಸಹಾಯಕಿ ಶೈನಜಾ ಬೇಗಂ ಮಕ್ಕಳ ತಟ್ಟೆಗೆ ಮೊಟ್ಟೆ ಹಾಕುತ್ತಾರೆ. ಇದನ್ನು ಕಾರ್ಯಕರ್ತೆ ಜೆ.ಲಕ್ಷ್ಮೀ ಅವರು ಇದನ್ನು ವಿಡಿಯೊ ಮಾಡಿದ್ದಾರೆ. ವಿಡಿಯೊ ಮಾಡಿದ ನಂತರ ಮಕ್ಕಳ ತಟ್ಟೆಗೆ ಹಾಕಿದ್ದ ಮೊಟ್ಟೆಯನ್ನು ಸಹಾಯಕಿ,ವಾಪಸ್ ತೆಗೆದು ಒಳಗೆ ಇಡುತ್ತಾರೆ. ಈ ಎಲ್ಲ ಪ್ರಹಸನವನ್ನು ಯುವಕನೊಬ್ಬ ಮೊಬೈಲ್ ನಲ್ಲಿ ಸೆರೆಹಿಡಿದಿದ್ದಾನೆ. ಈ ವಿಡಿಯೊ ಸಾಮಾಜಿಕ ಜಾಲ ತಾಣದಲ್ಲಿ ವ್ಯಾಪಕವಾಗಿ ವೈರಲ್ ಆಗಿದೆ.

ರಾಜ್ಯದಲ್ಲಿ 69 ಸಾವಿರ ಅಂಗನವಾಡಿ ನಡೆಸುತ್ತಿದ್ದು, ಎಲ್ಲೋ ಒಂದು ಕಡೆ ಆದ ಘಟನೆ ಸಂಪೂರ್ಣ ಇಲಾಖೆಗೆ ಕಷ್ಟ ಆಗುತ್ತೆ. ಕಳೆದ ರಾತ್ರಿಯೇ ಪ್ರಕರಣ ಗಮನಕ್ಕೆ ಬಂದಿದ್ದು ತಕ್ಷಣವೇ ಕ್ರಮ ಕೈಗೊಳ್ಳಲಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬಂದಿಲ್ಲ ಅನ್ನೋ ಸ್ಥಿತಿ ಮಕ್ಕಳಿಗೆ ಆಗಿದೆ. ಕಾರ್ಯಕರ್ತೆ ಹಾಗೂ ಸಹಾಯಕಿಯನ್ನ ಈಗಾಗಲೇ ಕೆಲಸದಿಂದ ಸಸ್ಪೆಂಡ್ ಮಾಡಲಾಗಿದ್ದು , ಇಂತಹ ತಪ್ಪನ್ನು ಮಾಡಿದರೆ ಕಡ್ಡಾಯವಾಗಿ ಕೆಲಸದಿಂದ ನಿವೃತ್ತಿಗೊಳಿಸಲಾಗುವುದು.

– **ಲಕ್ಷ್ಮೀ ಹೆಬ್ಬಾಳ್ಕರ್** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ಕಾರಟಗಿ ತಾಲೂಕಿನ ಗುಂಡೂರು ಗ್ರಾಮದಲ್ಲಿ ಮಕ್ಕಳ ತಟ್ಟೆಯಿಂದ ಮೊಟ್ಟೆ ವಾಪಸ್ ತೆಗೆದ ಅಂಗನವಾಡಿ ಸಹಾಯಕಿ.

ಇಬ್ಬರನ್ನೂ ಶಾಶ್ವತವಾಗಿ ಡಿಸ್‌ಮಿಸ್: ಹೆಬ್ಬಾಳ್ಕರ್

ಬೆಂಗಳೂರು: ಮಕ್ಕಳ ತಟ್ಟೆಗೆ ಬಡಿಸಿದ್ದ ಮೊಟ್ಟೆ ಕಸಿದುಕೊಳ್ಳುತ್ತಿದ್ದ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯನ್ನು ಅಮಾನತುಗೊಳಿಸಿ ಆದೇಶ ಹೊರಡಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದ್ದಾರೆ. ಕೊಪ್ಪಳದ ಗುಂಡೂರು ಗ್ರಾಮದಲ್ಲಿ ಮೊಟ್ಟೆ ವಂಚನೆ ಮಾಡುತ್ತಿದ್ದ ವಿಡಿಯೊ ವೈರಲ್ ಆಗಿದ್ದ ಪ್ರಕರಣಕ್ಕೆ ಸಂಬಂಧ ಪ್ರತಿಕ್ರಿಯಿಸಿದ ಅವರು, ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲ್ಲ ಎಂಬ ಮಾತಿನಂತೆ ಸರಕಾರ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸಲೆಂದು ಮಕ್ಕಳಿಗೆ ಮೊಟ್ಟೆ ಕೊಡುತ್ತಿದ್ದು, ಅಂಗನವಾಡಿಗಳಲ್ಲಿ ಶಿಸ್ತು ತರಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿದ್ದರೂ ಗುಂಡೂರಿನ ಘಟನೆ ಕರುಳು ಚುರಿಕ್ ಎನ್ನುತ್ತದೆ. ಅಂಗನವಾಡಿ ಕಾರ್ಯಕರ್ತೆಯೇ ಮಕ್ಕಳು ತಿನ್ನಲು ಮುಂದಾದ ಮೊಟ್ಟೆ ಕಸಿದುಕೊಂಡಿದ್ದು, ಕಾರ್ಯಕರ್ತೆ ಹಾಗೂ ಸಹಾಯಕಿಯರನ್ನು ಅಮಾನತುಗೊಳಿಸಿ ಇಬ್ಬರನ್ನೂ ಶಾಶ್ವತವಾಗಿ ಡಿಸ್ ಮಿಸ್ ಮಾಡಲು ಸೂಚಿಸಿದ್ದೇನೆ ಎಂದು ತಿಳಿಸಿದ್ದಾರೆ.

ಫೋಟೊ, ವಿಡಿಯೊಗಾಗಿ ಮೊಟ್ಟೆ ವಿತರಣೆ

ಕೇವಲ ಫೋಟೊ, ವಿಡಿಯೊ ಶೂಟ್ ಮಾಡುವುದಕ್ಕೆ ಮಾತ್ರ ಮಕ್ಕಳ ತಟ್ಟೆಗೆ ಮೊಟ್ಟೆ ಹಾಕುತ್ತಾರೆ. ವಿಡಿಯೊ ಮಾಡಿಕೊಂಡ ನಂತರ ಈ ಮೊಟ್ಟೆಗಳನ್ನು ಮಕ್ಕಳ ಕೈಯಿಂದ ವಾಪಸ್ ಕಿತ್ತುಕೊಂಡು, ಮನೆಗೆ ತೆಗೆದುಕೊಂಡು ಹೋಗುತ್ತಾರೆ ಎಂಬ ಆರೋಪ ಕೇಳಿಬಂದಿದೆ. ಈ ಅಂಗನವಾಡಿ ಸಿಬ್ಬಂದಿ, ಕೇವಲ ಮೊಟ್ಟೆ ಅಷ್ಟೆ ಅಲ್ಲದೆ ಇತರೇ ಆಹಾರಧಾನ್ಯ ಕದ್ದು ಮಾರಾಟ ಮಾಡುತ್ತಾರೆ. ಮಕ್ಕಳ ಹೊಟ್ಟೆ ಸೇರಬೇಕಾದ ಆಹಾರ ಕಳ್ಳತನವಾಗುತ್ತಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಅಂಗನವಾಡಿ ಸಹಾಯಕಿ ಮತ್ತು ಕಾರ್ಯಕರ್ತೆಯನ್ನು ಅಮಾನತು ಮಾಡಲಾಗಿದೆ. ಘಟನೆ ಬಗ್ಗೆ ಸಂಪೂರ್ಣ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ನೀಡುತ್ತೇನೆ.

– **ವಿರೂಪಾಕ್ಷಿ** ಸಿಡಿಪಿಒ, ಕನಕಗಿರಿ

ನಾನು ಮಕ್ಕಳಿಂದ ಮೊಟ್ಟೆ ಕಸಿದುಕೊಂಡಿಲ್ಲ. ಮೊಟ್ಟೆಯ ಸಿಪ್ಪೆ ತೆಗೆದು ಕೊಂಡಲು ತೆಗೆದುಕೊಂಡಿದ್ದೇನೆ.

– **ಲಕ್ಷ್ಮೀ** ಕಾರ್ಯಕರ್ತೆ

ಆಲೂರಿನಲ್ಲಿ ನಡೆದ ಮಾಜಿ ರಾಜ್ಯಪಾಲ ದಿ.ಬಿ.ರಾಚಯ್ಯ ಅವರ ಸ್ಮಾರಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ನನ್ನ ರಾಜಕೀಯ ಏಳಿಗೆಗೆ ರಾಚಯ್ಯ ಕಾರಣ: ಸಿಎಂ

ಚಾಮರಾಜನಗರ: ನನ್ನ ರಾಜಕೀಯ ಏಳಿಗೆಗೆ ಹಿರಿಯ ಮುತ್ಸದ್ದಿ ಬಿ. ರಾಚಯ್ಯ ಕಾರಣರಾಗಿದ್ದು ನಾನು ಅವರ ಗರಡಿಯಲ್ಲಿ ಪಳಗಿದವನು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾಲೂಕಿನ ಆಲೂರಿನಲ್ಲಿ ಮಾಜಿ ರಾಜ್ಯಪಾಲ ದಿ.ಬಿ.ರಾಚಯ್ಯ ಅವರ ಸ್ಮಾರಕ ಉದ್ಘಾಟಿಸಿ ಮಾತನಾಡಿದ ಅವರು, ರಾಚಯ್ಯ ಸದಾ ಬಡವರ, ಶೋಷಿತರ, ಅಲ್ಪಸಂಖ್ಯಾತರ ಪರವಾಗಿದ್ದರು, ಅವರ ಸಲಹೆ ,ಮಾರ್ಗದರ್ಶನದಂತೆ ನಾನೂ ಶೋಷಿತರ ಪರವಾಗಿದ್ದೇನೆ ಎಂದರು.

ರಾಜ್ಯ ರಾಜಕಾರಣ ಕಂಡ ಅತ್ಯಂತ ಮುತ್ಸದ್ದಿಯಾಗಿದ್ದ ರಾಚಯ್ಯ ಮಿತಭಾಷಿಯಾದರೂ, ಅವರ ಮನಸ್ಸು ಸದಾ ಬಡವರು ಮತ್ತು ಶೋಷಿತರ ಪರವಾಗಿ ತುಡಿಯುತ್ತಿತ್ತು. ರಾಮಕೃಷ್ಣ ಹೆಗಡೆ ಅವರ ಮಂತ್ರಿಮಂಡಲದಲ್ಲಿ ಪ್ರಭಾವಿಯಾಗಿದ್ದ ರಾಚಯ್ಯನವರಿಗೆ ಪ್ರತಿಭಾವಂತ, ಜನಪರ ಕಾಳಜಿಯುಳ್ಳ ರಾಜಕಾರಣಿಗಳನ್ನು ಬೆಳೆಸುವ ಗುಣವಿತ್ತು ಎಂದು ಸಿದ್ದರಾಮಯ್ಯ ಸ್ಮರಿಸಿಕೊಂಡರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಸಮಾಜಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ, ಕಾನೂನು ಸಚಿವ ಎಚ್.ಕೆ.ಪಾಟೀಲ್, ರಾಚಪ್ಪ ಅವರ ಪತ್ನಿ ಗೌರಮ್ಮ, ಸಂಸದರಾದ ಸುನಿಲ್ ಬೋಸ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಚ್.ಎಂ.ಗಣೇಶ್ ಪ್ರಸಾದ್, ಎಂ. ಆರ್.ಮಂಜುನಾಥ್, ವಿಧಾನ ಪರಿಷತ್ ಸದಸ್ಯ ತಿಮ್ಮಯ್ಯ ಇದ್ದರು.

ಸಚಿವಗಿರಿ ಸಿಕ್ಕಿದ್ದು ರಾಚಯ್ಯರಿಂದ

ನಾನು ಕನ್ನಡ ಕಾವಲು ಸಮಿತಿ ಅಧ್ಯಕ್ಷನಾಗಲು ಹಾಗೂ ಮೊದಲ ಬಾರಿ ಸಚಿವನಾಗಲು ರಾಚಯ್ಯ ಅವರೇ ಕಾರಣ ಎಂದು ಸ್ಮರಿಸಿದರು. ಅಂದು ಅವರು ಮಂತ್ರಿಯಾಗಲು ಶಿಫಾರಸು ಮಾಡದಿದ್ದರೆ ಪ್ರಸ್ತುತ ಎರಡು ಬಾರಿಗೆ ಮುಖ್ಯಮಂತ್ರಿ ಆಗಲು ಸಾಧ್ಯವಾಗುತ್ತಿರಲಿಲ್ಲ. ನಾನು ಮುಖ್ಯಮಂತ್ರಿ ಯಾಗಿರುವುದು ಕೆಲವರಿಗೆ ಹೊಟ್ಟೆ ಉರಿಯುತ್ತಿದೆ ಎಂದು ಹಾಸ್ಯದಾಟಿಯಲ್ಲಿ ಹೇಳಿದರು.

ಮೈಸೂರು, ಚಾಮರಾಜನಗರ ಜಿಲ್ಲೆಯ ಬಹುತೇಕ ಕಾಂಗ್ರೆಸ್ ಮುಖಂಡರು ರಾಚಯ್ಯನವರ ಪ್ರಾಡಕ್ಟ್‌ಗಳಾಗಿದ್ದಾರೆ. ರಾಜಕಾರಣದಲ್ಲಿ ಮೌಲ್ಯಗಳು ಮರೆಯಾಗುತ್ತಿರುವ ಕಾಲಘಟ್ಟದಲ್ಲಿ ರಾಚಯ್ಯ ಆದರ್ಶವಾಗಿ ನಿಲ್ಲುತ್ತಾರೆ. ಸ್ಮಾರಕದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ ಸ್ಥಾಪಿಸುವ ಅವರ ಪುತ್ರ ಹಾಗೂ ಕೊಳ್ಳೇಗಾಲ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರ ಬೇಡಿಕೆಯನ್ನು ಪರಿಶೀಲಿಸಲಾಗುವುದು ಎಂದು ಸಿಎಂ ಭರವಸೆ ನೀಡಿದರು

ಆಡಳಿತ ವೈದ್ಯಾಧಿಕಾರಿಗಳ ಕಛೇರಿ,
ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ,
ಅರಸೀಕೆರೆ, ಹಾಸನ ಜಿಲ್ಲೆ-573103
ಸಂ/ಜಸಾಆ/ಟೆಂಡರ್/06/2024-25 ದಿನಾಂಕ:07.08.2024
ಅಲ್ಪಾವಧಿ ಇ-ಪಕ್ಯೂರ್ ಮೆಂಟ್ ಮರು ಟೆಂಡರ್ ಪ್ರಕಟಣೆ
01.ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ ಅರಸೀಕೆರೆ ಇಲ್ಲಿಗೆ 2024-25 ನೇ ಸಾಲಿನ ನಾನ್ ಕ್ಲಿನಿಕ್ (ಸ್ವಚ್ಚತಾ ಸೇವೆ), ಗ್ರೂಪ್-ಡಿ ನೌಕರರನ್ನು ಹಾಗೂ ಡಾಟಾ ಎಂಟ್ರಿ ಆಪರೇಟರ್‌ನ್ನು ಹೊರಗುತ್ತಿಗೆ ಆಧಾರದಲ್ಲಿ ಸೇವೆಯನ್ನು ನಿರ್ವಹಿಸಲು ವಿವಿಧ ಸಂಸ್ಥೆಗಳಿಂದ ಇ-ಪ್ರಕ್ಯೂರ್ ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. 02.ಟೆಂಡರ್ ಸಲ್ಲಿಸುವ ದಿನಾಂಕ: 07/08/2024 ರಿಂದ 21/08/2024 ರ ವರೆಗೆ 03.ಟೆಂಡರ್ ಫಾರಂನ್ನು ಇ-ಪ್ರಕ್ಯೂರ್ ಮೆಂಟ್ ಮೂಲಕ ಆನ್ ಲೈನ್ ನಲ್ಲಿ https//kppp.karnataka.gov.in ಈ ವೆಬ್ಸೈಟ್ ಮುಖಾಂತರ ಅರ್ಜಿ ಸಲ್ಲಿಸುವುದು. 04.ಇ-ಪ್ರಕ್ಯೂರ್ ಮೆಂಟ್ ಟೆಂಡರ್ ಮೂಲಕ ಅರ್ಜಿಸಲ್ಲಿಸಲು ಕೊನೆಯ ದಿನಾಂಕ:21/08/2024 ರಂದು ಸಂಜೆ 5:00 ಗಂಟೆಗೆ 05.ದಿನಾಂಕ:23/08/2024 ರಂದು ಬೆಳಗ್ಗೆ 11 ಗಂಟೆಗೆ ತಾಂತ್ರಿಕಲಕೋಟೆಯನ್ನು ತೆರೆಯಲಾಗುವುದು. 06.ಟೆಂಡರ್ ಅನುಮೊದನಾ ಸಮಿತಿ ನಿಗದಿ ಪಡಿಸುವ ದಿನಾಂಕದಂದು ಆರ್ಥಿಕ ಲಕೋಟೆಯನ್ನು ತೆರೆಯಲಾಗುವುದು. 07.ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದು. ಪೋ.ನಂ.08174-232380 ಕ್ರ.ಸಂ: ವಿವರ: 1)ನಾನ್ ಕ್ಲಿನಿಕ್ (ಸ್ವಚ್ಚತಾ ಸೇವೆ). ಅಂದಾಜು ಮೊತ್ತ 3010045/- ಇ.ಎಂ.ಡಿ: ರೂ.75251/- 2)ಗ್ರೂಪ್ ಡಿ ಅಂದಾಜು ಮೊತ್ತ: ರೂ.2817804/- ಇ.ಎಂ.ಡಿ: ರೂ.70446/- 3)ಡಾಟಾ ಎಂಟ್ರಿ ಆಪರೇಟರ್ ರೂ.231806/- ಇ.ಎಂ.ಡಿ: ರೂ.5796/-
ಸಹಿ/-ಆಡಳಿತ ವೈದ್ಯಾಧಿಕಾರಿಗಳು, ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ, ಅರಸೀಕೆರೆ, ಹಾಸನ ಜಿಲ್ಲೆ
ವಾಸಾಸಂಇ/ಹಿಸನಿ/ಹಾಸನ/284/ಕೆಎಸ್ಎಂಸಿಎ/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ಫೋನ್ ನಂ : 08182-222942, ಇ-ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಏಕ-ಲಕೋಟೆ ಪದ್ಧತಿ) (ಕೆ.ಪಿ.ಪಿ ಪೋರ್ಟಲ್ ಮೂಲಕ)
ಐ.ಎಫ್.ಟಿ ಸಂಖ್ಯೆ: 05/2024-25 ದಿನಾಂಕ : 08.08.2024
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-1&2 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ ಶಿವಮೊಗ್ಗ, ತೀರ್ಥಹಳ್ಳಿ, ಭದ್ರಾವತಿ ತಾಲ್ಲೂಕುಗಳಲ್ಲಿ 3054-03-337-0-05-200 ರಾ.ಹೆ. ನಿರ್ವಹಣೆ ಲೆಕ್ಕ ಶೀರ್ಷಿಕೆಯಡಿ 12 ಕಾಮಗಾರಿಗಳು, 3054-04-337-1-10-200 ಜಿ.ಮುರ ನಿರ್ವಹಣೆ ಲೆಕ್ಕ ಶೀರ್ಷಿಕೆಯಡಿ 17 ಕಾಮಗಾರಿಗಳು ಅನುಮೋದನೆಗೊಂಡಿರುವ ಒಟ್ಟು 29 ಕಾಮಗಾರಿಗಳಿಗೆ ಟೆಂಡರ್‌ನ್ನು ಏಕ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ. 49.95 ಲಕ್ಷ ಮತ್ತು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 10.12 ಲಕ್ಷ ಹಾಗೂ ಇ.ಎಂ.ಡಿ. ಗರಿಷ್ಟ ಮೊತ್ತ ರೂ. 0.80 ಲಕ್ಷ ಮತ್ತು ಇ.ಎಂ.ಡಿ. ಕನಿಷ್ಠ ಮೊತ್ತ ರೂ. 0.19 ಲಕ್ಷ. ಕಾಲಾವಧಿ ಮಳೆಗಾಲ ಸೇರಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ.
ಅರ್ಹ ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್ http://KPPP.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-4 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: 09-08-2024 ರಿಂದ 18-08-2024 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 18-08-2024 ರ ಸಂಜೆ 5:00 ಗಂಟೆಯೊಳಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ/ಆರ್ಥಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟಲ್ ನಲ್ಲಿ ದಿನಾಂಕ: 19-08-2024 ರಂದು ಸಂಜೆ 5.30 ಗಂಟೆಗೆ ಕ್ಕೆ ತೆರೆಯಲಾಗುವುದು. ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾಸಾಸಂಇ/ಶಿ/ನಂ.33-08 ಝೆಂಕಾರ್/2024-25

ನಟ ಚಿಕ್ಕಣ್ಣ ಹೇಳಿಕೆ ದಾಖಲು

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಸೇರಿ 17 ಮಂದಿ ಆರೋಪಿಗಳಿಗೆ ಶತಾಯಗತಾಯ ಶಿಕ್ಷೆ ಕೊಡಿಸಲು ಪಣ ತೊಟ್ಟಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, ನಟ ಚಿಕ್ಕಣ್ಣ ಸೇರಿ ಹಲವು ಸಾಕ್ಷಿದಾರರ ಹೇಳಿಕೆಯನ್ನು ಸಿಆರ್‌ಪಿಸಿ ಸೆಕ್ಷನ್ 164 ಅಡಿ ನ್ಯಾಯಾಧೀಶರ ಮುಂದೆ ಕೊಡಿಸಿದ್ದಾರೆ. ನಗರದ 24ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ನಟ ಚಿಕ್ಕಣ್ಣ ಅವರು ಹೇಳಿಕೆ ನೀಡಿದರು. ಪೊಲೀಸ್ ವಿಚಾರಣೆಯಲ್ಲಿ ನೀಡಿದ ಹೇಳಿಕೆಯನ್ನು ಕೋರ್ಟ್‌ನಲ್ಲಿ ಹೇಳಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570 001
Ph: +91-0821-2520512 (Off.), 2520803 (Fax)
Website: www.mmcri/karnataka.gov.in
E-mail: mmcrimysore@yahoo.com
ಸಂ. ಸರಬ/ವಿವ/399/2023-24 ಆಗಸ್ಟ್ 03, 2024
ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಆಡಳಿತ ವ್ಯಾಪ್ತಿಯಲ್ಲಿರುವ ಟ್ರಾಮಾಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಒಂದು ವರ್ಷದ ಅವಧಿಗೆ ವಿವಿಧ ತಂತ್ರಜ್ಞರು ಮತ್ತು ಗ್ರೂಪ್-ಡಿ ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸಲು ನೋಂದಾಯಿತ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಿಂದ ಅಲ್ಪಾವಧಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಮೂಲಕ ದಿ: 09.08.2024 ರಿಂದ ಪಡೆಯಬಹುದಾಗಿದ್ದು, ದಿ: 23.08.2024 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.
DIPR/DDMYS-395/KSMCA-274/2024-25 ಸಹಿ/- ನಿರ್ದೇಶಕರು ಮತ್ತು ಡೀನ್

ನಗರಸಭಾ ಕಾರ್ಯಾಲಯ, ಹಾಸನ. ಬಿ.ಎಂ.ರಸ್ತೆ,
ಸಂತೇಪೇಟೆ ವೃತ್ತ, ಹಾಸನ-573201.
ದೂ.ಸಂ: 08172-268276, 233702 Email: commn_hassan@yahoo.com
ಸಂ:ಪೌಆ/ಹಾನಸ/ಇ.ವಿ/ಟೆಂಡರ್ ಶಾಖೆ/2024-25 ದಿನಾಂಕ:08-08-2024
ಟೆಂಡರ್ ಪ್ರಕಟಣೆ: ಕೆ.ಪಿ.ಪಿ ಪೋಟ್ರಲ್ ಮೂಲಕ
ಹಾಸನ ನಗರಸಭಾ ವ್ಯಾಪ್ತಿಯಲ್ಲಿ 2023-24ನೇ ಸಾಲಿನ 15ನೇ ಹಣಕಾಸು ಯೋಜನೆಯಡಿ ಪ್ಯಾಕೇಜ್ ಕಾಮಗಾರಿಯ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಆಧ್ಯಾದೇಶ 2000ದ ಅನ್ವಯ ಐಟಂವಾರು ದರಗಳ ಟೆಂಡರನ್ನು ಕೆ.ಪಿ.ಪಿ. ಪೋರ್ಟಲ್ (https://kppp.karnataka. gov.in) ಮೂಲಕ ಕರೆಯಲಾಗಿದ್ದು, ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:26-08-2024 ರ ಸಂಜೆ 5.30 ಗಂಟೆಯೊಳಗೆ ಕೆಲಸಗಳಿಗೆ ಅನ್ವಯಿಸುವ ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ನಗರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ: 08172-268276. ಕಾಮಗಾರಿಯ ವಿವರ ಈ ಕೆಳಕಂಡಂತಿದೆ. 2023-24 ನೇ ಸಾಲಿನ 15ನೇ ಹಣಕಾಸು ಯೋಜನೆ. ಕ್ರ.ಸಂ.1)ಕಾಮಗಾರಿ ಹೆಸರು: Drilling of Borewells, erection of motor pump for borewells from ward no.1 to 35, road development work and construction of cement concrete drain in ward no 8,15, 18, 21, 26, 28 and 30 Hassan city. (DMA/2023-24/OW/WORK_INDENT15543/CALL-2) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)434.30 ಕಾಲಾವಧಿ: 18 ತಿಂಗಳು ಮಳೆಗಾಲ ಹೊರತುಪಡಿಸಿ ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ:4 ಸೂಚನೆ:- ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವಜನಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನ ಹೊರತುಪಡಿಸಿ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು.
ಸಹಿ/-ಪೌರಾಯುಕ್ತರು, ನಗರಸಭೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/288/ಕೆಎಸ್ಎಂಸಿಎ/2024-25

ಪಾದಯಾತ್ರೆ ಸಂಪನ್ನ

← ಮೊದಲಪುಟದಿಂದ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಸೇರಿದಂತೆ ಯಾರೇ ತಪ್ಪಿತಸ್ಥರಿದ್ದರೂ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ. ಜನರ ಆಶೀರ್ವಾದದಿಂದ ನಡೆಯುತ್ತಿರುವ ರಾಜ್ಯ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆಸಿದ್ದಾರೆ. ಅದ್ಯಾವುದಕ್ಕೂ ನಾನು ಜಗ್ಗುವುದಿಲ್ಲ. ಸಿದ್ದರಾಮಯ್ಯ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿದರೆ, ರಾಜಕೀಯವಾಗಿ ಅನುಕೂಲವಾಗಲಿದೆ ಎಂದು ಅವರು ಭಾವಿಸಿದ್ದಾರೆ ಎಂದು ಮುಖ್ಯಮಂತ್ರಿ ಟೀಕಿಸಿದರು.

ಪ್ರಾಸಿಕ್ಯೂಷನ್‌ಗೆ ಅನುಮತಿಸಿದರೆ ಕಾನೂನು ಹೋರಾಟ: ಪರಂ

ಇದೇ ವಿಷಯವಾಗಿ ಮಾತನಾಡಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಮೂಡಾ ಪ್ರಕರಣವನ್ನು ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವುದಿಲ್ಲ ಎಂಬ ವಿಶ್ವಾಸವಿದೆ. ಒಂದು ವೇಳೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ, ಕಾನೂನು ಹೋರಾಟ ನಡೆಸುತ್ತೇವೆ. ಕಾನೂನು ಹೋರಾಟ ಪ್ರಾರಂಭವಾದ ಬಳಿಕ ಮುಂದಿನ ಬೆಳವಣಿಗೆ ಏನೆಂಬುದನ್ನು ಗಮನಿಸಿ ರಾಷ್ಟ್ರಪತಿಯವರನ್ನು ಭೇಟಿ ಮಾಡಲು ನಿರ್ಧರಿಸಲಾಗುವುದು. ಹತ್ತಾರು ಪ್ರಕರಣಗಳು ರಾಜ್ಯಪಾಲರ ಕಚೇರಿಯಲ್ಲಿ ಬಾಕಿ ಉಳಿದಿವೆ. ಯಾವುದಕ್ಕೂ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಮುಂದಾಗಿಲ್ಲ. ಆದರೆ ಮೂಡಾ ವಿಚಾರದಲ್ಲಿ ತುರಾತುರಿಯಲ್ಲಿ ನೋಟಿಸ್ ನೀಡಿದ್ದಾರೆ. ಜುಲೈ 26ರಂದು ರಾಜ್ಯಪಾಲರಿಗೆ ಟಿ.ಜೆ.ಅಬ್ರಹಾಂ ಮನವಿ ಕೊಡುತ್ತಾರೆ. ಅದೇ ದಿನ ರಾಜ್ಯಪಾಲರು ಸರಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆಯುತ್ತಾರೆ. ಮುಖ್ಯ ಕಾರ್ಯದರ್ಶಿಯವರು ಹೋಗಿ ಸ್ಪಷ್ಟನೆ ನೀಡಿ ಬಂದಿದ್ದಾರೆ. ಅದೇದಿನ ಸಂಜೆ ಸಿಎಂ ಅವರಿಗೆ ಶೋಕಾಸ್ ನೋಟಿಸ್ ನೀಡಿದ್ದಾರೆ. ಇದರ ಹಿಂದಿನ ಉದ್ದೇಶ ಏನೆಂಬುದನ್ನು ರಾಜ್ಯಪಾಲರು ಹೇಳಬೇಕಲ್ಲವೇ ಎಂದು ಮರುಪ್ರಶ್ನಿಸಿದರು.

...ಬೆಟ್ಟದ ಹೂವು ಶಾಲೆ!

← ಮೊದಲಪುಟದಿಂದ

ಸದ್ಯ ಎರಡು ಕೊಠಡಿ ಇರುವ ಈ ಶಾಲೆ ಮಳೆಯಿಂದ ಸೋರುತ್ತಿದ್ದು ಟಾರ್ಪಲ್‌ನಿಂದ ಮುಚ್ಚಲಾಗಿದೆ.

ರಾಜ್ಯದ ಎತ್ತರ ಸ್ಥಳದಲ್ಲಿರುವ ಅತ್ತಿಗುಂಡಿ ಪ್ರದೇಶದಲ್ಲಿ ಮಳೆಗಾಲದಲ್ಲಿ ಅತೀ ಹೆಚ್ಚು ಮಳೆಯಾಗುತ್ತದೆ. ಇದಲ್ಲದೆ ಅತೀ ಮಂಜಿನಿಂದ ಕೂಡಿರುತ್ತದೆ. ಈ ಹಿಂದೆ ಮಕ್ಕಳ ಹಾಜರಾತಿ ಇಲ್ಲದ ಕಾರಣ ಶಾಲೆಯನ್ನು ಬಂದ್ ಮಾಡಲಾಗಿತ್ತು. ಆದರೆ ಅಪ್ಪು ನೆನಪು ಎಂದೆಂದಿಗೂ ಶಾಶ್ವತವಿರಬೇಕು ಎಂದು ಗ್ರಾಮಸ್ಥರೇ ಮಕ್ಕಳನ್ನು ಸೇರಿಸಿ ಮತ್ತೆ ಶಾಲೆ ತೆರೆಯುವಂತೆ ನೋಡಿಕೊಂಡಿದ್ದರು. ಆದರೆ ಶಾಲಾ ಕಟ್ಟಡ ಮಳೆಯಿಂದಾಗಿ ಸಂಪೂರ್ಣ ಶಿಥಿಲಾವಸ್ಥೆಗೆ ತಲುಪಿದೆ. ಹೀಗಾಗಿ ಅಪ್ಪು ನೆನಪಿಗಾಗಿ ಇರುವ ಈ ಶಾಲೆಯನ್ನು ದುರಸ್ಥಿಗೊಳಿಸಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಶಾಲೆಗೆ ಸಂಪೂರ್ಣ ಕಬ್ಬಿಣದ ಪಕಾಸುಗಳನ್ನು ಅಳವಡಿಸಲಾಗಿದೆ. ಸೋರಿಕೆಯಿಂದ ಪಕಾಸುಗಳು ಸಂಪೂರ್ಣ ತುಕ್ಕು ಹಿಡಿದು ಶಕ್ತಿ ಕಳೆದುಕೊಂಡಿದ್ದು, ಅಪಾಯದ ಮುನ್ಸೂಚನೆ ನೀಡುತ್ತಿವೆ. ಜೀವ ಭಯದಿಂದ ಮಕ್ಕಳು ಪಾಠ ಕಲಿಯುವಂತಾಗಿದೆ. ಈ ಬಗ್ಗೆ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿಗೆ ಮನವಿ ಸಲ್ಲಿಸಲಾಗಿದೆ. ಆದರೂ ಪ್ರಯೋಜನವಾಗಿಲ್ಲ. ಮತ್ತೊಂದು ಕಡೆ ಶಾಲೆಗೆ ಸರಿಯಾದ ಶೌಚಾಲಯ ವ್ಯವಸ್ಥೆ ಇಲ್ಲ. ಕಳೆದ 20 ದಿನಗಳಿಂದ ವಿದ್ಯುತ್ ಸಂಪರ್ಕವೂ ಇಲ್ಲದಿರುವುದರಿಂದ ಬಿಸಿಯೂಟ, ಕುಡಿಯುವ ನೀರಿಗೂ ಸಮಸ್ಯೆಯಾಗಿದೆ.

ಹೃದಯಾಘಾತದಿಂದ ಉಷಾರಾಣಿ ಆನೆ ನಿಧನ

ಚಿಕ್ಕೋಡಿ: ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ಕೊಥಳಿ ಗ್ರಾಮದ ಆಚಾರ್ಯ ರತ್ನ ಶ್ರೀ 108 ದೇಶಭೂಷಣ ಮಹಾರಾಜರ ಕುಪ್ಪಾನವಾಡಿ ಆಶ್ರಮದ ಆನೆ ಉಷಾರಾಣಿ ಶನಿವಾರ ಹೃದಯಾಘಾತ ದಿಂದ ನಿಧನ ಹೊಂದಿದೆ.

ಚಿಕ್ಕೋಡಿ ತಾಲೂಕಿನ ಕೊಥಳಿಯ ಕುಪ್ಪಾನವಾಡಿ ಶಾಂತಿಗಿರಿ ಟ್ರಸ್ಟ್ ಮತ್ತು ಬೇಡಕಿ ಹಾಳ ಗ್ರಾಮದ ಉಷಾರಾಣಿ ಹೆಸರಿನ ಆನೆ ತನ್ನ 55 ನೇ ವಯಸ್ಸಿಗೆ ನಿಧನಹೊಂದಿದೆ. ಈ ಆಶ್ರಮಕ್ಕೆ 1971 ರಲ್ಲಿ ಶಿವಮೊಗ್ಗದ ಸಕ್ರೆಬೈಲ್ ನಿಂದ ಕೇವಲ 6 ನೇ ವಯಸ್ಸಿನಲ್ಲಿ ಆನೆಯನ್ನು ತರಲಾಗಿತ್ತು. ಬೇಡಕಿಹಾಳ ಗ್ರಾಮದ ಸಂದೀಪ್ ಪೊಲೀಸ್ ಪಾಟೀಲ್ ಎಂಬುವವರು ತೋಟದಲ್ಲಿ ವಾಸವಿತ್ತು. ಪ್ರಮುಖವಾಗಿ ಉಷಾರಾಣಿ ಆಣೆ ಕರ್ನಾಟಕ ಹಾಗೂ ಮಹಾರಾಷ್ಟ್ರ ಭಾಗದ ಅನೇಕ ಧಾರ್ಮಿಕ ಕೇಂದ್ರಗಳಲ್ಲಿ ನಡೆಯುತ್ತಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿತ್ತು.

ಬೇಡಕಿಹಾಳದ ಶ್ರೀ ಕಲ್ಯಾಣ ಸಿದ್ದೇಶ್ವರನ ಐತಿಹಾಸಿಕ ದಸರಾ ಹಬ್ಬ, ದೀಪಾವಳಿ ಮತ್ತು ಧೂಳವಡ ಪಲ್ಲಕ್ಕಿ ಆಚರಣೆ ಸೇರಿದಂತೆ ಜೈನ ಸಮುದಾಯದ ಪಂಚಕಲ್ಯಾಣ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿತ್ತು. ಆನೆಯ ನಿಧನಕ್ಕೆ ಶಾಂತಿಗಿರಿ ಟೆಸ್ಟಿನ ಶ್ರೀ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ಹಾಗೂ ಮಾವುತ ಬಾಸು ಲಕ್ಷ್ಮೇಶ್ವರ ಸೇರಿದಂತೆ ಭಕ್ತರು ಅಂತಿಮ ನಮನ ಸಲ್ಲಿಸಿದರು.

ಸಂಜೆ 6 ಗಂಟೆಯ ನಂತರ ಕ್ರೇನ್ ಮೂಲಕ ಅರಣ್ಯ ಇಲಾಖೆಯ ವಾಹನದಲ್ಲಿ ಪಾರ್ಥಿವ ಶರೀರವನ್ನು ಹಾಕಿ ಬೆಡಕಿಹಾಳ ವೃತ್ತದಿಂದ ಹಳೆ ಬಸ್ ನಿಲ್ದಾಣದವರೆಗೆ ಅಂತಿಮ ಯಾತ್ರೆ ನಡೆಸಿ ಕೋಥಳಿ ಶಾಂತಿಗಿರಿಯ ಬೆಟ್ಟಕ್ಕೆ ಪಾರ್ಥಿವ ಶರೀರವನ್ನು ಸ್ಥಳಾಂತರಿಸಲಾಯಿತು. ಚಿಕ್ಕೋಡಿ ಅರಣ್ಯ ಇಲಾಖೆ ಅಧಿಕಾರಿಗಳು ಮೃತ ಆನೆಯ ಮರಣೋತ್ತರ ಪರೀಕ್ಷೆ ನಡಿಸಿದ ನಂತರ ಅಂತಿ ವಿಧಿ ವಿಧಾನಗಳ ಮೂಲಕ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

..ಹೆದರಿ ರಾಜೀನಾಮೆ

← ಮೊದಲಪುಟದಿಂದ

ದೇಶಾದ್ಯಂತದ ಎಲ್ಲ ಶ್ರೇಣಿಯ ನ್ಯಾಯಾಲಯಗಳ ನ್ಯಾಯಾಧೀಶರ ಸುರಕ್ಷತೆಗಾಗಿ ಸಿಜೆಐ ಹುದ್ದೆ ತ್ಯಜಿಸುವುದಾಗಿಯೂ, ಶನಿವಾರ ಸಂಜೆ ತಮ್ಮ ರಾಜೀನಾಮೆ ಪತ್ರವನ್ನು ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರಿಗೆ ಕಳುಹಿಸುವುದಾಗಿಯೂ ಒಬೈದುಲ್ ಹಸನ್ ಸುದ್ದಿಗಾರರಿಗೆ ಶನಿವಾರ ತಿಳಿಸಿದ್ದಾರೆ.

ಚೀಫ್ ಜಸ್ಟಿಸ್ ಒಬೈದುಲ್ ಹಸನ್ ದಿಢೀರ್ ಸಭೆ ಕರೆದಿದ್ದಾರೆಂಬ ಸುದ್ದಿ ಹರಿದಾಡಿದ ನಂತರ ಪ್ರತಿಭಟನಾಕಾರರ ಸಿಟ್ಟು ಸುಪ್ರೀಂ ಕೋರ್ಟ್ ಕಡೆ ತಿರುಗಿತು. ವಿದ್ಯಾರ್ಥಿಗಳು ಮತ್ತು ವಕೀಲರು ಸೇರಿದಂತೆ ಪ್ರತಿಭಟನಾಕಾರರು ಸುಪ್ರೀಂಕೋರ್ಟ್‌ನತ್ತ ಶನಿವಾರ ಬೆಳಗ್ಗೆ ಜಾಥಾದಲ್ಲಿ ಸಾಗಿಬಂದು ಕೋರ್ಟ್ ಆವರಣಕ್ಕೆ ಮುತ್ತಿಗೆ ಹಾಕಿದರು. ಈ ಸಂದರ್ಭ ಸುಪ್ರೀಂಕೋರ್ಟ್ ರಕ್ಷಣೆಗಾಗಿ ಸೇನೆ ನಿಯೋಜಿಸಲಾಗಿತ್ತು ಎಂದು ವರದಿಯಾಗಿದೆ.

ಕರ್ನಾಟಕ ಸರ್ಕಾರ
ಪುರಸಭೆ ಕಾರ್ಯಾಲಯ ವಾಡಿ(ಜಂ)
ತಾ: ಚಿತ್ತಾಪೂರ, ಜಿ: ಕಲಬುರಗಿ, www.waditown.mrc.gov.in Email: itstaff _ulb_wadi@yahoo.com
ಸಂ:ಪುಸವಾ/ಸ್ವ.ಭಾ.ಮೀ/2.0/2024-25 ದಿನಾಂಕ: 08.08.2024
:: ಇ- ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::
1) ಕಾಮಗಾರಿ /ಸರಕು/ಸೇವೆಯ/ವಿವರ: 15ನೇ ಹಣಕಾಸು ಸ್ವಚ್ಚ ಭಾರತ್ ಮಿಷನ್ (ನಗರ) 2.0 ಯೋಜನೆಯಡಿ Material Recovery facility (MRF) ವಿವರ ಮತ್ತು ಇಂಡೆಂಟ್ ನಂ: DMA/2024-25/OW/WORK_INDENT17910, 2) ಕಾಮಗಾರಿ/ಸರಕು/ಸೇವೆಯ / ಅಂದಾಜು ಮೊತ್ತ: ರೂ. ಕನಿಷ್ಟ 0.55 ಲಕ್ಷ . ಗರಿಷ್ಟ 79.5 ಲಕ್ಷ., 3) ಗುತ್ತಿದಾರರು ಅರ್ಹತೆ: ಸಿವಿಲ್ ಗುತ್ತಿಗೆದಾರರು, 4) ಟೆಂಡರ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17.08.2024 ಸಮಯ ಸಾಯಂಕಾಲ 3:00 ಗಂಟೆವರಗೆ, 5) ಟೆಂಡರ ತೆರೆಯವ ದಿನಾಂಕ: 20.08.2024 ಸಮಯ ಸಾಯಂಕಾಲ 5:00 ಗಂಟೆವರಗೆ, 6) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರ: ಇ.ಎಂ.ಡಿ ಮೊತ್ತವು ಟೆಂಡರ ಮೊತ್ತಕ್ಕೆ ಪ್ರತಿಶತ 2.5% ಸಲ್ಲಿಸುವುದು. 7) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ ದೂರವಾಣಿ ಸಂಖ್ಯೆ: ಮುಖ್ಯಾಧಿಕಾರಿ ಪುರಸಭೆ ವಾಡಿ (ಜಂ) 08476-202030, 8) ಅಂತರ್ಜಲ ತಾಣದ ವಿಳಾಸ: E-Mail: Itstaff_ulb_wadi@yahoo.com Website:www.waditown.gov.in
ಸಹಿ/- ಮುಖ್ಯಾಧಿಕಾರಿ ಪುರಸಭೆ ವಾಡಿ (ಜಂ)
ವಾ.ಸಾ.ಸಂ.ಇ/ಕಲಬುರಗಿ/322/ಕೆ.ಎಸ್.ಎಂ.ಸಿ.&ಎ/2024-25

ಗೊಂದಲದ ನಡುವೆಯೂ ಪಾದಯಾತ್ರೆಯನ್ನು ಯಶಸ್ವಿಯಾಗಿ ಪೂರೈಸಿದ ನಾಯಕರು | ರಾಜ್ಯ ಸರಕಾರದ ವಿರುದ್ಧ ದೋಸ್ತಿ ನಾಯಕರ ವಾಕ್ಸಮರ

ದೋಸ್ತಿಗಳ ಪಾದಯಾತ್ರೆ ಸಮಾಪ್ತಿ

ವಿಶ್ವವಾಣಿ ಸುದ್ದಿಮನೆ ಮೈಸೂರು

ರಾಜ್ಯ ರಾಜಕೀಯ ಪಕ್ಷಗಳ ನಡುವಿನ ನೈತಿಕತೆ ಪ್ರಶ್ನಿಸುವ ಹೋರಾಟದ ಭಾಗವಾಗಿ ರೂಪುಗೊಂಡ ಕಾಂಗ್ರೆಸ್ ಜನಾಂದೋಲನ ಸಮಾವೇಶ ಹಾಗೂ ಬಿಜೆಪಿ, ಜೆಡಿಎಸ್ ದೋಸ್ತಿ ಪಕ್ಷಗಳ ಮೈಸೂರು ಚಲೋ ಪಾದಯಾತ್ರೆಯ ಸಮಾರೋಪ ಕಾರ್ಯಕ್ರಮದ ಮುಕ್ತಾಯದೊಂದಿಗೆ ಬೃಹತ್ ರಾಜಕೀಯ ಅಖಾಡಕ್ಕೆ ಮೈಸೂರು ಸಾಕ್ಷಿಯಾಯಿತು.

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶುಕ್ರವಾರ ಕಾಂಗ್ರೆಸ್ ಪಕ್ಷ ಗುಟುರು ಹಾಕಿದ್ದ ಜಾಗದಲ್ಲೇ, ಅದೇ ವೇದಿಕೆಯಲ್ಲೇ ಶನಿವಾರ ಬಿಜೆಪಿ, ಜೆಡಿಎಸ್ ದೋಸ್ತಿ ಪಕ್ಷಗಳು ಆಡಳಿತಾರೂಢ ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ಬಾಣ ಬಿಟ್ಟರು. ಕಾಂಗ್ರೆಸ್ ಪಕ್ಷದ ಪ್ರಮುಖರ ವಿರುದ್ಧ ಕುಮಾರಸ್ವಾಮಿ, ವಿಜಯೇಂದ್ರ, ಯಡಿಯೂರಪ್ಪ, ಅಶೋಕ್ ಹರಿಹಾಯ್ದರೆ, ಬಿಜೆಪಿ, ಜೆಡಿಎಸ್ ಮುಖಂಡರು ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ ವಿರುದ್ಧ ಹರಿಹಾಯ್ದರು.

ತಮ್ಮ ಭಾಷಣದುದ್ದಕ್ಕೂ ರಾಜ್ಯ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ ಪ್ರತಿಪಕ್ಷ ಮುಖಂಡರು, ಐಕ್ಯತೆ ಹಾಗೂ ಒಗ್ಗಟ್ಟು ಪ್ರದರ್ಶಿಸುವ ಮೂಲಕ ಸರಕಾರಕ್ಕೆ ಸ್ಪಷ್ಟ ಸಂದೇಶ ರವಾನಿಸಿದರು. ಸಮಾರೋಪ ಸಮಾವೇಶದಲ್ಲಿ ಪಾಲ್ಗೊಂಡ ಎರಡೂ ಪಕ್ಷಗಳ ನಾಯಕರು, ಕಾಂಗ್ರೆಸ್ ಪಕ್ಷದ ನಾಯಕರ ವಿರುದ್ಧ ಸತತ ನಾಲ್ಕೂವರೆ ಗಂಟೆಗಳ ಕಾಲ ಒಬ್ಬರಾದ ನಂತರ ಮತ್ತೊಬ್ಬರು ತೀವ್ರವಾಗಿ ಹರಿಹಾಯ್ದರು. ಕೆಳಗಿಳಿಸುವ ದಾಟಿಯಲ್ಲೇ ಮಾತನಾಡಿ ಕಿಡಿಕಾರಿದರು.

'5000 ನಿವೇಶನಗಳ ನುಂಗಿದ ಆ 14 ನಿವೇಶನಗಳು' ಎಂಬ ಪುಸ್ತಕವನ್ನು ದೋಸ್ತಿ ನಾಯಕರು ಬಿಡುಗಡೆ ಮಾಡುವ ಮುಖೇನ, ಕಾಂಗ್ರೆಸ್ ಪಕ್ಷ ಶುಕ್ರವಾರ ಜನಾಂದೋಲನದಲ್ಲಿ ಬಿಡುಗಡೆ ಮಾಡಿದ್ದ ಪುಸ್ತಕಕ್ಕೆ ಸಡ್ಡು ಹೊಡೆದರು. ವೇದಿಕೆಯಲ್ಲಿ ಎರಡೂ ದೋಸ್ತಿ ಪಕ್ಷಗಳ ನಾಯಕರು ಸಮಾನಾಂತರವಾಗಿ ಕೂರುವ ಮೂಲಕ ಪರಸ್ಪರ ಗೌರವ, ವಿಶ್ವಾಸ ಹಂಚಿಕೊಂಡಿದ್ದುದು ಕಂಡುಬಂತು.

ಗೊಂದಲದ ನಡುವೆಯೂ ಸಂಪೂರ್ಣ: ಪಾದಯಾತ್ರೆ ಆರಂಭಕ್ಕೂ ಮೊದಲೇ ಬಿಜೆಪಿ-ಜೆಡಿಎಸ್ ನಡುವೆ ಪಾದಯಾತ್ರೆ ನಡೆಸುವ ವಿಷಯಕ್ಕೆ ಸಂಬಂಧಿಸಿದಂತೆ ಗೊಂದಲವಿತ್ತು. ಇದಾದ ಬಳಿಕ ಪ್ರೀತಂಗೌಡ ಬೆಂಬಲಿಗರ ಘೋಷಣೆಯಿಂದ, ಎರಡೂ ಪಕ್ಷದ ನಾಯಕರ ನಡುವೆ ಕೈಕೈ ಮಿಲಾಯಿಸುವ ಹಂತ ತಲುಪಿದ್ದರು. ಈ ಎಲ್ಲ ಗೊಂದಲದ ನಡುವೆಯೂ ಬಿಜೆಪಿ-ಜೆಡಿಎಸ್ ನಾಯಕರ ದೋಸ್ತಿ ಪಾದಯಾತ್ರೆ ಸಂಪನ್ನಗೊಂಡಿದೆ.

ನನ್ನ ಕೈಕಾಲು ಗಟ್ಟಿಯಾಗಿದೆ : ಬಿಎಸ್‌ವೈ: ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ನನಗೀಗ 82 ವರ್ಷ ವಯಸ್ಸಾಗಿದೆ, ಇನ್ನೂ ಕೈ-ಕಾಲು ಗಟ್ಟಿಯಾಗಿವೆ. ರಾಜ್ಯದ ಉದ್ದಗಲಕ್ಕೂ ಓಡಾಡಿ ನಿಮ್ಮನ್ನು ಮನೆಗೆ ಕಳುಹಿಸುವವರೆಗೂ ಮನೆ ಸೇರಲ್ಲ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು. ನಾನು ರಾಜಕೀಯ ನಿವೃತ್ತಿ ತೆಗೆದುಕೊಳ್ಳಬೇಕು ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ನಾನು ಕೊನೆ ಉಸಿರು ಇರುವವರೆಗೂ ರಾಜಕೀಯ ಮಾಡುತ್ತೇನೆ. ನಿಮಗೆ ತಾಕತ್ ಇದೆಯಾ, ವಿಧಾನಸಭೆ ವಿಸರ್ಜಿಸಿ ಚುನಾವಣೆ ಎದುರಿಸುತ್ತೀರಾ ಎಂದು ಗುಡುಗಿದರು.

ನಿಮ್ಮ ಸರಕಾರ ದಿವಾಳಿಯಾಗಿದೆ. ನೀವು ಮನಬಂದಂತೆ ಮಾತನಾಡುತ್ತೀರಾ. ಹೇ ವಿಜಯೇಂದ್ರ, ಅಶೋಕಾ ಅಂತೀರಾ. ಡಿ.ಕೆ. ಶಿವಕುಮಾರ್ ಅವರೇ ನಿಮ್ಮ ಪಾಪದ ಕೊಡ ತುಂಬಿ ತುಳುಕುತ್ತಿದೆ. ನಿಮ್ಮ ಯೋಗ್ಯತೆಗೆ ಒಂದು ಅಭಿವೃದ್ಧಿ ಕಾರ್ಯ ತೋರಿಸಿ. ನಿವೇಶನದ ಬದಲು 62 ಕೋಟಿ ರು. ಕೊಡಿ ಎಂದು ಕೇಳುತ್ತಿರುವ ಸಿದ್ದರಾಮಯ್ಯ ಅವರೇ, ಯಾರಪ್ಪನ ದುಡ್ಡು ಅಂತಾ ನಿಮಗೆ ಹಣ ಕೊಡಬೇಕು? ಎಂದು ಪ್ರಶ್ನಿಸಿದರು.

ಬಿಜೆಪಿ, ಜೆಡಿಎಸ್ ದೋಸ್ತಿ ಪಕ್ಷಗಳ ಮೈಸೂರು ಚಲೋ ಪಾದಯಾತ್ರೆಯ ಸಮಾರೋಪ ಕಾರ್ಯಕ್ರಮದಲ್ಲಿ ನಾಯಕರು ಶಕ್ತಿ ಪ್ರದರ್ಶಿಸಿದರು.

> ನನ್ನ ಮೇಲೆ ಯಾವುದೇ ರೀತಿಯ ಕಪ್ಪು ಚುಕ್ಕೆಯಿಲ್ಲ ಎಂದ ಸಿದ್ದರಾಮಯ್ಯ ಅವರ ಮೈಯ ತುಂಬಾ ಕಪ್ಪು ಚುಕ್ಕೆಗಳಿವೆ. ಕಾಂಗ್ರೆಸ್ ಪಕ್ಷದ್ದು ಜನಾಂದೋಲನ ಅಲ್ಲ ಇದು ಧನದ ಆಂದೋಲನ. ಸೈಟ್ ವಾಪಾಸ್ ಕೊಡಲು ಸಿದ್ಧರಿರುವುದೇ ನಮ್ಮ ಪಾದಯಾತ್ರೆ ಯಶಸ್ಸಿಗೆ ಸಾಕ್ಷಿ. ಆದರೂ, ನಮ್ಮ ಹೋರಾಟ ಕಾನೂನು ಪ್ರಕಾರ ನಡೆಯಲಿದೆ. ಶಿಕ್ಷೆ ಆಗುವವರೆಗೆ ನಡೆಯಲಿದೆ.
> -ಪ್ರಲ್ಹಾದ್ ಜೋಶಿ ಕೇಂದ್ರ ಸಚಿವ

> ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ತೊಲಗಬೇಕು, ಕಾಂಗ್ರೆಸ್ ಸರಕಾರ ಬಂದು 14 ತಿಂಗಳಾದರೂ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಸರಕಾರ ಭ್ರಷ್ಟಾಚಾರದ ವಿರುದ್ಧ ದಿನನಿತ್ಯವೂ ಹೋರಾಟ ನಡೆಯುತ್ತಿದೆ, ಕಾಂಗ್ರೆಸ್ ಸರಕಾರ ಹೋಗಬೇಕು.
> -ಜಿ.ಟಿ.ದೇವೇಗೌಡ ಶಾಸಕ

'5000 ನಿವೇಶನಗಳ ನುಂಗಿದ ಆ 14 ನಿವೇಶನಗಳು' ಎಂಬ ಪುಸ್ತಕವನ್ನು ದೋಸ್ತಿ ನಾಯಕರು ಬಿಡುಗಡೆ ಮಾಡಿದರು.

> ಹೊಡೆದಿರುವ ಲೂಟಿ ಹಣ ಜನರಿಗೆ ತಲುಪಬೇಕು. ಅದಕ್ಕಾಗಿ ಈ ಹೋರಾಟ. ಬಡವರಿಗೆ ಇಲ್ಲದ ಸೈಟ್ ಸಿದ್ದರಾಮಯ್ಯ ಅವರಿಗಿದೆ. ದಲಿತರ ಹಣ ಲೂಟಿ ಮಾಡಿದೆ. ನಿಮ್ಮ ಸರಕಾರದಲ್ಲಿ ಪ್ರಾಮಾಣಿಕ ಅಧಿಕಾರಿಗಳಿಗೆ ಸಾವು ಫ್ರೀ, ದಲಿತರಿಗೆ ಅನ್ಯಾಯ ಫ್ರೀ, ರೈತರಿಗೆ ಆತ್ಮಹತ್ಯೆ ಫ್ರೀ, ಕಾಂಗ್ರೆಸ್‌ನವರಿಗೆ ಅಕ್ರಮ ಫ್ರೀ. ನಾನು ಕ್ಲೀನ್ ಎಂದು ಹೇಳುವ ಸಿದ್ದರಾಮಯ್ಯ ವಿಧಾನಸೌಧದಲ್ಲಿ ಈ ಬಗ್ಗೆ ಮಾತಾಡಿಲ್ಲ. ಸಿಎಂ ರಾಜೀನಾಮೆ ನೀಡುವವರೆಗೆ ನಮ್ಮ ಹೋರಾಟ ನಿಲ್ಲಲ್ಲ.
> -ಆರ್. ಅಶೋಕ್, ಪ್ರತಿಪಕ್ಷ ನಾಯಕ

> 14 ಬಾರಿ ಬಜೆಟ್ ಮಂಡಿಸಿ ಸಿದ್ದರಾಮಯ್ಯ ಅವರು 14 ಸೈಟ್ ತೆಗೆದುಕೊಂಡಿದ್ದಾರೆ. ಅರ್ಜಿ ಸಲ್ಲಿಸಿದ 87 ಸಾವಿರ ಜನರಿಗೆ ಸೈಟ್ ಸಿಕ್ಕಿಲ್ಲ. ಸಿದ್ದರಾಮಯ್ಯ ಅವರಿಗೆ ಹೇಗೆ ಸಿಕ್ಕಿತು? ಹ್ಯೂಬ್ಲೋ ವಾಚ್ ವಾಪಾಸ್ ಕೊಟ್ಟವರು, ಈಗ ಸೈಟ್ ವಾಪಾಸ್ ಕೊಡಲು ಮುಂದಾಗಿದ್ದಾರೆ. ಸಿದ್ದರಾಮಯ್ಯ ಅವರಿಂದ ಹೊಸ ರೀತಿಯ ಭ್ರಷ್ಟಾಚಾರ ಇದು.
> - ಎನ್. ರವಿಕುಮಾರ್ ವಿಧಾನಪರಿಷತ್ ಸದಸ್ಯ



ಸಿಎಂ ಮೂಗಿನ ನೇರಕ್ಕೆ ಅಕ್ರಮ ನಡೆದಿದೆ: ಎಚ್‌ಡಿಕೆ

ಸಿದ್ದರಾಮಯ್ಯ ಅವರಿಗೆ ಕೊಟ್ಟಿರುವುದು ಸರಕಾರದ ಭೂಮಿ. ಮುಖ್ಯಮಂತ್ರಿ ಮೂಗಿನ ನೇರಕ್ಕೆ ಕಾನೂನು ಬಾಹಿರ ಚಟುವಟಿಕೆ ನಡೆದಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಕಾನೂನು ಬಾಹಿರವಾಗಿ ಸೈಟ್ ಪಡೆದ ಬಗ್ಗೆ ಪ್ರಶ್ನೆ ಮಾಡುತ್ತಿದ್ದೇವೆ. ಅರಿಶಿಣ ಕುಂಕುಮ ರೀತಿ ಭೂಮಿ ದಾನ ಮಾಡಿದ್ದು ತಪ್ಪಾ ಎಂದಿದ್ದಾರೆ. ಕಾನೂನು ಬದ್ಧವಾಗಿ ಭೂಮಿ ಕೊಟ್ಟಿದ್ದರೆ ನಾವು ಪ್ರಶ್ನೆ ಮಾಡುತ್ತಿರಲಿಲ್ಲ. ಈಗಲೂ ನಾನು 14 ನಿವೇಶನ ಮರಳಿಸಲು ಸಿದ್ಧ ಎಂದಿದ್ದಾರಂತೆ. ನಿವೇಶನ ಹಿಂದಿರುಗಿಸಿದರೆ ಕಾನೂನುಬಾಹಿರ ಚಟುವಟಿಕೆ ಮುಚ್ಚಲು ಸಾಧ್ಯವೆ? ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು. ಸಿದ್ದರಾಮಯ್ಯ ಪತ್ನಿ ಬಗ್ಗೆ ನಾವು ಎಂದೂ ಮಾತನಾಡಿಲ್ಲ, ಮುಖ್ಯಮಂತ್ರಿ ಪತ್ನಿ ಪ್ರಮಾಣವಚನಕ್ಕೆ ಬಂದಿದ್ದರೋ, ಬಿಟ್ಟರೋ ಗೊತ್ತಿಲ್ಲ. ನೀವು ಕಾನೂನಾತ್ಮಕವಾಗಿ ಎಷ್ಟು ಸೈಟ್ ಬೇಕಾದರೂ ತೆಗೆದುಕೊಳ್ಳಿ. ನಿಮ್ಮ ಧರ್ಮಪತ್ನಿ ಬಗ್ಗೆ ನಮಗೆ ಗೌರವವಿದೆ. ಕಾನೂನು ಬಾಹಿರವಾಗಿ ಮಾಡಿರೋ ಹಗರಣದ ಬಗ್ಗೆ ಮಾತನಾಡಿ. ಸಿಎಂ ಧರ್ಮಪತ್ನಿಗೆ ಅವರ ಅಣ್ಣ ಭೂಮಿ ದಾನಮಾಡಿರೋದು ಅಂತಾರೆ. ದಾನ ಮಾಡೋದು ತಪ್ಪ ಅಂತಾರೆ ಡಿಕೆಶಿ. ಆ ಭೂಮಿ ನಿಂಗಂದ್ದೂ ಅಲ್ಲ ಯಾರದ್ದೂ ಅಲ್ಲ, ಸರಕಾರದ್ದು. ಮುಡಾ ಭೂಮಿ ಖರೀದಿಸಲು ಹೇಗೆ ಸಾಧ್ಯ..? ಎಂದು ಪ್ರಶ್ನಿಸಿದರು.

ಸಿಎಂ, ಡಿಸಿಎಂಗೆ ತಿರುಗೇಟು: ಕಾಂಗ್ರೆಸ್ ಸಮಾವೇಶದಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಾಯಕರ ನಡುವಿನ ಆರೋಪ ಪ್ರತ್ಯಾರೋಪಗಳ ಹಳೆಯ ತುಣುಕುಗಳನ್ನು ಪ್ರದರ್ಶಿಸಿ ಕಾಂಗ್ರೆಸ್‌ಗೆ ಟಾಂಗ್ ಕೊಟ್ಟ ಕುಮಾರಸ್ವಾಮಿ, ಸಿದ್ದರಾಮಯ್ಯ ವಿರುದ್ಧ ಕಾಂಗ್ರೆಸ್‌ನ ಪ್ರಮುಖ ನಾಯಕರು, ಡಿ.ಕೆ. ಶಿವಕುಮಾರ ತಾಯಿ ಹಾಗೂ ಅನ್ಯಾಯಕ್ಕೆ ಒಳಗಾಗಿರುವವರು ಮಾಡಿರುವ ಆರೋಪಗಳ ಹಳೆಯ ತುಣುಕು ಪ್ರದರ್ಶನ ಮಾಡಿಸಿದರು. ಮಾತ್ರವಲ್ಲ, ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗಿರುವ ಹಳೇ ವರದಿ ಪ್ರದರ್ಶಿಸಿದರು.

> ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ 136 ಸ್ಥಾನ ಗೆದ್ದಿದ್ದು, ಸಿದ್ದರಾಮಯ್ಯ ಅವರಿಗೆ ಕಲ್ಲುಬಂಡೆಯಾಗಿ ನಿಂತಿದ್ದೇನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದ್ದಾರೆ. ಇದೇ ರೀತಿ ಈ ಹಿಂದೆ ನನಗೂ ಶಿವಕುಮಾರ ಹೇಳಿದ್ದರು. ಸಿದ್ದರಾಮಯ್ಯ ಪರ ನಾನು ಬಂಡೆ ಥರ ಇದ್ದೀನಿ ಅಂದಿದ್ದಾರೆ ಡಿ.ಕೆ. ಶಿವಕುಮಾರ. 2018ರಲ್ಲಿ ನಾನು ಆ ಬಂಡೆ ಕಲ್ಲು ನಂಬಿಕೊಂಡೆ ಬಂಡೆಯನ್ನು ಮೈ ಮೇಲೆ ಎಳೆದುಕೊಂಡೆ.
> -ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ರಾಜೀನಾಮೆವರೆಗೆ ಹೋರಾಟ: ನಿಖಿಲ್

ಮುಡಾ, ವಾಲ್ಮೀಕಿ ನಿಗಮ ಸೇರಿದಂತೆ ಎಲ್ಲಾ ಹಗರಣಗಳ ನೈತಿಕ ಹೊಣೆ ಹೊತ್ತು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ನೀಡುವವರೆಗೂ ನಮ್ಮ ಹೋರಾಟ ಮುಂದುವರೆಯಲಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಘೋಷಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ಹಾಗೂ ಅವರ ಕುಟುಂಬ ಅಹಿಂದ ಹೆಸರಿನಲ್ಲಿ ದಲಿತರ ಧ್ವನಿ ಅಡಗಿಸುವ ಕೆಲಸ ಮಾಡಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ಲೂಟಿ ಮಾಡಿದ್ದಾರೆ. ಇದೇ ಮೊದಲ ಬಾರಿಗೆ ಇಂತಹ ಹಗರಣ ನಡೆದಿದೆ. ಸದನದೊಳಗೆ ಪ್ರತಿಪಕ್ಷದ ನಾಯಕರಿಗೆ ಮಾತನಾಡುವ ಅವಕಾಶ ನೀಡದೆ ಓಡಿಹೋದ ಕಾಂಗ್ರೆಸ್ ನಾಯಕರ ವಿರುದ್ಧ ಪಾದಯಾತ್ರೆ ನಡೆಸಲಾಗಿದೆ. ಚುನಾವಣೆಗಾಗಿ ಈ ಪಾದಯಾತ್ರೆ ಅಲ್ಲ, ಜನರಲ್ಲಿ ಜಾಗೃತಿ ಮೂಡಿಸಲು ಬಿಜೆಪಿ-ಜೆಡಿಎಸ್ ಪಾದಯಾತ್ರೆ ನಡೆಸಿದೆ ಎಂದರು.

ಜೆಡಿಎಸ್ ಸ್ಥಾಪನೆ ಆಗಿದ್ದೇ ಹೋರಾಟದ ಹಿನ್ನೆಲೆಯಲ್ಲಿ. ದೇವೇಗೌಡ ಅವರು ತಮ್ಮ ರಾಜಕೀಯ ಜೀವನದಲ್ಲಿ ಹೋರಾಟವನ್ನು ಮಾಡಿಕೊಂಡು ಬಂದಿದ್ದಾರೆ. ಕುಮಾರಸ್ವಾಮಿ ಅವರು ಕೊಟ್ಟ ಕೊಡುಗೆ ಇಂದಿಗೂ ಜನಮಾನಸದಲ್ಲಿ ಉಳಿದಿದೆ. ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಅಭ್ಯರ್ಥಿಗಳ ಗೆಲುವಿಗೆ ಸಹಕಾರ ನೀಡಿದ್ದು, ಮೈತ್ರಿಯನ್ನು ಜನತೆ ಒಪ್ಪಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ವಿಜಯೇಂದ್ರ ಹಾಗೂ ಎಲ್ಲ ಹಿರಿಯ ಮುಖಂಡರು ಅಣ್ಣ -ತಮ್ಮಂದಿರಂತೆ ಕುಮಾರಸ್ವಾಮಿ ಹಾಗೂ ಬಿಎಸ್‌ವೈ ರೀತಿಯಲ್ಲಿ ಆಡಳಿತ ನೀಡುತ್ತೇವೆ ಎಂದು ಹೇಳಿದರು.

> ಡಿ.ಕೆ. ಶಿವಕುಮಾರ್ ಅವರು ನೇರವಾಗಿ ಕುಮಾರಸ್ವಾಮಿ ಹಾಗೂ ದೇವೇಗೌಡರ ಬಗ್ಗೆ ಟೀಕಿಸಿದ್ದೀರಿ, ದೇವೇಗೌಡರಿಗೆ ಗೌರವ ನೀಡುವುದನ್ನು ಕಲಿಯಿರಿ. ಲೋಕಸಭಾ ಚುನಾವಣೆ ಬಳಿಕ ಹತಾಶೆಯಿಂದ ಮಾತನಾಡುತ್ತಿದ್ದೀರಿ. ಈ ಹೋರಾಟ ಇಲ್ಲಿಗೆ ನಿಲ್ಲುವುದಿಲ್ಲ.
> -ನಿಖಿಲ್ ಕುಮಾರಸ್ವಾಮಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ

ಟ್ವೀಟೂ-ಖಾರಾ

ಪಾಂಚಜನ್ಯ
ಮಾಧ್ಯಮ

ಸಂಸತ್ತಿನಲ್ಲಿ ರಾಹುಲ್ ಗಾಂಧಿಗೆ ಅನುರಾಗ್ ಠಾಕೂರ್ ತರಾಟೆ. ಗಾಜಾ ಮತ್ತುಮ ಪ್ಯಾಲೆಸ್ತೀನ್ ಸಮಸ್ಯೆ ವಿರುದ್ಧ ದೊಡ್ಡದಾಗಿ ಮಾತನಾಡುವ ರಾಹುಲ್, ಬಾಂಗ್ಲಾದೇಶದ ಹಿಂದುಗಳ ದುಸ್ಥಿತಿ ಬಗ್ಗೆ ಏಕೆ ಮಾತನಾಡುವುದಿಲ್ಲ. ಸಂಸತ್ತಿನಲ್ಲಿ ಮಾತನಾಡುವಾಗ ಅವರು ಬಾಂಗ್ಲಾ ಹಿಂದುಗಳ ಬಗ್ಗೆ ಒಂದೇ ಒಂದು ಮಾತು ಆಡಿಲ್ಲ ಎಂದು ಸಚಿವರು ಟೀಕಿಸಿದ್ದಾರೆ.

ಬ್ರಹ್ಮಾನಂದ ಮಿಶ್ರಾ
ಪ್ರಯಾಗರಾಜ್

ಬಾಂಗ್ಲಾ ಹಿಂದುಗಳ ಬಗ್ಗೆ ರಾಹುಲ್ ಏನು ಮಾತನಾಡಬಲ್ಲರು..? ಮತಬ್ಯಾಂಕ್ ಅವರ ಬಾಯನ್ನು ಕಟ್ಟಿಹಾಕಿದೆ. ಒಂದು ವೇಳೆ ಅವರು ಬಾಂಗ್ಲಾ ಹಿಂದುಗಳ ಬಗ್ಗೆ ಮಾತನಾಡಿದರೆ ಅವರ ಅಸ್ತಿತ್ವಕ್ಕೇ ಸಂಚಕಾರ. ಅವರ ಆಪ್ತಮಿತ್ರರಾದ ಪಾಕಿಸ್ತಾನ ಮತ್ತು ಚೀನಾ ಕೋಪಗೊಳ್ಳುವುದು ನಿಶ್ಚಿತ.

ಪ್ರತಿಪಕ್ಷಗಳು ನೀವು ಹೇಳಿದಂತೆ ಕೇಳಬೇಕೇನು?: ವಿಜಯೇಂದ್ರ

ಪ್ರತಿಪಕ್ಷದವರು ಸವಾಲು ಹಾಕಿದರೆ ಧಮ್ಕಿ ಹಾಕುತ್ತಾರೆ. ಪ್ರತಿಪಕ್ಷದವರು ನೀವು ಹೇಳಿದಂತೆ ಕೇಳಿಕೊಂಡು ಚಮಚಾಗಿರಿ ಮಾಡಿಕೊಂಡಿರಬೇಕೇನು? ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದರು.

ದಲಿತರು, ಹಿಂದುಳಿದ ವರ್ಗಗಳ ಜನರಿಗೆ ಅನ್ಯಾಯವಾದರೂ ಸುಮ್ಮನಿರಬೇಕೇನು? ನಿಮ್ಮ ಸಮಾಜವಾದಿ ಮುಖವಾಡ ಕಳಚಿದೆ, ಮುಂದೆ ಇನ್ನಷ್ಟು ಕಳಚಿ ಬೀಳಲಿದೆ. ರಾಜ್ಯದಲ್ಲಿ ಭ್ರಷ್ಟಾಚಾರರಹಿತ ಆಡಳಿತ ನೀಡುತ್ತವೆ ಅಂತ ಹೇಳಿ ಅಧಿಕಾರಕ್ಕೆ ಬಂದ ಮೇಲೆ ಬರೀ ಹಗರಣದಲ್ಲಿ ಮುಳುಗಿದ್ದಾರೆ. ನಾಡಿನ ಅಭಿವೃದ್ಧಿ ಬದಿಗೊತ್ತಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಬಿಜೆಪಿ-ಜಾ.ದಳ ಹೋರಾಟ ಸಿದ್ದರಾಮಯ್ಯ ವಿರುದ್ಧವಲ್ಲ. ಬದಲಿಗೆ ನಾಡಿನ ಆರೂವರೆ ಕೋಟಿ ಜನರ ವಿಶ್ವಾಸ ಪಡೆದು ಅಧಿಕಾರಕ್ಕೆ ಬಂದು ಭ್ರಷ್ಟಾಚಾರ ನಡೆಸುತ್ತಿರುವ ಮುಖ್ಯಮಂತ್ರಿಗಳ ವಿರುದ್ಧ ಎಂದು ಟೀಕಿಸಿದರು. ಭೀಕರ ಬರಗಾಲ, ಪ್ರಕೃತಿ ವೈಪರೀತ್ಯ ಉಂಟಾದಾಗ ಜನರ ಕಣ್ಣೀರು ಒರೆಸಲಿಲ್ಲ. ಪ್ರವಾಹದಲ್ಲಿ ಮನೆ ಕಳೆದುಕೊಂಡರೆ ಐದು ಲಕ್ಷ ರು.ಕೊಡಲಾಗುತ್ತಿತ್ತು. ಆದರೆ ಈಗ ಒಂದು ಮನೆಗೆ ಲಕ್ಷ ರುಪಾಯಿ ಕೊಡಲಾಗದ ಪರಿಸ್ಥಿತಿಗೆ ಸರಕಾರ ಬಂದಿದೆ. ಕಳೆದ ಹದಿನೈದು ತಿಂಗಳಲ್ಲಿ ಯಾವುದೇ ವಿಧಾನಸಭೆ ಕ್ಷೇತ್ರದಲ್ಲಿ ಕೆಲಸ ಆಗುತ್ತಿಲ್ಲ. ಸಣ್ಣ ಯೋಜನೆಗಳಿಗೆ ಅನುದಾನ ನೀಡಿಲ್ಲ. ಭೀಕರ ಬರಗಾಲ, 1500ಕ್ಕೂ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು ಮಾದರಿ ಸರಕಾರದ ಸಾಧನೆಯೇ ಎಂದು ಟೀಕಿಸಿದರು.

ಉತ್ತರಿಸದೇ ಓಡಿ ಹೋಗಿದ್ದೇಕೆ?: ಪ್ರತಿಪಕ್ಷದವರಿಗೆ ಹೂವುಮುಡಿಸಲು ಹೋಗುತ್ತೀರಾ?, ಅಧಿವೇಶನ ಅರಂಭದ ಹಿಂದಿನ ದಿನ ವಿಚಾರಣಾ ಆಯೋಗ ರಚನೆ ಮಾಡುತ್ತಾರೆ. ಪ್ರತಿಪಕ್ಷಗಳು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಲಾಗದೆ ಓಡಿ ಹೋಗುತ್ತಾರೆ. ಸಿದ್ದರಾಮಯ್ಯ ಅವರೇ, ನೀವು ಪ್ರಾಮಾಣಿಕರೇ ಆಗಿದ್ದರೆ ಸದನದಲ್ಲಿ ಉತ್ತರ ಕೊಡದೆ ಯಾಕೆ ಓಡಿಹೋದಿರಿ? ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದರು.

> ಮುಡಾ ಹಗರಣದಲ್ಲಿ ನಿಮ್ಮ ಕುಟುಂಬಕ್ಕೆ 14 ನಿವೇಶನಗಳನ್ನು ಅಕ್ರಮವಾಗಿ ಕೊಡಲಾಗಿದೆ. ಇದನ್ನು ಮುಚ್ಚುವ ಕಾರಣಕ್ಕಾಗಿ ಐದು ಸಾವಿರ ಕೋಟಿ ಹಗರಣ ನಡೆದಿದೆ. ದಲಿತ ಕುಟುಂಬಕ್ಕೆ ಸೇರಿದ ಜಮೀನನ್ನು ಖರೀದಿಸಲಾಗಿದೆ. ಪ್ರತಿಯೊಂದು ವಿಚಾರಗಳನ್ನು ಮುಚ್ಚಿಟ್ಟು ಕಾನೂನು ಬಾಹಿರವಾಗಿ ವ್ಯವಹಾರ ಮಾಡಿರುವುದು ದಾಖಲೆಗಳಲ್ಲಿದೆ.
> - ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಹಾಗೂ ರಾಜ್ಯಸಭಾ ಸದಸ್ಯ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಂಸತ್ ಭವನದಲ್ಲಿ ಭೇಟಿಯಾಗಿ ಮೂರನೇ ಬಾರಿಗೆ ಪ್ರಧಾನಮಂತ್ರಿಯಾಗಿ ಆಯ್ಕೆಯಾಗಿದ್ದಕ್ಕೆ ಶುಭ ಹಾರೈಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಹಗರಣ ಮಾಡಿಲ್ಲ

ಶಿವಮೊಗ್ಗ: ಬಿಜೆಪಿ ಕಾಲದಲ್ಲಿ 25 ರಿಂದ 30 ಹಗರಣ ನಡೆದಿದ್ದು, ತನಿಖೆ ಮಾಡಿದರೆ ಅವರು ಸಾಮೂಹಿಕವಾಗಿ ಜೈಲಿಗೆ ಹೋಗುತ್ತಾರೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕೋವಿಡ್ ವೇಳೆ ಎರಡು ಸಾವಿರ ಕೋಟಿ ಹಗರಣ ಆಗಿದೆ. ಯಡಿಯೂರಪ್ಪ, ಸುಧಾಕರ್ ಹಗರಣ ಮಾಡಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾರಿಷಸ್‌ಗೆ 10 ಸಾವಿರ ಕೋಟಿ ರು. ತೆಗೆದುಕೊಂಡು ಹೋಗಿದ್ದಾರೆ ಎಂದು ಅವರದ್ದೇ ಪಕ್ಷದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಆರೋಪ ಮಾಡಿದ್ದಾರೆ. ಬಿಜೆಪಿಯವರು ಮೊದಲು ಈ ಆರೋಪಕ್ಕೆ ಉತ್ತರ ಕೊಡಲಿ. ನಾವು ಸಹ ಹೋರಾಟ ಮಾಡುತ್ತೇವೆ. ನ್ಯಾಯಾಂಗ ಹೋರಾಟ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು.

ಬಿಜೆಪಿ ಅನಗತ್ಯ ಹೋರಾಟ: ಮೈಸೂರಿನ ಮುಡಾ ಹಗರಣ ಸಂಬಂಧ ಬಿಜೆಪಿ ಪಾದಯಾತ್ರೆ ವಿಚಾರವಾಗಿ ಪ್ರತಿಕ್ರಿಯಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಹಗರಣ ಮಾಡಿಲ್ಲ. ಬಿಜೆಪಿಯವರು ವಿನಾಃ ಕಾರಣ ಹೋರಾಟ ಮಾಡುತ್ತಿದ್ದಾರೆ. 40 ವರ್ಷದ ರಾಜಕಾರಣದಲ್ಲಿ ಸಿದ್ದರಾಮಯ್ಯ ಮೇಲೆ ಒಂದೇ ಒಂದು ಕಪ್ಪುಚುಕ್ಕೆ ಇಲ್ಲ. ದೇವರಾಜ್ ಅರಸು ನಂತರ ಓಬಿಸಿ ಸಮುದಾಯದ ಸಿದ್ದರಾಮಯ್ಯ ಸಿಎಂ ಆಗಿದ್ದಾರೆ. ಬಿಜೆಪಿಯವರಿಗೆ ಇದು ಸಹಿಸಲಾಗುತ್ತಿಲ್ಲ. ರಾಜ್ಯಪಾಲರನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಮುಡಾ ಹಗರಣ ನಡೆದಾಗ ಬಿಜೆಪಿಯವರೇ ಅಧ್ಯಕ್ಷರಾಗಿದ್ದರು. ಅವರ ಪಕ್ಷದ ಶಾಸಕರೇ ಇದ್ದರು. ಮುರುಗೇಶ ನಿರಾಣಿ, ಕುಮಾರಸ್ವಾಮಿ ವಿರುದ್ಧ ರಾಜ್ಯಪಾಲರಿಗೆ ದೂರು ಕೊಟ್ಟಿದ್ದರು. ಆ ಪ್ರಕರಣ ಏನಾಯಿತು ಎಂದು ಸಚಿವ ಪಾಟೀಲ್ ಪ್ರಶ್ನಿಸಿದರು.

ಬೆಳಕಿನ ಸಮಸ್ಯೆಯಿಂದ ವಿಮಾನ ಹಾರಾಟ ರದ್ದು: ಶಿವಮೊಗ್ಗ ವಿಮಾನ ನಿಲ್ದಾಣ ತಾಂತ್ರಿಕ ಸಮಸ್ಯೆ ಬಗ್ಗೆ ಮಾತನಾಡಿ, ಶಿವಮೊಗ್ಗ ನಿಲ್ದಾಣದಲ್ಲಿ ವಿಸಿಬಿಲಿಟಿ ಕೊರತೆಯಿಂದಾಗಿ ಶಿವಮೊಗ್ಗ ಏರ್‌ಪೋರ್ಟ್ ನಲ್ಲಿ ವಿಮಾನಗಳ ಹಾರಾಟ ರದ್ದಾಗುತ್ತಿವೆ ಎಂದು ತಿಳಿಸಿದರು.

> ಎಂಪಿಎಂ ಕಾರ್ಖಾನೆ ಕುರಿತು ನಾನು, ಅರಣ್ಯ ಸಚಿವ ಈಶ್ವರ್ ಖಂಡ್ರೆ ಜತೆ ಚರ್ಚಿಸಿದ್ದೇನೆ. ಸದ್ಯದ ಪರಿಸ್ಥಿತಿಯಲ್ಲಿ ಕಾರ್ಖಾನೆಯನ್ನು ಸರಕಾರ ನಿರ್ವಹಿಸಲು ಆಗುವುದಿಲ್ಲ. ಅದಕ್ಕಾಗಿ ಖಾಸಗಿಯವರ ಪಾಲುದಾರಿಕೆ ಅಗತ್ಯವಿದೆ .
> ಎಂ.ಬಿ. ಪಾಟೀಲ್ ಸಚಿವ

ವಿರಾಮ

ಪ್ರತಿ ಭಾನುವಾರ

{ ಪ್ರಹ್ಲಾದ ಜೋಶಿ } ಕೇಂದ್ರ ಸಚಿವ

ಕಾಂಗ್ರೆಸ್ ಪಕ್ಷ ನಡೆಸಿದ್ದು ಜನಾಂದೋಲನ ಅಲ್ಲ, ಧನಾಂದೋಲನ. ಹೈಕಮಾಂಡ್‌ಗೆ ಹಣ ನೀಡಲು ಮಾಡಿದ ಧನಾಂದೋಲನ ಇದು. ಸಿದ್ದರಾಮಯ್ಯನವರೇ ಒಂದು ಕಪ್ಪುಚುಕ್ಕೆ ಅಲ್ಲ, ನಿಮ್ಮ ಮೈತುಂಬಾ ಬರೀ ಕಪ್ಪುಚುಕ್ಕೆ ಇವೆ. ನೋಡಿಕೊಳ್ಳಿ.

ಮತ್ತೆ ಗುಡ್ಡ ಕುಸಿತ: ರೈಲು ಸಂಚಾರ ಬಂದ್

ಹಾಸನ: ಮಳೆಯಿಂದ ಮೂರನೇ ಬಾರಿಗೆ ಗುಡ್ಡ ಕುಸಿದು ಬೆಂಗಳೂರು - ಮಂಗಳೂರು ನಡುವಣ ರೈರು ಸಂಚಾರ ಕಡಿತಗೊಂಡಿದೆ. ಹೀಗಾಗಿ, ಪ್ರಯಾಣಿಕರು ಶುಕ್ರವಾರ ರೈಲಿನಲ್ಲಿಯೇ ಕಾಲ ಕಳೆಯುವಂತಾಯಿತು.

ಹಾಸನ-ಮಂಗಳೂರು ಮಾರ್ಗದಲ್ಲಿನ ಆಲೂರು ಮತ್ತು ಸಕಲೇಶಪುರ ನಡುವೆ ಬಾಳ್ಳುಪೇಟೆ ಬಳಿ ರೈಲ್ವೆ ಹಳಿ ಮೇಲೆ ಗುಡ್ಡ ಕುಸಿದಿದೆ. ಮರಗಳ ಸಮೇತವಾಗಿ ಹಳಿಯ ಮೇಲೆ ಭಾರಿ ಪ್ರಮಾಣದಲ್ಲಿ ಮಣ್ಣು ಬಿದ್ದಿದ್ದು, ಬೆಂಗಳೂರು - ಮಂಗಳೂರು ರೈಲು ಸಂಚಾರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಪ್ರಯಾಣಿಕರ ಪರದಾಟ: ಬೆಂಗಳೂರು - ಕಣ್ಣೂರು, ಬೆಂಗಳೂರು - ಮುರುಡೇಶ್ವರ ಮತ್ತು ಹಾಸನ - ಮಂಗಳೂರು ಮಧ್ಯೆ ಸಂಪರ್ಕ ಕಲ್ಪಿಸುವ ರೈಲು ಸಂಚಾರವನ್ನೂ ಬಂದ್ ಮಾಡಲಾಗಿದೆ. ಆಲೂರು - ಹಾಸನ ಮಾರ್ಗದ ರೈಲು ಸಂಚಾರವೂ ಸ್ಥಗಿತಗೊಂಡಿದೆ. ಸಕಲೇಶಪುರ, ಯಡಕುಮಾರಿ, ಶಿರವಾಗಿಲು, ಆಲೂರು ಸೇರಿ 6 ಕಡೆ ರೈಲುಗಳನ್ನು ನಿಲ್ಲಿಸಲಾಗಿದೆ. ದಿಢೀರ್ ರೈಲುಗಳು ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರು ಇಡೀ ರಾತ್ರಿ ಪರದಾಡುವಂತಾಗಿದೆ. ರಾತ್ರಿ ವೇಳೆ ಸಂಚಾರ ನಡೆಸುವ ರೈಲುಗಳನ್ನು ಸಕಲೇಶಪುರ, ಯಡಕುಮೇರಿ, ಶಿರವಾಗಲು, ಆಲೂರು ಸೇರಿ 6 ರೈಲ್ವೆ ನಿಲ್ದಾಣಗಳಲ್ಲಿಯೇ ನಿಲುಗಡೆ ಮಾಡಿದ್ದರಿಂದ ಪ್ರಯಾಣಿಕರಿಗೆ ತೊಂದರೆ ಉಂಟಾಯಿತು.

ನಿಲ್ದಾಣಗಳಲ್ಲಿಯೇ ನಿಲುಗಡೆ ಮಾಡಿದ್ದರಿಂದ ಪ್ರಯಾಣಿಕರಿಗೆ ತೊಂದರೆ ಉಂಟಾಯಿತು.

ಚಾಕು, ಸಿಗರೇಟು ಸೇರಿದಂತೆ ಹಲವು ವಸ್ತು ಪತ್ತೆ

ಹಿಂಡಲಗಾ ಜೈಲಿನ ಮೇಲೆ ದಾಳಿ

ಬೆಳಗಾವಿ: ಹಿಂಡಲಗಾ ಕೇಂದ್ರ ಕಾರಾಗೃಹದ ಮೇಲೆ ಅಧಿಕಾರಿಗಳ ತಂಡ ಬೆಳ್ಳಂಬೆಳಿಗ್ಗೆ ದಾಳಿ ನಡೆಸಿದ್ದು, ಜೈಲಿನಲ್ಲಿ ಚಾಕು, ಸಿಗರೇಟು ಸೇರಿದಂತೆ ಕೆಲವು ವಸ್ತುಗಳು ಪತ್ತೆಯಾಗಿವೆ.

ಶನಿವಾರ ನಸುಕಿನ ಜಾವ ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್, ಹಾಗೂ ಡಿಸಿಪಿ ರೋಹಣ್ ಜಗದೀಶ್ ಸೇರಿದಂತೆ ಸುಮಾರು 40 ಅಧಿಕಾರಿಗಳು ಹಾಗೂ 220 ಕ್ಕೂ ಅಧಿಕ ಪೊಲೀಸ್ ಸಿಬ್ಬಂದಿಗಳ ತಂಡ ಕಾರ್ಯಾಚರಣೆ ಕೈಗೊಂಡಿದ್ದರು. ಈ ದಾಳಿ ವೇಳೆ ಹಿಂಡಲಗಾ ಜೈಲಿನಲ್ಲಿ ಮೂರು ಚಾಕು, ಹತ್ತು ತಂಬಾಕು ಚೀಟಿ, ಸಿಗರೇಟು, ಸಣ್ಣ ಹೀಟರ್ ವಯರ್ ಬಂಡಲ್ , ಹಾಗೂ ಎಲೆಕ್ಟ್ರಿಕಲ್ ಒಲೆ ಜಪ್ತಿ ಮಾಡಲಾಗಿದೆ. ಹಿಂಡಲಗಾ ಕಾರಾಗೃಹದಲ್ಲಿ ಹಲವು ಬಾರಿ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದನ್ನು ಕೆಲ ದಿನಗಳ ಹಿಂದೆ ಕೈದಿಗಳೇ ಹೊರಗೆಡವಿದ್ದರು. ಸದ್ಯ ನಿಷೇಧಿತ ವಸ್ತುಗಳು ಜೈಲಿನ ಒಳಗೆ ಪತ್ತೆಯಾಗಿದ್ದು, ಹಲವು ಅನುಮಾನಕ್ಕೆ ಕಾರಣವಾಗಿದೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡು ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ.

ಹಿಂಡಲಗಾ ಕೇಂದ್ರ ಕಾರಾಗೃಹದ ಮೇಲೆ ಅಧಿಕಾರಿಗಳ ತಂಡದಾಳಿ ನಡೆಸಿದ್ದು, ಜೈಲಿನಲ್ಲಿ ಚಾಕು, ಸಿಗರೇಟು ಸೇರಿದಂತೆ ಕೆಲವು ವಸ್ತುಗಳು ಪತ್ತೆಯಾಗಿವೆ.

ವಕ್ಫ್ ಕಾಯ್ದೆ ತಿದ್ದುಪಡಿ ಮಂಡನೆ; ಸ್ವಾಗತಾರ್ಹ

ವಿಜಯಪುರ: ಸರಕಾರಿ ಹಾಗೂ ಅಮಾಯಕರ ಆಸ್ತಿಗಳನ್ನು ಕಬಳಿಸುವ ಸಾಧನವಾಗಿ ಮಾರ್ಪಟ್ಟಿರುವ ವಕ್ಫ್ ಕಾಯ್ದೆಗೆ ತಿದ್ದುಪಡಿ ವಿಧೇಯಕವನ್ನು ಮಂಡಿಸಿರುವ ಕೇಂದ್ರ ಸರಕಾರದ ನಿರ್ಣಯ ಸ್ವಾಗತಾರ್ಹ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ವಕ್ಫ್ ಮಂಡಳಿಗಳು ಮತ್ತು ವಕ್ಫ್ ಆಸ್ತಿಗಳಿಗೆ ಅನಿಯಂತ್ರಿತ ಅಧಿಕಾರಕ್ಕೆ ಮಿತಿಯನ್ನು ತರುವ ನಿಟ್ಟಿನಲ್ಲಿ ವಕ್ಫ್ ಕಾಯ್ದೆ ತಿದ್ದುಪಡಿ ಅತ್ಯವಶ್ಯವಾಗಿತ್ತು. ಈ ಅಸಾಂವಿಧಾನಿಕ ವಕ್ಫ್ ಕಾಯ್ದೆಯನ್ನು ರದ್ದುಗೊಳಿಸುವಂತೆ ಕೋರಿ ಪ್ರಧಾನ ಮಂತ್ರಿನರೇಂದ್ರ ಮೋದಿ ಜಿ ಅವರಿಗೆ ಪತ್ರ ಬರೆದಿದ್ದೆ. ಗುರುವಾರ ವಕ್ಫ್ ಕಾಯ್ದೆ ತಿದ್ದುಪಡಿ ವಿಧೇಯಕವನ್ನು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವರಾದ ಕಿರಣ್ ರಿಜುಜ್ ಅವರು ಲೋಕಸಭೆಯಲ್ಲಿ ಮಂಡಿಸಿರುವುದು ಸ್ವಾಗತಾರ್ಹ ನಿರ್ಣಯ ವಾಗಿದೆ. ಈ ಮಸೂದೆ ಅಂಗಿಕಾರಗೊಂಡರೆ, ವಕ್ಫ್ ಮಂಡಳಿ ಮನಸ್ಸಿಗೆ ಬಂದಂತೆ, ತಮಗೆ ಬೇಕಾದ ಆಸ್ತಿಗಳನ್ನು ಕಬಳಿಸುವ ಹುನ್ನಾರ ತಪ್ಪಿಸಬಹುದು. ಅಕ್ರಮವಾಗಿ ಆಸ್ತಿಗಳನ್ನು ತಮ್ಮದೆಂದು ಆದೇಶ ಹೊರಡಿಸುವುದನ್ನು ಪ್ರಶ್ನಿಸಲು ಅವಕಾಶ ದೊರೆಯುತ್ತದೆ. ಇದರಿಂದ ಅಮಾಯಕರಿಗೆ ಹಾಗೂ ಸರಕಾರಕ್ಕೆ ಆಗುತ್ತಿರುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಅನುಕೂಲವಾಗುತ್ತದೆ ಎಂದು ತಿಳಿಸಿದ್ದಾರೆ.

ಬಾಂಗ್ಲಾದಲ್ಲಿ ಮರುಕಳಿಸಿದ ಸ್ಥಿತಿ: ತಂದೆ-ಮಗಳಿಗೆ ಒಂದೇ ಗತಿ

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್

vbhat@me.com

1974ರ ಡಿಸೆಂಬರ್ ತಿಂಗಳ ಒಂದು ದಿನ. ಭಾರತದ ವಿದೇಶಾಂಗ ಇಂಟೆಲಿಜೆನ್ಸ್ ಏಜನ್ಸಿ - Research Analysis Wing (RAW) ದ ಅಂದಿನ ಮುಖ್ಯಸ್ಥರಾಗಿದ್ದ ಆರ್.ಎನ್. ಕಾವ್ (ರಾಮೇಶ್ವರನಾಥ ಕಾವ್) ಅವರಿಗೆ, ಬಾಂಗ್ಲಾದೇಶದ ಸೇನೆಯ ಒಂದಷ್ಟು ಅಸಂತುಷ್ಟ ಸದಸ್ಯರು, ಅಂದಿನ ಪ್ರಧಾನಿ ಶೇಕ್ ಮುಜಿಬುರ್ ರೆಹಮಾನ್ ಅವರ ಹತ್ಯೆಗೆ ಸಂಚು ರೂಪಿಸಿದ್ದಾರೆ ಎಂಬ ಸ್ಫೋಟಕ ಮತ್ತು ಖಚಿತ ಮಾಹಿತಿ ಲಭಿಸಿತು.

ಅದಕ್ಕಿಂತ ಮೂರು ವರ್ಷಗಳ ಮುನ್ನ, (26 ಮಾರ್ಚ್ 1971) ಭಾರತದ ನೆರವಿನೊಂದಿಗೆ ಬಾಂಗ್ಲಾದೇಶ ಅಸ್ತಿತ್ವಕ್ಕೆ ಬಂದಿತ್ತು. ಶೇಕ್ ಮುಜಿಬುರ್ ರೆಹಮಾನ್ ಭಾರತದ ಬೆಂಬಲದೊಂದಿಗೆ ಪ್ರಧಾನಿಯಾಗಿದ್ದರು.

ತಮಗೆ ಆ ಸ್ಫೋಟಕ ಮಾಹಿತಿ ದೊರೆತ ತಕ್ಷಣ ಕಾವ್ ಅವರು, ಪ್ರಧಾನಿ ಇಂದಿರಾ ಗಾಂಧಿಯವರನ್ನು ಭೇಟಿಯಾಗಲು ನಿರ್ಧರಿಸಿದರು. ಮುಂದಿನ ಒಂದು ಗಂಟೆ ಅವಧಿಯಲ್ಲಿ ಕಾವ್ ಅವರು ಪ್ರಧಾನಿ ನಿವಾಸದಲ್ಲಿದ್ದರು. ಬಾಂಗ್ಲಾದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಅವರು ಪ್ರಧಾನಿಯವರಿಗೆ ತಿಳಿಸಿದರು. 'ತಡ ಮಾಡಬೇಡಿ, ನೀವು ತಕ್ಷಣ ಢಾಕಾಕ್ಕೆ ಹೊರಡಿ. ಈ ವಿಷಯವನ್ನು ಖುದ್ದು ಶೇಕ್ ಮುಜಿಬುರ್ ರೆಹಮಾನ್ ಅವರಿಗೆ ತಿಳಿಸಿ. ನಿಮ್ಮ ಸೇನೆಯ ಮಂದಿಯೇ ನಿಮ್ಮನ್ನು ಹತ್ಯೆ ಮಾಡಲು ಸಂಚು ಹೆಣೆದಿದ್ದಾರೆ ಎಂದು ಹೇಳಿ' ಎಂದು ತಿಳಿಸಿದರು. ಪ್ರಧಾನಿಯ ಆದೇಶದಂತೆ ಮರುದಿನವೇ ಕಾವ್ ಢಾಕಾದಲ್ಲಿದ್ದರು.

ಶೇಕ್ ಮುಜಿಬುರ್ ರೆಹಮಾನ್ ಅವರನ್ನು ಭೇಟಿಯಾದ ಕಾವ್, ತಮಗೆ ದೊರೆತ ಆ ಸ್ಫೋಟಕ ಮಾಹಿತಿಯ ವಿವರಗಳನ್ನೆಲ್ಲ ತಿಳಿಸಿದರು. ಶಾಂತಚಿತ್ತರಾಗಿ ಆಲಿಸಿದ ಶೇಕ್ ಮುಜಿಬುರ್ ರೆಹಮಾನ್, 'ನಮ್ಮ ಸೇನೆಯಲ್ಲಿ ಇರುವವರೆಲ್ಲ ಬೇರೆ ಯಾರೂ ಅಲ್ಲ, ಎಲ್ಲರೂ ನನ್ನವರೇ. ಅವರು ನನಗೆ ದ್ರೋಹ ಮಾಡುತ್ತಾರೆ ಎಂಬುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ನಿಮ್ಮ ಮಾಹಿತಿ ಸರಿ ಇರಲಿಕ್ಕಿಲ್ಲ. ನನಗೆ ಅವರ ಮೇಲೆ ಸಂಪೂರ್ಣ ನಂಬಿಕೆ ಇದೆ' ಎಂದು ಹೇಳಿ, ಕಾವ್ ಅವರನ್ನು ರೆಹಮಾನ್ ಸಾಗಹಾಕಿದರು.

ಇದಾಗಿ ಮೂರು ತಿಂಗಳ ಬಳಿಕ ಅಂದರೆ 1975ರ ಮಾರ್ಚ್ ನಲ್ಲಿ ಇಂಥದೇ ಮಾಹಿತಿ ಕಾವ್ ಅವರಿಗೆ ಲಭಿಸಿತು.

ತಕ್ಷಣ ಅದನ್ನು ರೆಹಮಾನ್ ಅವರ ಗಮನಕ್ಕೆ ತರುವಂತೆ ಪ್ರಧಾನಿ ಇಂದಿರಾ ತಿಳಿಸಿದರು. ಈ ಬಾರಿ ಕಾವ್ ಢಾಕಾಕ್ಕೆ ಹೋಗದೇ, ತಮ್ಮ ಹಿರಿಯ ಅಧಿಕಾರಿಯೊಬ್ಬರನ್ನು ಕಳಿಸಿದರು. ಅವರು ಢಾಕಾದಲ್ಲಿ ಶೇಕ್ ಮುಜಿಬುರ್ ರೆಹಮಾನ್ ಅವರನ್ನು ಭೇಟಿ ಮಾಡಿ, ತಮಗೆ ಲಭಿಸಿದ ಮಾಹಿತಿಯನ್ನು ವಿವರಿಸಿದರು.

ಬಾಂಗ್ಲಾ ಸೇನೆಯ infantry and cavalry (ಪದಾತಿ ಮತ್ತು ಅಶ್ವದಳ) ಘಟಕದ ಅಧಿಕಾರಿಗಳು ನಿಮ್ಮ ಹತ್ಯೆಗೆ ಸಂಚು ರೂಪಿಸಿದ್ದಾರೆಂದು ಹೇಳಿದರು. ಇದನ್ನೂ ರೆಹಮಾನ್ ಗಂಭೀರವಾಗಿ ಪರಿಗಣಿಸಲೇ ಇಲ್ಲ.

ನಾವು ನೀಡಿದ ಸ್ಫೋಟಕ ಮಾಹಿತಿಯನ್ನು ಬಾಂಗ್ಲಾ ನಾಯಕ ಗಂಭೀರವಾಗಿ ಸ್ವೀಕರಿಸುತ್ತಿಲ್ಲ ಎಂಬ ಸಂಗತಿಯನ್ನು ಕಾವ್, ಪ್ರಧಾನಿ ಇಂದಿರಾಗೆ ತಿಳಿಸಿದಾಗ, 'ಹೇಗಾದರೂ ಅವರಿಗೆ ಈ ವಿಷಯವನ್ನು ಮತ್ತೊಮ್ಮೆ ಮನವರಿಕೆ ಮಾಡಿಕೊಡಬೇಕು' ಎಂದು ಪ್ರತಿಕ್ರಿಯಿಸಿ ಏನೂ ಮಾತಾಡದೇ ಸುಮ್ಮನಾದರು. ಕಾವ್ ಅವರು ಇನ್ನೊಮ್ಮೆ ರೆಹಮಾನ್ ಅವರನ್ನು ಭೇಟಿಯಾಗಲು ಬಯಸಿದಾಗ, 'ಇದೇ ವಿಷಯದ ಬಗ್ಗೆ ಚರ್ಚಿಸಲು ಬರುವುದಾದರೆ, ಬೇಡ. ನನಗೆ ನನ್ನ ಜನ ಮೋಸ ಮಾಡಲಾರರು ಎಂಬ ಅಚಲ ವಿಶ್ವಾಸ ನನಗಿದೆ' ಎಂದು ರೆಹಮಾನ್ ಹೇಳಿಬಿಟ್ಟರು.

ಅದಾಗಿ ಐದು ತಿಂಗಳ ಬಳಿಕ..1975ರ ಆಗಸ್ಟ್ 15ರಂದು ಬಾಂಗ್ಲಾ ಸೇನೆ ಕ್ಷಿಪ್ರದಂಗೆ ಎದ್ದಿತು.

ಶೇಕ್ ಮುಜಿಬುರ್ ರೆಹಮಾನ್ ಅವರ ನಿವಾಸಕ್ಕೆ ನುಗ್ಗಿದ ಸೇನೆಯ ಅಧಿಕಾರಿಗಳು, ಕಂಡಕಂಡವರ ಮೇಲೆ ಗುಂಡು ಹಾರಿಸಿದರು. ರೆಹಮಾನ್ ತಮ್ಮದೇ ಸೇನೆಯ ಗುಂಡಿಗೆ ಬಲಿಯಾದರು. ಅಷ್ಟಕ್ಕೇ ಸುಮ್ಮನಾಗದ ಸೇನೆ, ರೆಹಮಾನ್ ಪತ್ನಿ, ಸಹೋದರ, ಮೂವರು ಗಂಡು ಮಕ್ಕಳು, ಇಬ್ಬರು ಸೊಸೆಯಂದಿರು, ಸಂಬಂಧಿಕರು, ಸಿಬ್ಬಂದಿ, ಪೊಲೀಸ್ ಅಧಿಕಾರಿಗಳನ್ನು ಹತ್ಯೆಗೈದರು. ರೆಹಮಾನ್ ರಕ್ಷಣೆಗೆ ಧಾವಿಸಿದ ಬಾಂಗ್ಲಾ ಸೇನೆಯ ಬ್ರಿಗೇಡಿಯರ್ ಜನರಲ್‌ನನ್ನು ಸಾಯಿಸಿದರು.

ಸೇನೆಯ ಮುಖ್ಯಸ್ಥ ಕೆ.ಎಂ.ಶಫಿವುಲ್ಲಾಹ್ ಅಸಹಾಯಕರಾಗಿ ಇವೆಲ್ಲವನ್ನೂ ನೋಡುತ್ತಾ ಕುಳಿತುಬಿಟ್ಟರು. ಅವರಿಗೆ ದಂಗೆಯನ್ನು ನಿಲ್ಲಿಸಲು ಸಾಧ್ಯವಾಗಲೇ ಇಲ್ಲ. ಅವರ ಆದೇಶವನ್ನು ಯಾರೂ ಪಾಲಿಸಲಿಲ್ಲ. ಬಾಂಗ್ಲಾದೇಶದ ಸಂಸ್ಥಾಪಕ ಮತ್ತು ಸೆಕ್ಯುಲರ್ ರಾಷ್ಟ್ರೀಯ ನಾಯಕ ತನ್ನದೇ ಸೇನೆಯಿಂದ ದಾರುಣವಾಗಿ ಹತ್ಯೆಗೀಡಾಗಿಬಿಟ್ಟರು.

ಈ ವರ್ಷದ ಜೂನ್ 23ರಂದು ಬಾಂಗ್ಲಾ ಪ್ರಧಾನಿಯಾಗಿದ್ದ ಶೇಕ್ ಹಸೀನಾ ಅವರು ವಾಕರ್-ಉಜ್-ಜಮಾನ್ ಎಂಬುವವರನ್ನು ಬಾಂಗ್ಲಾ ಸೇನೆಯ ಮುಖ್ಯಸ್ಥರನ್ನಾಗಿ ನೇಮಿಸಿದರು.



ವಾಕರ್-ಉಜ್-ಜಮಾನ್ ಅವರ ಪತ್ನಿ ಬೇಗಂ ಸರಹನಾಜ್ ಕಮಾಲಿಕ ರಹಮಾನ್ ತಂದೆ ಜನರಲ್ ಮುಸ್ತಫಿಜುರ್ ರಹಮಾನ್ ಕೂಡ ಬಾಂಗ್ಲಾ ಸೇನೆಯ ಮುಖ್ಯಸ್ಥರಾಗಿದ್ದವರು. ಅವರು ಶೇಕ್ ಹಸೀನಾ ಅವರ ಚಿಕ್ಕಪ್ಪ. ಈಗಿನ ಸೇನಾ ಮುಖ್ಯಸ್ಥ ವಾಕರ್-ಉಜ್-ಜಮಾನ್ ಪತ್ನಿ ಇದ್ದಾಳಲ್ಲ, ಅವಳು ಹಸೀನಾ ಚಿಕ್ಕಪ್ಪನ ಮಗಳು. ಅಂದರೆ ಒಂದರ್ಥದಲ್ಲಿ ಸಹೋದರಿ.

ಸಹೋದರಿಯ ಗಂಡನನ್ನೇ ಸೇನಾ ಮುಖ್ಯಸ್ಥನನ್ನಾಗಿ ನೇಮಕ ಮಾಡಿಕೊಂಡರೂ, ಶೇಕ್ ಹಸೀನಾಗೆ ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಆಗಲಿಲ್ಲ. ಸೇನಾ ಮುಖ್ಯಸ್ಥರಾದವರು ಯಾವತ್ತೂ ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಕಾರ್ಯನಿರ್ವಹಿಸಬೇಕು ಎಂದು ಪ್ರಧಾನಿ ಸ್ಥಾನದಲ್ಲಿದ್ದವರು ಅಪೇಕ್ಷಿಸುತ್ತಾರೆ. ಈ ಸ್ಥಾನದಲ್ಲಿರುವವರು ತಮ್ಮ ಸಂಬಂಧಿಕರಾದರಂತೂ ತಾವು ಸುರಕ್ಷಿತ ಎಂದು ಪ್ರಧಾನಿ ಸ್ಥಾನದಲ್ಲಿದ್ದವರು ಭಾವಿಸುತ್ತಾರೆ. ಬಾಂಗ್ಲಾ ಸೇನೆಯಲ್ಲಿರುವ, ಐಎಸ್ಐ ಪ್ರಚೋದಿತ, ಮುಸ್ಲಿಂ ಮೂಲಭೂತವಾದಿಗಳು ಕ್ಷಿಪ್ರದಂಗೆ ನಡೆಸಲು ಉದ್ದೇಶಿಸಿದ್ದಾರೆ ಎಂದು ಭಾರತೀಯ ಇಂಟೆಲಿಜೆನ್ಸ್ ಸಂಸ್ಥೆಗಳು ಹಸೀನಾ ಅವರನ್ನು ಎಚ್ಚರಿಸಿದ್ದವು. ತಮ್ಮ ತಂದೆಯಂತೆ, ಹಸೀನಾ ಕೂಡ ಭಾರತ ನೀಡಿದ ಮಾಹಿತಿಯನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ.

ಜನರಲ್ ವಾಕರ್-ಉಜ್-ಜಮಾನ್ ಅವರನ್ನು ಮೊನ್ನೆ ಜೂನ್‌ನಲ್ಲಿ ಸೇನಾ ಮುಖ್ಯಸ್ಥರನ್ನಾಗಿ ನೇಮಿಸಿದಾಗಲೂ ಭಾರತ ಹಸೀನಾ ಅವರನ್ನು ಎಚ್ಚರಿಸಿತ್ತು. 'ನಿಮ್ಮ ತಂದೆಯವರಿಗಾದ ಸ್ಥಿತಿಯೇ ನಿಮಗೂ ಬರಬಹುದು' ಎಂದು ಭಾರತ ಸ್ಪಷ್ಟವಾಗಿ ಹೇಳಿತ್ತು. ಆದರೆ ಹಸೀನಾ, 'ಜನರಲ್ ವಾಕರ್-ಉಜ್-ಜಮಾನ್ ಬೇರೆ ಯಾರೂ ಅಲ್ಲ, ನನ್ನ ಸಹೋದರಿಯ ಗಂಡ. ಅವರು ನನಗೆ ಎಂದೂ ದ್ರೋಹ ಮಾಡಲಾರರು' ಎಂದು ಹೇಳಿ ಸಮಾಧಾನಪಟ್ಟುಕೊಂಡರು.

ಅಷ್ಟಾದರೂ ಭಾರತದ ಅಧಿಕಾರಿಗಳು ಮತ್ತೆ ಎರಡು ಬಾರಿ ಹಸೀನಾ ಅವರನ್ನು ಎಚ್ಚರಿಸುವ ಪ್ರಯತ್ನ ಮಾಡಿದರು. ಆದರೆ ಹಸೀನಾ ಅದನ್ನು ಲಘುವಾಗಿ ಪರಿಗಣಿಸಿಬಿಟ್ಟರು.

ನಂತರ ಆಗಿದ್ದೇನು? ತಂದೆಗಾದ ಗತಿಯೇ ಅವರಿಗೂ ಒದಗಿ ಬಂತು. ಇತಿಹಾಸ ಮರುಕಳಿಸಿತು. ಸೇನೆಯಲ್ಲಿದ್ದ ಅವರ ಸಂಬಂಧಿಕರೇ ದಂಗೆಗೆ ಕಾರಣರಾಗಿ ಪದಚ್ಯುತಗೊಳಿಸಿದರು. ಹಸೀನಾ ದೇಶ ಬಿಟ್ಟು ಓಡಿಹೋಗುವಂತಾಯಿತು. ಭಾರತ ಹಸೀನಾ ನೆರವಿಗೆ ಧಾವಿಸದಿದ್ದರೆ ಅವರಿಗೆ ಪ್ರಾಣ ಉಳಿಸಿಕೊಳ್ಳುವುದು ದುಸ್ತರವಾಗುತ್ತಿತ್ತು.

ರಾಷ್ಟ್ರೀಯವಾದಿಗಳಾಗಿದ್ದ ಮುಜಿಬುರ್ ರೆಹಮಾನ್ ಮತ್ತು ಹಸೀನಾ ಇಬ್ಬರೂ ಭಾರತದ ಪರವಿದ್ದುದು, ಮುಸ್ಲಿಂ ಮೂಲಭೂತವಾದಿಗಳಿಗೆ ಸಹಿಸಿಕೊಳ್ಳಲು ಆಗಿರಲಿಲ್ಲ. ಸುದೀರ್ಘ ಅವಧಿಯಿಂದ ಬಾಂಗ್ಲಾವನ್ನು ತಮ್ಮ ಕಬ್ಜಕ್ಕೆ ತೆಗೆದುಕೊಳ್ಳಲು ಮೂಲಭೂತವಾದಿಗಳು ಹವಣಿಸುತ್ತಿದ್ದರು. ಆದರೆ ಹಸೀನಾ ಅದಕ್ಕೆ ತಡೆಗೋಡೆಯಂತೆ ನಿಂತಿದ್ದರು.

1971ರಲ್ಲಿ ಭಾರತ, ಪಾಕಿಸ್ತಾನವನ್ನು ಯುದ್ಧದಲ್ಲಿ ಸೋಲಿಸಿದ ಬಳಿಕ, ಪೂರ್ವ ಪಾಕಿಸ್ತಾನ ಸ್ವತಂತ್ರ ಬಾಂಗ್ಲಾದೇಶವಾಗಿ ಸ್ಥಾಪನೆಯಾದಾಗ, ಒಬ್ಬ ವ್ಯಕ್ತಿ ತೀವ್ರ ಚಡಪಡಿಸಿದ್ದ. ಆ ವ್ಯಕ್ತಿ ಮತ್ಯಾರೂ ಅಲ್ಲ, ಹೆನ್ರಿ ಕಿಸಿಂಜರ್. ಪಾಕಿಸ್ತಾನ್ ಪರ ನಿಲುವು ತಾಳಿದ್ದ ಕಿಸಿಂಜರ್, ಬಾಂಗ್ಲಾ ವಿಮೋಚನಾ ಹೋರಾಟದಲ್ಲೂ ತನ್ನ ನಿಲುವನ್ನು ಬದಲಿಸಲಿಲ್ಲ. ಬಾಂಗ್ಲಾ ಮೇಲೆ ನಿಯಂತ್ರಣ ಹೊಂದುವುದು ಆತನ ಹವಣಿಕೆಯಾಗಿತ್ತು. ಮೂವರು ನಾಯಕರು ಆತನ ಹಿಟ್ ಲಿಸ್ಟ್‌ನಲ್ಲಿದ್ದರು- ಬಾಂಗ್ಲಾದ ಶೇಕ್ ಮುಜಿಬುರ್ ರೆಹಮಾನ್, ಚಿಲಿಯ ಸಾಲ್ವಡಾರ್ ಅಲ್ಲೆಂಡೆ ಮತ್ತು ವಿಯೆಟ್ನಾಮಿನ ತ್ಯೆಯೂ.

Bangladesh: The Unfinished Revolution ಕೃತಿಯಲ್ಲಿ ಅಮೆರಿಕದ ಪತ್ರಕರ್ತ ಮತ್ತು ಲೇಖಕ ಲಾರೆನ್ಸ್ ಲಿಫ್‌ಶುಲ್ಟ್ಜ, 'ಢಾಕಾದಲ್ಲಿದ್ದ ಸಿಐಎ ಮುಖ್ಯಸ್ಥ ಫಿಲಿಪ್ ಚೆರ್ರಿ, ಶೇಕ್ ಮುಜಿಬುರ್ ರೆಹಮಾನ್ ಹತ್ಯೆಯ ಮುಖ್ಯ ರೂವಾರಿ' ಎಂದು ಹತ್ತಾರು ನಿದರ್ಶನಗಳ ಮೂಲಕ ಸಾಬೀತು ಪಡಿಸಿದ್ದಾನೆ. 'ಢಾಕಾದಲ್ಲಿ ಅಮೆರಿಕದ ವಾಯುನೆಲೆಗೆ ಅವಕಾಶ ನೀಡಿದರೆ, ಅಧಿಕಾರದಲ್ಲಿ ನಿಶ್ಚಿಂತೆಯಿಂದ ಮುಂದುವರಿಯಬಹುದು' ಎಂದು ಬಿಳಿ ವ್ಯಕ್ತಿಯೊಬ್ಬ ತಮಗೆ ಹೇಳಿದ್ದಾಗಿ ಹಸೀನಾ ಈ ವರ್ಷದ ಮೇನಲ್ಲಿ ಹೇಳಿದ್ದರು. ಸಿಐಎ ಉದ್ದೇಶಿಸಿ ಅವರು ಹಾಗೆ ಹೇಳಿದ್ದರಾ? ಗೊತ್ತಿಲ್ಲ.

ಆದರೆ ಹಸೀನಾ ಮೂರು ಪ್ರಮಾದಗಳನ್ನು ಮಾಡಿದರು- ಮೊದಲನೆಯದು, ಭಾರತ ಕಾಲಕಾಲಕ್ಕೆ ನೀಡಿದ ಎಚ್ಚರಿಕೆಯನ್ನು ತಮ್ಮ ತಂದೆಯಂತೆ ಉಪೇಕ್ಷಿಸಿದ್ದು, ಎರಡನೆಯದು, ತಮ್ಮ ಸನಿಹ ಸಂಬಂಧಿಕನೇ ಮುಖ್ಯಸ್ಥನಾಗಿರುವ ಸೇನೆಯನ್ನು ಅತಿಯಾಗಿ ನಂಬಿದ್ದು ಮತ್ತು ಮೂರನೆಯದಾಗಿ, ಸಿಐಎಯನ್ನು ಲಘುವಾಗಿ ಪರಿಗಣಿಸಿದ್ದು.

ಅಂತೂ ಬಾಂಗ್ಲಾದಲ್ಲಿ ಇತಿಹಾಸದ ಚಕ್ರ ಮತ್ತೊಂದು ಸುತ್ತುಹಾಕಿದೆ. ತಂದೆ ಮಾಡಿದ ತಪ್ಪನ್ನೇ ಮಗಳೂ ಮಾಡಿ, ಭಾರಿ ಬೆಲೆ ತೆತ್ತಿದ್ದಾರೆ.

ಇನ್ನಷ್ಟು ಬೇಕು ಪದಗಳು

ನಿಮಗೂ ಅನಿಸಬಹುದು, ಕನ್ನಡದಲ್ಲಿ ಕೆಲವು ಪದಗಳು ಬೇಕು ಎಂದು ಆಗಾಗ ಅನಿಸಬಹುದು. ಈ ಸನ್ನಿವೇಶವನ್ನು ಹೇಳಲು ನಿರ್ದಿಷ್ಟ ಪದಗಳೇ ಇಲ್ಲವಲ್ಲ ಎಂದು ಎಷ್ಟೋ ಸಲ ಅನಿಸಬಹುದು. ಈ ವಿಷಯದಲ್ಲಿ ಇಂಗ್ಲಿಷ್ ಭಾಷೆ ಒಂದು ಕೈ ಮೇಲು. ಯಾವುದೋ ಭಾಷೆಯಲ್ಲಿ ಒಂದು ಸನ್ನಿವೇಶ, ಪ್ರಸಂಗ ವಿವರಿಸುವ ಪದ ಸಿಕ್ಕರೆ ಸಾಕು, ಬಾಚಿ ಸೆಳೆದುಕೊಂಡು ತನ್ನ ಭಾಷೆಯಲ್ಲಿ ಲೀನ ಮಾಡಿಕೊಂಡುಬಿಡುತ್ತದೆ. ಎರಡು-ಮೂರು ಭಾಷೆಗಳ ಪದಗಳನ್ನು ಸೇರಿಸಿ ತನ್ನಷ್ಟಕ್ಕೆ ಹೊಸ ಪದವೊಂದನ್ನು ಸೃಷ್ಟಿಸಿಬಿಡುತ್ತದೆ. ಈ ವಿಷಯದಲ್ಲಿ ಇಂಗ್ಲಿಷಿಗೆ ಯಾವ ಮಡಿ-ಮೈಲಿಗೆ ಇಲ್ಲ. ಹಾಗೆ ಮಾಡಲು ಅದು ಯಾರ ಮರ್ಜಿಯನ್ನೂ ಕಾಯುವುದಿಲ್ಲ.

ಉದಾಹರಣೆಗೆ, ನೀವು ನಿಮ್ಮ ಸ್ನೇಹಿತನ ಜತೆ ಕೆಲ ಸಮಯ ಕಳೆಯಬೇಕೆಂದು ನಿರ್ಧರಿಸಿ, ಅವನೊಂದಿಗೆ ಹೊರಗೆ ಸುತ್ತಾಡಲು ಹೋಗುತ್ತೀರಿ. ಆದರೆ ಸ್ನೇಹಿತ ನಿಮ್ಮ ಜತೆ ಮಾತಾಡದೇ, ಬರೀ ಮೊಬೈಲ್‌ನಲ್ಲಿ ಮತ್ಯಾರೊಂದಿಗೋ ಮಾತಲ್ಲಿ ತಲ್ಲೀನನಾಗಿರುತ್ತಾನೆ. ಈ ದಿನಗಳಲ್ಲಿ ಇಂಥ ಅನುಭವ ನಿಮಗೂ ಆಗಿರುತ್ತದೆ. ನಿಮ್ಮ ಜತೆ ಮಾತಾಡದೇ, ಮೊಬೈಲಿನಲ್ಲಿ ನಿರತನಾದ ಸ್ನೇಹಿತನಿಗೆ ಏನು ಹೇಳುತ್ತೀರಿ?

ಇಂಥ ಸನಿವೇಶ ಅಥವಾ ವ್ಯಕ್ತಿಯನ್ನು ಬಣ್ಣಿಸಲು ಕನ್ನಡದಲ್ಲಿ ಯಾವ ಪದಗಳೂ ಇದ್ದಂತಿಲ್ಲ. ಇದ್ದರೆ ಹೇಳಿ.

ಆದರೆ ಇಂಗ್ಲಿಷಿನಲ್ಲಿ ಅಂಥವರಿಗೆ Cellfish ಅಂತಾರೆ. ಕೆಲ ವರ್ಷಗಳ ಹಿಂದೆ ಈ ಪದವನ್ನು ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟು ಸಮಿತಿಯವರು ಆಯ್ಕೆ ಮಾಡಿ, ಬಳಕೆಗೆ ಬಿಟ್ಟರು. ಈಗಂತೂ ಈ ಪದ ಪತ್ರಿಕೆಗಳ ಹೆಡ್‌ಲೈನ್‌ಗಳಲ್ಲೂ ಬಳಕೆಯಾಗುವಷ್ಟು ಸದರ ಆಗಿದೆ.

ಇನ್ನೊಂದು ಸನ್ನಿವೇಶವನ್ನು ಗಮನಿಸಿ. ನಿಮ್ಮ ಸ್ನೇಹಿತ ಆಗಾಗ ನಿಮ್ಮ ಉಪದೇಶವನ್ನು ಬಯಸಿ, ನಿಮ್ಮನ್ನು ಭೇಟಿ ಮಾಡುತ್ತಾನೆ. ನೀವು ಸಹ ಒಳ್ಳೆಯ ಉದ್ದೇಶದಿಂದ ಅವನಿಗೆ ಕೆಲವು ಉಪದೇಶದ ಮಾತು-ಸಲಹೆಗಳನ್ನು ನೀಡುತ್ತೀರಿ. ಆದರೆ ಆತ ನೀವು ಏನು ಹೇಳುತ್ತೀರೋ, ಅದಕ್ಕೆ ವಿರುದ್ಧವಾದ ಕ್ರಮ ಕೈಗೊಂಡಿರುತ್ತಾನೆ. ಇಂಥವನಿಗೆ ಕನ್ನಡದಲ್ಲಿ ಏನು ಹೇಳುತ್ತಾರೆ? ಗೊತ್ತಿದ್ದರೆ, ದಯವಿಟ್ಟು ತಿಳಿಸಿ.

ಆದರೆ ಇಂಗ್ಲಿಷಿನಲ್ಲಿ ಇಂಥವನನ್ನು Askhole ಅಂತಾರೆ.

ಇನ್ನೊಂದು ಪ್ರಸಂಗವನ್ನು ಗಮನಿಸಿ. ಮನೆಯಲ್ಲಿಟ್ಟ ಫ್ಯಾಮಿಲಿ ಸೈಜಿನ ಚಾಕೊಲೇಟ್ ಬಾರನ್ನು ಯಾರೋ ಪ್ರಮಾದವಶಾತ್ ತಿಂದುಬಿಟ್ಟರೆನ್ನಿ. ಅದಕ್ಕೆ ಏನು ಹೇಳುವುದು? ಈ ಪ್ರಸಂಗವನ್ನು ಸರಿಯಾಗಿ ಕಣ್ಣಿಗೆ ಕಟ್ಟಿಕೊಡುವ ಪದ ಕನ್ನಡದಲ್ಲಿ ಇದ್ದಂತಿಲ್ಲ. ಆದರೆ ಇಂಗ್ಲಿಷಿನಲ್ಲಿ ಇದಕ್ಕೆ ಸ್ನಾಕ್ಸಿಡೆಂಟ್ (Snaccident) ಎಂದು ಹೇಳುತ್ತಾರೆ.

ಆಫ್ರಿಕಾದ ಕೀನ್ಯಾ, ಮೊಜಾಂಬಿಕ್ ಮತ್ತು ತಾಂಜೇನಿಯಾದಲ್ಲಿ ಸ್ವಾಹಿಲಿ ಎಂಬ ಜನಾಂಗವಿದೆ. ಅವರು ತಮ್ಮದೇ ಸ್ವಾಹಿಲಿ ಭಾಷೆಯಲ್ಲಿ ಮಾತಾಡುತ್ತಾರೆ. ಆ ಭಾಷೆಯಲ್ಲಿ ಹಕುನ ಮಟಾಟ (Hakuna Matata) ಎಂಬ ಪದವಿದೆ. ಅದರ ಅರ್ಥ No worries for the rest of your day ಅರ್ಥಾತ್ problem-free day. ಬೆಂಗಳೂರಿನಲ್ಲಿ ಇದೇ ಹೆಸರಿನ (ಹಕುನ ಮಟಾಟ) ಎರಡು ಹೋಟೆಲುಗಳಿವೆ. 'ಹಕುನ ಮಟಾಟ' ಪದ ಈಗ ಜನರ ಬಾಯಲ್ಲಿ ನೀರೂರಿಸುವಂತಾಗಿದೆ. ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟು ತಜ್ಞರು ಸುಮಾರು ಕಾಲು ಶತಮಾನದ ಹಿಂದೆಯೇ ಈ ಪದವನ್ನು ತಮ್ಮದಾಗಿ ಮಾಡಿಕೊಂಡುಬಿಟ್ಟರು.

ಇತ್ತೀಚೆಗೆ ಪ್ರಸಿದ್ಧ ಗ್ರಾಹಕರ ವಸ್ತುಗಳನ್ನು ಮಾರಾಟ ಮಾಡುವ ಕಂಪನಿಯೊಂದು ತನ್ನ ಜಾಹೀರಾತಿನಲ್ಲಿ Its Ukiyo Moment ಎಂಬ ಶೀರ್ಷಿಕೆಯನ್ನು ಬರೆದಿತ್ತು. ಉಕಿಯೋ ಎಂಬುದು ಮೂಲತಃ ಜಪಾನಿ ಪದ. ಅದನ್ನು ಇಂಗ್ಲಿಷ್ ನಿಘಂಟು ತಜ್ಞರು ಆಗಲೇ ತಮ್ಮದನ್ನಾಗಿಸಿಕೊಂಡಿದ್ದಾರೆ. ಉಕಿಯೋ ಅಂದರೆ ಬದುಕಿನ ಕಷ್ಟ, ಪಡಿಪಾಟಲನ್ನು ಮರೆತು, ಈಗಿನ ಕ್ಷಣಗಳನ್ನು ಆನಂದಿಸುವುದು.

ಇದೇ ರೀತಿ ವಾಬಿ-ಸಾಬಿ ಎಂಬ ಪದ. ಇದೂ ಮೂಲತಃ ಜಪಾನಿ ಪದ. ವಾಬಿ-ಸಾಬಿ ಅಂದರೆ ಅಪೂರ್ಣ ಅಥವಾ ಅವ್ಯವಸ್ಥಿತ ಪರಿಸ್ಥಿತಿಯಲ್ಲಿ ಸಮಾಧಾನ ಕಾಣುವುದು. ನಿಮ್ಮ ಮನೆಯಲ್ಲಿ ಯಾವುದೂ ಸರಿ ಇಲ್ಲ. ಮನೆಯಲ್ಲಿ ಕುಳಿತುಕೊಳ್ಳಲು ಕುರ್ಚಿಯಿಲ್ಲ. ಮನೆಗೆ ನೆಂಟರು ಬಂದಿದ್ದಾರೆ. ಅವರನ್ನು ಚಾಪೆಯ ಮೇಲೆ ಕುಳ್ಳಿರಿಸಿ, ಆನಂದಪಡುವುದು. ತಮ್ಮಲ್ಲಿ ಯಾವ ಕೊರತೆಯೂ ಇಲ್ಲ ಎಂಬಂತೆ ಸಹಜವಾಗಿ ವರ್ತಿಸುವುದು. ಇದು ವಾಬಿ-ಸಾಬಿ. ಅಂದರೆ the beauty of imperfection. ಈ ಪದವೂ ಈಗ ಇಂಗ್ಲಿಷ್ ನಿಘಂಟಲ್ಲಿ ಬೆಚ್ಚಗೆ ಕುಳಿತುಕೊಂಡು ಬಿಟ್ಟಿದೆ.

ಒಲಿಂಪಿಕ್ ಹಾಸ್ಯಕ್ರೀಡೆ

ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟ ಈಗ ತಾನೇ ಮುಗಿದಿದೆ. ಆದರೆ ಹಾಸ್ಯಕ್ರೀಡೆ ಮಾತ್ರ ನಿಂತಿಲ್ಲ. ಆ ಪೈಕಿ ಕೆಲವು..

- ನೈಜೀರಿಯಾದ ರಾಜಕುಮಾರ ತನ್ನ ದೇಶದ ತಂಡ ಒಂದೇ ಒಂದು ಬಂಗಾರದ ಪದಕ ಗೆಲ್ಲದಿರುವುದಕ್ಕಾಗಿ ಪ್ರೇಕ್ಷಕರ ಕ್ಷಮೆ ಕೇಳಿದ. 'ನಿಮ್ಮ ಬ್ಯಾಂಕ್ ವಿವರ, ಪ್ಯಾನ್ ನಂಬರ್ ಕಳಿಸಿಕೊಡಿ. ನಿಮ್ಮ ಹಣವನ್ನು ವಾಪಸ್ ಮಾಡ್ತೇವೆ'.
- ಪಾಕಿಸ್ತಾನದ ಅಥ್ಲೀಟ್ ಅಂತಿಮವಾಗಿ ಬಂಗಾರದ ಪದಕ ಗೆದ್ದ.

  -ಫ್ರೆಂಚ್ ಪೊಲೀಸರು ಅವನಿಗಾಗಿ ಹುಡುಕುತ್ತಿದ್ದಾರಂತೆ.
- ಸೊಮಾಲಿಯಾದ ಒಲಿಂಪಿಕ್ ಕಮಿಟಿ, ಅಂತಾರಾಷ್ಟ್ರೀಯ ಒಲಿಂಪಿಕ್ ಕಮಿಟಿಯ ಕ್ಷಮೆ ಕೋರಿದೆ. ಅವರಿಗೆ ತಡವಾಗಿ ಗೊತ್ತಾಗಿದ್ದೇನೆಂದರೆ, Sailing ಮತ್ತು Shooting ಇವೆರಡೂ ಪ್ರತ್ಯೇಕ ಕ್ರೀಡೆಗಳು ಎಂಬುದು.
- ಈ ಸಲದ ಕ್ರೀಡಾಕೂಟದಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪೋಲ್ ವಾಲ್ಟ್ ಕ್ರೀಡೆಯೊಂದನ್ನೇ ಗಮನವಿಟ್ಟು ಆಸಕ್ತಿಯಿಂದ ವೀಕ್ಷಿಸಿದರು. ಇದಕ್ಕೆ ಕಾರಣ, ಮೆಕ್ಸಿಕನ್‌ರು ಎಷ್ಟು ಎತ್ತರ ಜಿಗಿಯಬಹುದು ಎಂಬುದನ್ನು ತಿಳಿಯಲು. ತಾವು ಮತ್ತೊಮ್ಮೆ ಅಧ್ಯಕ್ಷರಾದರೆ ಅಮೆರಿಕ-ಮೆಕ್ಸಿಕೋ ಮಧ್ಯೆ ಎಷ್ಟು ಎತ್ತರದ ಗೋಡೆ ನಿರ್ಮಿಸಬೇಕು ಎಂಬುದನ್ನು ತಿಳಿಯುವುದು ಅವರ ಉದ್ದೇಶವಾಗಿತ್ತು.
- ಶೂಟಿಂಗ್‌ನಲ್ಲಿ ಅಮೆರಿಕ ಪದಕ ಗೆಲ್ಲಲಿಲ್ಲ ಏಕೆ?

  - ಒಲಿಂಪಿಕ್ ಕ್ರೀಡಾಕೂಟದಲ್ಲಿ ಕಂಡಕಂಡವರನ್ನು ಶೂಟ್ ಮಾಡುವಂತಿಲ್ಲವಲ್ಲ..

ವೃಷಭ ವಿಸರ್ಜಿತ ವ್ಯಾಖ್ಯಾನ- ಶ್ರಾವಣದಲ್ಲಿ ಕಥಾಶ್ರವಣ

ತಿಳಿರು ತೋರಣ

ಶ್ರೀವತ್ಸ ಜೋಶಿ

srivathsajoshi@yahoo.com

ಅರ್ಥ ಅದೇ, ಭಾಷೆ ಮಾತ್ರ ಬೇರೆ. ಅಂದಮೇಲೆ ಬುಲ್‌ಶಿಟ್ ಎಂದು ಇಂಗ್ಲಿಷ್‌ನಲ್ಲಿ ಹೇಳುವುದನ್ನೇ ಬೇರೆ ಭಾರತೀಯ ಭಾಷೆಗಳಲ್ಲಿ ಅನುವಾದಿಸಿ ಹೇಳಿದರೆ ಆಗದೇ? ಒಂದುವೇಳೆ ಹಾಗೆ ಮಾಡಿದರೆ ಆ ಜರಿತದ ಪ್ರಖರತೆ ಪರಿಣಾಮಗಳು ಇಂಗ್ಲಿಷ್‌ನದಂತೆಯೇ ಇರುವವೇ? ಕೆಲ ದಿನಗಳ ಹಿಂದೆ ಹಂಸಲೇಖ ಅವರು ಆಡಿದ ಮಾತೊಂದು ವಿವಾದಕ್ಕೊಳಗಾಗಿತ್ತು. ಅವರು ಬಿಡಿ ಈಗೀಗ ಚಿತ್ರಸಾಹಿತ್ಯ ಅಥವಾ ಸಂಗೀತದಿಂದ ಪ್ರಖ್ಯಾತರಾಗುವುದಕ್ಕಿಂತ ಏನೇನೋ ವಿವಾದಾತ್ಮಕ ಹೇಳಿಕೆಗಳಿಂದಲೇ ಪ್ರಚಲಿತದಲ್ಲಿರುವುದಕ್ಕೆ ಹೆಣಗುತ್ತಿರುವವರು. ಹಿಂದೊಮ್ಮೆ ಪೇಜಾವರ ಶ್ರೀಗಳ ಬಗ್ಗೆ ತುಚ್ಛವಾಗಿ ಮಾತಾಡಿದ್ದರು. ಆಮೇಲೆ ಕನ್ನಡ ಚಿತ್ರರಂಗದ ಕೆಲ ಹೀರೊಗಳು ರಾಷ್ಟ್ರಮಟ್ಟದಲ್ಲಿ ಜನಪ್ರಿಯರಾಗುತ್ತಿರುವುದನ್ನು ಕಂಡು ಕರುಬುತ್ತ ಕುಹಕವಾಡಿದ್ದರು. ಲೇಟೆಸ್ಟ್ ಅಂದರೆ ಅದೇ-ಪುನರ್ಜನ್ಮ ಸಿದ್ಧಾಂತದ ಬಗೆಗಿನ ನಂಬಿಕೆಗಳೆಲ್ಲ ಬುಲ್‌ಶಿಟ್ ಎಂದಿದ್ದು. ಅವರು ಹಾಗೆಂದ ಮಾತ್ರಕ್ಕೇ ಯಾವ ಧರ್ಮದ ಯಾವುದೇ ಮೌಲ್ಯಗಳಾದರೂ ಬುಲ್‌ಶಿಟ್ ಆಗುವುದಿಲ್ಲವೆನ್ನಿ. ಅದು ಎಲ್ಲರಿಗೂ ಗೊತ್ತು. ಆದರೂ ಹಾಗೇಕೆ ಹೇಳಬೇಕು? ಇನ್ನೊಬ್ಬರ ನಂಬಿಕೆಗಳನ್ನೇಕೆ ಗೇಲಿ ಮಾಡಬೇಕು? ಸೋಷಿಯಲ್ ಮೀಡಿಯಾ ಎಂಬ ಅಗ್ನಿಗೇಕೆ ತುಪ್ಪ ಸುರಿಯಬೇಕು? ಅಷ್ಟಾಗಿ, ಅಂಥ ಅಗ್ಗದ ಮಾತುಗಳನ್ನಾಡಿದರೆ ಅವರೇ ತಮ್ಮ ಬಿರುದಿನಲ್ಲಿನ ದ-ಕಾರಕ್ಕೆ ಬದಲು ತ-ಕಾರ ತಂದುಕೊಂಡಂತಾಗುತ್ತದೆ. ನಾದ ಹೋಗಿ ನಾತ ಬಂತು ಥೈ ತಕ ಥೈ ಅಂತಾಗುತ್ತದೆ. ಹೇಳಿದ್ದೇ ಬುಲ್‌ಶಿಟ್ ಎಂದಮೇಲೆ ಆಗಲೇಬೇಕಲ್ಲ?

ವಿಷಯ ಅದಲ್ಲ. ಹಂಸಲೇಖ ಒಂದೊಮ್ಮೆ ಬುಲ್‌ಶಿಟ್ ಎನ್ನುವ ಬದಲಿಗೆ ಸುಸಂಸ್ಕೃತವಾಗಿ ವೃಷಭವಿಸರ್ಜಿತ ಅಂತ ಅಂದಿದ್ದರೆ? ಅಥವಾ, ಅಚ್ಚಕನ್ನಡದಲ್ಲಿ ಎತ್ತಿನ ಸೆಗಣಿ ಎಂದು ಹೇಳಿದ್ದರೆ? ಇಷ್ಟೆಲ್ಲ ರಂಪ ರಾದ್ಧಾಂತ ಆಗುವುದಿರಲಿ ಅವರೇನನ್ನುತ್ತಿದ್ದಾರೆ ಎಂದು ಹೆಚ್ಚಿನವರಿಗೆ ಅರ್ಥವೂ ಆಗುತ್ತಿರಲಿಲ್ಲ! ಇಂಗ್ಲಿಷ್‌ನಿಂದಾಗಿ ಎಲ್ಲರಿಗೂ ಅರ್ಥವಾಯಿತು. ಅಷ್ಟೊಂದು ಪ್ರಭಾವಶಾಲಿಯಾಗಿ ಇದೆ ಬುಲ್‌ಶಿಟ್ ಎಂಬ ಹೀಗಳಿಕೆ. ಕೆಲ ದಿನಗಳ ಹಿಂದೆ ಅಮೆರಿಕದಲ್ಲಿ ಅಧ್ಯಕ್ಷೀಯ ಚುನಾವಣೆಗೆ ಸಂಬಂಧಿಸಿದಂತೆ ಡೊನಾಲ್ಡ್ ಟ್ರಂಪ್ ಮತ್ತು ಆಗ ಇನ್ನೊಬ್ಬ ಅಭ್ಯರ್ಥಿಯಾಗಿದ್ದ ಜೋ ಬೈಡನ್ ಇವರಿಬ್ಬರದು ಯಥಾಪ್ರಕಾರ ಟಿವಿಯಲ್ಲಿ ಡಿಬೇಟ್ ನಡೆಯಿತು. 'ಅದೊಂದು ಡಿಬೇಟ್ ಅಲ್ಲ ಬುಲ್‌ಶಿಟ್!' ಎಂದು ಒಕ್ಕೊರಲಿನಿಂದ ಅಭಿಪ್ರಾಯಪಟ್ಟರು ಇಲ್ಲಿನ ರಾಜಕೀಯ ಸಮೀಕ್ಷಕರು, ವಿಮರ್ಶಕರು, ಬಹಳಷ್ಟು ಜನ ಶ್ರೀಸಾಮಾನ್ಯ ಪ್ರಜೆಗಳೂ. ಬುಲ್‌ಶಿಟ್ ಅನ್ನೋದೇನಿದೆ ಅದು ಅಮೆರಿಕದಲ್ಲೂ ಧಾರಾಳವಾಗಿ ಇದೆ ಎನ್ನುವುದಕ್ಕೆ ಮುದ್ದಾಂ ಆಗಿ ಆ ನಿದರ್ಶನವನ್ನಿಲ್ಲಿ ಉಲ್ಲೇಖಿಸಿದೆ. ಹೀಗೆ ಭೂಮಂಡಲದಲ್ಲೆಲ್ಲ ವ್ಯಾಪಿಸಿರುವ ಬುಲ್‌ಶಿಟ್ ವಿಚಾರ ಕೈಲಾಸದಲ್ಲೂ ಬಿಸಿಬಿಸಿ ಚರ್ಚೆಗೆ, ಸ್ವಾಮಿ-ಸೇವಕ ಸಂವಾದಕ್ಕೆ ಕಾರಣವಾಯ್ತು ಎಂಬೊಂದು ಪೌರಾಣಿಕ ಕಥೆಯಿದೆ. ಈ ಶ್ರಾವಣಮಾಸದಲ್ಲಿ ಅದರ ವಾಚನ-ಶ್ರವಣವನ್ನು ನೀವೊಮ್ಮೆ ಮಾಡಬೇಕು. ನಿಮಗದು ಪುಣ್ಯಪ್ರದವಾಗಬಹುದು. ಅಲ್ಲದೇ ಹಾಸ್ಯರಸವನ್ನು ಅಷ್ಟಿಷ್ಟು ಸಿಂಪಡಿಸಿರುವುದರಿಂದ ನಿಮ್ಮ ಮುಖದಲ್ಲಿ ಒಂದು ಕಿರುನಗೆಯನ್ನಂತೂ ಖಂಡಿತ ತರಿಸಬಹುದು.

ಕೈಲಾಸವಾಸಿ ಪರಮೇಶ್ವರನಿಗೆ ಸಂಸಾರಸಂಕಟಗಳು ನಮಗಿಂತ ಹೆಚ್ಚು. ಹೆಚ್ಚು ಎನ್ನುವುದಕ್ಕಿಂತಲೂ ಅವನ ಸಂಕಟಗಳು ವಿಚಿತ್ರ, ವಿಭಿನ್ನ ರೀತಿಯವು. ಸಂಸ್ಕೃತ ಕವಿಗಳು ಇದನ್ನು ಚೆನ್ನಾಗಿ ಲೇವಡಿ ಮಾಡಿದ್ದಾರೆ. ಗಂಗೆ-ಗೌರಿ ಸವತಿಯರ ಬಗೆಹರಿಯದ ಕಚ್ಚಾಟ. ಅದರ ಮಧ್ಯೆ ಗಣಪ-ಸುಬ್ಬಣ್ಣರ ಕಿತಾಪತಿಗಳು ಒಂದಲ್ಲ ಎರಡಲ್ಲ. ಎಷ್ಟೆಂದರೂ ಚಿಕ್ಕ ಮಕ್ಕಳು, ಜಗಳಾಡ್ತಿರ್ತಾವೆ ಬಿಡಿ, ಆಮೇಲೆ ಒಟ್ಟಿಗೆ ಸೇರಿ ಆಟ ಆಡ್ತಾವೆ ಎಂದು ಸಮಾಧಾನ ತಂದುಕೊಳ್ಳುವಷ್ಟರಲ್ಲಿ ಅವರ ವಾಹನಗಳಾದ ಇಲಿ ಮತ್ತು ನವಿಲುಗಳದು ಏನಾದರೂ ರಂಪ ಶುರು. ಅದು ಮುಗಿದ ಮೇಲೆ ಶಿವನ ಕೊರಳಿಗೆ ಟೈ ಆಗಿರುವ ಹಾವಿಗೂ ಗಣಪನ ಸೊಂಟದ ಸುತ್ತಲಿನ ಬೆಲ್ಟ್ ಆಗಿರುವ ಹಾವಿಗೂ ಬುಸುಗುಟ್ಟುತ್ತ ಜಗಳ. ಇವರಾರದೂ ತಂಟೆ ಇಲ್ಲವೆಂದಾದರೆ ತಲೆಯಲ್ಲಿರುವ ಶೀತಲ ಚಂದ್ರ ಶೀತಬಾಧೆ ತಲೆನೋವು ತರುತ್ತಾನೆ. ಬಹುಶಃ ಶಿವ ತಲೆಕೆಟ್ಟು ತಿರುಕನಾಗಿದ್ದು ಅದಕ್ಕೇ ಇರಬಹುದು. ಇದ್ದುದರಲ್ಲಿ ಶಿವನ ವಾಹನವಾದ ನಂದಿಯೇ ವಾಸಿ. ಅವನು ವಿನಮ್ರ, ವಿನೀತ ಸ್ವಭಾವದವನು. ಒಂದಿಷ್ಟು ಫ್ಯಾಟ್-ಫ್ರೀ ಬೈಹುಲ್ಲು ಮತ್ತು ಡಯಟ್-ಕಲಗಚ್ಚು ಕೊಟ್ಟರೆ ದಿನವಿಡೀ ತೆಪ್ಪಗಿರುತ್ತಾನೆ. ಅದೊಂದೇ ನೆಮ್ಮದಿ ಶಿವನಿಗೆ.

ಹೀಗಿರಲು ಒಂದು ದಿನ ನಂದಿಯೂ ಬೇಸರದ ಮುಖಮಾಡಿಕೊಂಡು ಶಿವನ ಬಳಿಗೆ ಬಂದನು. ಶಿವನಿಗೆ ಆಶ್ಚರ್ಯ- ಇವನೊಬ್ಬ ಕಾಟ ಕೊಡದವನು ಎಂದುಕೊಂಡಿದ್ದರೆ ಈಗ ರಾಗ ಎಳೆಯುತ್ತಿದ್ದಾನಲ್ಲ, ಎಲಾ ಇವನ! 'ಏನಪ್ಪಾ ನಂದಿ, ನೀನು ನೊಂದಿದ್ದೇಕೆ?' ಪ್ರಶ್ನಿಸಿದನು ಪರಮೇಶ್ವರ. ನಂದಿಯ ಮುಖ ನಂದಿಹೋದ ನಂದಾದೀಪದಂತಿತ್ತು. ಉಕ್ಕಿ ಬರುತ್ತಿದ್ದ ದುಃಖವನ್ನು ತಾಳಲಾರದೆ ಬಿಕ್ಕುತ್ತಲೇ ತನ್ನ ಅಳಲನ್ನು ತೋಡಿಕೊಳ್ಳತೊಡಗಿದನು. 'ಮಹಾಪ್ರಭೂ... ನಿಮ್ಮಿಂದಾಗಲೀ, ನಿಮ್ಮ ಸಂಸಾರಸದಸ್ಯರಿಂದಾಗಲೀ, ನಿಮ್ಮ ಗಣಗಳಿಂದಾಗಲೀ ನನಗೆ ಯಾವತ್ತೂ ಯಾವ ನಮೂನೆಯ ಕಿರುಕುಳವೂ ಆಗಿಲ್ಲ. ಆ ಬಗ್ಗೆ ನನ್ನ ಕಂಪ್ಲೇಂಟ್ ಏನೂ ಇಲ್ಲ. ಆದರೆ ಈ ಭೂಲೋಕದ ಮನುಷ್ಯರಿದ್ದಾರಲ್ಲ, ಅವರಿಂದ ನನಗೆ ತೀವ್ರ ಅವಮಾನವಾಗಿದೆ...'

ಪರಮೇಶ್ವರ ಒಂದುಕ್ಷಣ ಯೋಚಿಸಿದನು. ಭೂಲೋಕದ ಹಳ್ಳಿಗಳಲ್ಲಿ ಈಗಲೂ ಗದ್ದೆ ಉಳುಮೆಗೆ, ಏತ ನೀರಾವರಿಗೆ, ಎಣ್ಣೆ ತೆಗೆಯುವ ಗಾಣಕ್ಕೆ, ಗಾಡಿ ಎಳೆಯಲಿಕ್ಕೆ- ಹೀಗೆ ಬೇರೆಬೇರೆ ಕೆಲಸಗಳಿಗೆ ಎತ್ತುಗಳನ್ನು ಉಪಯೋಗಿಸುತ್ತಾರಲ್ಲ ಆ ಬಗ್ಗೆ ನಂದಿಯ ದೂರು ಇರಬಹುದೇ ಎಂದುಕೊಂಡನು. 'ಮನುಷ್ಯರು ನಿನ್ನ ಸಹೋದರರನ್ನೆಲ್ಲ ಮೈಮುರಿದು ದುಡಿಯುವಂತೆ ಮಾಡಿ ಸತಾಯಿಸುತ್ತಾರೆಂದು ತಾನೆ ನಿನ್ನ ಅಳಲು?' ಎಂದು ಶಿವನು ನಂದಿಯನ್ನು ಪ್ರಶ್ನಿಸಿದನು. 'ಇಲ್ಲ ಸ್ವಾಮಿ, ಹಾಗೇನೂ ಇಲ್ಲ. ಗಾಣದೆತ್ತಿನಂತೆ ದುಡಿತ ಎಂಬ ಗಾದೆಯಾದರೂ ಹುಟ್ಟಿದೆಯಲ್ಲ. ದುಡಿಯುವುದಕ್ಕೇನೂ ತೊಂದರೆಯಿಲ್ಲ. ನನ್ನ ಕಂಪ್ಲೇಂಟ್ ಬೇರೆಯೇ ಇದೆ...' ಎಂದನು ನಂದಿ. 'ಮತ್ತೆ? ದುಡಿಸಿ ದುಡಿಸಿ ಇನ್ನು ಉಪಯೋಗಕ್ಕೆ ಬಾರದೆಂದಾದ ಮೇಲೆ ಕಸಾಯಿಖಾನೆಗೆ ಕಳಿಸಿ ಕೊಂದು ಹಾಕುತ್ತಾರೆಂದು ದುಃಖವೇ?'- ಪರಶಿವನ ಪ್ರಶ್ನೆ. 'ನೋ, ದಟ್ಸ್ ಆಲ್ರೈಟ್ ಓಕೆ. ಜಾತಸ್ಯ ಮರಣಂ ಧ್ರುವಂ ಎಂದಿದ್ದಾರೆ ದಾರ್ಶನಿಕರು. ಹುಟ್ಟಿದ ಮೇಲೆ ಒಂದಲ್ಲ ಒಂದುದಿನ ಸಾಯಲೇಬೇಕು. ಯಾರೂ ಶಾಶ್ವತರಲ್ಲ. ಸಂತೋಷದಿಂದಲೇ ಸಾಯೋಣವಂತೆ. ಅದಕ್ಕೇಕೆ ಚಿಂತೆ!' ಗೋಣಲ್ಲಾಡಿಸಿದನು ನಂದಿ.

'ಕೋಲೆಬಸವನನ್ನು ಆಡಿಸುವವನು ಜತೆಯಲ್ಲಿರುವ ಹೆಣ್ಣುಕರುವಿಗೆ ಮಾಲೆ ಹಾಕಿಸಿ ರಾಮ-ಸೀತೆಯರ ಮದುವೆ ಎಂದು ಬೀದಿನಾಟಕ ಮಾಡಿ ಮಕ್ಕಳನ್ನು ರಂಜಿಸುತ್ತಾನೆಂದು ನಾಚಿಕೆಯೆ? ಅಥವಾ ಫ್ರಾನ್ಸ್‌ನಂಥ ದೇಶಗಳಲ್ಲಿ ಬುಲ್-ರೇಸ್, ಬುಲ್-ಫೈಟ್ ಏರ್ಪಡಿಸಿ ಜನರು ಮೋಜು ಮಾಡುತ್ತಾರೆಂದೇ?'- ಶಿವ ಕೇಳಿದ, ನಂದಿಯ ಅಸಲಿ ಸಮಸ್ಯೆಯೇನು ಎಂದು ಒಂದೂ ಅರ್ಥವಾಗದವನಂತೆ. 'ಛೇ! ಎಲ್ಲಾದರೂ ಉಂಟೇ? ಮಕ್ಕಳಿಗೆ ಮನೋರಂಜನೆ ಸಿಗುತ್ತದಾದರೆ ರಾಮ-ಸೀತೆ ಮದುವೆ ಆಟ ಆಡೋದು, ಬುಲ್‌ರೇಸು, ಬುಲ್‌ಫೈಟು ನಮಗೂ ಇಷ್ಟವೇ. ನನ್ನ ಸಮಸ್ಯೆ ಅದಲ್ಲ. ನಿಜ ಹೇಳಬೇಕೆಂದರೆ ನನ್ನ ಸಮಸ್ಯೆಯನ್ನು ನಿಮ್ಮಲ್ಲಿ ಹೇಳಲಿಕ್ಕೇ ಸ್ವಲ್ಪ ನಾಚಿಕೆ-ಸಂಕೋಚ ಆಗ್ತಿರೋದೇ ಹೊರತು ರಾಮ-ಸೀತೆ ಮದುವೆಯಾಟದಲ್ಲೇನೂ ನಾಚಿಕೆಯಿಲ್ಲ. ಮದುವೆಯಲ್ಲಿ ಹೆಣ್ಣು ನಾಚುತ್ತಾಳೆ. ಗಂಡಿಗೆಂಥ ನಾಚಿಕೆ?' ನಯವಿನಯದಿಂದಲೇ ನಂದಿಯ ಉವಾಚ. 'ಹೇಳಲು ನಾಚಿಕೆಯೆನಿಸುವ ಸಮಸ್ಯೆ ಅದೇನೋ ನನಗಂತೂ ಗೊತ್ತಾಗದು. ಬೇಗ ಹೇಳಿ ಇಲ್ಲಿಂದ ಜಾಗಖಾಲಿ ಮಾಡು!'- ಮುಕ್ಕಣ್ಣ ಈಗ ಸ್ವಲ್ಪ ತಾಳ್ಮೆಗೆಟ್ಟು ಸಿಟ್ಟಾಗಿದ್ದನೆಂದು ಗೊತ್ತಾಗುತ್ತಿತ್ತು.

ಇನ್ನು ಬಾಯ್ಬಿಡದಿದ್ದರೆ ಕೋಪಗೊಂಡು ಮೂರನೇ ಕಣ್ಣು ತೆರೆದು ಸುಟ್ಟೇಬಿಟ್ಟಾನು ಎಂದು ಹೆದರಿದ ನಂದಿ 'ಅದೇ ಮಹಾಪ್ರಭೂ... ಮನುಷ್ಯರು, ಅದರಲ್ಲೂ ಇಂಗ್ಲಿಷ್ ಮಾತಾಡುವವರು (ಮತ್ತು ಇಂಗ್ಲಿಷ್ ಮಾತಾಡುವವರನ್ನು ಅನುಕರಿಸುವವರು) ಸತ್ಯದಂತೆ ತೋರುವ ಸುಳ್ಳಿನ ಕಂತೆಗಳನ್ನು ನನ್ನ ಮಲಕ್ಕೆ ಹೋಲಿಸಿ ನನಗೆ ಅವಮಾನ ಮಾಡ್ತಿರ್ತಾರೆ...' ಎಂದು ಶಿವನಲ್ಲಿ ತನ್ನ ನೋವನ್ನು ತೋಡಿಕೊಂಡನು. ಹಾಗೆನ್ನುವಾಗ ನಂದಿಗೆ ಬಿಕ್ಕಿಬಿಕ್ಕಿ ಅಳುವೇ ಬಂದಿತ್ತು. ಅಂದರೆ, ಆತ ಮನಸ್ಸಿಗೆ ನೋವು ಮಾಡಿಕೊಂಡಿದ್ದು ಹೌದು.

'ಬುಲ್‌ಶಿಟ್!'- ಜಗದೊಡೆಯ ಜಗದೀಶ್ವರನ ಬಾಯಿಂದಲೂ ಅದೇ ಮಾತು ಹೊರಡಬೇಕೆ! ಶಿವಶಿವಾ! ಪರಮೇಶ್ವರನೇ ಹಾಗೆ ಹೇಳಿದ್ದನ್ನು ಕೇಳಿದ ನಂದಿಗೆ ಗಾಯದ ಮೇಲೆ ರುಚಿಗೆ ತಕ್ಕಷ್ಟು ಟಾಟಾ ಐಯೊಡೈಜ್ಡ್ ಉಪ್ಪು ಉದುರಿಸಿದಂತಾಯಿತು. ಆದರೂ ಸಾವರಿಸಿಕೊಂಡು ತನ್ನ ಮನದಾಳದ ನೋವನ್ನೆಲ್ಲ ಹೊರಗೆಡಹಿ ನಾನ್‌ಸ್ಟಾಪ್ ಆಗಿ ವಿಶದೀಕರಿಸಿದನು: 'ಆಕಳಿನ ಸೆಗಣಿಗಾದರೆ ಅಷ್ಟೊಂದು ಗೌರವವಿರುವಾಗ, ನನ್ನದಕ್ಕೆ ತಾತ್ಸಾರವೇಕೆ? ಅಮೆಝಾನ್‌ನಲ್ಲೂ ಮಾರಾಟವಾಗುವ ಕೌ-ಡಂಗ್ ಅನ್ನು ಅಷ್ಟೊಂದು ಪೂಜ್ಯಭಾವದಿಂದ ಕಾಣುವವರು ಬುಲ್‌ಶಿಟ್ ಎಂದರೆ ಮಾತ್ರ ಹೀಗಳೆಯುವುದೇಕೆ? ಹೋಗಿಹೋಗಿ ಮನುಷ್ಯರ ಹಸಿಸುಳ್ಳಿನ ಕಂತೆಗಳನ್ನು ಬುಲ್‌ಶಿಟ್ ಎನ್ನುವುದೇಕೆ? ಈಗೀಗಂತೂ ಬುಲ್‌ಶಿಟ್ ಎಂಬ ಪದಪ್ರಯೋಗ ಎಷ್ಟು ಕಾಮನ್ ಆಗಿಬಿಟ್ಟಿದೆಯೆಂದು ಎಣಿಸಿಕೊಂಡರೆ ಬೇಜಾರಾಗುತ್ತದೆ...'



ನಂದಿಯ ಅಳಲಿನಲ್ಲಿ ಅಂಥದ್ದೇನೂ ಹುರುಳಿಲ್ಲ ಅನಿಸಿತು ಶಿವನಿಗೆ. ಬುಲ್‌ಶಿಟ್ ಎಂದಮಾತ್ರಕ್ಕೇ ಅದರಲ್ಲಿ ಅವಮಾನವಾಗೋದೇನಿದೆ? ಆದರೆ ನಂದಿ ಮಾತ್ರ ಪಟ್ಟುಹಿಡಿದು ಕುಳಿತಿದ್ದನು. ಅವನು ಈ ಅಹವಾಲನ್ನು ಶಂಭೋಶಂಕರನ ಬಳಿಗೆ ತರುವ ಮೊದಲು ಸಾಕಷ್ಟು ತಯಾರಿಯನ್ನೂ ನಡೆಸಿದ್ದನು; ಟಿಪ್ಪಣಿಗಳನ್ನು ಬರೆದಿಟ್ಟುಕೊಂಡಿದ್ದನು. ಇಂಟರ್‌ನೆಟ್‌ನಲ್ಲೂ ಒಂದಿಷ್ಟು ಸರ್ಚಿಸಿ ಮಾಹಿತಿ ಸಂಗ್ರಹ ಮಾಡಿಟ್ಟುಕೊಂಡಿದ್ದನು. ಅವನ್ನೆಲ್ಲ ಒಂದೊಂದಾಗಿ ಹೊರತೆಗೆದು ತೋರಿಸಿದನು. 'ನೋಡಿ ಪ್ರಭೂ, ಇವನ್ಯಾರೋ ಹ್ಯಾರಿ ಎಂಬುವವ ಬುಲ್‌ಶಿಟ್ ಬಗ್ಗೆ ಪ್ರೌಢ ಪ್ರಬಂಧ ಬರೆದಿದ್ದಾನೆ. ಇಲ್ಲಿ ನೋಡಿ' ಎಂದಾಗ ಶಿವನಿಗೆ ಆಶ್ಚರ್ಯ. 'ಯಾರು? ನಮ್ಮ ಶ್ರೀಹರಿ ನಿನ್ನ ಬಗ್ಗೆ ತಮಾಷೆ ಮಾಡಿದ್ನಾ?' ಎಂದು ಕೇಳಿದನು, ನಂದಿಯನ್ನು ಛೇಡಿಸಲೆಂಬಂತೆ.

ಅಲ್ಲ ಮಹಾಪ್ರಭೂ. ಶ್ರೀಹರಿಯಲ್ಲ. ಹ್ಯಾರಿ ಜಿ. ಫ್ರಾಂಕ್‌ಫರ್ಟ್ ಎಂಬಾತ ಅಮೆರಿಕದ ಪ್ರಿನ್ಸ್‌ಟನ್ ಯುನಿವರ್ಸಿಟಿಯಲ್ಲಿ ಫಿಲಾಸಫಿ ಪ್ರೊಫೆಸರ್. 1986ರಲ್ಲಿ ಬುಲ್‌ಶಿಟ್ ಬಗ್ಗೆ ಯಾವುದೋ ಒಂದು ಮ್ಯಾಗಜಿನ್‌ನಲ್ಲಿ ಅವನೊಂದು ಪ್ರಬಂಧ ಬರೆದಿದ್ದಾನೆ. ಅದರ ಶೀರ್ಷಿಕೆಯನ್ನು On Bullshit ಎಂದು ಇಟ್ಟಿದ್ದಾನೆ. ಪ್ರಬಂಧದ ಮೊತ್ತಮೊದಲ ವಾಕ್ಯದಲ್ಲೇ One of the most salient features of our culture is that there is so much bullshit... ಎಂದು ಬೋಲ್ಡಾಗಿ ಬರೆದಿದ್ದಾನೆ. ಮುಂದೆ ಈ ಪ್ರಬಂಧದಲ್ಲಿ ಬುಲ್‌ಶಿಟ್ ಎಂದರೇನು, ಅಪ್ಪಟ ಸುಳ್ಳಿಗಿಂತ ಅದು ಹೇಗೆ ಭಿನ್ನ, ಬುಲ್‌ಶಿಟ್ ಒಂದು ಫಲಿತಾಂಶ ಮಾತ್ರವಲ್ಲ ಅದೊಂದು ಪ್ರಕ್ರಿಯೆ ಕೂಡ... ಅಂತೆಲ್ಲ ಕೊರೆದಿದ್ದಾನೆ. ಪ್ರಬಂಧ ಸಾಕಷ್ಟು ಜನಪ್ರಿಯವಾದ ಮೇಲೆ ಅದನ್ನೇ ಪುಸ್ತಕವಾಗಿ ಪ್ರಕಟಿಸಿದ್ದಾನೆ!'.

'ಹೋಗಲಿ ಬಿಡು, ಅವನೊಬ್ಬ ತತ್ತ್ವಜ್ಞಾನಿ. ಬುಲ್‌ಶಿಟ್ ಬಗ್ಗೆ ತನಗೆ ತಿಳಿದಷ್ಟನ್ನು ಇತರ ಹುಲುಮಾನವರಿಗೆ ತಿಳಿಸುವ ಪ್ರಯತ್ನ ಮಾಡಿದ್ದಾನೆ. ನೀನದನ್ನು ಅಷ್ಟೊಂದು ಪರ್ಸನಲ್ ಆಗಿ ತಗೊಳ್ಳುವ ಆವಶ್ಯಕತೆಯಿಲ್ಲ...' ನಂದಿಯನ್ನು ಸಮಾಧಾನಿಸಿದನು ನಂಜುಂಡ. 'ಆ ಒಬ್ಬ ಪ್ರೊಫೆಸರ್ ಅಷ್ಟೇ ಅಲ್ಲ ಪ್ರಭೂ, ಇಲ್ನೋಡಿ ಜಗದ್ವಿಖ್ಯಾತ ಎಂ.ಐ.ಟಿಯ ಕೆಲ ಕಿಡಿಗೇಡಿ ಸ್ಟೂಡೆಂಟ್ಸು ಸೇರಿ ಬುಲ್‌ಶಿಟ್ ಗೆಜೆಟ್ ಎಂಬ ವೆಬ್‌ಸೈಟ್ ಮಾಡಿದ್ದಾರೆ. ಅದರಲ್ಲಂತೂ ಸರ್ವಂ ಬುಲ್‌ಶಿಟ್‌ಮಯಂ. ಅವರ ಪ್ರಕಾರ ಬುಲ್‌ಶಿಟ್ ಅಧ್ಯಯನಕ್ಕೇ ಒಂದು ಹೊಸ ಶಾಖೆ ಇದೆಯಂತೆ Tauroscatology ಎಂದು ಅದರ ಹೆಸರಂತೆ. ಈ ಮೆಸ್ಸಾಚುಸೆಟ್ಸ್ ಇನ್‌ಸ್ಟಿಟ್ಯೂಟ್ ಆಫ್ ಟೌರೊಸ್ಕಾಟೊಲೊಜಿಯವರೆಲ್ಲ ಬುದ್ಧಿವಂತರೇನೊ ಹೌದು, ಆದರೆ ಬುದ್ಧಿವಂತಿಕೆಯನ್ನು ಇಂಥದಕ್ಕಾ ಉಪಯೋಗಿಸೋದು?'- ನಂದಿಯ ವಾದ ಮುಂದುವರಿಯಿತು. ನಂದಿ ಇಷ್ಟೆಲ್ಲ ಹೋಮ್‌ವರ್ಕ್ ಮಾಡಿಟ್ಟಿದ್ದಾನೆಂದು ಅಂದುಕೊಂಡಿರಲಿಲ್ಲ ಶಿವ. 'ಮುಂದ?' ಎಂದ 'ರಾಮ ಶಾಮ ಭಾಮ'ದ ಕಮಲಹಾಸನ್‌ನಂತೆ.

'ಇಲ್ಲಿ ಇನ್ನೊಂದಿದೆ. ಇದು ಬುಲ್‌ಶಿಟ್ ಬಿಂಗೋ ಎಂಬ ಒಂದು ಆಟವಂತೆ, ಹೌಸಿ-ಹೌಸಿ ಅಥವಾ ತಂಬೋಲಾ ಇದ್ದಹಾಗೆ. ಮೀಟಿಂಗ್‌ಗಳಲ್ಲಿ, ಸೆಮಿನಾರ್‌ಗಳಲ್ಲಿ ತೂಕಡಿಕೆ ನಿದ್ದೆ ಬರದಂತೆ ಸುಲಭೋಪಾಯ. ಮೀಟಿಂಗ್‌ಗಳಲ್ಲಿ ಸಾಮಾನ್ಯವಾಗಿ ಮೇಲಿಂದಮೇಲೆ ಕೇಳಿಬರುವ ಮ್ಯಾನೇಜ್‌ಮೆಂಟ್ ಪದಗಳನ್ನು ಬಿಂಗೋ ಟಿಕೆಟ್‌ನಂತೆ ಪ್ರಿಂಟ್ ಮಾಡಿರುತ್ತಾರೆ. ಒಂದೊಂದು ಪದ ಮೀಟಿಂಗ್‌ನಲ್ಲಿ ಪ್ರಸ್ತಾಪವಾಗುತ್ತಿದ್ದಂತೆ ಅದನ್ನು ಟಿಕ್ ಮಾಡಬೇಕು. ಐದು ಪದಗಳ ಸಾಲು ಅಥವಾ ಸ್ತಂಭವನ್ನು ಮೊದಲು ಕಂಪ್ಲೀಟ್ ಮಾಡಿದವರು ಎದ್ದುನಿಂತು 'ಬುಲ್‌ಶಿಟ್!' ಎಂದು ಗಟ್ಟಿಯಾಗಿ ಕಿರುಚಬೇಕು. ಆಟದ ಕಲ್ಪನೆಯಿಂದೇನೊ ನನಗೂ ನಗು ಬಂತು, ಆದರೆ ಮತ್ತೆ ಬುಲ್‌ಶಿಟ್ ಅಂತ ಇರೋದನ್ನು ಊಹಿಸಿದ ಕೂಡಲೇ ಅಳು... ಏನಾದ್ರೂ ಮಾಡಿ ಇದನ್ನು ನಿಲ್ಲಿಸಬೇಕು ಮಹಾಪ್ರಭೂ...' ನಂದಿ ಗೋಗರೆಯುತ್ತ ಮುಂದುವರಿಸಿದನು. 'ನಿಜ್ವಾಗ್ಲೂ ಹೇಳ್ತೇನೆ ಸ್ವಾಮೀ. ಭೂಲೋಕದಲ್ಲಿ ಈಗ ಬುಲ್‌ಶಿಟ್ ಎಷ್ಟು ಗಬ್ಬೆಬ್ಬಿಸಿದೆಯೆಂದರೆ ರಾಜಕಾರಣಿಗಳ ಉಕ್ತಿಗಳೆಲ್ಲ ಬುಲ್‌ಶಿಟ್ ಅಂತ ಆಗತಾನೆ ಹುಟ್ಟಿದ ಮಗುವಿಗೂ ಗೊತ್ತು. ಮಾಧ್ಯಮಗಳ ಸರಕು ಸಹ ಬಹುಪಾಲು ಬುಲ್‌ಶಿಟ್ಟೇ. If you can't dazzle them with your brilliance, baffle them with your bullshit ಎಂಬುದೇ ಅವರ ಮಂತ್ರ! ಕೊನೆಗೆ ಆಕ್ಸ್‌ಫರ್ಡ್ ಡಿಕ್ಷನರಿಯಲ್ಲೂ bullshit ಸೇರಿಕೊಂಡಿದೆಯೆಂದರೆ ಎಲ್ಲಿಗೆ ಬಂತು ಕಾಲ!'.

'ನಂದಿ, ಮಂದಿ ಏನಾದ್ರೂ ಅನ್ಲಿ ಬಿಡು, ಅದು ಅವರವರ ಸಿ(ಶಿ)ಟ್ಟೇ ಹೊರತು ನೀನು ಅದನ್ನು ನಿನ್ನದೆಂದು ತಲೆಗೆ ಹಚ್ಚಿಕೊಳ್ಳಬೇಡ. ನಿನ್ನ ಕೆಲಸ ನೀನು ಮಾಡ್ಕೊಂಡಿರು' ಎಂದಷ್ಟೇ ಶಿವನ ಉತ್ತರ. ಅಂತೂ ತನ್ನ ಸಮಸ್ಯೆಗೆ ಪರಿಹಾರದ ವಿಚಾರ ಶಿವನಿಂದ ಬರುವ ಸೂಚನೆ ಇಲ್ಲವೆಂದು ನಂದಿ ನಿರಾಶನಾದನು.

ಹ್ಯಾರಿ ಫ್ರಾಂಕ್‌ಫರ್ಟ್ ಅಂದಿದ್ದು ನಿಜ. ಬುಲ್‌ಶಿಟ್ ಈಗ ಭೂಲೋಕದಲ್ಲಿ ಹಾಸುಹೊಕ್ಕಾಗಿದೆ. ಅದನ್ನು ಕಿತ್ತೊಗೆಯುವುದು ಕಷ್ಟವೇ ಇದೆ. ಆದರೆ ಸ್ವಲ್ಪವಾದರೂ ಬದಲಾವಣೆ ತರಲು, ಅಂದರೆ ಬುಲ್‌ಶಿಟ್ ಎಂಬ ಪದಪ್ರಯೋಗ ಕಡಿಮೆ ಮಾಡಲು ಏನು ಮಾಡಬಹುದೆಂದರೆ ಅದಕ್ಕೆ ಬೇರೆ ರೂಪ ಕೊಡಬಹುದು. ಬುಲ್‌ಶಿಟ್ ಎನ್ನುವ ಬದಲು ಸುಸಂಸ್ಕೃತವಾಗಿ 'ವೃಷಭವಿಸರ್ಜಿತ' ಎನ್ನಬಹುದು. ಅದಕ್ಕೆ ಸ್ವಲ್ಪ ಗಾಂಭೀರ್ಯವಾದರೂ ಬರಬಹುದು. ಆ ಬಗ್ಗೆ ಶಿವನ ಸಮ್ಮತಿಯನ್ನು ತಿಳಿಯೋಣವೆನ್ನಿಸಿ 'ಮಹಾಪ್ರಭೂ, ಇನ್ನು ಮುಂದೆ ಭೂಲೋಕವಾಸಿಗಳು ಬುಲ್‌ಶಿಟ್ ಎನ್ನುವ ಬದಲು ವೃಷಭವಿಸರ್ಜಿತ ಎಂದು ಹೇಳಬೇಕು. ಆ ರೀತಿ ಆಜ್ಞೆಯನ್ನಾದರೂ ಹೊರಡಿಸುತ್ತೀರಾ?' ನಂದಿ ಕೈಮುಗಿದು ಬೇಡಿದನು. ಶಿವನ ಉದ್ಗಾರ ಏನಿರಬಹುದೆಂದು ನೀವೇ ಊಹಿಸಿ!

ಅಂದಹಾಗೆ ಈ ಪೌರಾಣಿಕ ಕಥಾನಕವನ್ನು ಒಂದಾನೊಂದು ಕಾಲದಲ್ಲಿ ನಾನೇ ಹೊಸೆದದ್ದು. ಹೌದಾ? ಹಾಗಾದರೆ ಇದು ನಂ.1 ಬುಲ್‌ಶಿಟ್ ಎಂದು ನೀವೀಗ ಜರಿದರೂ ಪರವಾಗಿಲ್ಲ. ನನಗೇನೂ ಬೇಸರವಾಗುವುದಿಲ್ಲ. ನಿಜವಾಗಿಯಾದರೆ ಈ ಕಥಾನಕ ಹುಟ್ಟುವುದಕ್ಕೂ ಒಂದು ಬುಲ್‌ಶಿಟ್ಟೇ ಕಾರಣ. ಆ ಕಾಲದಲ್ಲಿ ನಾನು 'ವಿಚಿತ್ರಾನ್ನ' ಎಂಬ ಅಂಕಣ ಬರೆಯುತ್ತಿದ್ದೆ. ಒಂದು ವಾರದ ಅಂಕಣಬರಹಕ್ಕೆ ಓದುಗಮಿತ್ರರೊಬ್ಬರು ಮನದಾಳದಿಂದ ಪ್ರಾಮಾಣಿಕ ಪ್ರತಿಕ್ರಿಯೆ ಬರೆದುಕಳಿಸಿದರು. ಇಂಗ್ಲಿಷ್‌ನಲ್ಲಿ ಒಂದೇ ಶಬ್ದದ ಪ್ರತಿಕ್ರಿಯೆ ಅದು, 'ಬುಲ್‌ಶಿಟ್!' ಎಂದು. ನಾನು ಸ್ವಲ್ಪವೂ ಬೇಸರ ಮಾಡಿಕೊಳ್ಳಲಿಲ್ಲ. ಯಾಕಾದರೂ ಬೇಸರವಾಗಬೇಕು? ನೆಕ್ಸ್ಟ್ ವಾರದ ಅಂಕಣದಲ್ಲಿ ಈ ಕಾಲ್ಪನಿಕ ಕಥೆಯನ್ನು ನಸುನಗುತ್ತಲೇ ಬರೆದೆ. ಓದುಗಮಿತ್ರರು ಗಹಗಹಿಸಿ ನಗುವ ಇಮೋಜಿ ಕಳುಹಿಸಿದರು. ಬುಲ್‌ಶಿಟ್ಟನ್ನು ಬುಲ್‌ಶಿಟ್ಟಿಂದಲೇ ಗೆಲ್ಲಬಹುದು ಎಂದುಕೊಂಡೆ. ಹಾಗಾಗಿ, ಇನ್ನುಮುಂದೆ ನಿಮಗೆ ಯಾರಾದರೂ ಬುಲ್‌ಶಿಟ್ ಎಂದರೆ ಟೇಕ್ ಇಟ್ ಈಸಿ!

ಹೀಗೊಂದು ರಾಜಕೀಯ ಟೂರು



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಕರ್ನಾಟಕದ ರಾಜಕಾರಣಿಗಳು ಪಾದಯಾತ್ರೆ ನಡೆಸಿ ತಮ್ಮ ಉದ್ದೇಶ ಸಾರ್ಥಕ ಪಡಿಸಿಕೊಂಡ ಉದಾಹರಣೆಗಳು ಬೇಕಾದಷ್ಟಿವೆ. ಅವುಗಳ ಪೈಕಿ ಸಿದ್ದರಾಮಯ್ಯನವರ ‘ಬಳ್ಳಾರಿ ಪಾದಯಾತ್ರೆ’ ಬಹಳ ಪ್ರಸಿದ್ಧವಾದುದು ಎನ್ನಬಹುದು. ಕಾರಣ, ಯಡಿಯೂರಪ್ಪ ನೇತೃತ್ವದ ಬಲಿಷ್ಠ ಬಿಜೆಪಿಯನ್ನು ಸೋಲಿಸಿ ಕಾಂಗ್ರೆಸ್ ಅಧಿಕಾರಕ್ಕೆ ಬರುವಂತಾಗುವಲ್ಲಿ ಮತ್ತು ಆಗತಾನೆ ಕಾಂಗ್ರೆಸ್ ಸೇರಿದ್ದ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗುವಲ್ಲಿ ಈ ಪಾದಯಾತ್ರೆ ದೊಡ್ಡಮಟ್ಟದ ಪಾತ್ರ ವಹಿಸಿತು.

ಈಗಿನ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು 2022ರಲ್ಲಿ ಮೇಕೆದಾಟು ಯೋಜನೆಗಾಗಿ ಪಾದಯಾತ್ರೆಯನ್ನು ಕೈಗೊಂಡಿದ್ದರು ಮತ್ತು ಅದರಿಂದ ಕಾಂಗ್ರೆಸ್ ಪರವಾದ ಜನಾಭಿಪ್ರಾಯವನ್ನು ಹೊಮ್ಮಿಸಲು ಬಹುಮಟ್ಟಿಗೆ ಯಶಸ್ವಿಯಾಗಿದ್ದರು. ಕಾವೇರಿ ಜಲವಿವಾದಕ್ಕೆ ಸಂಬಂಧಿಸಿ ರಾಮಕೃಷ್ಣ ಹೆಗಡೆಯವರ ಸಲಹೆಯಂತೆ ಮಾಜಿ ಸಿಎಂ ಎಸ್.ಎಂ. ಕೃಷ್ಣ ಕೂಡ ರೈತರ ಪರ ಪಾದಯಾತ್ರೆ ನಡೆಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಇನ್ನು ನಾಯಕ ರಾಹುಲ್ ಗಾಂಧಿಯವರ ಇತ್ತೀಚಿನ ‘ಭಾರತ್ ಜೋಡೋ’ ಪಾದಯಾತ್ರೆಯಂತೂ ತನಗೆ ಮರುಜೀವ ತಂದುಕೊಟ್ಟಿತು ಎಂದು ಕಾಂಗ್ರೆಸ್ ಹೇಳಿಕೊಳ್ಳುತ್ತದೆ. ಹಾಗಾಗಿ, ರಾಜಕೀಯ ನೆಲೆಯಲ್ಲಿ ಪಾದಯಾತ್ರೆಗಳ ತಂತ್ರ ಇನ್ನೂ ಹಳಸಿಲ್ಲ, ಪ್ರಸ್ತುತವಾಗೇ ಇದೆ ಎನ್ನಬಹುದು. ಸರಕಾರದ ವಿರುದ್ಧವಾಗಿ ಸಾರ್ವಜನಿಕರ ಗಮನ ಸೆಳೆಯಲು ವಿಪಕ್ಷಗಳು ಈ ತರಹದ ಹೋರಾಟಗಳನ್ನು ಸಂಘಟಿಸುವುದು ಹೊಸದೇನಲ್ಲ. ಅದು ಸಾಮಾನ್ಯವಾಗಿ ಚುನಾವಣೆಯ ಆಜುಬಾಜಿನಲ್ಲಿ ನಡೆಯುತ್ತಿತ್ತು. ಆದರೆ ಈ ಬಾರಿ ಸರಕಾರ ಈಗತಾನೇ ವಾರ್ಷಿಕೋತ್ಸವ ಆಚರಿಸಿಕೊಂಡ ಹೊತ್ತಿನಲ್ಲೇ ವಿರೋಧಿಗಳು ಎದ್ದುನಿಂತಿರುವುದು ಆಶ್ಚರ್ಯವೆನಿಸುವಂತಿದೆ. ಅಂತೂ, ಸದ್ಯದ ಮಟ್ಟಿಗೆ ಬಿಜೆಪಿ-ಜೆಡಿಎಸ್‌ನ ಪಾದಯಾತ್ರೆ, ಅದಕ್ಕೆ ಪ್ರತಿಯಾಗಿ ಕಾಂಗ್ರೆಸ್‌ನ ಜನಾಂದೋಲನ ಯಾತ್ರೆ ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲೆ ಧೂಳೆಬ್ಬಿಸುತ್ತಿರುವುದಂತೂ ಸತ್ಯ.

ಒಂದು ದೃಷ್ಟಿಯಿಂದ, ಬಿಜೆಪಿ ನೇತೃತ್ವದ ಮೈತ್ರಿಕೂಟವು ಹೋರಾಟ ಮಾಡುತ್ತಿರುವುದರಲ್ಲಿ ತಪ್ಪೇನಿಲ್ಲ; ಆಡಳಿತಾರೂಢ ಕಾಂಗ್ರೆಸ್ ಸರಕಾರದ ಆರೋಪ ಕೇಳಿಬಂದಾಗ ಅದನ್ನು ಖಂಡಿಸಿ ದಾಖಲೆಗಳ ಮೂಲಕ ಹೊರಗೆಳೆದು, ಜನರ ಮುಂದಿಟ್ಟು ಜನಾಭಿಪ್ರಾಯ ಮೂಡಿಸುವುದು ಒಂದು ವಿಪಕ್ಷವಾಗಿ ಅದರ ಕರ್ತವ್ಯ ಕೂಡ. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭಾಗಿಯಾಗಿದ್ದಾರೆ ಎನ್ನಲಾಗುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಸಾವಿರಾರು ಕೋಟಿ ರು. ಹಗರಣ ಮತ್ತು ಕರ್ನಾಟಕ ಸರಕಾರದ ಕೆಲ ಮಂತ್ರಿಗಳು ಹಾಗೂ ಶಾಸಕರು ಭಾಗಿಯಾಗಿದ್ದ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಸುಮಾರು 187 ಕೋಟಿ ರು. ಹಣವನ್ನು ಸಾರಾಸಗಟಾಗಿ ನೂರಾರು ಜನರ ಖಾತೆಗೆ ವರ್ಗಾವಣೆ ಮಾಡಲಾಗಿದೆ ಎಂಬುದು ಇಲ್ಲಿನ ಆರೋಪ. ಎಸ್‌ಸಿ/ಎಸ್‌ಟಿ ಕಲ್ಯಾಣ ಕಾರ್ಯಗಳಿಗಾಗಿ ಮೀಸಲಿರಿಸಿದ್ದ ಈ ಹಣವನ್ನು ಕಾಂಗ್ರೆಸ್ ಪಕ್ಷವು ಲೋಕಸಭಾ ಚುನಾವಣೆಗೆ ಬಳಸಿಕೊಂಡು ಹಗರಣವೆಸಗಿದೆ ಎನ್ನುವ ಸಂಗತಿ ಮುಂದು ಮಾಡಿಕೊಂಡು ಸಿದ್ದರಾಮಯ್ಯರನ್ನು ಕೆಳಕ್ಕಿಳಿಸುವುದು ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಸ್ಪಷ್ಟ ಉದ್ದೇಶವಾಗಿದೆ. ಈ ಕಾರ್ಯತಂತ್ರಕ್ಕೆ ಪ್ರತಿಯಾಗಿ ಕಾಂಗ್ರೆಸ್ ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಮತ್ತು ಬಿಜೆಪಿ ಅಧಿಕಾರದಲ್ಲಿದ್ದಾಗ ಮಾಡಿತೆನ್ನಲಾದ ಹಗರಣಗಳನ್ನು ಜನರ ಮುಂದಿಡಲು ಇದೇ ಮಾರ್ಗದಲ್ಲಿ ಸಾಗಿ ಅವರಿಗಿಂತ ಒಂದು ದಿನ ಮುಂಚೆ ಜನಾಂದೋಲನ ಸಭೆ ಏರ್ಪಡಿಸಿತು. ಪ್ರತಿಪಕ್ಷದ ಪಾದಯಾತ್ರೆಯ ದಾರಿ ತಪ್ಪಿಸುವ ಈ ಪ್ರಯತ್ನವು ‘ಉಲ್ಟಾ ಚೋರ್, ಕೊತ್ವಾಲ್ ಕೊ ಡಾಂಟಾ’ ಎಂಬಂತಾಗಿದೆ ಎನ್ನುವುದು ಮೈತ್ರಿಕೂಟದ ಅಂಬೋಣ.

ಯಾರ ಹತ್ತಿರ ಎಷ್ಟು ದುಡ್ಡಿದೆ, ಎಲ್ಲೆಲ್ಲಿ ಬೇನಾಮಿ ಆಸ್ತಿಯಿದೆ, ಕಡಿಮೆ ಸಮಯದಲ್ಲಿ ದುಡ್ಡು ದ್ವಿಗುಣವಾಗಲು ಯಾವ ಬೆಳೆ ತೆಗೆಯಬೇಕು? ಮಾಜಿ ಪ್ರಧಾನಿ ದೇವೇಗೌಡರು ರಾಜಕೀಯಕ್ಕೆ ಬರುವಾಗ ಎಷ್ಟು ಸಂಪನ್ಮೂಲಗಳ ಜತೆಗೆ ಬಂದಿದ್ದರು? ಅವರ ಮಕ್ಕಳ ಈಗಿನ ಆಸ್ತಿಯ ಲೆಕ್ಕಾಚಾರವೆಷ್ಟು? ಡಿ.ಕೆ.ಶಿವಕುಮಾರ್ ಅವರ ತಂದೆ ಚಿನ್ನ ಅಳೆಯುತ್ತಿದ್ದರಾ? ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣದೇವರಾಯ ಇವರಿಂದಲೇ ನಗ-ನಾಣ್ಯಗಳನ್ನು ಒಯ್ಯುತ್ತಿದ್ದನಾ? ಎಂಬೆಲ್ಲಾ ವಿಚಾರಗಳ ಕುರಿತಾದ ಚರ್ಚೆ ಮತ್ತು ಲೆಕ್ಕಾಚಾರಗಳು ಈಗ ಬೆಂಗಳೂರು-ಮೈಸೂರು ರಸ್ತೆಯ ಮೇಲೆ ನಡೆಯುತ್ತಿವೆ. ರಸ್ತೆಯಲ್ಲಿ ನಿಂತು ಎಲ್ಲರೂ ಮತ್ತೊಬ್ಬರ ಬಂಡವಾಳವನ್ನು ಬಿಚ್ಚಿಡುವ ಮಾತನಾಡುತ್ತಿದ್ದಾರೆ. ರಾಜ್ಯಾದ್ಯಂತ ಸುರಿದ ಭಾರಿ ಮಳೆ, ಅದರಿಂದಾದ ನೆರೆ, ಗುಡ್ಡ ಕುಸಿತದಂಥ ಅನಾಹುತಗಳು ಮತ್ತು ಮನೆ-ಮಠ ಕಳೆದುಕೊಂಡವರ ಗೋಳು, ವರ್ಗಾವರ್ಗಿ ದಂಧೆಯಿಂದಾದ ಅಧಿಕಾರಿಯ ಬಲಿ ಮುಂತಾದ ಸಮಸ್ಯೆಗಳನ್ನೆಲ್ಲಾ ಉಪೇಕ್ಷಿಸಿ, ರಾಜ್ಯ ರಾಜಕಾರಣವು ಒಂದು ವಾರದಿಂದ ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲೆ ಬಂದು ನಿಂತು, ಪರಸ್ಪರ ಕೆಸರೆರಚಾಟದಲ್ಲಿ ನಿರತವಾಗಿದೆ.

ಸರಕಾರದ ಮಂತ್ರಿಗಳಿಗೆ ನೆರೆಪೀಡಿತ ಪ್ರದೇಶಗಳಿಗೆ ಹೋಗಲು ವ್ಯವಧಾನವಿಲ್ಲ ಮತ್ತು ನೀತಿ ಆಯೋಗದ ಸಭೆಗೆ ಹೋಗಿ ರಾಜ್ಯದ ಅಭಿವೃದ್ಧಿಯ ಕುರಿತು ಕೇಂದ್ರ ಸರಕಾರದ ಜತೆ ಚರ್ಚಿಸಲಂತೂ ಪುರುಸೊತ್ತೇ ಇಲ್ಲ. ವಿರೋಧ ಪಕ್ಷಗಳನ್ನು ಬಿಡಿ, ಒಂದು ಜಾಗದಲ್ಲಿ ಕುಳಿತು ಆಡಳಿತ ನಡೆಸಬೇಕಾದ ಮತ್ತು ಸರಕಾರದಲ್ಲಿ ನಿರ್ಧಾರ ಕೈಗೊಳ್ಳಬೇಕಾದ ಸ್ಥಾನದಲ್ಲಿರುವ ಎಲ್ಲಾ ಪ್ರಮುಖ ಮಂತ್ರಿ ಮಹೋದಯರೂ ಕಳೆದೊಂದು ವಾರದಿಂದ ರಸ್ತೆಯ ಮೇಲೆಯೇ ಇದ್ದಾರೆ.

‘ವಾಲ್ಮೀಕಿ ನಿಗಮದಲ್ಲಿ ಹಗರಣವಾಗಿರುವುದು ನಿಜ; ಆದರೆ ಬಿಜೆಪಿಯವರು ಹೇಳುತ್ತಿರುವಂತೆ ಅದು 187 ಕೋಟಿ ಅಲ್ಲ, ಬರೀ 88 ಕೋಟಿ ರು. ಅಷ್ಟೇ’ ಎಂದು ಸ್ವತಃ ಮುಖ್ಯಮಂತ್ರಿಗಳು ಸದನದಲ್ಲಿ ಸ್ಪಷ್ಟೀಕರಣ ನೀಡುತ್ತಾರೆ. ಅಲ್ಲದೆ, ಸೋರಿಹೋಗಿದ್ದ ಹಣವನ್ನು ಸಂಪೂರ್ಣವಾಗಿ ವಾಪಸು ಪಡೆಯಲಾಗಿದೆ ಎನ್ನುವ ಮೂಲಕ ಉಪಮುಖ್ಯಮಂತ್ರಿಗಳು ತಮಗೆ ತಾವೇ ‘ಶಹಬ್ಬಾಸ್’ ಕೊಟ್ಟುಕೊಂಡಿದ್ದಾರೆ. ‘ಇದು ಅಧಿಕಾರಿಗಳ ಯಡವಟ್ಟಿನಿಂದ ಆದ ಹಗರಣವೇ ವಿನಾ, ಇದರಲ್ಲಿ ಯಾವ ಶಾಸಕರು ಮತ್ತು ಮಂತ್ರಿಗಳೂ ಭಾಗಿಯಾಗಿಲ್ಲ. ನಾವು ಎಸ್‌ಐಟಿ ತನಿಖೆ ನಡೆಸುತ್ತಿದ್ದೇವೆ’ ಎಂದು ಶಿವಕುಮಾರ್ ಅವರು ಹೇಳುತ್ತಿರುವಾಗಲೇ, ಇದ್ದಕ್ಕಿದ್ದಂತೆ ‘ಇ.ಡಿ’ ಪ್ರತ್ಯಕ್ಷವಾಗಿ ಒಬ್ಬ ಮಂತ್ರಿಯನ್ನು ಸಹ ಬಂಧಿಸಿ ವಿಚಾರಣೆಗೆ ಶುರುವಿಟ್ಟುಕೊಂಡಿದೆ. ನಿಗಮದ ಅಧಿಕಾರಿಯೊಬ್ಬ ಆತ್ಮಹತ್ಯೆ ಮಾಡಿಕೊಂಡು ಅದು ಸುದ್ದಿಯಾಗದಿದ್ದಿದ್ದರೆ, ಇಷ್ಟೊತ್ತಿಗೆ 187 ಕೋಟಿಯೂ ಹರಿದು ಹಂಚಿಹೋಗುತ್ತಿತ್ತು. ಈ ನಿಗಮದ ಫಲಾನುಭವಿ ಸಮುದಾಯದ ನಾಯಕರು ಬೀದಿಗಿಳಿದು ಹೋರಾಟ ಮಾಡುತ್ತಾರೆ ಎಂದು ನಿರೀಕ್ಷಿಸಲಾಗಿತ್ತು. ಆದರೇಕೋ ಹಾಗಾಗಲಿಲ್ಲ. ಅವರುಗಳು ತುಟಿಬಿಚ್ಚದಂತೆ ನೋಡಿಕೊಂಡಿರುವುದು ನಿಜಕ್ಕೂ ಸರಕಾರದ ದೊಡ್ಡ ಸಾಧನೆಯೇ ಸರಿ.

ಪಾದಯಾತ್ರೆಯಲ್ಲಿ ಸರಕಾರದ ಹಗರಣಗಳನ್ನು ಜನಮಾನಸದಲ್ಲಿ ಬಿಂಬಿಸಿ ಒತ್ತಡ ಹೇರುವ ಉದ್ದೇಶದ ಜತೆಜತೆಗೆ ಕುಟುಂಬ ಹಿತಾಸಕ್ತಿಯುಳ್ಳ ಬಿಜೆಪಿ ಮತ್ತು ಜೆಡಿಎಸ್‌ನ ಅಗ್ರಗಣ್ಯ ನಾಯಕರುಗಳು ತಮ್ಮ ಮುಂದಿನ ತಲೆಮಾರನ್ನು ಮುಂಚೂಣಿಗೆ ತರುವ ತಂತ್ರಗಾರಿಕೆಯೂ ಈ ಪಾದಯಾತ್ರೆಯ ಸಡಗರದಲ್ಲಿ ಅಡಗಿರುವುದು ಸ್ಪಷ್ಟವಾಗಿ ಕಾಣಿಸುತ್ತಿದೆ. ಮಕ್ಕಳನ್ನು ತಮ್ಮ ರಾಜಕೀಯ ಉತ್ತರಾಧಿಕಾರಿಗಳು ಎಂದು ಬಿಂಬಿಸಲು ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಈ ಪಾದಯಾತ್ರೆಯನ್ನು ಬಳಸಿಕೊಳ್ಳುತ್ತಿದ್ದಾರೆ ಎನ್ನುವ ಹಾಗೆ ಜನರಿಗೆ ಗೋಚರಿಸಿದ್ದರೆ ತಪ್ಪಿಲ್ಲ. ಮೈತ್ರಿಕೂಟದಲ್ಲಿ ದೊಡ್ಡ ಪಕ್ಷವೆನಿಸಿರುವ ಬಿಜೆಪಿಯ ಭವಿಷ್ಯದ ಮುಖ್ಯಮಂತ್ರಿ ಎಂದು ಬಿಂಬಿತವಾಗುತ್ತಿರುವ ಬಿ.ವೈ. ವಿಜಯೇಂದ್ರ ಅವರು ಯಾತ್ರೆಯನ್ನು ಉತ್ಸಾಹದಿಂದ ಮುನ್ನಡೆಸುತ್ತಿದ್ದಾರೆ ಎಂದು ಕಂಡುಬರುತ್ತಿದ್ದರೂ, ಕೇಂದ್ರ ಮಂತ್ರಿ ಎಚ್.ಡಿ. ಕುಮಾರಸ್ವಾಮಿ ಮತ್ತು ಅವರ ಪುತ್ರ ನಿಖಿಲ್ ಈ ಯಾತ್ರೆಯಲ್ಲಿ ಹೆಚ್ಚು ಮಿಂಚುತ್ತಿರುವುದು ಸುಳ್ಳಲ್ಲ. ವಿಧಾನಸಭಾ ಚುನಾವಣೆಯಲ್ಲಿ ಸ್ವತಂತ್ರವಾಗಿ 66 ಕ್ಷೇತ್ರಗಳಲ್ಲಿ ಮತ್ತು ಲೋಕಸಭಾ ಚುನಾವಣೆಯಲ್ಲಿ 17 ಕ್ಷೇತ್ರಗಳಲ್ಲಿ ಗೆದ್ದಿರುವ ಮೈತ್ರಿಕೂಟದ ಪ್ರಮುಖ ಪಕ್ಷವಾದ ಬಿಜೆಪಿ, ಲೋಕಸಭೆಯಲ್ಲಿ 2 ಮತ್ತು ವಿಧಾನಸಭೆಯಲ್ಲಿ 19 ಸ್ಥಾನಗಳನ್ನು ಮಾತ್ರ ಗೆದ್ದಿರುವ ಜೆಡಿಎಸ್‌ಗೆ ರಾಜ್ಯ ರಾಜಕಾರಣದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಪ್ರಾಮುಖ್ಯವನ್ನು ಕೊಡುತ್ತಿದೆ ಮತ್ತು ಕುಮಾರಸ್ವಾಮಿಯವರ ಮುಂದೆ ಬಿಜೆಪಿ ರಾಜ್ಯಘಟಕ ಮಂಡಿಯೂರಿದಂತೆ ಕಾಣುತ್ತಿದೆ ಎನ್ನುವ ಅಭಿಪ್ರಾಯ ಬಿಜೆಪಿಯ ಪಡಸಾಲೆಯಲ್ಲೇ ವ್ಯಕ್ತವಾಗುತ್ತಿದೆ. ಅದಿಲ್ಲದಿದ್ದರೆ, ‘ಪ್ರೀತಮ್ ಗೌಡ ನಮ್ಮ ಪಕ್ಷದ ಯುವಮುಖಂಡರಿದ್ದಾರೆ, ಅವರನ್ನು ಪಾದಯಾತ್ರೆಯ ಪೂರ್ವಭಾವಿ ಸಭೆಗೆ ಕರೆಯುವುದು ಬಿಡುವುದು ನಮ್ಮ ಪಕ್ಷದ ನಿರ್ಧಾರ’ ಎಂದು ಹೇಳುವ ಧೈರ್ಯವನ್ನು ವಿಜಯೇಂದ್ರ ತೋರಿಸಬೇಕಿತ್ತು. ಪಾದಯಾತ್ರೆಗೆ ಬಿಜೆಪಿಯಿಂದ ಯಾರು ಬರಬೇಕು ಅಥವಾ ಯಾರು ಬರಬಾರದು ಎಂದು ಕುಮಾರಸ್ವಾಮಿಯವರು ಹೇಳುವ ಅಗತ್ಯವಿರಲಿಲ್ಲ ತಾನೆ? ಹಾಗಾಗಿ, ಜನರ ಕಣ್ಣಿಗೆ ಕುಮಾರಸ್ವಾಮಿಯವರು ರಾಜ್ಯದಲ್ಲಿನ ಮೈತ್ರಿಕೂಟದ ಸಂಚಾಲಕರಂತೆ ಕಾಣುತ್ತಿದ್ದಾರೆ. ಆರ್.ಅಶೋಕ್ ಮತ್ತು ವಿಜಯೇಂದ್ರ ಸೇರಿದಂತೆ ಬಿಜೆಪಿಯ ರಾಜ್ಯ ನಾಯಕತ್ವವು ಕುಮಾರಸ್ವಾಮಿಯವರ ಗಾಯನಕ್ಕೆ ‘ಕೋರಸ್’ ಮಾತ್ರ ನೀಡುತ್ತಿರುವಂತೆ ತೋರುತ್ತಿದೆ.

‘ನಮ್ಮ ಜನಸ್ಪಂದನ ಕಾರ್ಯಕ್ರಮದ ಸಮಾರೋಪದಲ್ಲಿ ಮೈತ್ರಿಪಕ್ಷಗಳ ಹಗರಣಗಳೆಲ್ಲವನ್ನೂ ಒಂದೊಂದಾಗಿ ಬಿಚ್ಚಿಡುತ್ತೇವೆ’ ಎಂದು ನಮ್ಮ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳು ಮುಹೂರ್ತ ಇಡುತ್ತಲೇ ಇದ್ದಾರೆ. ಬಿಜೆಪಿಯವರು ಅಥವಾ ಜೆಡಿಎಸ್‌ನವರು ರಾಜ್ಯಕ್ಕೆ ಮೋಸಮಾಡಿದ್ದಾರೆಂಬುದು ಸರಕಾರ ನಡೆಸುತ್ತಿರುವ ಕಾಂಗ್ರೆಸ್ಸಿಗೆ ತಿಳಿದಿದೆ ಎಂದಮೇಲೆ, ಅಧಿಕಾರದಲ್ಲಿ ಇದ್ದರೂ ತನಿಖೆ ನಡೆಸದೆ ವರ್ಷಾನುಗಟ್ಟಲೆ ಸುಮ್ಮನಿರುವುದು ರಾಜ್ಯಕ್ಕೆ ಮಾಡುತ್ತಿರುವ ಪರಮ ಅನ್ಯಾಯ ಎಂದು ಜನರಿಗೆ ಅನ್ನಿಸುವುದು ಸಹಜವೇ ತಾನೆ? ಹಾಗಾಗಿ ಬರೀ ಬಿಚ್ಚಿಡುವ ಮಾತುಗಳನ್ನಾಡುವುದರಿಂದ ಪ್ರಯೋಜನವಿಲ್ಲ, ಹಗರಣಗಳನ್ನು ಬಯಲಿಗೆಳೆದು ಅವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋದರೆ ಮಾತ್ರವೇ ಅದಕ್ಕೊಂದು ಅರ್ಥ ಬರುತ್ತದೆ. ಇಲ್ಲವಾದಲ್ಲಿ, ಅದು ಬರೀ ಬೊಗಳೆಯಾಗುತ್ತದೆ ಅಷ್ಟೇ. ಒಬ್ಬರದನ್ನು ಇನ್ನೊಬ್ಬರು ಪರಸ್ಪರ ಬಿಚ್ಚಿಟ್ಟು ಕರ್ನಾಟಕದ ಜನತೆಯ ಮುಂದೆ ಎಲ್ಲಾ ‘ಖುಲ್ಲಂ ಖುಲ್ಲಾ’ ಆಗುವುದಾದರೆ ಆಗಲಿಬಿಡಿ! ಆದರೆ, ಇವರುಗಳದ್ದು ಸುಮ್ಮನೇ ಮಾತಷ್ಟೇ! ಯಾರೂ ಯಾರದ್ದನ್ನೂ ಬಿಚ್ಚಿಡುವ ಸ್ಥಿತಿಯಲ್ಲಿಲ್ಲ ಈಗ. ಒಬ್ಬರದ್ದು ಒಂದು ಹೇಳಿದರೆ, ಇನ್ನೊಬ್ಬರದ್ದು ನಾಲ್ಕು ಆಚೆಗೆ ಬರುತ್ತದೆ. ಅದಲ್ಲದಿದ್ದರೆ, 40 ಪರ್ಸೆಂಟ್ ಸರಕಾರ, ಪೇಸಿಎಂ ಸರಕಾರ ಎಂದೆಲ್ಲಾ ರಾಜ್ಯಾದ್ಯಂತ ಪುಂಗಿ ಊದಿ ಚುನಾವಣೆ ಗೆದ್ದಿದ್ದ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದು ಒಂದು ವರ್ಷ ಕಳೆದರೂ, ಬಿಜೆಪಿಯವರ ಒಂದು ಕೂದಲನ್ನೂ ಇನ್ನೂ ಕೊಂಕಿಸಲು ಆಗಿಲ್ಲವೇಕೆ? ಅದರರ್ಥ ಬಿಜೆಪಿಯ ಸರಕಾರದಲ್ಲಿ ಹಗರಣಗಳೇ ಆಗಿರಲಿಲ್ಲ ಅಂತಲ್ಲ, ಅದನ್ನು ಆಚೆಗೆ ತರಲು ಕಾಂಗ್ರೆಸ್ಸಿಗೆ ಮನಸ್ಸಿಲ್ಲ ಅಂತ ಅರ್ಥ, ಅಷ್ಟೇ. ನಾವೆಲ್ಲಾ ಪ್ರಾಥಮಿಕ ಶಾಲೆಯಲ್ಲಿದ್ದಾಗ, ಯಾರೋ ಒಬ್ಬ ಇನ್ನೊಬ್ಬನ ಪೆನ್ಸಿಲ್ ಕದ್ದು ಮೇಷ್ಟ್ರಲ್ಲಿ ಸಿಕ್ಕಿಬೀಳುತ್ತಿದ್ದ. ಹಾಗೆ ಸಿಕ್ಕಿಬಿದ್ದವನನ್ನು ವಿಚಾರಣೆ ಮಾಡುವಾಗ, ‘ಸರ್, ನಿಮಗೆ ನನ್ನ ಮೇಲೆ ದೂರು ಕೊಟ್ಟವನೂ ಹಿಂದೊಮ್ಮೆ ಕಳ್ಳತನ ಮಾಡಿದ್ದ’ ಎಂದ ಹಾಗಾಯಿತು. ಆಗಲೇ ಹೇಳಿದ್ದಿದ್ದರೆ ಈತ ಪ್ರಾಮಾಣಿಕ ಎಂದು ಹೇಳಬಹುದಿತ್ತೇನೋ! ಆದರೆ, ತಾನು ಕಳ್ಳತನ ಮಾಡಿ ಸಿಕ್ಕಿಹಾಕಿಕೊಂಡ ಮೇಲೆ, ದೂರು ಕೊಟ್ಟವನೂ ಮೊದಲು ಕಳ್ಳನಾಗಿದ್ದ ಎಂದರೆ ಇವನ ಪ್ರಾಮಾಣಿಕತೆ ಢೋಂಗಿಯದಲ್ಲದೆ ಇನ್ನೇನು? ಹಾಗಾಗಿದೆ ಕಾಂಗ್ರೆಸ್ಸಿನ ಈಗಿನ ಸ್ಥಿತಿ.

ಇನ್ನು, ಬಿಜೆಪಿಯವರ ಹಾರಾಟವು ‘ಹಾವೂ ಸಾಯಬಾರದು, ಕೋಲೂ ಮುರಿಯಬಾರದು’ ಎನ್ನುವ ಹಾಗಿದೆ. ಒಂದೆಡೆ ವರಿಷ್ಠರನ್ನೂ ಮೆಚ್ಚಿಸಬೇಕು, ಮತ್ತೊಂದೆಡೆ ಇಲ್ಲಿ ಯಾರೊಂದಿಗೂ ಕೆಟ್ಟವರಾಗಬಾರದು. ಇದಕ್ಕೆ ಪೂರಕವಾಗಿ ರಾಜ್ಯ ಬಿಜೆಪಿಯ ಕೆಲವು ಪ್ರಮುಖ ನಾಯಕರು ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹಾಳುಮಾಡಿದರು. ‘ಚುನಾವಣೆಯಲ್ಲಿನ ಸೋಲಿಗೆ ಬೊಮ್ಮಾಯಿ ಆಗಲೀ, ಮೋದಿಯಾಗಲೀ ಕಾರಣರಲ್ಲ, ಅಡ್ಜಸ್ಟ್‌ಮೆಂಟ್ ಗಿರಾಕಿಗಳು ಕಾರಣ’ ಎನ್ನುವ ಬಸನಗೌಡ ಪಾಟೀಲ್ ಯತ್ನಾಳ್ ಅವರ ಹೇಳಿಕೆ ಇಂದಿನ ರಾಜಕೀಯದ ಒಳಸುಳಿಗಳನ್ನು ಬಿಚ್ಚಿಡುತ್ತದೆ. ಹಿಂದೊಂದು-ಮುಂದೊಂದು ಎನ್ನುವ ರಾಜಕಾರಣಿಗಳ ಮನಸ್ಥಿತಿಯನ್ನು ಕರ್ನಾಟಕದ ಜನರು ಅರಿತು ಬಹಳ ಕಾಲವೇ ಆಗಿಹೋಯಿತು ಬಿಡಿ!

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಈನಾಡುಗೆ 50ರ ಸಂಭ್ರಮ



ಸಾಧನೆ-ಸೊಬಗು
ವಿ.ಹನುಮಂತಪ್ಪ
sprakashbjpgmail.com

ಪ್ರಾದೇಶಿಕ ಭಾಷಾ ಪತ್ರಿಕೆಗಳ ‘ಪಾಲಿನ’ ಪ್ರಭಂಜನದಂತೆ ಜನ್ಮತಳೆದ ‘ಈನಾಡು’ವಿನ ಯಶೋಗಾಥೆ ಒಂದು ರೋಚಕ ಇತಿಹಾಸದಂತೆ ದಾಖಲಾಗಿದೆ. ಆ ದಿನಗಳಲ್ಲಿ ಲಭ್ಯವಿದ್ದ ಕೆಲವು ತೆಲುಗು ದಿನಪತ್ರಿಕೆಗಳು ತುಂಬಾ ವಿಳಂಬವಾಗಿ ಓದುಗರ ಕೈಸೇರುತ್ತಿದ್ದವು. ಆ ಪತ್ರಿಕೆಗಳಲ್ಲಿ ಅಂತಾರಾಷ್ಟ್ರೀಯ, ರಾಷ್ಟ್ರೀಯ ಮಟ್ಟದ ಸುದ್ದಿಗಳಿಗಷ್ಟೇ ಆದ್ಯತೆ ಇರುತ್ತಿತ್ತು; ಪ್ರಾದೇಶಿಕ, ಸ್ಥಳೀಯ ಸುದ್ದಿಗಳು ಅಪರೂಪವೆಂಬಂತೆ ಅವಕಾಶ ಪಡೆಯುತ್ತಿದ್ದವು.

ತೆಲುಗು ಪತ್ರಿಕಾರಂಗದ ಈ ಸ್ಥಿತಿಯನ್ನು ಮನಗಂಡ ರೈತ ಕುಟುಂಬದ ರಾಮೋಜಿರಾವ್ ಎಂಬ ಬಿಎಸ್ಸಿ ಪದವೀಧರ ಯುವಕ ಒಂದು ಸಾಹಸಕ್ಕೆ ಕೈಹಾಕುವ ಧೈರ್ಯ ತೋರಿದ. ಅದು 1974ರ ಸಂದರ್ಭ. ವಿಶಾಖಪಟ್ಟಣದ ಹೊರವಲಯದಲ್ಲಿರುವ ಸೀತಮ್ಮಧಾರ ಎಂಬ ಪ್ರದೇಶದಲ್ಲಿ ದಿನಪತ್ರಿಕೆಯೊಂದು ಚಿಗುರೊಡೆಯಿತು. ಅಂದು ಆಗಸ್ಟ್ 10ರ ಸಂದರ್ಭ. ಪತ್ರಿಕೆಯ ಮುದ್ರಣಕ್ಕೆ ಅಣಿಮಾಡಿಕೊಳ್ಳಲಾಯಿತು. ಬಿಡುಗಡೆ ಸಂದರ್ಭಕ್ಕೆ ವಿಐಪಿಗಳಾರೂ ಇರಲಿಲ್ಲ. ಪ್ರಿಂಟಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಸಾಮಾನ್ಯ ಕಾರ್ಮಿಕನೇ ಸ್ವಿಚ್ ಆನ್ ಮಾಡಿ ಪತ್ರಿಕೆಯ ಮುದ್ರಣಕ್ಕೆ ನಾಂದಿ ಹಾಡಿದ. ಆಗಸ್ಟ್ 17ರ ಸಂಚಿಕೆ ಮಾರುಕಟ್ಟೆಗೆ ಸಿದ್ಧವಾಯಿತು. ಆರಂಭದ ಮುದ್ರಣ ಸಂಖ್ಯೆ ನಾಲ್ಕು ಸಾವಿರವಷ್ಟೇ. ನಂತರದ್ದು ಇತಿಹಾಸ...

ಸೂರ್ಯೋದಯಕ್ಕೆ ಮುನ್ನವೇ ಪತ್ರಿಕೆ ಎಲ್ಲರ ಮನೆಯಲ್ಲಿರಬೇಕು ಎಂದು ಸಂಕಲ್ಪಿಸಿದ್ದರು ಅದರ ಸಂಪಾದಕ ಮತ್ತು ಮಾಲೀಕರಾದ ರಾಮೋಜಿರಾವ್. ಸೂರ್ಯೋದಯರ ನಂತರ, ‘ಈನಾಡು’ ಪತ್ರಿಕೆ ಹಂಚುವ ಪೇಪರ್‌ಬಾಯ್ ಬೀದಿಗಳಲ್ಲಿ ಕಾಣಿಸಬಾರದು ಎಂಬುದು ಅವರ ಮನೋಭಿಷ್ಟೆಯಾಗಿತ್ತು. ಈ ಮೂಲಕ ಪತ್ರಿಕಾ ವಿತರಣೆಯ ವ್ಯವಸ್ಥೆಯಲ್ಲೂ ಕಾಳಜಿ ವಹಿಸಲಾಯಿತು. ಆವರೆಗೆ ಅಥವಾ ಈಗಲೂ ಅನೇಕ ಕಡೆಗಳಲ್ಲಿ ರೂಢಿಯಲ್ಲಿರುವ ಬಸ್, ರೈಲು, ಅಂಚೆ ಮೂಲಕವಷ್ಟೇ ಪತ್ರಿಕೆಯನ್ನು ತಲುಪಿಸುವ ಪದ್ಧತಿಗೆ ಸಂಪೂರ್ಣವಾಗಿ ಭಿನ್ನವೆನಿಸುವ ಪ್ರಯತ್ನವನ್ನು ಅನುಷ್ಠಾನಗೊಳಿಸಿದುದರ ಕಾರಣಕ್ಕಾಗಿಯೇ ‘ಈನಾಡು’ ಪತ್ರಿಕೆ ಆವರೆಗೆ ಚಾಲ್ತಿಯಲ್ಲಿದ್ದ ಪತ್ರಿಕೆಗಳ ಪ್ರಸಾರವನ್ನು ಅಲ್ಪಾವಧಿಯಲ್ಲೇ ಹಿಂದಿಕ್ಕಿ ಪ್ರಚಂಡ ಜನಪ್ರಿಯತೆಯನ್ನು ದಕ್ಕಿಸಿಕೊಳ್ಳಲು ಸಾಧ್ಯವಾಯಿತು. ತಮ್ಮೆದುರು ನಡೆಯುವ ಘಟನೆಗಳು ಬೆಳ್ಳಂಬೆಳಗ್ಗೆಯೇ ಸಚಿತ್ರವಾಗಿ ಪ್ರಕಟವಾಗುವುದನ್ನು ಗಮನಿಸಿದ ಓದುಗರು ‘ಈನಾಡು’ ಪತ್ರಿಕೆಗೆ ಫಿದಾ ಆಗುವಂತಾಯಿತು. ಸ್ಥಳೀಯ ಸುದ್ದಿಗಳಿಗೆ ಅಗ್ರಪೀಠ ದೊರಕಿದ್ದು ಕೂಡ ಪತ್ರಿಕೆಯು ಮನೆಮಾತಾಗುವಲ್ಲಿ ತನ್ನದೇ ಆದ ಕೊಡುಗೆ ನೀಡಿತು. ಹೀಗಾಗಿ ಕೆಲವೇ ವರ್ಷಗಳಲ್ಲಿ ‘ಈನಾಡು’ ಪ್ರಸಾರವು ಲಕ್ಷಗಳ ಸಂಖ್ಯೆಯನ್ನು ಮೀರುವಂತಾಗಿ, ಅದು ಪ್ರಾದೇಶಿಕ ಭಾಷಾ ಪತ್ರಿಕೆಗಳ ಇತಿಹಾಸದಲ್ಲೊಂದು ಮೈಲಿಗಲ್ಲು ಎನಿಸಿಕೊಂಡಿತು.

'ಮಿನಿ ಎಡಿಷನ್'ಗಳನ್ನು ಗಮನಿಸುತ್ತಿರುವ ರಾಮೋಜೀರಾವ್

‘ಈನಾಡು’ ಪ್ರಥಮ ಸಂಚಿಕೆ (1974)

ದೈನಿಕ ಧಾರಾವಾಹಿಗಳ ಪ್ರಕಟಣೆಗೆ ‘ಈನಾಡು’ ಪತ್ರಿಕೆಯೇ ನಾಂದಿಹಾಡಿತು. ಹೆಚ್ಚುಪಾಲು ಸುದ್ದಿಸಂಸ್ಥೆಯ ಸುದ್ದಿಗಳಿಗೇ ಅವಲಂಬಿತವಾಗಿದ್ದ ಆಗಿನ ಪತ್ರಿಕೆಗಳ ಧೋರಣೆಗೆ ಬದಲಾಗಿ ಎಲ್ಲಾ ಕಡೆ ಸ್ವಂತ ಸುದ್ದಿಗಾರರು/ವರದಿಗಾರರನ್ನು ಹೊಂದುವ ಮೂಲಕ ಸುದ್ದಿಸಂಗ್ರಹ ಮತ್ತು ತಾಜಾವಾರ್ತೆಗಳ ಪ್ರಕಟಣೆಗೆ ಮುಂದಾಗಿದ್ದೇ ಪತ್ರಿಕೆಯ ಯಶಸ್ಸಿನ ಪ್ರಮುಖ ಅಂಶವೆನಿಸಿತು. ಪತ್ರಿಕೆಯಲ್ಲಿ ವಿಶೇಷ ಅಂಕಣ ಪುಟಗಳನ್ನು ಆರಂಭಿಸಲಾಯಿತು. ಮಹಿಳೆಯರಿಗಾಗಿ ‘ವಸುಂಧರ’, ಕ್ರೀಡಾಪ್ರೇಮಿಗಳಿಗಾಗಿ ‘ಚಾಂಪಿಯನ್’, ಕೃಷಿಕರಿಗಾಗಿ ‘ಅನ್ನದಾತ’, ವಿದ್ಯಾರ್ಥಿಗಳಿಗಾಗಿ ‘ಪ್ರತಿಭಾ’, ಮಕ್ಕಳಿಗಾಗಿ ‘ಹಾಯ್ ಬುಜ್ಜಿ’, ಆರೋಗ್ಯ ಪುಟವಾಗಿ ‘ಸುಖೀಭವ’, ಯುವಕರಿಗೆ ‘ಈತರಂ’, ಆರ್ಥಿಕ ವಿಷಯಗಳ ‘ಸಿರಿ’ ಹೀಗೆ ವಾರವಿಡೀ ಈ ವಿಶೇಷ ಅಂಕಣ ಪುಟಗಳು ಓದುಗರ ಮನತಣಿಸುವಲ್ಲಿ ಯಶಸ್ವಿಯಾದವು. ಪತ್ರಿಕೆಗಳ ಸಾಪ್ತಾಹಿಕ ಪುರಾವಣಿಯು ಪತ್ರಿಕೆಯ ಗಾತ್ರದಲ್ಲೇ ಪ್ರಕಟವಾಗುವುದು ವಾಡಿಕೆ. ಆದರೆ ‘ಈನಾಡು’ ತನ್ನ ವಾರದ ಪುರವಣಿಯನ್ನು ನಿಯತಕಾಲಿಕೆಗಳ ಆಕಾರದಲ್ಲಿ 32 ಪುಟಗಳ ಸಂಚಿಕೆಯಾಗಿ ರೆಗ್ಯುಲರ್ ಪತ್ರಿಕೆಯ ಜತೆಗೆ ನೀಡುವುದನ್ನು ಪ್ರಾರಂಭಿಸಿತು.

ಇವೆಲ್ಲಕ್ಕೂ ಮುಕುಟಪ್ರಾಯವಾದುದೆಂದರೆ ಮಿನಿ ಎಡಿಷನ್‌ಗಳ ಅವತಾರ! ಜಿಲ್ಲಾ ಆವೃತ್ತಿಗಳಿಗೆ ‘ಈನಾಡು’ ಹಾಕಿದ ಶ್ರೀಕಾರವನ್ನೇ ನಂತರ ಇತರ ಪತ್ರಿಕೆಗಳು (ಕನ್ನಡದ ಪತ್ರಿಕೆಗಳೂ) ಅನುಸರಿಸುವಂತಾಯಿತು. ಆಯಾ ಜಿಲ್ಲೆಗೆ ಸೀಮಿತವಾದ ಸುದ್ದಿ-ಸ್ಟೋರಿಗಳನ್ನು ವಿಶೇಷವಾಗಿ ಬಣ್ಣದ ಪುಟಗಳಲ್ಲಿ ಮುದ್ರಿಸಿ ಓದುಗರಿಗೆ ತಲುಪಿಸುತ್ತಿದ್ದುದು ಒಂದು ಕ್ರಾಂತಿಕಾರಿ ಹೆಜ್ಜೆ ಎನ್ನಬಹುದಾಗಿದೆ. ಇದು ಆಯಾ ಜಿಲ್ಲೆಯ ಪ್ರಜೆಗಳಿಗೆ ಒಂದು ‘ಮಿನಿ’ ವಿಶ್ವಕೋಶವಿದ್ದಂತೆ. ಸುದ್ದಿ, ರಾಜಕೀಯ, ವಿಜ್ಞಾನ, ಸಿನಿಮಾ, ಅಪರಾಧ ಜಗತ್ತು, ಸೇವಾರಂಗ, ಕ್ರೀಡೆ, ಕೃಷಿ ಹೀಗೆ ‘ಮಿನಿ’ಯಲ್ಲಿ ಪ್ರಕಟವಾಗದ ಕ್ಷೇತ್ರಬರಹಗಳೇ ಇಲ್ಲ. ದಿನದಿಂದ ದಿನಕ್ಕೆ ವಿಕಸನಗೊಂಡಂತೆ ‘ಮಿನಿ’ ಸಂಚಿಕೆಗಳು ಹೊಸ ಹೊಸ ಆಲೋಚನೆಗಳಿಗೆ ದ್ವಾರಗಳನ್ನು ತೆರೆದುಕೊಂಡವು.

‘ಈನಾಡು’ ಪತ್ರಿಕೆಗೆ ಇದೀಗ 50ರ ಸಂಭ್ರಮ. ಪತ್ರಿಕೆಯಾಗಿ ಅಸಾಧಾರಣ ಪ್ರಗತಿ ಕಂಡಿರುವುದರ ಜತೆಗೆ ಪತ್ರಕರ್ತರಿಗೆ ತರಬೇತಿ ನೀಡಲಿಕ್ಕೆಂದೇ ‘ಈನಾಡು ಜರ್ನಲಿಸಂ ಸ್ಕೂಲ್’ ಆರಂಭಿಸಲಾಗಿದೆ. ವರದಿಗಾರರಿಗೆ ಕೈಪಿಡಿಯಾಗಿ ‘ಸಮೀಕ್ಷಾ’ ಎಂಬ ಖಾಸಗಿ ಪ್ರಸಾರದ ಪತ್ರಿಕೆಯನ್ನು ಒದಗಿಸಲಾಗಿದ್ದು ಅದು ವರದಿಗಾರರ ಕಾರ್ಯನಿರ್ವಹಣೆಯ ಕೈಗನ್ನಡಿಯಾಗಿ ಪ್ರೇರಣೆ ನೀಡುತ್ತಿದೆ. ಸಾಮಾಜಿಕ ಸೇವಾ ಚಟುವಟಿಕೆಗಳಲ್ಲೂ ತನ್ನ ಛಾಪು ಒತ್ತಿರುವ ‘ಈನಾಡು’ ಪತ್ರಿಕೆ, ಪಾನನಿಷೇಧ ಚಳವಳಿಯಲ್ಲೂ ಪ್ರಮುಖ ಪಾತ್ರ ವಹಿಸಿದೆ. ಪ್ರಕೃತಿ ವಿಕೋಪದ ಸಂದರ್ಭಗಳಲ್ಲಿ ‘ಸೂರ್ಯ’ ಹೆಸರಿನಲ್ಲಿ ನಿರಾಶ್ರಿತರಿಗೆ ಸೂರನ್ನು ನಿರ್ಮಿಸಿಕೊಟ್ಟಿದೆ. ಚಂಡಮಾರುತ, ಭೂಕಂಪಪೀಡಿತರಿಗೆ ಸಹಾಯಹಸ್ತ ನೀಡುವಲ್ಲೂ ಮುಂಚೂಣಿಯಲ್ಲಿದೆ. ಪತ್ರಿಕಾರಂಗಕ್ಕಾದ ಅನ್ಯಾಯದ ವಿರುದ್ಧದ ಹೋರಾಟಗಳಲ್ಲೂ ಮತ್ತು ಭ್ರಷ್ಟಾಚಾರದ ವಿರುದ್ಧ ಚಾಟಿ ಬೀಸುವಲ್ಲೂ ‘ಈನಾಡು’ ಅಕ್ಷರಾಯುಧವಾಗಿ ಅಗ್ರಗಣ್ಯ ನಿಲುವನ್ನು ತೋರ್ಪಡಿಸಿದೆ. ಆಂಧ್ರ ವಿಶ್ವವಿದ್ಯಾಲಯದಲ್ಲಿ ‘ಈನಾಡು’ ಪ್ರಮಾಣೀಕೃತ ಪತ್ರಿಕೆಯಾಗಿ ಬೋಧಿಸಲ್ಪಡುತ್ತಿದೆ.

ಪತ್ರಿಕೆಯ ಸಂಸ್ಥಾಪಕ ರಾಮೋಜಿರಾವ್ ಅವರ ನಿರಂತರ ಪ್ರಯತ್ನ, ದಣಿವರಿಯದ ದುಡಿಮೆ, ಬದ್ಧತೆ ಇವೆಲ್ಲದರಿಂದಾಗಿಯೇ ‘ಈನಾಡು’ ಇಂದಿಗೂ ಪ್ರಾದೇಶಿಕ ಭಾಷಾ ಪತ್ರಿಕೆಗಳ ಸಾಲಿನಲ್ಲಿ ಅಗ್ರಗಣ್ಯತೆಯನ್ನು ಮೆರೆಯಲು ಸಾಧ್ಯವಾಗಿದೆ ಎನ್ನಬಹುದು. ಬೆಂಗಳೂರು, ಚೆನ್ನೈ ಸೇರಿದಂತೆ 21 ಆವೃತ್ತಿಗಳಲ್ಲಿ ಪ್ರಕಟವಾಗುತ್ತಿದ್ದು ಪ್ರಸ್ತುತ 20 ಲಕ್ಷಕ್ಕೂ ಹೆಚ್ಚು ಪ್ರಸಾರದ ದಾಖಲೆಯನ್ನು ಹೊಂದಿರುವ ‘ಈನಾಡು’ ಓದುಗರ ಸಂಖ್ಯೆಯು ಒಂದೂವರೆ ಕೋಟಿಯನ್ನು ಮುಟ್ಟಿದೆ ಎಂಬುದು ಕೂಡ ಗಮನಾರ್ಹ. ಇದು ಎಷ್ಟೋ ಪತ್ರಿಕೆಗಳ ಪಾಲಿಗೆ ಅನುಕರಣೀಯ ಸಾಧನೆಯೂ ಹೌದು.

(ಲೇಖಕರು ಹಿರಿಯ ಪತ್ರಕರ್ತರು)

ವಯನಾಡಿನ ರೋದನದಿಂದ ಕಲಿಯಬೇಕಾದ ಪಾಠ

ನಿಜದರ್ಶನ
ಶಶಿ ತರೂರ್
vveditoped@gmail.com

ಕೇರಳದ ವಯನಾಡಿನಲ್ಲಿ ಸಂಭವಿಸಿದ ಆಘಾತಕಾರಿ ಭೂಕುಸಿತ ಕೇವಲ ಎಚ್ಚರಿಕೆಯ ಗಂಟೆಯಷ್ಟೇ ಅಲ್ಲ, ಬಹಳ ಕಾಲದಿಂದ ಅನುರಣಿಸುತ್ತಿದ್ದ ಮರಣಗಂಟೆಯೂ ಆಗಿತ್ತು. ಆದರೂ, ಆತ್ಮಾವಲೋಕನ ಮಾಡಿಕೊಳ್ಳುವುದರ ಬದಲು, ನಮ್ಮ ತಪ್ಪುಗಳಿಂದ ಪಾಠ ಕಲಿಯುವುದರ ಬದಲು ಹಾಗೂ ಪುನಃ ಈ ತಪ್ಪು ಮಾಡುವುದಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಳ್ಳುವುದರ ಬದಲು ನಾವು ತಕ್ಷಣದ ಪರಿಹಾರ (ಇದನ್ನು ಕೇರಳ ಚೆನ್ನಾಗಿ ಮಾಡುತ್ತದೆ), ನಂತರ ಪುನರ್ವಸತಿಗೇ (ಇದನ್ನು ಕೇರಳ ಚೆನ್ನಾಗಿ ಮಾಡುವುದಿಲ್ಲ) ಗಮನ ನೀಡುತ್ತಾ ಬಂದಿದ್ದೇವೆ. ನಂತರ ಎಂದಿನಂತೆ ನಮ್ಮ ಜೀವನವ್ಯಾಪಾರ ಸಾಗುತ್ತದೆ. ರಾಜಕೀಯದ ಜಡತ್ವವನ್ನು ಮೀರಿ ಕ್ರಮ ಕೈಗೊಳ್ಳುವುದಕ್ಕೆ ನಾವು ವಿಫಲರಾಗುತ್ತಿರುವುದರಿಂದ ಭವಿಷ್ಯದಲ್ಲಿ ಇಂಥ ದುರಂತಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವಲ್ಲಿಯೂ ಸೋಲುತ್ತಿದ್ದೇವೆ.

ದುರಂತ ಸಂಭವಿಸಿದ ಬಳಿಕ ಆಗಸ್ಟ್ 3ರ ಶನಿವಾರ ನಾನು ವಯನಾಡಿಗೆ ಹೋಗಿದ್ದೆ. ತಿರುವನಂತಪುರಂನ ಸಂಸದರ ಕಚೇರಿಯು ಸಂಗ್ರಹಿಸಿದ್ದ ಪರಿಹಾರ ಸಾಮಗ್ರಿಗಳನ್ನು ವಿತರಿಸಲು ನನ್ನ ಕೈಲಾದಷ್ಟು ಸಹಾಯ ಮಾಡಿದೆ. ಮುಂಡಕ್ಕೈ, ಚೂರಲ್‌ಮಲ ಹಾಗೂ ಪುಂಚಿರಿ ಮಟ್ಟಮ್‌ನಲ್ಲಿ ಉಂಟಾದ ಸರ್ವನಾಶವನ್ನು ಕಣ್ಣಾರೆ ಕಂಡು ಮರುಗಿದೆ. ಕೇವಲ ಐದು ದಿನಗಳ ಹಿಂದಿನವರೆಗೆ ಜನರು ಸ್ವಚ್ಛ ನೀಲಾಕಾಶದ ಕೆಳಗೆ ಖುಷಿಯಿಂದ ಬದುಕುತ್ತಿದ್ದ ಸುಂದರ ಪರ್ವತದ ಪರಿಸರದಲ್ಲಿ ಈಗ ಜೆಸಿಬಿಗಳು ಗರ್ಜಿಸುವುದನ್ನು ಕೇಳಿದೆ. ಅದೃಷ್ಟವಶಾತ್ ಬದುಕುಳಿದವರನ್ನು ಕಾಳಜಿ ಕೇಂದ್ರಗಳಲ್ಲಿ ಮಾತನಾಡಿಸಿದೆ.

ನಂತರ ಆಸ್ಪತ್ರೆಗೆ ಹೋದೆ. ಅಲ್ಲಿ ಜುಲೈ 30ರ ಬೆಳಗ್ಗೆ ಸಂಭವಿಸಿದ ಭಯಾನಕ ಘಟನೆಯಲ್ಲಿ ಮನೆ ಹಾಗೂ ಕನಸುಗಳನ್ನು ಕಳೆದುಕೊಂಡು ಗೋಳಾಡುತ್ತಿದ್ದ ದುರದೃಷ್ಟವಂತರನ್ನು ನೋಡಿದೆ. ಬಂಡೆಗಲ್ಲುಗಳು ಹಾಗೂ ಮಣ್ಣಿನ ರಾಶಿಗಳ ಅಡಿಯಲ್ಲಿ ಅವರು ಭವಿಷ್ಯವನ್ನು ಕಳೆದುಕೊಂಡಿದ್ದರು. ಅಲ್ಲೊಬ್ಬಳು ಪುಟ್ಟ ಹುಡುಗಿ ಸಿಕ್ಕಳು. ಅವಳು ನಾವು ಊಹಿಸಲಾಗದ ನಷ್ಟವನ್ನೂ ದುಃಖವನ್ನೂ ಅನುಭವಿಸಿದ್ದಳು. ಅವಳಿಗೆ ಬರೀ ಎಂಟು ವರ್ಷ. ತಂದೆ, ತಾಯಿ, ಅಣ್ಣ, ತಂಗಿ, ಅಜ್ಜ, ಅಜ್ಜಿ ಎಲ್ಲರನ್ನೂ ಕಳೆದುಕೊಂಡಿದ್ದಳು. ಮೈತುಂಬಾ ಗಾಯಗಳಾಗಿದ್ದವು. ಮೈಮೂಳೆಗಳು ಮುರಿದಿದ್ದವು. ಮುಖ ತರಚಿತ್ತು. ಆ ನೋವಿನಲ್ಲೂ ಅವಳು ಹಾಸಿಗೆಯ ಮೇಲೆ ತನ್ನ ಕಲರಿಂಗ್ ಬುಕ್‌ನಲ್ಲಿ ತಲ್ಲೀನಳಾಗಿದ್ದಳು. ನನ್ನನ್ನು ಶೂನ್ಯ ಆವರಿಸಿಕೊಂಡಿತು. ಕೊನೆಯ ಪಕ್ಷ ಅವಳೇನು ಅನುಭವಿಸಿದ್ದಾಳೋ ಅದನ್ನು ತಡೆಯುವುದಕ್ಕಾದರೂ ನಮ್ಮಿಂದ ಸಾಧ್ಯವಾಗಬೇಕಿತ್ತು.

ಪ್ರಕೃತಿಯ ಜತೆಗಿನ ಕೇರಳದ ಯುದ್ಧದ ಗಡಿ ಬಹಳ ಹಿಂದೆಯೇ ರಚನೆಯಾಗಿತ್ತು. ಹವಾಮಾನ ಬದಲಾವಣೆಯೊಂದಿಗೆ ಅದು ಇನ್ನಷ್ಟು ಢಾಳಾಗಿ ಗೋಚರಿಸುತ್ತಿತ್ತು. 2023ರ ಫೆಬ್ರವರಿಯಲ್ಲಿ ಇಸ್ರೋದ ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್ (ಎನ್‌ಆರ್‌ಎಸ್‌ಸಿ) ಭಾರತದ ಭೂಕುಸಿತದ ಸಾಧ್ಯತೆಯ ನಕ್ಷೆಯನ್ನು ಪ್ರಕಟಿಸಿತ್ತು. ಅದರಲ್ಲಿ 17 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ 147 ಜಿಲ್ಲೆಗಳಲ್ಲಿ ಭೂಕುಸಿತ ಸಂಭವಿಸುವ ಸಾಧ್ಯತೆಗಳಿವೆ ಎಂದು ಎಚ್ಚರಿಸಲಾಗಿತ್ತು. ಆ ಪೈಕಿ ಭೂಕುಸಿತದ ಸಾಧ್ಯತೆ ಅತ್ಯಂತ ಹೆಚ್ಚಿರುವ 50 ಜಿಲ್ಲೆಗಳಲ್ಲಿ ಕೇರಳದ 14 ಜಿಲ್ಲೆಗಳ ಪೈಕಿ 13 ಜಿಲ್ಲೆಗಳಿದ್ದವು. ದೇಶದಲ್ಲೇ ವಯನಾಡು 13ನೇ ಅತಿಹೆಚ್ಚು ಭೂಕುಸಿತದ ಸಾಧ್ಯತೆಯಿರುವ ಜಿಲ್ಲೆಯೆಂಬ ಆತಂಕವನ್ನು ಗಳಿಸಿತ್ತು. ಈ ನಕ್ಷೆ ಪ್ರಕಟವಾದಾಗಲೇ ಕೇರಳದ ಹಣೆಬರಹವನ್ನು ಗೋಡೆಯ ಮೇಲೆ ಬರೆದಂತಾಗಿತ್ತು.

2019ರಲ್ಲಿ ವಯನಾಡಿನ ಪುತುಮಲಾದಲ್ಲಿ ಭೂಕುಸಿತ ಸಂಭವಿಸಿದಾಗ ಸುತ್ತಮುತ್ತಲ ಪ್ರದೇಶಗಳಲ್ಲಿ ಯಾವುದೇ ವಿಶೇಷ ಅಥವಾ ಹೊಸ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ನಂತರದ ಐದು ವರ್ಷಗಳಲ್ಲಿ, ಕತ್ತಲ ರಾತ್ರಿಯ ರಹಸ್ಯ ಕಾರ್ಯಾಚರಣೆಗಳಲ್ಲಿ ವೆಲರಿಮಲ ಬೆಟ್ಟಗಳಲ್ಲಿ 86,000 ಚದರ ಕಿಲೋಮೀಟರ್‌ನಷ್ಟು ಕಾಡುಗಳು ಕಣ್ಮರೆಯಾದವು. ಈಗ ಭೂಕುಸಿತದಿಂದ ಸಂಪೂರ್ಣ ಭೂಲಕ್ಷಣವೇ ಬದಲಾಗಿರುವ ಇರುವಜಿಂಜಿಪುಳ ಪರ್ವತ ಶ್ರೇಣಿಯಲ್ಲೇ ಈ ಜಾಗ ಬರುತ್ತದೆ. ಇಲ್ಲಿನ ಮುಂಡಕ್ಕೈ, ಚೂರಲ್‌ಮಲ, ಅಟ್ಟಮಲ ಮತ್ತು ನೂಲ್ಪುಳದಲ್ಲೇ ಭಾರಿ ಭೂಕುಸಿತ ಸಂಭವಿಸಿದೆ. ಇಲ್ಲಿ ವಾಸಿಸುತ್ತಿದ್ದ ಜನರು ಗುಡ್ಡ ಕುಸಿತದ ದುರಂತದಲ್ಲಿ ಕೇವಲ ಸಂಖ್ಯೆಗಳಾಗಿ ಶವಾಗಾರಕ್ಕೆ ಹೋಗಿದ್ದಾರೆ. 300ಕ್ಕೂ ಹೆಚ್ಚು ದೇಹಗಳು ಇಲ್ಲೇ ಸಿಕ್ಕಿವೆ. 200ಕ್ಕೂ ಹೆಚ್ಚು ಜೀವಗಳು ಇನ್ನೂ ಸಿಕ್ಕಿಲ್ಲ. ಅವು ಬದುಕುಳಿದಿರುವ ಸಾಧ್ಯತೆ ದಿನೇದಿನೆ ಕ್ಷೀಣಿಸುತ್ತಿದೆ.

ಪರಿಸರ ವ್ಯವಸ್ಥೆಯಲ್ಲಿ ಕೇರಳ ಬಹಳ ಅಸ್ಥಿರ ಸ್ಥಿತಿಯಲ್ಲಿದೆ. 2015ರಿಂದ 2022ರ ನಡುವೆ ಇಡೀ ದೇಶದಲ್ಲೇ ಈ ರಾಜ್ಯದಲ್ಲಿ ಅತಿಹೆಚ್ಚು ಭೂಕುಸಿತಗಳು ಸಂಭವಿಸಿದ್ದಷ್ಟೇ ಅಲ್ಲ, 2017ರಿಂದ 2022ರ ನಡುವೆ ಇಲ್ಲಿ ನೈಸರ್ಗಿಕ ವಿಪತ್ತು ಸಂಭವಿಸದೆ ಇದ್ದ ವರ್ಷವೇ ಇರಲಿಲ್ಲ. ಚಂಡಮಾರುತ, ಪ್ರವಾಹ ಅಥವಾ ಭೂಕುಸಿತ ಇವುಗಳಲ್ಲಿ ಯಾವುದಾದರೂ ಒಂದು ಅಥವಾ ಎಲ್ಲವೂ ಪ್ರತಿವರ್ಷ ಸಂಭವಿಸಿವೆ. ಈಗ ಉಂಟಾಗಿರುವ ದುರಂತಕ್ಕೆ ಅರಣ್ಯನಾಶ ಪ್ರಮುಖ ಕಾರಣಗಳಲ್ಲಿ ಒಂದು. ವಯನಾಡಿನ ಶೇ.62ರಷ್ಟು ಅರಣ್ಯ ಪ್ರದೇಶ 1950ರಿಂದ 2018ರ ನಡುವೆ ಕಣ್ಮರೆಯಾಗಿದೆ! ಅದರಿಂದಾಗಿ ಅನಿಯಂತ್ರಿತ ಮಣ್ಣಿನ ಸವಕಳಿ ಉಂಟಾಗಿದೆ. ಹೀಗಾಗಿ ಮಳೆಯ ನೀರು ಭೂಮಿಯ ಮೇಲ್ಮೈ ಪದರದಿಂದ ಕೆಳಗೆ ಇಳಿದಿದೆ. ಅದು ಭೂಮಿಯೊಳಗಿನ ಮಣ್ಣನ್ನು ಸಡಿಲಗೊಳಿಸಿದೆ. ಪರಿಣಾಮ, ಭೂಕುಸಿತ, ಮೇಲ್ಮೈ ಮಣ್ಣಿನಲ್ಲಿ ಕೊಳವೆಯಂಥ ರಚನೆಗಳು, ಭೂಮಿಯ ಒಳಗೆ ಸುರಂಗದಂಥ ರಚನೆಗಳು ಉಂಟಾಗಿವೆ. ಪುತುಮಲಾ ಭೂಕುಸಿತದಿಂದ ವಯನಾಡಿನಲ್ಲಿ ಊಹೆಗೂ ಸಿಲುಕದಷ್ಟು ಮಣ್ಣಿನ ಕೊಳವೆಗಳಂಥ ರಚನೆಗಳು ಸೃಷ್ಟಿಯಾಗಿವೆ. ಅದರಿಂದಾಗಿ ಭೂಕುಸಿತಗಳು ಹೆಚ್ಚಾಗಿವೆ.

ಇವೆಲ್ಲದರ ಜತೆಗೆ ಹವಾಮಾನ ಬದಲಾವಣೆಯೂ ಸೇರಿಕೊಂಡು ಪರಿಸ್ಥಿತಿಯನ್ನು ಇನ್ನಷ್ಟು ಭೀಕರವಾಗಿಸುತ್ತಿದೆ. ನಿರ್ದಯ ಮುಂಗಾರು ಮಳೆಯ ಅಬ್ಬರಕ್ಕೆ ದಿಢೀರ್ ಪ್ರವಾಹಗಳು ಉಂಟಾಗುವುದು ಹಾಗೂ ಭೂಮಿಯ ಮೇಲ್ಪದರ ಜಾರುವುದು ಪದೇಪದೆ ಸಂಭವಿಸುತ್ತಿದೆ. ಹವಾಮಾನ ವಿಜ್ಞಾನಿಗಳ ಪ್ರಕಾರ ಅರಬ್ಬಿ ಸಮುದ್ರದಲ್ಲಿ ಉಷ್ಣತೆ ಹೆಚ್ಚಾಗಿರುವುದರಿಂದ ಸಹಜಕ್ಕಿಂತ ಹೆಚ್ಚು ದಪ್ಪವಾದ ಮೋಡಗಳು ರೂಪುಗೊಳ್ಳುತ್ತಿವೆ. ಅದರಿಂದಾಗಿ ತೀರದ ಪ್ರದೇಶಗಳಲ್ಲಿ ಏಕಾಏಕಿ ಅನಿರೀಕ್ಷಿತ ಪ್ರಮಾಣದ ಭಾರಿ ಮಳೆ ಸುರಿಯುತ್ತಿದೆ. ಹೀಗಾಗಿ ಕೇರಳದಲ್ಲಿ ಸಂಭವಿಸುವ ಭೂಕುಸಿತಗಳು ಇನ್ನಷ್ಟು ಹೆಚ್ಚಾಗುತ್ತಿವೆ. ವಯನಾಡಿನಲ್ಲಿ ಭೂಕುಸಿತ ಸಂಭವಿಸಿದ ವಾರದಲ್ಲಿ ಗರಿಷ್ಠ 52ರಿಂದ 200 ಮಿ.ಮೀ. ಮಳೆಯಾಗಬಹುದು ಎಂದು ಹವಾಮಾನ ಇಲಾಖೆ ಅಂದಾಜಿಸಿತ್ತು. ಆದರೆ ಅದರ ಬದಲಿಗೆ 522 ಮಿ.ಮೀ. ಮಳೆ ಕೆಲವೇ ಗಂಟೆಗಳಲ್ಲಿ ಸುರಿದಿದೆ. ಮೇಲ್ಮೈ ಮಣ್ಣಿಗೆ ಮಳೆಯ ನೀರನ್ನು ಹೀರಿಕೊಳ್ಳಲು ಎಷ್ಟು ಶಕ್ತಿಯಿರುತ್ತದೆಯೋ ಅದಕ್ಕಿಂತ ಈ ಮಳೆಯ ಪ್ರಮಾಣ ಹಲವಾರು ಪಟ್ಟುಗಳಷ್ಟು ಹೆಚ್ಚಿನದು. ಹೀಗಾದಾಗ ಗುಡ್ಡಗಳು ಹೇಗೆ ತಡೆದುಕೊಳ್ಳುತ್ತವೆ? ತಪ್ಪಲಿನಲ್ಲಿ ವಾಸಿಸುವ ಜನರ ಬದುಕನ್ನು ನಾಶಪಡಿಸಲು ಅವು ಏಕಾಏಕಿ ಕುಸಿದುಬಿದ್ದಿವೆ!

ವಯನಾಡಿನಲ್ಲಿ ದುರಂತ ಸಂಭವಿಸಿದ ಮರುದಿನ ನಾನು ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದು, ಇದನ್ನು ‘ಅತ್ಯಂತ ತೀವ್ರ ನೈಸರ್ಗಿಕ ವಿಪತ್ತು’ ಎಂದು ಘೋಷಿಸುವಂತೆ ಮನವಿ ಮಾಡಿದ್ದೆ. ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗದರ್ಶಿ ಸೂತ್ರಗಳಲ್ಲಿರುವ 8.1ನೇ ಪ್ಯಾರಾದಲ್ಲಿ ಇಂಥ ಮನವಿ ಮಾಡಲು ಸಂಸದರಿಗೆ ಅಧಿಕಾರವಿದೆ. ಹೀಗೆ ಘೋಷಿಸಿದರೆ ಲೋಕಸಭೆಯ ಎಲ್ಲಾ 543 ಸಂಸದರು ಹಾಗೂ ರಾಜ್ಯಸಭೆಯ ಎಲ್ಲಾ 250 ಸದಸ್ಯರು ತಾವು ಇಚ್ಛೆಪಟ್ಟಲ್ಲಿ ತಮ್ಮ ಪ್ರದೇಶಾಭಿವೃದ್ಧಿ ನಿಧಿಯಿಂದ ತಲಾ 1 ಕೋಟಿ ರುಪಾಯಿ ನೆರವನ್ನು ವಯನಾಡಿನ ಸಂತ್ರಸ್ತರಿಗೆ ಬದುಕು ಕಟ್ಟಿಕೊಡಲು ಹಾಗೂ ಈ ಸುಂದರ ನಾಡಿನ ಮರುನಿರ್ಮಾಣಕ್ಕೆ ನೆರವು ನೀಡಲು ಅವಕಾಶ ಲಭಿಸುತ್ತದೆ (ಸದ್ಯದ ಪರಿಸ್ಥಿತಿಯಲ್ಲಿ ಈ ಕ್ಷೇತ್ರದ ಸಂಸದರು ಮಾತ್ರ ತಮ್ಮ ಪಾಲಿನ ಅನುದಾನವನ್ನು ಇಲ್ಲಿಗೆ ನೀಡಬಹುದು. ಆದರೆ, ಸದ್ಯ ಇಲ್ಲಿಗೆ ಸಂಸದರು ಇಲ್ಲ. ಉಪ ಚುನಾವಣೆ ಕೂಡ ಘೋಷಣೆಯಾಗಿಲ್ಲ). ಕೇಂದ್ರ ಸರಕಾರದಿಂದ ನನಗೆ ಇನ್ನೂ ಉತ್ತರ ಬಂದಿಲ್ಲ.

ಆದರೂ ಒಂದು ಸಂಗತಿ ಸ್ಪಷ್ಟವಾಗಿದೆ. ಇಂಥ ದುರಂತಗಳ ಬಗ್ಗೆ ಮುನ್ನೆಚ್ಚರಿಕೆ ನೀಡಲು ನಮಗೆ ಇನ್ನಷ್ಟು ದಕ್ಷವಾದ, ವಿಶ್ವಾಸಾರ್ಹವಾದ ಹಾಗೂ ‘ರಿಯಲ್ ಟೈಮ್’ ಮುನ್ಸೂಚನಾ ವ್ಯವಸ್ಥೆಯ ಅಗತ್ಯವಿದೆ. ಆಗ ತಕ್ಷಣ ಎಚ್ಚೆತ್ತುಕೊಂಡು ಜನರನ್ನು ಅಪಾಯದ ಕೇಂದ್ರ ಸ್ಥಳದಿಂದ ಬೇರೆಡೆಗೆ ಕಳುಹಿಸಲು, ಹಾಲಿ ಇರುವ ಮೂಲಸೌಕರ್ಯವನ್ನು ಹೆಚ್ಚಿಸಿಕೊಂಡು ತುರ್ತು ಮೂಲಸೌಕರ್ಯಗಳನ್ನು ನಿರ್ಮಿಸಿಕೊಳ್ಳಲು ಹಾಗೂ ತೀವ್ರ ಸನ್ನದ್ಧ ಸ್ಥಿತಿಯನ್ನು ಹೊಂದಲು ಸಾಧ್ಯವಾಗುತ್ತದೆ. ಬಹಳ ಕಾಲದಿಂದ ನಾವು ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನವನ್ನೇ ಇದಕ್ಕಾಗಿ ನಂಬಿಕೊಂಡಿದ್ದೇವೆ. ಆದರೆ ಅದು ನಿರೀಕ್ಷಿತ ನೆರವು ನೀಡುತ್ತಿಲ್ಲ. ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನವನ್ನು ಆಳವಾದ ವಿಶ್ಲೇಷಣೆಯ ಆಧಾರದ ಮೇಲೆ, ಬೇರೆ ಬೇರೆ ತಂತ್ರಗಳನ್ನು ಬಳಸಿ, ನಮಗೆ ಬೇಕಾದ ಸ್ಥಳದ ಭೂಲಕ್ಷಣ, ಅಲ್ಲಿನ ಜಲವಿಜ್ಞಾನ, ಹಸಿರಿನ ಪ್ರಮಾಣ ಹಾಗೂ ಇನ್ನಿತರ ಭೂಗುಣಗಳನ್ನು ಅರಿತುಕೊಳ್ಳಲು ಬಳಸಬೇಕಾಗುತ್ತದೆ. ಇಷ್ಟೆಲ್ಲ ಆದ ನಂತರ ಆ ಸ್ಥಳದ ಗರ್ಭದಲ್ಲಿ ಏನೇನು ನಿಗೂಢಗಳು ಅಡಗಿವೆ ಎಂಬುದನ್ನು ಊಹೆಯ ಮೇಲೆ ತಿಳಿದುಕೊಳ್ಳಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ಕಳುಹಿಸಿದ ಉಪಗ್ರಹಗಳು ಪ್ರದೇಶದ ಚಿತ್ರಗಳನ್ನು ಕ್ಲಿಕ್ಕಿಸಿ, ಅಲ್ಲಿನ ಭೂಲಕ್ಷಣದ ಪ್ರತಿಯೊಂದು ಅಂಶವನ್ನೂ ದಾಖಲಿಸಿ, ನೀರು, ಮಣ್ಣು, ಹಸಿರು, ಬಂಡೆ ಹೀಗೆ ಪ್ರತಿಯೊಂದರ ಬಗ್ಗೆಯೂ ಮಾಹಿತಿಯನ್ನು ಕಲೆಹಾಕಿ ಕಳುಹಿಸುತ್ತವೆ.

ಈ ಎಲ್ಲಾ ಮಾಹಿತಿಗಳನ್ನೂ ಜೋಡಿಸಿ, ಎಲ್ಲಾ ಚಿತ್ರಗಳನ್ನೂ ಒಂದೆಡೆ ಸೇರಿಸಿದಾಗ ನಿರ್ದಿಷ್ಟ ಸ್ಥಳದ ಸಮಗ್ರ ನಕ್ಷೆ ಸಿದ್ಧವಾಗುತ್ತದೆ. ಈ ಹಂತದಲ್ಲಿ ಆಳವಾದ ವಿಶ್ಲೇಷಣೆ ಮಾಡಬೇಕಾಗುತ್ತದೆ. ಪ್ರದೇಶವು ನೈಸರ್ಗಿಕ ವಿಪತ್ತುಗಳ ಅಪಾಯದ ಸಾಧ್ಯತೆಯನ್ನು ಯಾವ ಪ್ರಮಾಣದಲ್ಲಿ ಎದುರಿಸುತ್ತಿದೆ ಎಂಬುದನ್ನು ಊಹಾತ್ಮಕ ಮಾದರಿಗಳ ಮೂಲಕ ತಿಳಿದುಕೊಳ್ಳಬೇಕಾಗುತ್ತದೆ. ಕೃತಕ ಬುದ್ಧಿಮತ್ತೆಯನ್ನು ಬಳಸಿ ನಿರ್ಮಿಸುವ ಬೇರೆ ಬೇರೆ ರೀತಿಯ ಊಹಾತ್ಮಕ ಮಾದರಿಗಳ ರೀತಿಯಲ್ಲೇ ರಿಮೋಟ್ ಸೆನ್ಸಿಂಗ್ ಉಪಗ್ರಹಗಳು ಕಳುಹಿಸುವ ಮಾಹಿತಿಯ ವಿಶ್ಲೇಷಣೆಯ ಫಲಿತಾಂಶ ಕೂಡ ಸಂಪೂರ್ಣ ನಿಖರವಾಗಿರುವುದಿಲ್ಲ ಎಂಬುದೇ ನಿಜವಾದ ಸಮಸ್ಯೆ ಮತ್ತು ಈ ಉಪಗ್ರಹಗಳು ಮಣ್ಣಿನ ಕೆಳಗಿರುವುದನ್ನು ಗುರುತಿಸುವುದಿಲ್ಲ.

ವಯನಾಡ್ ದುರಂತದಿಂದ ನಾವು ಶಾಶ್ವತವಾದ ಮತ್ತು ಸರಿಯಾದ ಪಾಠ ಕಲಿಯಬೇಕಿದೆ. ನೈಸರ್ಗಿಕ ವಿಪತ್ತುಗಳ ಮುನ್ಸೂಚನೆಗೆ ಕೇವಲ ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನದ ಮೇಲೆ ಅವಲಂಬಿತರಾಗಿರದೆ, ಭೂಮಿಯ ಮೇಲೇ ಸೆನ್ಸರ್ ಗ್ರಿಡ್‌ಗಳನ್ನು ಸ್ಥಾಪಿಸಬೇಕಿದೆ. ಅವು ಭೂಕುಸಿತದ ಮುನ್ನೆಚ್ಚರಿಕೆ ನೀಡುವ ಸಾಮರ್ಥ್ಯ ಹೊಂದಿವೆ. ಇಂದು ನಮ್ಮಲ್ಲಿ ಶರವೇಗದ ಹಾಗೂ ಅಗಾಧ ಸಾಮರ್ಥ್ಯದ ಇಂಟರ್ನೆಟ್ ಇದೆ. ವಯನಾಡಿನಲ್ಲಿ ಗುಡ್ಡ ಕುಸಿತ ಸಂಭವಿಸಿದ ನಂತರ ಅವು ಭೀಕರತೆಯ ಇಂಚಿಂಚನ್ನೂ ಬಗೆದು ನೋಡಲು ಸಾಧ್ಯವಾಗುವಂತೆ ಕಳುಹಿಸುತ್ತಿರುವ ಚಿತ್ರಗಳನ್ನು ನೋಡಿದರೆ ನಾವು ಈ ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಳ್ಳುತ್ತಿಲ್ಲ ಎಂದು ಖೇದವಾಗುತ್ತದೆ. ಭೂಕುಸಿತದ ನಂತರ ಎನ್‌ಆರ್‌ಎಸ್‌ಸಿ ಬಿಡುಗಡೆ ಮಾಡಿದ ‘ಮೊದಲ’ ಮತ್ತು ‘ನಂತರದ’ ಚಿತ್ರಗಳನ್ನು ನೋಡಿದರೆ ರಿಮೋಟ್ ಸೆನ್ಸಿಂಗ್ ಮೂಲಕ ನಾವು ಘಟನೆ ಸಂಭವಿಸಿದ ಬಳಿಕ ಆತ್ಮಾವಲೋಕನ ಮಾಡಿಕೊಳ್ಳಲು ಮಾತ್ರ ಸಾಧ್ಯವಿದೆ, ಜನರ ಜೀವ ಹೋದ ನಂತರವಷ್ಟೇ ಘಟನೆಯ ವಿಶ್ಲೇಷಣೆ ನಡೆಸಲು ಅದನ್ನು ಬಳಸಬಹುದು ಎಂಬುದು ಖಚಿತವಾಗುತ್ತದೆ. ಹೀಗಾಗಿ ಈಗಿನ ಭೂಕುಸಿತಗಳಾದರೂ ನಮ್ಮನ್ನು ನಿದ್ದೆಯಿಂದ ಎಬ್ಬಿಸಲಿ ಎಂಬುದು ನನ್ನ ಆಸೆ. ತನ್ಮೂಲಕ ನಾವು ಈಗಿರುವ ಅಂದಾಜಿನ ಮುನ್ಸೂಚನಾ ವ್ಯವಸ್ಥೆಯಿಂದ ವಿಶ್ವಾಸಾರ್ಹವಾದ ಮುನ್ನೆಚ್ಚರಿಕೆಯ ವ್ಯವಸ್ಥೆಯತ್ತ ಹೊರಳಬಹುದು. ಮತ್ತು ಇಂಥ ಪ್ರದೇಶಗಳಲ್ಲಿ ಎಷ್ಟು ಪ್ರಮಾಣದಲ್ಲಿ ಮಾನವನ ಚಟುವಟಿಕೆಗಳಿಗೆ ಅವಕಾಶ ನೀಡಬೇಕು ಎಂಬ ವಿಷಯದಲ್ಲಿ ಕಠಿಣ ನಿರ್ಧಾರ ಕೈಗೊಳ್ಳುವುದಂತೂ ಬಾಕಿಯೇ ಇದೆ.

ಈಗಲೂ ಈ ವಿಷಯದಲ್ಲಿ ಕ್ರಮ ಕೈಗೊಳ್ಳದೆ ಹೋದರೆ, ನಾವು ಯಾವುದೇ ಪಾಠ ಕಲಿಯದ ನೈಸರ್ಗಿಕ ವಿಪತ್ತುಗಳ ಸಾಲಿಗೆ ವಯನಾಡು ಕೂಡ ಇನ್ನೊಂದು ಸೇರ್ಪಡೆಯಾಗುತ್ತದೆ ಅಷ್ಟೆ.

(ಲೇಖಕರು ತಿರುವನಂತಪುರಂ ಸಂಸದರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942, Printed at M/s Digantha Mudhrana Ltd. NT Road, Shivamogga - 577 201
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 300

ಸಮಾಚಾರ ಸಣ್ಣದಲ್ಲ

ಕಾಂಗ್ರೆಸ್ ಗ್ಯಾರಂಟಿ ವಿರುದ್ಧ ಪಿಐಎಲ್

ಪ್ರಯಾಗರಾಜ್: ಲೋಕಸಭಾ ಚುನಾವಣೆ ಸಂದರ್ಭ ಕಾಂಗ್ರೆಸ್ ಪಕ್ಷ ಪ್ರಣಾಳಿಕೆಯಲ್ಲಿ ಪ್ರಕಟಿಸಿದ್ದ 'ಫರ್ ಫರ್ ಗ್ಯಾರಂಟಿ'ಗಳೆಲ್ಲವೂ ಲಂಚದ ಆಮಿಷಗಳಾಗಿವೆ ಎಂದು ಆರೋಪಿಸಿ ಅಲ್ಲಹಾಬಾದ್ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಗಿದ್ದು, ಚುನಾವಣೆಯಲ್ಲಿ ಆಯ್ಕೆಯಾದ ಕಾಂಗ್ರೆಸ್‌ನ 99 ಸಂಸದರನ್ನು ಅನರ್ಹಗೊಳಿಸಬೇಕೆಂದು ಅರ್ಜಿಯಲ್ಲಿ ಕೋರಲಾಗಿದೆ. ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ವಿರುದ್ಧ ಕ್ರಮ ಕೈಗೊಳ್ಳದ ಆಯೋಗದ ವಿರುದ್ಧವೂ ಪಿಐಎಲ್‌ನಲ್ಲಿ ದೂರಲಾಗಿದೆ. ಈ ರೀತಿಯ ಚುನಾವಣಾ ಭರವಸೆ ನೀಡುವುದರ ವಿರುದ್ಧ ರಾಜಕೀಯ ಪಕ್ಷಗಳಿಗೆ ಚುನಾಣಾ ಆಯೋಗ ಮೇ 2ರಂದು ಎಚ್ಚರಿಕೆ ನೀಡಿತ್ತು. ಆದರೆ, ಕಾಂಗ್ರೆಸ್ ಪಕ್ಷ ಈ ಎಚ್ಚರಿಕೆ ಕಡೆಗಣಿಸಿ ಗ್ಯಾರಂಟಿ ಕಾರ್ಡ್ ವಿತರಿಸಿತು ಎಂದು ಪಿಐಎಲ್ ಆರೋಪಿಸಲಾಗಿದೆ. ಈ ಗ್ಯಾರಂಟಿ ಭರವಸೆಗಳು 1951ರ ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 123(1)(ಅ) ಅನ್ವಯ ಲಂಚಕ್ಕೆ ಸಮಾನವಾಗಿದ್ದು, ಶಿಕ್ಷಾರ್ಹವಾಗಿದೆ ಎಂದು ಅರ್ಜಿಯಲ್ಲಿ ದೂರಲಾಗಿದೆ.

ಇರಾಕ್ ವಧು ಮದುವೆ ವಯಸ್ಸು 9 ವರ್ಷಕ್ಕೆ!

ಬಾಗ್ದಾದ್: ಮದುವೆಗೆ ವಧುವಿನ ಕನಿಷ್ಠ ವಯಸ್ಸನ್ನು 9 ವರ್ಷಕ್ಕೆ ಇಳಿಸಲು ಇಸ್ಲಾಮಿಕ್ ದೇಶ ಇರಾಕ್ ಮುಂದಾಗಿದೆ. ಅಲ್ಲದೇ, ವರನ ಕನಿಷ್ಠ ವಯೋಮಿತಿಯನ್ನು 15 ವರ್ಷಕ್ಕೆ ನಿಗದಿಪಡಿಸಲಾಗಿದೆ. ಈ ಸಂಬಂಧ ಸಂಸತ್ತಿನಲ್ಲಿ ವಿಧೇಯಕ ಮಂಡಿಸಿದೆ. ಸರಕಾರದ ಈ ನಡೆಗೆ ಮಾನವ ಹಕ್ಕು ಸಂರಕ್ಷಣಾ ಸಂಘಗಳು ಆಕ್ರೋಶ ವ್ಯಕ್ತಪಡಿಸಿವೆ. ಹೊಸ ನಿಯಮ ಜಾರಿಯಾದಲ್ಲಿ ಬಾಲಕಿಯರು ಮಾನಸಿಕ-ದೈಹಿಕ ಆರೋಗ್ಯ ಸಮಸ್ಯೆಗೆ ಗುರಿಯಾಗಲಿದ್ದಾರೆ ಎಂದು ಮಹಿಳಾ ಸಂಘಟನೆಗಳು ಹಾಗೂ ಸಾಮಾಜಿಕ ಕಾರ್ಯಕರ್ತರು ಆತಂಕ ವ್ಯಕ್ತಪಡಿಸಿದ್ದಾರೆ. ಸದ್ಯ ಇರಾಕ್‌ನಲ್ಲಿ ಮದುವೆ ನಿಯಮಗಳಲ್ಲಿ ವಧುವಿನ ಕನಿಷ್ಠ ವಯಸ್ಸು 18 ವರ್ಷವಿದೆ.

ಯೋಗಿ ಸರಕಾರ ವಿರುದ್ಧ ಕಾಂಗ್ರೆಸ್ ಆಂದೋಲನ

ಲಖನೌ: ನಿರುದ್ಯೋಗ, ಬೆಲೆ ಏರಿಕೆ, ಮಹಿಳೆಯರ ಮೇಲಿನ ಅಪರಾಧಗಳನ್ನು ಖಂಡಿಸಿ ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್ ನೇತೃತ್ವದ ಸರಕಾರದ ವಿರುದ್ಧ ಆ.15ರಿಂದ ಕಾಂಗ್ರೆಸ್ ಬೃಹತ್ ಜನಾಂದೋಲನ ನಡೆಸಲು ನಿರ್ಧರಿಸಿದೆ. ಬೀದಿ ನಾಟಕ, ರಾತ್ರಿ ಗ್ರಾಮಶಿಬಿರ, ಪಭತ್ ಫೆರಿಸ್ ಮೂಲಕ ರಾಜ್ಯಾದ್ಯಂತ ಬೃಹತ್ ಜನಾಂದೋಲನ ನಡೆಸಲಾಗುವುದು. ಹಿರಿಯ ಪದಾಧಿಕಾರಿಗಳ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಉತ್ತರಪ್ರದೇಶ ಘಟಕ ಮುಖ್ಯಸ್ಥ ಅಜಯ್ ರೈ ಹೇಳಿದ್ದಾರೆ.

ಟಿವಿಎಸ್ ಕೇಂದ್ರ ಸಂಪುಟ ಕಾರ್ಯದರ್ಶಿ

ದೆಹಲಿ: ತಮಿಳುನಾಡು ಕೇಡರ್‌ನ 1987ರ ತಂಡದ ಹಿರಿಯ ಐಎಎಸ್ ಅಧಿಕಾರಿ ಟಿ.ವಿ.ಸೋಮನಾಥನ್

ಅವರನ್ನು ಕೇಂದ್ರ ಸಂಪುಟ ಕಾರ್ಯದರ್ಶಿಯಾಗಿ ಶನಿವಾರ ಕೇಂದ್ರ ಸರಕಾರ ನೇಮಕ ಮಾಡಿದೆ. ಟಿವಿಎಸ್ ಆ.30ರಿಂದ ಎರಡು ವರ್ಷಗಳ ಅವಧಿಗೆ ಸಂಪುಟ ಕಾರ್ಯದರ್ಶಿಯಾಗಿರುವರು. ಸೋಮನಾಥನ್ ಪ್ರಸ್ತುತ ಕೇಂದ್ರ ಹಣಕಾಸು ಕಾರ್ಯದರ್ಶಿಯಾಗಿದ್ದಾರೆ. ಗೌಬಾ 5 ವರ್ಷಗಳ ಹಿಂದೆ ಅಧಿಕಾರ ವಹಿಸಿಕೊಂಡಿದ್ದ ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ ಅವರ ಅವಧಿ ಮುಕ್ತಾಯಗೊಳ್ಳುತ್ತಿರುವುದರಿಂದ ಟಿವಿಎಸ್ ನೇಮಕವಾಗಿದೆ.

ಅನಂತನಾಗ್: ಸೇನೆ-ಉಗ್ರರ ಮಧ್ಯೆ ಚಕಮಕಿ

ಅನಂತನಾಗ್: ಜಮ್ಮು-ಕಾಶ್ಮೀರದ ಅನಂತನಾಗ್ ಜಿಲ್ಲೆಯ ಅಹ್ಲಾನ್ ಗಗರ್‌ಮಂಡ್ ಪ್ರದೇಶದಲ್ಲಿ ಶನಿವಾರ ಭದ್ರತಾ ಪಡೆಗಳು ಮತ್ತು ಉಗ್ರರ ನಡುವೆ ಗುಂಡಿನ ಚಕಮಕಿ ನಡೆದಿದೆ. ಹೆಚ್ಚಿನ ಮಾಹಿತಿಗಾಗಿ ನಿರೀಕ್ಷಿಸಲಾಗುತ್ತಿದೆ ಎಂದು ಕಾಶ್ಮೀರ ವಲಯ ಪೊಲೀಸ್ 'ಎಕ್ಸ್' ಸಂದೇಶದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಕಥುವಾದಲ್ಲಿ ಇತ್ತೀಚೆಗೆ ಸೇನಾ ಬೆಂಗಾವಲು ಪಡೆ ಮೇಲೆ ಉಗ್ರರು ದಾಳಿ ನಡೆಸಿದ್ದರು. ಜಮ್ಮು ಪ್ರದೇಶದ ದೋಡಾ ಮತ್ತು ಉಧಮ್‌ಪುರದಲ್ಲಿಯೂ ಚಕಮಕಿ ನಡೆದಿತ್ತು. ಜಮ್ಮು-ಕಾಶ್ಮೀರದ ಕಥುವಾ ಜಿಲ್ಲೆಯ ಮಲ್ಹಾರ್, ಬಾನಿ ಮತ್ತು ಸಿಯೋಜಧರ್ ಪ್ರದೇಶದ ಧೋಕ್ಸ್‌ನಲ್ಲಿ ಇತ್ತೀಚೆಗೆ ಕಾಣಿಸಿಕೊಂಡ 4 ಉಗ್ರರ ರೇಖಾಚಿತ್ರಗಳನ್ನು ಕಥುವಾ ಪೊಲೀಸರು ಬಿಡುಗಡೆ ಮಾಡಿದ್ದು, ಮಾಹಿತಿ ನೀಡಿದವರಿಗೆ 5 ಲಕ್ಷ ರು. ಬಹುಮಾನ ಘೋಷಿಸಿದ್ದಾರೆ.

{ಮಾಯಾವತಿ } ಬಿಎಸ್‌ಪಿ ನಾಯಕಿ

ಪರಿಶಿಷ್ಟ ಜಾತಿ-ಪಂಗಡದವರಿಗೆ ಕೆನೆಪದರ ಮೀಸಲು ನೀಡಬಾರದೆಂದು ಸುಪ್ರೀಂ ಕೋರ್ಟ್ ಹೇಳಿದ ವಿಚಾರದಲ್ಲಿ ಕಾಂಗ್ರೆಸ್ ಮೌನವೇಕೆ? ಪರಿಣಾಮವನ್ನೇ ಬೀರದ ಮೀಸಲು ಸೌಲಭ್ಯವನ್ನು ಪರಿಣಾಮಕಾರಿಯಾಗಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕಿದೆ. ತನ್ನದೇ ಪಕ್ಷದ ಸರಕಾರವಿರುವ ರಾಜ್ಯಗಳಲ್ಲಿನ ಕಾಂಗ್ರೆಸ್ ನಿಲುವೇನು? ಸುಪ್ರೀಂ ತೀರ್ಪನ್ನು ಕಾಂಗ್ರೆಸ್ ಒಪ್ಪಿಕೊಂಡಿದೆಯೇ? ಅದನ್ನೇ ಜಾರಿಗೊಳಿಸುತ್ತದೆಯೇ?



ವಯನಾಡ್‌ನಲ್ಲಿ ಪ್ರಧಾನಿ ಮೋದಿ ವೈಮಾನಿಕ ಸಮೀಕ್ಷೆ

ಹೆಲಿಕಾಪ್ಟರ್‌ನಲ್ಲಿ ಚೂರಲ್‌ಮಲಾ, ಮುಂಡಕ್ಕೈ, ಪುಂಚಿರಿಮಟ್ಟಂ ಗ್ರಾಮ ವೀಕ್ಷಣೆ | ರಾಜ್ಯಪಾಲ ಆರಿಫ್, ಸಿಎಂ ವಿಜಯನ್, ಕೇಂದ್ರ ಸಚಿವ ಸುರೇಶ್ ಗೋಪಿ ಸಾಥ್ | ಆಸ್ಪತ್ರೆಯಲ್ಲಿ ಸಂತ್ರಸ್ತರ ಜತೆ ಸಂವಾದ | ರಾಜ್ಯದ ಅಧಿಕಾರಿಗಳ ಜತೆ ಪರಿಶೀಲನಾ ಸಭೆ

ವಯನಾಡ್: ಕೇರಳಕ್ಕೆ ಶನಿವಾರ ಬೆಳಗ್ಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ, ತೀವ್ರ ಸ್ವರೂಪದ ಭೂಕುಸಿತದಿಂದ ಅಪಾರ ಸಾವು-ನೋವು ಕಂಡು ತತ್ತರಿಸಿರುವ ಕೇರಳ ರಾಜ್ಯದ ಉತ್ತರ ಭಾಗದಲ್ಲಿನ ವಯನಾಡ್ ಜಿಲ್ಲೆಯ ಸಂತ್ರಸ್ತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಿದರು.

ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ನಲ್ಲಿ ಭೂಕುಸಿತ ದಿಂದ ಧ್ವಂಸಗೊಂಡ ಚೂರಲ್‌ಮಲಾ, ಮುಂಡಕ್ಕೈ, ಪುಂಚಿರಿ ಮಟ್ಟಂ ಮತ್ತು ಅಟ್ಟಮಲ ಗ್ರಾಮಗಳ ವೈಮಾನಿಕ ಸಮೀಕ್ಷೆ ನಡೆಸಿದ ಪ್ರಧಾನಿ,

ವಿಶೇಷ ವಿಮಾನದಲ್ಲಿ ಶನಿವಾರ ಬೆಳಗ್ಗೆ 11.15ಕ್ಕೆ ಕಣ್ಣೂರು ವಿಮಾನ ನಿಲ್ದಾಣದಲ್ಲಿ ಬಂದಿಳಿದ ಪ್ರಧಾನಿ ಮೋದಿ ಅವರನ್ನು ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ಮುಖ್ಯ ಮಂತ್ರಿ ಪಿಣರಾಯಿ ವಿಜಯನ್ ಸ್ವಾಗತಿಸಿದರು. ಪ್ರಧಾನಿ ಜತೆಗೇ ಕೇಂದ್ರ ಪ್ರವಾಸೋದ್ಯಮ ಮತ್ತು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ಸಹಾಯಕ ಸಚಿವ ಸುರೇಶ್ ಗೋಪಿ ಅವರೂ ಆಗಮಿಸಿದ್ದರು. ಬಳಿಕ ನಾಲ್ವರೂ ವಯನಾಡ್ ಭೂಕುಸಿತ ಸಂತ್ರಸ್ತ ಗ್ರಾಮಗಳ ವೀಕ್ಷಣೆಗೆ ಹೆಲಿಕಾಪ್ಟರ್‌ನಲ್ಲಿ ತೆರಳಿದರು.

ನಂತರ ಕಲ್ಪೆಟ್ಟಾದಲ್ಲಿನ ಎಸ್‌ಕೆಎಂಜೆ ಹೈಯರ್ ಸೆಕೆಂಡರಿ ಶಾಲೆಗೆ ಹೆಲಿಕಾಪ್ಟರ್‌ನಲ್ಲಿ ಬಂದಿಳಿದ ಪ್ರಧಾನಿ, ಅಲ್ಲಿಂದ ರಸ್ತೆ ಮಾರ್ಗವಾಗಿ ಕೆಲವು ಭೂಕುಸಿತ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ವೀಕ್ಷಿಸಿದರು.

ಕಲ್ಪೆಟ್ಟಾದ ಎಸ್‌ಕೆಎಂಜೆ ಶಾಲೆ ಮೈದಾನದಲ್ಲಿ ತಾತ್ಕಾಲಿಕವಾಗಿ ರಚಿಸಿದ್ದ ಹೆಲಿಪ್ಯಾಡ್‌ಗೆ ಬಂದಿಳಿದ ಪ್ರಧಾನಿ ಮೋದಿ, ಅಲ್ಲಿಂದ ರಸ್ತೆ ಮಾರ್ಗವಾಗಿ ಚೂರಲ್‌ಮಲಾಗೆ ತೆರಳಿದರು. ಭೂಕುಸಿತದಿಂದ ಹಾನಿಗೊಂಡ ಚೂರಲ್‌ಮಲಾ, ಮುಂಡಕ್ಕೈ ಮತ್ತು ಪುಂಚಿರಿಮಟ್ಟಂ ಗ್ರಾಮಗಳನ್ನು ವೀಕ್ಷಿಸಿದರು. ಚೂರಲ್ಮಲ ತಲುಪಿದ ನಂತರ ವಾಹನದಿಂದ ಇಳಿದು, ಸೇನಾಪಡೆ ನಿರ್ಮಿಸಿದ್ದ ತಾತ್ಕಾಲಿಕ ಸೇತುವೆ ಮೇಲೆ ನಡೆದು ಸಾಗಿ ಹಾನಿಯ ಸಮೀಕ್ಷೆ ನಡೆಸಿದರು.

ಅಧಿಕಾರಿಗಳ ಜತೆ ಪರಿಶೀಲನಾ ಸಭೆ

ಸ್ಥಳ ವೀಕ್ಷಣೆ ಬಳಿಕ ವಯನಾಡ್ ಕಲೆಕ್ಟರೇಟ್‌ನಲ್ಲಿ ಭೂಕುಸಿತಕ್ಕೆ ಸಂಬಂಧಿಸಿ ಪ್ರಧಾನಿ ಮೋದಿ ಕೇರಳ ರಾಜ್ಯದ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ ನಡೆಸಿದರು. ಭಾರತ ಸರಕಾರ ಕೇರಳದ ಜತೆಗಿದೆ. ಪುನರ್ವಸತಿ ದೇಶದ ಜವಾಬ್ದಾರಿ. ನೊಂದವರ ಜತೆ ನಿಲ್ಲುವುದೇ ಮುಖ್ಯ. ದುರಂತ ಸಂದರ್ಭದಲ್ಲಿ ಎಲ್ಲರೂ ಒಟ್ಟಾಗಿ ನಿಂತರು. ಕೇಂದ್ರಕ್ಕೆ ಹಾನಿ ಪ್ರಮಾಣದ ಎಲ್ಲಾ ಮಾಹಿತಿ ನೀಡುವಂತೆ ಮುಖ್ಯಮಂತ್ರಿಗಳಿಗೆ ತಿಳಿಸಲಾಗಿದೆ ಎಂದು ಪ್ರಧಾನಿ ಹೇಳಿದರು. ದುರಂತ ನಡೆದ ದಿನ ಬೆಳಗ್ಗೆಯೇ ಸಿಎಂ ಪಿಣರಾಯಿ ವಿಜಯನ್ ಅವರಿಗೆ ಕರೆಮಾಡಿ ಮಾತನಾಡಿದೆ. ನಾವು ನೆರವು ನೀಡುತ್ತೇವೆ. ಆದಷ್ಟು ಬೇಗ ಸ್ಥಳಕ್ಕೆ ತಲುಪಲು ಪ್ರಯತ್ನಿಸುವುದಾಗಿ ಭರವಸೆ ನೀಡಿದ್ದೆ ಎಂದು ಪ್ರಧಾನಿ ಹೇಳಿದರು. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಸೇನೆ, ಪೊಲೀಸರು, ವೈದ್ಯರು ಎಲ್ಲರೂ ಸಂತ್ರಸ್ತರಿಗೆ ಸಾಧ್ಯವಾದಷ್ಟು ಬೇಗ ಸಹಾಯ ಮಾಡಲು ಶ್ರಮಿಸಿದ್ದಾರೆ. ಸಂತ್ರಸ್ತ ಕುಟುಂಬಗಳು ಒಂಟಿಯಲ್ಲ ಎಂದು ಭರವಸೆ ನೀಡಲು ಬಯಸುವೆ. ನಾವೆಲ್ಲರೂ ಅವರೊಂದಿಗಿದ್ದೇವೆ. ಹಣದ ಕೊರತೆಯಿಂದ ಯಾವುದೇ ಪುನರ್ವಸತಿ ಕೆಲಸಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳುತ್ತೇವೆ ಎಂದು ಮೋದಿ ಭರವಸೆ ನೀಡಿದರು. ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ಸಿಎಂ ಪಿಣರಾಯಿ ವಿಜಯನ್, ಕೇಂದ್ರ ಸಚಿವ ಸುರೇಶ್ ಗೋಪಿ ಕೂಡಾ ಸಭೆಯಲ್ಲಿದ್ದರು.

ರಕ್ಷಣಾಪಡೆ ಸಿಬ್ಬಂದಿಗಳು, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ವಿ.ವೇಣು ಮತ್ತು ಜಿಲ್ಲಾಧಿಕಾರಿ ಜತೆ ಮಾತನಾಡಿ ಮಾಹಿತಿ ಪಡೆದುಕೊಂಡರು. ಬಂಡೆಗಳು ಮತ್ತು ಅವಶೇಷ ಗಳಿಂದ ಆವೃತವಾದ ಪ್ರದೇಶದಲ್ಲಿ ನಡೆಯುತ್ತಾ ಸಾಗಿ ಹಾನಿ ಪ್ರಮಾಣವನ್ನು ಪ್ರಧಾನಿ ವೀಕ್ಷಿಸಿದರು.

ಮೇಪ್ಪಾಡಿ ಆಸ್ಪತ್ರೆಯಲ್ಲಿ ಸಂತ್ರಸ್ತರಾದ ಅರುಣ್, ಅನಿಲ್, 8 ವರ್ಷದ ಆವಂತಿಕಾ ಮತ್ತು ಒಡಿಶಾದ ಸುಹೃತಿಯನ್ನು ಪ್ರಧಾನಿ ಮೋದಿ ಭೇಟಿ ಮಾಡಿ, ಆರೋಗ್ಯ ವಿಚಾರಿಸಿದರು.

- ಜು.30ರ ನಸುಕಿನಲ್ಲಿ ಭೂಕುಸಿತ
- ನಾಲ್ಕು ಗ್ರಾಮಗಳು ಸಂತ್ರಸ್ತ
- ಒಟ್ಟು 417 ಮಂದಿ ಸಾವಿನ ಶಂಕೆ
- 233 ಅಂತ್ಯಕ್ರಿಯೆಗಳು ಜರುಗಿವೆ
- ಇನ್ನೂ ಪತ್ತೆಯಾಗದ 131 ಮಂದಿ
- ಶೋಧ ಕಾರ್ಯ ಮುಂದುವರಿಕೆ
- ಆ.9 ಸರಕಾರಿ ಅಂಕಿ ಅಂಶ ಪ್ರಕಾರ ಸಾವು ದೃಢಪಟ್ಟಿದ್ದು 229
- ಮೃತದೇಹ-ದೇಹದ ಬಿಡಿಭಾಗ ಸೇರಿ ಒಟ್ಟು 420 ಅಟಾಪ್ಸಿ

2,000 ಕೋಟಿ ರು. ಬೇಡಿಕೆ

ಧಾರಾಕಾರ ಮಳೆ, ಪ್ರವಾಹ, ಭೂಕುಸಿತ ಸೇರಿದಂತೆ ಸರಣಿ ಪ್ರಾಕೃತಿಕ ವಿಪತ್ತುಗಳಿಂದ 2 ಗ್ರಾಮಗಳು ನಾಮಾವಶೇಷ ವಾಗಿದ್ದರೆ, ಇನ್ನೆರಡು ಗ್ರಾಮಗಳು ಬಹುತೇಕ ಹಾನಿಗೀಡಾಗಿವೆ. ಈ ಪ್ರದೇಶದಲ್ಲಿ ಪುನರ್ವಸತಿ ಮತ್ತು ಪರಿಹಾರ ಕಾರ್ಯಗಳಿಗಾಗಿ ದೊಡ್ಡ ಮೊತ್ತದ ಅಗತ್ಯವಿದೆ ಎಂದಿರುವ ಕೇರಳ ಸರಕಾರ, ಕೇಂದ್ರ ಸರಕಾರದ ವಿಪತ್ತು ಪರಿಹಾರ ನಿಧಿಯಿಂದ 2,000 ಕೋಟಿ ರು.ಗಳ ನೆರವು ಕೋರಿದೆ.

91 ಕುಟುಂಬಗಳಿಗೆ ಮನೆ

ಮೆಪ್ಪಾಡಿ ಪಂಚಾಯತ್‌ನಲ್ಲಿ ಸದ್ಯ 14 ಆಶ್ರಯ ಶಿಬಿರ ಚಾಲನೆಯಲ್ಲಿವೆ. 464 ಮಕ್ಕಳು, 743 ಮಹಿಳೆಯರು, 735 ಪುರುಷರಿಗೆ ಆಶ್ರಯ ನೀಡಲಾಗಿದೆ. ಇಡೀ ಮನೆಯನ್ನು ಕಳೆದುಕೊಂಡಿರುವ 4 ಗ್ರಾಮಗಳ 91 ಕುಟುಂಬಗಳಿಗೆ ಮನೆ ಒದಗಿಸಲು ರಾಜ್ಯ ಸರಕಾರ ನಿರ್ಧಾರ ಮಾಡಿದೆ ಎಂದು ರಾಜ್ಯ ಸರಕಾರದ ಮೂಲಗಳು ತಿಳಿಸಿವೆ.

ಅತ್ಯಾಚಾರ ಮಾಡಿ ಕಿರಿ ವೈದ್ಯೆ ಕೊಲೆ

ಆಸ್ಪತ್ರೆಯಲ್ಲಿ ಅರೆನಗ್ನ ಶವ ಪತ್ತೆ | ಪ್ರತಿಭಟನೆ ಬಳಿಕ ಆರೋಪಿ ಸೆರೆ

ಕೋಲ್ಕತ್ತ: ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತ ನಗರದಲ್ಲಿನ ಸರಕಾರಿ ಆರ್‌ಜಿಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆಯನ್ನು ಅತ್ಯಾಚಾರ ನಡೆಸಿ ಕೊಲೆ ಮಾಡಲಾಗಿದೆ.

ಆಸ್ಪತ್ರೆಯ ತುರ್ತು ವಿಭಾಗ ಹೊರತುಪಡಿಸಿ ಉಳಿದೆಲ್ಲಾ ವಿಭಾಗಗಳ ವೈದ್ಯರು ಘಟನೆ ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಆರೋಪಿಯನ್ನು ತಕ್ಷಣ ಬಂಧಿಸಿ ಗಲ್ಲಿಗೇರಿಸಬೇಕು ಎಂದು ಕಾಲೇಜಿನ ವೈದ್ಯಕೀಯ ಮತ್ತು ಪಿಜಿ ವಿದ್ಯಾರ್ಥಿಗಳು, ತರಬೇತಿ ವೈದ್ಯರು, ಕಿರಿಯ ವೈದ್ಯರು ಆಗ್ರಹಿಸಿದ್ದಾರೆ. ಪ್ರತಿಭಟನೆ ತೀವ್ರಗೊಂಡ ಬಳಿಕ ಎಚ್ಚೆತ್ತ ಪೊಲೀಸರು, ಆರೋಪಿ ಸಂಜೋಯ್ ರಾಯ್ ಎಂಬವನನ್ನು ಶನಿವಾರ ಬಂಧಿಸಿದ್ದಾರೆ.

ಆಸ್ಪತ್ರೆಯ 4ನೇ ಮಹಡಿಯಲ್ಲಿ ಶುಕ್ರವಾರ ಬೆಳಗ್ಗೆ ಕಿರಿಯ ವೈದ್ಯೆಯ ಮೃತದೇಹ ಅರೆ ನಗ್ನ ಸ್ಥಿತಿಯಲ್ಲಿ ಪತ್ತೆಯಾಯಿತು. ಮೃತದೇಹದ ಬಹಳಷ್ಟು ಕಡೆ ಗಾಯದ ಗುರುತುಗಳಿದ್ದರೂ ಆಸ್ಪತ್ರೆಯ ಆಡಳಿತ ಮಂಡಳಿ ಇದೊಂದು ಆತ್ಮಹತ್ಯೆ ಎಂದು ಪ್ರತಿಪಾದಿಸಿತ್ತು. ಮರಣೋತ್ತರ ಪರೀಕ್ಷೆ ನಡೆಸಿದ ವೇಳೆ ವೈದ್ಯೆ ಮೇಲೆ ಅತ್ಯಾಚಾರ ನಡೆಸಿ ಬಳಿಕ ಕೊಲೆ ಮಾಡಿರುವುದು ದೃಢಪಟ್ಟಿತ್ತು.

ಆಸ್ಪತ್ರೆ ಭದ್ರತಾ ವ್ಯವಸ್ಥೆ ಲೋಪ

ಆಸ್ಪತ್ರೆಯ ಭದ್ರತಾ ವ್ಯವಸ್ಥೆಯಲ್ಲಿ ಭಾರೀ ಲೋಪವಿದೆ. ಯಾರು ಬೇಕಾದರೂ ಯಾವ ಸಮಯದಲ್ಲಾದರೂ ಆಸ್ಪತ್ರೆಯ ಯಾವ ವಿಭಾಗಕ್ಕಾದರೂ ಪ್ರವೇಶಿಸಬಹುದು. ಪ್ರವೇಶ ದ್ವಾರದಲ್ಲಿ ತಪಾಸಣೆ ಇಲ್ಲ, ಭದ್ರತಾ ಸಿಬ್ಬಂದಿಯೂ ಸರಿಯಾಗಿ ಕರ್ತವ್ಯ ನಿರ್ವಹಿಸಲ್ಲ. ಹತಳಾದ ವೈದ್ಯೆ ಗುರುವಾರ ರಾತ್ರಿ ಕರ್ತವ್ಯದಲ್ಲಿದ್ದರು. ಹೊರಗಿನಿಂದ ಬಂದ ಆರೋಪಿ ಲೈಂಗಿಕ ದೌರ್ಜನ್ಯ ನಡೆಸಿ ಕೊಲೆ ಮಾಡಿದ್ದಾನೆ ಎಂದು ಆಸ್ಪತ್ರೆ ಕಿರಿಯ ವೈದ್ಯರು, ವೈದ್ಯ ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ಈ ಮಧ್ಯೆ ರಾಜ್ಯಾದ್ಯಂತ ರಸ್ತೆ ತಡೆ ನಡೆಸಿ ಪ್ರತಿಭಟಿಸುವುದಾಗಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಶನಿವಾರ ತಿಳಿಸಿವೆ.

ಆಡಳಿತ-ಪ್ರತಿಪಕ್ಷ ನಾಯಕರ ಚಹಾಕೂಟ

3 ದಿನ ಮುನ್ನವೇ ಸಮಾಪ್ತಿಗೊಂಡ ಲೋಕಸಭೆ ರಾಜ್ಯಸಭೆ ಮುಂಗಾರು ಅಧಿವೇಶನ

ದೆಹಲಿ: 18ನೇ ಲೋಕಸಭೆಯ ಮುಂಗಾರು ಅಧಿವೇಶನದ ಕಲಾಪ ಶುಕ್ರವಾರ ಮುಂದೂಡಿಕೆ ಆದ ಬಳಿಕ ಸಂಸತ್ ಭವನದ ಸಂಕೀರ್ಣದಲ್ಲಿ ಸಂಜೆ ಆಡಳಿತ ಮತ್ತು ಪ್ರತಿಪಕ್ಷಗಳ ನಾಯಕರಿಗೆ ಅನೌಪಚಾರಿಕ ಚಹಾ ಕೂಟ ಆಯೋಜನೆಯಾಗಿತ್ತು. ಚಹಾ ಕೂಟಕ್ಕೆ ಆಗಮಿಸಿದ ವಿವಿಧ ಪಕ್ಷಗಳ ನಾಯಕರನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಆತ್ಮೀಯವಾಗಿ ಸ್ವಾಗತಿಸಿದರು.

ಬಜೆಟ್ ಅಧಿವೇಶನ ಆ.12ರವರೆಗೂ ನಡೆಯಬೇಕಿತ್ತು. ಆದರೆ, ನಿಗದಿಗಿಂತ 3 ದಿನ ಮುಂಚಿತವಾಗಿಯೇ ಸಮಾಪ್ತಿಗೊಂಡಿದೆ. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಶುಕ್ರವಾರ ಸಂಜೆಯೇ ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು. ರಾಜ್ಯಸಭೆ ಅಧಿವೇಶನವೂ ಮುಂದೂಡಿಕೆ ಆಯಿತು.

ಎರಡೂ ಸದನಗಳ ಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿಕೆ ಆದ ನಂತರ ಲೋಕಸಭೆ ಸ್ಪೀಕರ್ ಎಲ್ಲಾ ರಾಜಕೀಯ ಪಕ್ಷಗಳ ಸದಸ್ಯರಿಗೆ ಚಹಾಕೂಟಕ್ಕೆ ಆಯೋಜಿಸುವ ಸಂಪ್ರದಾಯಿಕವಿದೆ. ಆಡಳಿತ ಮತ್ತು ಪ್ರತಿಪಕ್ಷಗಳ ನಾಯಕರು ಭಾಗಿಯಾಗುತ್ತಾರೆ.

ಪ್ರಧಾನಿ ಮೋದಿ ಆಸೀನರಾಗಿದ್ದ ಸೋಫಾದಲ್ಲೇ ಸ್ಪೀಕರ್ ಓಂ ಬಿರ್ಲಾ ಇದ್ದರು. ಬಲಸಾಲಿನ ಆಸನದಲ್ಲಿ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಪಿಯೂಷ್ ಗೋಯಲ್, ಕಿರಣ್ ರಿಜಿಜು, ಕಿಂಜರಾಪು ರಾಮಮೋಹನ್ ನಾಯ್ಡು, ಚಿರಾಗ್ ಪಾಸ್ವಾನ್, ಪ್ರತಿಪಕ್ಷಗಳ ಸಂಸದರಾದ ಸುದೀಪ್ ಬಂಡೋಪಾಧ್ಯಾಯ, ಕನಿಮೋಳಿ ರಾಹುಲ್ ಅವರ ಸಾಲಿನಲ್ಲಿ ಕುಳಿತಿದ್ದರು. ಎಡಸಾಲಿನ ಸೋಫಾದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ ಮತ್ತಿತರರು ಆಸೀನರಾಗಿದ್ದರು.

ಪರಸ್ಪರರ ಮಾತುಕತೆ ಮಧ್ಯೆ, ರಾಜನಾಥ್ ಸಿಂಗ್ ಅವರನ್ನು ಉಕ್ರೇನ್ ಪರಿಸ್ಥಿತಿ ಬಗ್ಗೆ ರಾಹುಲ್ ವಿಚಾರಿಸಿದರು. ಕೆಲ ವಾರ ಮುನ್ನ ಪ್ರಧಾನಿ ಮೋದಿ ಮತ್ತು ರಾಹುಲ್ ನಡುವೆ ಸದನದಲ್ಲಿ ತೀಕ್ಷ್ಣ ಮಾತುಗಳ ವಿನಿಮಯವಾಗಿತ್ತು. ಚಹಾಕೂಟದ ದೃಶ್ಯ ವ್ಯತಿರಿಕ್ತವಾಗಿತ್ತು.

ಅಧಿವೇಶನ ವಿಶೇಷ

ಮುಂಗಾರು ಅಧಿವೇಶನದಲ್ಲಿ ಹಣಕಾಸು ಮಸೂದೆ-2024 ಮತ್ತು ವಿನಿಯೋಗ ಮಸೂದೆ-2024, ಜಮ್ಮು-ಕಾಶ್ಮೀರ ವಿನಿಯೋಗ ಮಸೂದೆ-2024 ಮತ್ತು ಇಂಡಿಯನ್ ಏರ್‌ಕ್ರಾಫ್ಟ್ ಬಿಲ್-2024 ಸೇರಿದಂತೆ ಹಲವಾರು ಮಹತ್ವದ ಶಾಸನಗಳನ್ನು ಅಂಗೀಕರಿಸಲಾಯಿತು. ವಕ್ಫ್ ತಿದ್ದುಪಡಿ ವಿಧೇಯಕ ಲೋಕಸಭೆಯಲ್ಲಿ ಮಂಡನೆಯಾಗಿ ಜಂಟಿ ಸಂಸದೀಯ ಸಮಿತಿ ಪರಿಶೀಲನೆಗೆ ಕಳುಹಿಸಿಕೊಡಲಾಯಿತು.

ಪಿಎಂ ಆವಾಸ್‌ಗೆ 2.30 ಲಕ್ಷ ಕೋಟಿ ರು. ನೆರವು

ಸ್ವಚ್ಛ ತೋಟಕ್ಕಾಗಿ 1765 ಕೋಟಿ ರು. | ಕೇಂದ್ರ ಸಚಿವ ಸಂಪುಟ ಅನುಮೋದನೆ

ದೆಹಲಿ: 'ಪ್ರಧಾನ ಮಂತ್ರಿ ಆವಾಸ್ ಯೋಜನೆ-ನಗರ'(ಪಿಎಂಎವೈ-ನಗರ) ಯೋಜನೆಗೆ ಈ ಬಾರಿ 2.30 ಲಕ್ಷ ಕೋಟಿ ರು. ಅನುದಾನ ನೀಡಲು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ರಾಜ್ಯಗಳು/ಕೇಂದ್ರಾಡಳಿತ ಪ್ರದೇಶ ಮೂಲಕ ಮುಂದಿನ 5 ವರ್ಷಗಳಲ್ಲಿ ನಗರ ಪ್ರದೇಶಗಳಲ್ಲಿ ಕೈಗೆಟುಕುವ ದರದಲ್ಲಿ ಮನೆಗಳನ್ನು ನಿರ್ಮಿಸಲು ಅಥವಾ ಖರೀದಿಸಲು ಆರ್ಥಿಕ ನೆರವು ನೀಡಲಾಗುತ್ತದೆ. ಸ್ವಂತ ಮನೆ ಇಲ್ಲದ ಆರ್ಥಿಕ ದುರ್ಬಲ ವರ್ಗ (ಇಡಬ್ಲ್ಯುಎಸ್), ಕಡಿಮೆ ಆದಾಯದ ಗುಂಪು (ಎಲ್‌ಐಜಿ), ಮಧ್ಯಮ ಆದಾಯದ ಗುಂಪು (ಎಂಐಜಿ)ಗಳಿಗೆ ಸೇರಿದ ಕುಟುಂಬಗಳಿಗೆ ಯೋಜನೆಯ ನೆರವು ಸಿಗಲಿದೆ.

ವಾರ್ಷಿಕ 3 ಲಕ್ಷ ರು.ವರೆಗಿನ ಆದಾಯದ್ದು ಇಡಬ್ಲ್ಯುಎಸ್ ಕುಟುಂಬ, 3ರಿಂದ 6 ಲಕ್ಷ ರು.ವರೆಗೆ ಎಲ್‌ಐಜಿ ಕುಟುಂಬ ಮತ್ತು 6ರಿಂದ 9 ಲಕ್ಷ ರು.ವರೆಗೆ ವಾರ್ಷಿಕ ಆದಾಯವಿರುವುದು ಎಂ ಐ ಜಿ ಕುಟುಂಬ ಎಂದು ವರ್ಗೀಕರಿಸಲಾಗಿದೆ. ನಗರ ಪ್ರದೇಶದಲ್ಲಿ ಯೋಜನೆಯಡಿ ಒಟ್ಟು 1.18 ಕೋಟಿ ಮನೆಗಳು ಮಂಜೂರಾಗಿವೆ. ಈವರೆಗೆ 85.50 ಲಕ್ಷ ಮನೆಗಳ ನಿರ್ಮಾಣ ಅಥವಾ ಖರೀದಿಗೆ ನೆರವು ನೀಡಲಾಗಿದೆ.

ಸ್ವಚ್ಛ ತೋಟಕ್ಕಾಗಿ 1765 ಕೋಟಿ ರು.

ದೇಶದ ತೋಟಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ಮಾಡಲು ಕ್ಲೀನ್ ಪ್ಲಾಂಟ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಅದಕ್ಕಾಗಿ 1,765 ಕೋಟಿ ರು.ಗಳ ಯೋಜನೆಗೆ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ. ಹಣ್ಣುಗಳಲ್ಲಿ ರುಚಿ ಮತ್ತು ಪೌಷ್ಟಿಕಾಂಶ ಹೆಚ್ಚಿಸಲು ಕ್ರಿಮಿ-ಕೀಟ ಮುಕ್ತ, ಗುಣಮಟ್ಟದ ನಾಟಿ ಸಾಮಗ್ರಿ ಒದಗಿಸುವುದೇ ಕ್ಲೀನ್ ಪ್ಲಾಂಟ್ ಕಾರ್ಯಕ್ರಮವಾಗಿದೆ. ಹೆಚ್ಚಿನ ಇಳುವರಿ ಮತ್ತು ಆದಾಯಕ್ಕೆ ಕಾರಣವಾಗಲಿದೆ ಎಂದು ಹೇಳಲಾಗಿದೆ.

ರೈಲ್ವೆ 24,000 ಕೋಟಿ ರು. ಯೋಜನೆಗೆ ಸಮ್ಮತಿ

ದೆಹಲಿ: ರೈಲ್ವೆ ಸಚಿವಾಲಯದ 8 ಮಹತ್ವದ ಯೋಜನೆಗಳಿಗೆ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಅನುಮೋದನೆ ನೀಡಿದೆ. ರೈಲ್ವೆ ಸಂಪರ್ಕ ವೃದ್ಧಿ, ಪ್ರಯಾಣ ಸರಾಗಗೊಳಿಸುವ ಕ್ರಮ, ಸರಕು ಸಾಗಣೆ ವೆಚ್ಚ ತಗ್ಗಿಸಲು ಕ್ರಮ, ತೈಲ ಆಮದು ಇಳಿಕೆ ಗುರಿ ಹೊಂದಿರುವ ಈ ಯೋಜನೆಗಳ ಒಟ್ಟು ವೆಚ್ಚ 24,657 ಕೋಟಿ ರು. ಎಂದು ಅಂದಾಜು ಮಾಡಲಾಗಿದೆ. ಸಂಪುಟ ಸಮಿತಿ ಅನುಮೋದಿಸಿದ ಒಡಿಶಾ, ಮಹಾರಾಷ್ಟ್ರ, ಆಂಧ್ರಪ್ರದೇಶ, ಜಾರ್ಖಂಡ್, ಬಿಹಾರ, ತೆಲಂಗಾಣ, ಪಶ್ಚಿಮ ಬಂಗಾಳ ರಾಜ್ಯಗಳ ಒಟ್ಟು 14 ಜಿಲ್ಲೆಗಳನ್ನು ಈ ಯೋಜನೆಗಳು ಒಳಗೊಳ್ಳಲಿವೆ. 8 ಯೋಜನೆಗಳೂ 2030-31ರೊಳಗೆ ಪೂರ್ಣಗೊಳ್ಳಲಿವೆ. ಅಲ್ಲದೇ, 3 ಕೋಟಿ ಮಾನವ ದಿನಗಳ ಉದ್ಯೋಗ ಸೃಷ್ಟಿಸಲಿವೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ಇಸ್ರೇಲ್ ದಾಳಿಗೆ ಗಾಜಾದಲ್ಲಿ 100ಬಲಿ

ಇಸ್ರೇಲ್ ಗಾಜಾ ಮೇಲೆ ವೈಮಾನಿಕ ದಾಳಿ ಮುಂದುವರಿಸಿದ್ದು, ಶುಕ್ರವಾರ ಗಾಜಾ ಶಾಲೆಯಲ್ಲಿ ರಾಕೆಟ್ ಉಡಾಯಿಸಿದೆ. ಶಾಲೆಯಲ್ಲಿ ಆಶ್ರಯ ಪಡೆದಿದ್ದ ನೂರಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ. ಹತ್ತಾರು ಜನರು ಗಾಯಗೊಂಡಿದ್ದಾರೆ ಎಂದು ಪ್ಯಾಲೆಸ್ತೇನ್ ಸುದ್ದಿಸಂಸ್ಥೆ ಉಲ್ಲೇಖಿಸಿ ರಾಯಿಟರ್ಸ್ ವರದಿ ಮಾಡಿದೆ.

ಅತ್ಯಾಚಾರಿ ತಂದೆಗೆ 25 ವರ್ಷ ಜೈಲು

ಲಕ್ಷ ರು. ದಂಡ: ಪೋಕ್ಸೊ ಕೋರ್ಟ್

ಶ್ರಾವಸ್ತಿ: 15 ವರ್ಷದ ಮಲ ಮಗಳ ಮೇಲೆ ಅತ್ಯಾಚಾರವೆಸಗಿದ ತಂದೆಗೆ ಉತ್ತರ ಪ್ರದೇಶದ ಶ್ರಾವಸ್ತಿ ನ್ಯಾಯಾಲಯ 25

ವರ್ಷಗಳ ಜೈಲು ಶಿಕ್ಷೆ, 1 ಲಕ್ಷ ರು. ದಂಡ ವಿಧಿಸಿದೆ. ದಂಡದ ಹಣ ಪಾವತಿಸದೇ ಇದ್ದರೆ ಮತ್ತೆ 6 ತಿಂಗಳ ಕಾರಾಗೃಹವಾಸ ಅನುಭವಿಸುವಂತೆ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ (ಪೋಕ್ಸೊ) ನಿರ್ದೋಶ್ ಕುಮಾರ್ ತೀರ್ಪು ನೀಡಿದ್ದಾರೆ. ದಂಡ ಮೊತ್ತವನ್ನು ಬಾಲಕಿಗೆ ನೀಡುವಂತೆ ಸೂಚಿಸಿದ್ದಾರೆ.

2019ರಲ್ಲಿ ಘಟನೆ ನಡೆದಿದೆ. ಬೋಧಗಯಾದಲ್ಲಿನ ಬಾಲಕಿಯರ ರಕ್ಷಣಾ ಗೃಹದಲ್ಲಿ ಆಶ್ರಯಪಡೆದು ಚೇತರಿಸಿಕೊಂಡ ಬಳಿಕ ಬಾಲಕಿ 2021ರ ಜೂನ್‌ನಲ್ಲಿ ಶ್ರಾವಸ್ತಿ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರ ಬರೆದು ನೋವು ತೋಡಿಕೊಂಡಿದ್ದಾಳೆ. ತನಗೆ 15 ವರ್ಷವಿದ್ದಾಗ ಮಲತಂದೆ ಅತ್ಯಾಚಾರವೆಸಗಿದರು. ಹಾಗಾಗಿ ಮನೆ ತೊರೆದೆ ಎಂದು ಹೇಳಿದ್ದಾಳೆ. ಆ ಬಳಿಕವಷ್ಟೇ ಅತ್ಯಾಚಾರ ಬೆಳಕಿಗೆ ಬಂದಿದೆ. 2021ರ ಜೂ.3ರಂದು ಆರೋಪಿಯನ್ನು ಬಂಧಿಸಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು.

ಭಾರತದಲ್ಲಿ ಸದ್ಯದಲ್ಲೇ ದೊಡ್ಡ ಹಗರಣ ಬಯಲು

ಅಮೆರಿಕದ ಹಿಂಡನ್‌ಬರ್ಗ್ ಎಚ್ಚರಿಕೆ

ದೆಹಲಿ: ಅಮೆರಿಕದ ಸಂಶೋಧನಾ ಸಂಸ್ಥೆ 'ಹಿಂಡೆನ್‌ಬರ್ಗ್' ಮತ್ತೊಮ್ಮೆ ಭಾರತದತ್ತ ವಾರೆನೋಟ ಬೀರಿದೆ. ಭಾರತದಲ್ಲಿ ಸದ್ಯದಲ್ಲೇ ಮತ್ತೊಂದು ದೊಡ್ಡ ಹಗರಣದ ಹೂರಣ ಹೊರಬೀಳಲಿದೆ ಎಂಬ ಸುಳಿವು ನೀಡುವ ಸಂದೇಶವನ್ನು ಸಂಶೋಧನಾ ಸಂಸ್ಥೆ ಶನಿವಾರ ಜಾಲತಾಣದಲ್ಲಿ ಹಂಚಿಕೊಂಡಿದೆ. ಭಾರತದಲ್ಲಿ ಸದ್ಯದಲ್ಲೇ ಮಹತ್ವದ ಘಟನೆ ನಡೆಯಲಿದೆ ಎಂದು ಹಿಂಡೆನ್ಬರ್ಗ್ ರಿಸರ್ಚ್ ಕಂಪನಿ ಎಕ್ಸ್ ಖಾತೆಯಲ್ಲಿ ಬರೆದಿದೆ.

ಆಂತರಿಕ ವಹಿವಾಟುಗಳಲ್ಲಿ ಪ್ರಮಾದವಾಗಿದೆ, ಷೇರುಪೇಟೆ ನಿಯಮಗಳ ಉಲ್ಲಂಘನೆಯಾಗಿದೆ, ಅಕ್ರಮವಾಗಿ ಷೇರುಗಳ ಮೌಲ್ಯ ಹೆಚ್ಚುವಂತೆ ಮಾಡಲಾಗಿದೆ ಎಂದು ಅದಾನಿ ಸಮೂಹದ ಕಂಪನಿಗಳ ವಿರುದ್ಧ ಆರೋಪಿಸಿದ ಸಂಶೋಧನಾ ವರದಿ ಪ್ರಕಟಿಸಿದ್ದ ಹಿಂಡೆನ್‌ಬರ್ಗ್, ಈಗ ವರ್ಷದ ನಂತರ ಮತ್ತೆ ಭಾರತದ ಕಂಪನಿಗಳಲ್ಲಿ ಭೀತಿ ಮೂಡುವಂತೆ ಮಾಡಿದೆ.

2023ರ ಜನವರಿಯಲ್ಲಿ ಹಿಂಡೆನ್‌ಬರ್ಗ್ ಅದಾನಿ ಗ್ರೂಪ್ ಹಣಕಾಸು ಅಕ್ರಮಗಳ ಆರೋಪ ವರದಿ ಪ್ರಕಟಿಸಿತು. ಪರಿಣಾಮ ಕಂಪನಿ ಷೇರುಗಳ ಬೆಲೆ ಗಣನೀಯವಾಗಿ ಕುಸಿಯಿತು. ಅದಾನಿ ಗ್ರೂಪ್ ಹಿಂಡನ್‌ಬರ್ಗ್ ವರದಿಯನ್ನು ತಳ್ಳಿಹಾಕಿದೆ.

ಭ್ರಷ್ಟ ಪಾಲಿಕೆ ಅಧಿಕಾರಿ ಮನೇಲಿ 6 ಕೋಟಿ ಆಸ್ತಿ

ನೋಟಿನ ಕಂತೆ ಕಂಡು ಎಸಿಬಿಗೇ ಆಘಾತ

ತೆಲಂಗಾಣ: ರಾಜಧಾನಿ ನಗರ ಹೈದರಾಬಾದ್‌ನಲ್ಲಿ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಅಧಿಕಾರಿಗಳ ತಂಡ

ನಿಜಾಮಾಬಾದ್ ಮಹಾನಗರ ಪಾಲಿಕೆ ಅಧೀಕ್ಷಕ ಹಾಗೂ ಪ್ರಭಾರಿ ಕಂದಾಯ ಅಧಿಕಾರಿ ದಾಸರಿ ನರೇಂದ್ರ ನಿವಾಸದ ಮೇಲೆ ದಾಳಿ ನಡೆಸಿ 6 ಕೋಟಿ ರು.ಗೂ ಅಧಿಕ ಮೌಲ್ಯದ ಆಸ್ತಿ ಪತ್ರ, ನಗ-ನಗದು ಪತ್ತೆ ಮಾಡಿ ವಶಪಡಿಸಿಕೊಂಡಿದೆ.

ತಂದೆಯ ಸಾವಿನ ಅನುಕಂಪದ ಆಧಾರದ ಮೇಲೆ ಕೆಲಸ ಗಿಟ್ಟಿಸಿಕೊಂಡವನ ಮನೆ ಶೋಧ ಮಾಡಿದಾಗ ಸಿಕ್ಕ ನೋಟಿನ ಕಂತೆಗಳ ರಾಶಿ ಕಂಡು ಎಸಿಬಿ ಅಧಿಕಾರಿಗಳೇ ಆಘಾತಕ್ಕೆ ಒಳಗಾಗಿದ್ದಾರೆ. 3 ಕೋಟಿ ರು. ನಗದು ಹಣ, ಅರ್ಧ ಕೆಜಿ ಚಿನ್ನ, ಬ್ಯಾಂಕ್ ಖಾತೆಯಲ್ಲಿ 10 ಲಕ್ಷ ರು, 17 ಸ್ಥಿರಾಸ್ತಿಗಳ ದಾಖಲೆಗಳು ಪತ್ತೆಯಾಗಿವೆ. ನರೇಂದ್ರನನ್ನು ಬಂಧಿಸಿ ಭ್ರಷ್ಟಾಚಾರ ತಡೆ ಕಾಯಿದೆಯ ಸೆಕ್ಷನ್ 13(1)(ಬಿ) ಮತ್ತು 13(2) ಅನ್ವಯ ಅಪರಾಧ ಪ್ರಕರಣ ದಾಖಲಿಸಲಾಗಿದೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಯುಟ್ಯೂಬ್ ಮಾಜಿ ಸಿಇಒ ಸುಸಾನ್ ಸಾವು

ಶ್ವಾಸಕೋಶ ಕ್ಯಾನ್ಸರ್‌ಗೆ ಬಲಿ

ವಾಷಿಂಗ್ಟನ್: 2 ವರ್ಷಗಳಿಂದ ಶ್ವಾಸಕೋಶ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಯುಟ್ಯೂಬ್ ಮಾಜಿ ಸಿಇಒ ಸುಸಾನ್



ವೋಜ್ಸಿಕಿ(56) ಶನಿವಾರ ನಿಧನರಾದರು. ಆಲ್ಫಾ ಬೆಟ್ ಮತ್ತು ಗೂಗಲ್ ಸಿಇಒ ಸುಂದರ ಪಿಚ್ಚೈ ಈ ವಿಷಯ ತಿಳಿಸಿದ್ದಾರೆ.

1990ರಲ್ಲಿ ಗೂಗಲ್ ಮೂಲಕ ವೃತ್ತಿ ಜೀವನ ಆರಂಭಿಸಿದ ಸುಸಾನ್, 2014-23 ಅವಧಿ ಯಲ್ಲಿ ಯುಟ್ಯೂಬ್ ಸಿಇಒ ಆಗಿದ್ದರು.

ಫೇಸ್‌ಬುಕ್‌ನಲ್ಲಿ ಪತ್ನಿ ನಿಧನದ ವಿಷಯವನ್ನು ಪತಿ ಡೆನ್ನಿಸ್ ಟ್ರೊಪರ್ ಹಂಚಿಕೊಂಡಿದ್ದಾರೆ. ಜೀವನ ಸಂಗಾತಿ ಸುಸಾನ್ ಅಪ್ರತಿಮ ಪ್ರತಿಭಾವಂತೆ. 26 ವರ್ಷಗಳ ದಾಂಪತ್ಯ ಜೀವನ, 5 ಮಕ್ಕಳ ತಾಯಿಯಾದ ವೋಜ್ಸಿಕಿಯದ್ದು ಬ್ರಿಲಿಯಂಟ್ ಮೈಂಡ್. ಆಕೆ ಬಹಳ ಮಂದಿಯ ಪ್ರೀತಿಯ ವ್ಯಕ್ತಿಯಾಗಿದ್ದಳು ಎಂದು ಉಲ್ಲೇಖಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಮಾದಕ ವಸ್ತು ಮಾರಾಟ ಇಬ್ಬರ ಬಂಧನ

ಪುತ್ತೂರು: ನಿಷೇಧಿತ ಡ್ರಗ್ಸ್ ಎಂಡಿಎಂಎನ್ನು ಆಟೋ ರಿಕ್ಷಾದಲ್ಲಿ ಸಾಗಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಉಪ್ಪಿನಂಗಡಿ ಪೊಲೀಸರು ಬಂಧಿಸಿದ್ದಾರೆ. ಕೆದಿಲ ಗ್ರಾಮದ ಗಡಿಯಾರ ನಿವಾಸಿ ಮೊಹಮ್ಮದ್ ನಾಸೀರ್ (24) ಹಾಗೂ ಪೆರಾಜೆ ಗ್ರಾಮದ ಏನಾಜೆ ಬುಡೋಳಿ ನಿವಾಸಿ ಮುಹಮ್ಮದ್ ಆಸೀಫ್ ಬಿ. (21) ಹಾಗೂ ಸಿನಾನ್ ಬಂಧಿತರು. ಪುತ್ತೂರು ತಾಲೂಕು ನೆಕ್ಕಿಲಾಡಿ ಗ್ರಾಮದ ನೆಕ್ಕಿಲಾಡಿ ಜಂಕ್ಷನ್ ಬಳಿ ವಾಹನ ತಪಾಸಣೆ ನಡೆಸುತ್ತಿರುವ ಸಂದರ್ಭ ಬಂದ ಆಟೋ ರಿಕ್ಷಾ ತಪಾಸಣೆಗೆ ನಿಲ್ಲಿಸಲು ಪೊಲೀಸರು ಸೂಚಿಸಿದ್ದಾರೆ. ಈ ವೇಳೆ ಆರೋಪಿಗಳು ಆಟೋ ನಿಲ್ಲಿಸದೆ ಪರಾರಿಯಾಗಲು ಯತ್ನಿಸಿದ್ದಾರೆ. ಈ ವೇಳೆ ಅವರನ್ನು ಹಿಡಿದ ಪೊಲೀಸರು ವಿಚಾರಣೆ ನಡೆಸಿದಾಗ ಆಟೋ ರಿಕ್ಷಾದಲ್ಲಿ ಸುಮಾರು 18,720 ರೂ ಮೌಲ್ಯದ 9.36 ಗ್ರಾಂ ನಿಷೇದಿತ ಎಂ.ಡಿ.ಎಂ.ಎ ಮಾದಕ ವಸ್ತು ಮತ್ತು 15 ಚಿಕ್ಕ ಚಿಕ್ಕ ಪ್ಲಾಸ್ಟಿಕ್ ಕವರ್‌ಗಳು ಪತ್ತೆಯಾಗಿರುತ್ತದೆ

ಅಪಘಾತ ಪ್ರಕರಣ: ಆರೋಪಿ ಖುಲಾಸೆ

ಕುಂದಾಪುರ: ಪುತ್ತೂರು ತಾಲೂಕು ಬಲ್ನಾಡು ಎಂಬಲ್ಲಿ 2021ರ ಅ.10ರಂದು ನಡೆದಿದ್ದ ಅಪಘಾತ ಪ್ರಕರಣದಲ್ಲಿ ಬೈಕ್ ಸವಾರನ ಸಾವಿಗೆ ಕಾರಣನೆಂದು ಕೇಸಿಗೆ ಒಳಗಾಗಿದ್ದ ಆರೋಪಿ ಚಾಲಕನನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ. ಬಲ್ನಾಡಿನ ಉಳ್ಳಾಳ್ತಿ ಕಾಂಪ್ಲೆಕ್ಸ್ ಬಳಿ ಗೋಲ್ಡನ್ ಬೇಕರಿಯ ಮಾಲಕ ಬಲ್ನಾಡು ಪಳ್ಳಿಕೆರೆ ನಿವಾಸಿ ಅಬ್ದುಲ್ ಅಝೀಜ್ ಅವರ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿ ಲಾರಿ ಚಾಲಕ ಬ್ರಹ್ಮಾವರ ತಾಲೂಕು ವಡ್ಡರ್ಸೆ ಗ್ರಾಮದ ಯಾಳಹಕ್ಲು ನಿವಾಸಿ ಸುಧಾಕರ ಶೆಟ್ಟಿ ಅವರನ್ನು ಪುತ್ತೂರು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯವು ಖುಲಾಸೆಗೊಳಿಸಿ ಆದೇಶಿಸಿದೆ.

ಮೆಸ್ಕಾಂ ಜನ ಸಂಪರ್ಕ ಸಭೆ

ಚಿಕ್ಕಮಗಳೂರು: ಮೆಸ್ಕಾಂ ಆಲ್ದೂರು ಉಪವಿಭಾಗ ಕಚೇರಿಯಲ್ಲಿ ಆಗಸ್ಟ್ 13 ರಂದು ಬೆಳಗ್ಗೆ 10.30 ಗಂಟೆಯಿಂದ 12 ಗಂಟೆಯ ವರೆಗೆ ಜನ ಸಂಪರ್ಕ ಸಭೆ ಏರ್ಪಡಿಸಲಾಗಿದೆ. ಮೆಸ್ಕಾಂನ ಅಧಿಕಾರಿಗಳು ಭಾಗವಹಿಸಲಿದ್ದು, ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ ಗ್ರಾಹಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಮೆಸ್ಕಾಂನ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೌಲ್ಯ ಮಾಪನ: ನಿಷೇಧಾಜ್ಞೆ ಜಾರಿ

ಚಿಕ್ಕಮಗಳೂರು: ಆಗಸ್ಟ್ ಮಾಹೆಯಲ್ಲಿ ನಡೆಯುವ ಎಸ್.ಎಸ್.ಎಲ್.ಸಿ ಪರೀಕ್ಷೆ-3ರ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯ ನಡೆಯುತ್ತಿದ್ದು, ಆಗಸ್ಟ್ 12 ರಿಂದ ಪರೀಕ್ಷೆ ಮೌಲ್ಯಮಾಪನ ಕಾರ್ಯ ಮುಕ್ತಾಯಗೊಳ್ಳುವವರೆಗೆ ಜಿಲ್ಲೆಯ ಒಟ್ಟು 3 ಮೌಲ್ಯಮಾಪನ ಕೇಂದ್ರಗಳಾದ ಚರ್ಚ್ ರಸ್ತೆ, ಸಂತ ಜೋಸೆಫ್‌ರ ಬಾಲಿಕಾ ಪ್ರೌಢಶಾಲೆ, ದಂಟರಮಕ್ಕಿ, ಸಂತ ಜೋಸೆಫ್‌ರ ಬಾಲಕರ ಪ್ರೌಢಶಾಲೆ ಮತ್ತು ಮಲ್ಲಂದೂರು ರಸ್ತೆ ವಾಸವಿ ಪ್ರೌಢಶಾಲೆಗಳ ಸುತ್ತ ಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಹೊರಡಿಸಿ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳೆ ನಾಶ: ರೈತರಿಗೆ ಪರಿಹಾರಕ್ಕೆ ಒತ್ತಾಯ

ಚಿಕ್ಕಮಗಳೂರು: ಪ್ರಸಕ್ತ ಸಾಲಿನಲ್ಲಿ ವಾಡಿಕೆಗಿಂತ ಹೆಚ್ಚು ಸುರಿದ ಮಳೆಯಿಂದಾಗಿ ಮನೆ ಹಾಗೂ ಬೆಳೆಯನ್ನು ಕಳೆದುಕೊಂಡ ರೈತರಿಗೆ ಶೀಘ್ರವೇ ಪರಿಹಾರ ಒದಗಿಸಲು ಸರಕಾರ ಮುಂದಾಗಬೇಕು ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಗುರುಶಾಂತಪ್ಪ ಒತ್ತಾಯಿಸಿದರು. ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು ಮೇ ಹಾಗೂ ಜುಲೈ ತಿಂಗಳಾಂತ್ಯದವರೆಗೆ ಸುರಿದ ಧಾರಾಕಾರ ಮಳೆಯ ಪರಿಣಾಮ ರೈತರು ನಿರೀಕ್ಷಿಸಿದಷ್ಟು ಫಸಲು ತೊರೆಯದೇ ಬಹುತೇಕ ನಷ್ಟವೇ ಸಂಭವಿಸಿದೆ. ಅಲ್ಲದೇ ಕೆಲವು ಬೆಳೆಗಳು ಹೊಲದಲ್ಲೇ ಕರಗಿಹೋಗಿದೆ ಎಂದು ತಿಳಿಸಿದರು. ಈ ನಡುವೆ ಬಿರುಗಾಳಿಯಿಂದ ಜಿಲ್ಲೆಯ ಹಲವಾರು ಬಡ ನಿವಾಸಿಗಳ ನೂರಾರು ಮನೆಗಳು ಬಿದ್ದು ಸ್ಥಳೀಯವಾಗಿ ಆಶ್ರಯ ಪಡೆದಿದ್ದಾರೆ. ಕೇವಲ ಚಿಕ್ಕಮಗಳೂರು ತಾಲೂಕಿನಲ್ಲೇ 65 ಮನೆಗಳು ಸಂಪೂರ್ಣ ಹಾನಿಯಾಗಿರುವುದು ತಿಳಿದು ಬಂದಿದೆ. ಜೊತೆಗೆ ವಿದ್ಯುತ್ ಕಂಬಗಳು ಉರುಳಿದ್ದು ಪೂರ್ಣ ಪ್ರಮಾಣದ ದುರಸ್ತಿಯಾಗಿಲ್ಲ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರೈತ ಸಂಘದ ಮಾಜಿ ಅಧ್ಯಕ್ಷ ಎಂ.ಸಿ.ಬಸವರಾಜು, ತಾಲ್ಲೂಕು ಅಧ್ಯಕ್ಷ ಸುನೀಲ್ ಕುಮಾರ್ ಮತ್ತಿತರಿದ್ದರು.

{ ಕೆ.ಜೆ.ಜಾರ್ಜ್ } ಸಚಿವ

ಮೂಡಾ ನಿವೇಶನಗಳ ಹಂಚಿಕೆಗೆ ಭೂಸ್ವಾಧೀನ ಮಾಡದೆ ಮುಖ್ಯಮಂತ್ರಿಯವರ ಪತ್ನಿಯ ಜಮೀನು ಪಡೆಯಲಾಗಿತ್ತು. ಕಾನೂನು ಪ್ರಕಾರ ಆ ಭೂಮಿಯನ್ನು ಸ್ವಾಧೀನದಿಂದ ಕೈಬಿಡಬೇಕಿತ್ತು. ಆದರೆ, 50:50 ಅನುಪಾತದಲ್ಲಿ ನಿವೇಶನ ನೀಡುವುದಾಗಿ ಹೇಳಿ ಅದರಂತೆ ಬಿಜೆಪಿ ಸರಕಾರ ಅಧಿಕಾರದಲ್ಲಿದ್ದಾಗ ಕ್ರಮ ಕೈಗೊಳ್ಳಲಾಗಿತ್ತು. ಈಗ ಅವರು ಮುಖ್ಯಮಂತ್ರಿಗಳ ವಿರುದ್ಧವೇ ಆರೋಪ ಮಾಡುತ್ತಿದ್ದಾರೆ.

ವಿದ್ಯಾರ್ಥಿಗಳ ಭವಿಷ್ಯ ಉಜ್ವಲಕ್ಕೆ ಓದಿನ ಜತೆಗೆ ಕ್ರೀಡೆಯೂ ಅವಶ್ಯ

ಜ್ಞಾನ ದರ್ಶಿನಿ, ಜ್ಞಾನವರ್ಷಿಣಿ ಪುಸ್ತಕ ಬಿಡುಗಡೆ | ಅಂಚೆ-ಕುಂಚ ಸ್ಪರ್ಧೆ ವಿಜೇತರಿಗೆ ಪುರಸ್ಕಾರ

ಉಜಿರೆ: ಆಟ-ಪಾಠಗಳು ಜೊತೆಯಾಗಿದ್ದಾಗ ಶಿಕ್ಷಣ ಅರ್ಥಪೂರ್ಣವಾಗಿದ್ದು ವಿದ್ಯಾರ್ಥಿಗಳು ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಪುಸ್ತಕದ ಜೊತೆ ಇದ್ದಾಗ ಮಸ್ತಕದ ವಿಕಾಸವೂ ಆಗುವುದರಿಂದ ವಿದ್ಯಾರ್ಥಿಗಳು ಓದುವ ಹವ್ಯಾಸವನ್ನು ಬೆಳೆಸಿಕೊಂಡು ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು ಎಂದು ಹಾವೇರಿಯ ಹುಕ್ಕೇರಿ ಮಠದ ಸದಾಶಿವ ಮಹಾಸ್ವಾಮೀಜಿ ಹೇಳಿದರು.

ಅವರು ಶನಿವಾರ ಧರ್ಮಸ್ಥಳದಲ್ಲಿ ಮಹೋತ್ಸವ ಸಭಾಭವನದಲ್ಲಿ ಶಾಂತಿವನ ಟ್ರಸ್ಟ್ ನಿಂದ ಪ್ರಕಟಿಸಿದ ''ಜ್ಞಾನದರ್ಶಿನಿ ಮತ್ತು ಜ್ಞಾನವರ್ಷಿಣಿ'' ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಪುಸ್ತಕಗಳನ್ನು ಓದುವುದರಿಂದ ಜ್ಞಾನವೃದ್ಧಿಯೊಂದಿಗೆ ಮಸ್ತಕದ ವಿಕಾಸವೂ ಆಗುತ್ತದೆ. ಕಾಲಹರಣ ಮಾಡುವ ಮೊಬೈಲ್ ಫೋನ್ ಬಳಕೆಯ ಚಟವನ್ನು ಕಡಿಮೆ ಮಾಡಿ, ದೃಢಸಂಕಲ್ಪದೊಂದಿಗೆ ನಿರ್ಧಿಷ್ಟ ಗುರಿಯನ್ನು ಇಟ್ಟುಕೊಂಡು ಉನ್ನತ ಸಾಧನೆ ಮಾಡಬೇಕು. ಸಾಧನೆ ಸಾಧಕರ ಸೊತ್ತು, ಅಲ್ಲದೆ ಸೋಮಾರಿಗಳ ಸೊತ್ತು ಅಲ್ಲ. ಪಠ್ಯದ ಜೊತೆಗೆ ನಿತ್ಯವೂ ಇತರ ಪುಸ್ತಕಗಳನ್ನೂ ಓದಬೇಕು. ಸರಕಾರ ಮಾಡಬೇಕಾದ ಕೆಲಸವನ್ನು ಧರ್ಮಸ್ಥಳದ ವತಿಯಿಂದ ಮಾಡುತ್ತಿದ್ದು, ಪುಸ್ತಕ ಪ್ರಕಾಶನ ರಾಜ್ಯಕ್ಕೆ ಮಾದರಿ ಕಾರ್ಯಕ್ರಮವಾಗಿದೆ ಎಂದು ಸ್ವಾಮೀಜಿ ಹೆಗ್ಗಡೆಯವರನ್ನು ಅಭಿನಂದಿಸಿದರು.

ಚಲನಚಿತ್ರ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಶುಭಾಶಂಸನೆ ಮಾಡಿ ಕಲೆಯನ್ನು ತಪಸ್ಸಿನಂತೆ ಏಕಾಗ್ರತೆ ಮತ್ತು ಸತತ ಪ್ರಯತ್ನದಿಂದ ಅಭ್ಯಾಸ ಮಾಡಿದರೆ ಉನ್ನತ ಸಾಧನೆ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಡಿ.ಡಿ.ಪಿ.ಐ. ವೆಂಕಟೇಶ ಸುಬ್ರಾಯ ಪಟಗಾರ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರವನ್ನು ಬೆಳೆಸಿಕೊಂಡು ಸಮಾಜದ ಸಭ್ಯ, ಸುಸಂಸ್ಕೃತ ನಾಗರಿಕರಾಗಬೇಕು ಎಂದು ಸಲಹೆ ನೀಡಿದರು.

ಡಿ. ಹರ್ಷೇಂದ್ರ ಕುಮಾರ್, ಸುಪ್ರಿಯಾ ಹರ್ಷೇಂದ್ರ ಕುಮಾರ್ ಮತ್ತು ಪೂರನ್‌ವರ್ಮ ಉಪಸ್ಥಿತರಿದ್ದರು. ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿಸಿದ ಯೋಗ ನಿರ್ದೇಶಕ ಶಶಿಕಾಂತ್ ಜೈನ್, ಯೋಗ ಮತ್ತು ನೈತಿಕ ಶಿಕ್ಷಣ ಯೋಜನೆಯನ್ನು ಈ ವರ್ಷ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರಕ್ಕೂ ವಿಸ್ತರಿಸಲಾಗುವುದು ಎಂದು ಪ್ರಕಟಿಸಿದರು. ಅಂಚೆ-ಕುಂಚ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ದಾವಣಗೆರೆಯ ಖ್ಯಾತ ಕಲಾವಿದ ಶಾಂತಯ್ಯ ಪರಡಿಮಠ ಕುಂಚದಿಂದ ರೂಪಿಸಿದ ಭಾರತಮಾತೆಯ ಚಿತ್ರ ಮತ್ತು ಮಂಗಳೂರಿನ ಸನಾತನ ನಾಟ್ಯಾಲಯದ ಕಲಾವಿದರ ಗಾಯನ ಮತ್ತು ನೃತ್ಯ ಸಮಾರಂಭಕ್ಕೆ ವಿಶೇಷ ಮೆರುಗನ್ನು ನೀಡಿತು.

ಅವರು ಶನಿವಾರ ಧರ್ಮಸ್ಥಳದಲ್ಲಿ ಮಹೋತ್ಸವ ಸಭಾಭವನದಲ್ಲಿ ಶಾಂತಿವನ ಟ್ರಸ್ಟ್ ನಿಂದ ಪ್ರಕಟಿಸಿದ ಜ್ಞಾನದರ್ಶಿನಿ ಮತ್ತು ಜ್ಞಾನವರ್ಷಿಣಿ ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿ ಹಾವೇರಿಯ ಹುಕ್ಕೇರಿ ಮಠದ ಸದಾಶಿವ ಮಹಾಸ್ವಾಮೀಜಿ ಅವರು ಮಾತನಾಡಿದರು.

ಗುರು, ಹಿರಿಯರನ್ನು ಗೌರವಿಸಿ

ಮಾನವೀಯತೆ ಇಲ್ಲದ ಜನ್ಮ ವ್ಯರ್ಥ. ಗುರು-ಹಿರಿಯರನ್ನು ಗೌರವಿಸುವುದು, ಸಮಾನ ಮನಸ್ಕರಲ್ಲಿ ಸ್ನೇಹಿತರಂತೆ ಪ್ರೀತಿ-ವಿಶ್ವಾಸದಿಂದ ವ್ಯವಹರಿಸುವುದು ಹಾಗೂ ಕಿರಿಯರಲ್ಲಿ ಪ್ರೀತಿ, ಕರುಣೆ ಅನುಕಂಪ ತೋರಿಸುವುದು ಇತ್ಯಾದಿ ಮಾನವೀಯ ಮೌಲ್ಯಗಳಿಂದ ಜೀವನ ಪಾವನವಾಗುತ್ತದೆ. ಆದುದರಿಂದ ಎಸ್.ಡಿ.ಎಂ. ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ, ಶಿಸ್ತು ಮತ್ತು ಮಾನವೀಯ ಮೌಲ್ಯಗಳನ್ನೂ ಕಲಿಸಿಕೊಡಲಾಗುತ್ತದೆ ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಮಾತನಾಡಿದರು.

ಡಾ.ಹೆಗ್ಗಡೆ ಕಾರ್ಯವೈಖರಿಗೆ ಪ್ರಧಾನಿ ಮೋದಿ ಮೆಚ್ಚುಗೆ

ದೆಹಲಿ: ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿಜಿಯವರನ್ನು 2024ರ ಆ.9ರಂದು ಪಾರ್ಲಿಮೆಂಟ್ ಭವನದ ಪ್ರಧಾನ ಕಚೇರಿಯಲ್ಲಿ ಭೇಟಿಯಾಗಿ ಮೂರನೇ ಬಾರಿ ಪ್ರಧಾನ ಮಂತ್ರಿ ಆಯ್ಕೆಯಾಗಿರುವುದಕ್ಕೆ ಶುಭಹಾರೈಸಿ ಶ್ರೀಕ್ಷೇತ್ರದ ಶ್ರೀಮಂಜುನಾಥ ಸ್ವಾಮಿಯ ಪ್ರಸಾದವನ್ನು ನೀಡಿ ದೇಶಕ್ಕೆ ಇನ್ನು ಉತ್ತಮ ಸೇವೆ ಸಲ್ಲಿಸುವಂತಾಗಲಿ ಎಂದು ಆಶೀರ್ವದಿಸಿದರು.

ನಂತರ ಅನೇಕ ವಿಷಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು. ರಾಜ್ಯಸಭಾ ಸಂಸದರ ವ್ಯಾಪ್ತಿಗೆ ಬರುವ ನಿಧಿಯನ್ನು ಪ್ರಧಾನಿಗಳು ಬೀದರ್‌ನಲ್ಲಿ ವಿನೂತನವಾಗಿ ವಿನಿಯೋಗಿಸಿ ಒಂದು ಕ್ಷೀರಕ್ರಾಂತಿಗೆ ನಾಂದಿ ಹಾಡಿರುವ ಬಗ್ಗೆ ಪ್ರಧಾನಮಂತ್ರಿಯವರಿಗೆ ವಿವರಿಸಿದರು. ಇದು ಒಂದು ಮಾದರಿ ಸಂಸದರ ನಿಧಿಯ ಸದ್ವಿನಿಯೋಗ ಎಂದು ಪ್ರಧಾನ ಮಂತ್ರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಹಾಗೆಯೇ ರಾಜ್ಯದಾದ್ಯಂತ ಗ್ರಾಮಾಭಿವೃದ್ಧಿ ಯೋಜನೆಯಿಂದ ನಿರ್ವಹಿಸಲ್ಪಡುತ್ತಿರುವ 10 ಸಾವಿರ ಸಿ.ಎಸ್.ಸಿ. ಕೇಂದ್ರಗಳ ಮೂಲಕ ಕೇಂದ್ರ ಸರಕಾರದ ಹಾಗೂ ಸಿ.ಎಸ್.ಸಿ.ಯ ಪ್ರಮುಖ ಸೇವೆಗಳನ್ನು ಗ್ರಾಮೀಣ ಜನತೆಯ ಮನೆ ಬಾಗಿಲಿಗೆ ತಲುಪಿಸುತ್ತಿರುವ ಬಗ್ಗೆ ಶ್ರೀಹೆಗ್ಗಡೆಯವರು ವಿವರಿಸಿದರು. ಇಲ್ಲಿಯವರೆಗೆ ಸುಮಾರು 3 ಕೋಟಿ ಸಿ.ಎಸ್.ಸಿ. ಸೇವೆಗಳು ಯೋಜನೆಯ ಮೂಲಕ ಜನಸಾಮಾನ್ಯರಿಗೆ ತಲುಪಿರುವ ಬಗ್ಗೆ ಪ್ರಧಾನಮಂತ್ರಿಗಳು ಅಚ್ಚರಿ ವ್ಯಕ್ತಪಡಿಸಿದರು. ಶ್ರೀಹೆಗ್ಗಡೆಯವರ ಈ ಎಲ್ಲಾ ಸೇವೆಗಳ ಚಿಂತನೆಯು ದೇಶಕ್ಕೆ ಮಾದರಿಯಾಗಲಿ ಎಂದು ಪ್ರಧಾನಮಂತ್ರಿಗಳು ಶ್ಲಾಘಿಸಿದರು.

ಬೀದರ್‌ನಲ್ಲಿ ಕ್ಷೀರಕ್ರಾಂತಿ: ಡಿ.ವೀರೇಂದ್ರ ಹೆಗ್ಗಡೆಯವರು ತಮ್ಮ ಸಂಸದರ ನಿಧಿಯಿಂದ ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಯಾದ ಬೀದರ್‌ನಲ್ಲಿ ಒಂದು ಕ್ಷೀರಕ್ರಾಂತಿಯನ್ನೇ ಮಾಡುವ ಯೋಜನೆ ಹಾಕಿಕೊಂಡು ಕೆ.ಎಂ.ಎಫ್. ಸಹಯೋಗದೊಂದಿಗೆ ಅನೇಕ ಹಾಲು ಒಕ್ಕೂಟಗಳನ್ನು ಅಭಿವೃದ್ಧಿಪಡಿಸಿ ಹೈನುಗಾರಿಕೆ ಮಾಡಲು ಅನೇಕ ಪ್ರೋತ್ಸಾಹಗಳನ್ನು ನೀಡಿದ್ದಾರೆ.

ಸಂಸದರ ನಿಧಿಯಿಂದ ಹಾಲು ಸಂಗ್ರಹಣಾ ಕಟ್ಟಡಗಳನ್ನು ನಿರ್ಮಿಸಿದ್ದಲ್ಲದೆ, ಹಾಲು ಸಂಗ್ರಹವನ್ನು ಹೆಚ್ಚಿಸಿಕೊಳ್ಳಲು ಅತ್ಯಾಧುನಿಕ ಯಂತ್ರಗಳಾದ ಆಟೋಮ್ಯಾಟಿಕ್ ಮಿಲ್ಕ್ ಕಲೆಕ್ಟಿಂಗ್ ಯುನಿಟ್ (ಎ.ಎಂ.ಸಿ.ಯು.), ಪ್ಯಾಟೋಮ್ಯಾಟಿಕ್ ಯಂತ್ರ, ಹಾಲು ತೂಕದ ಯಂತ್ರಗಳನ್ನು ಒದಗಿಸಿರುತ್ತಾರೆ. ಯೋಜನೆಯ ಕೃಷಿ ಅಧಿಕಾರಿಗಳನ್ನು ನಿಯೋಜಿಸಿ ಗ್ರಾಮೀಣ ರೈತರರಿಗೆ ಹೈನುಗಾರಿಕೆಯ ಬಗ್ಗೆ ಸೂಕ್ತ ತರಬೇತಿಯನ್ನು ನೀಡಿದ್ದಾರೆ.

ಈ ಯೋಜನೆ ಪ್ರಾರಂಭವಾಗುವುದಕ್ಕಿಂತ ಮುಂಚೆ ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಪ್ರತಿನಿತ್ಯ 18 ಸಾವಿರ ಲೀಟರ್ ಮಾತ್ರ ಇತ್ತು. ಇದು ಯೋಜನೆಯಿಂದಾಗಿ ಪ್ರತಿ ದಿನ ಗರಿಷ್ಠ 60 ಸಾವಿರ ಲೀಟರ್‌ಗೆ ಏರಿಕೆ ಕಂಡಿದ್ದು ಕೆಲವೇ ತಿಂಗಳುಗಳಲ್ಲಿ ಪ್ರತಿನಿತ್ಯ 1 ಲಕ್ಷ ಲೀಟರ್ ಹಾಲು ಸಂಗ್ರಹದ ಗುರಿಯನ್ನು ತಲುಪಲಿದ್ದು ಇದೊಂದು ಐತಿಹಾಸಿಕ ಉತ್ಪಾದನೆಯಾಗಿರುತ್ತದೆ. ಸಂಸದರ ನಿಧಿಯ ಬಳಕೆಗೆ ಇದು ಒಂದು ಉತ್ತಮ ಮಾದರಿ ಎಂದು ಪ್ರಧಾನಮಂತ್ರಿಗಳು ಶ್ಲಾಘಿಸಿದರು.

ರಾಷ್ಟ್ರೀಯ ಪಕ್ಷಗಳಿಂದ ಜನರ ಸಮಸ್ಯೆ ಕಡೆಗಣನೆ

ಚಿಕ್ಕಮಗಳೂರು: ಪ್ರಜಾಪ್ರಭುತ್ವವನ್ನು ಆಳಿರುವ ಎರಡು ರಾಷ್ಟ್ರಿಯ ಪಕ್ಷಗಳು ಒಂದೇ ನಾಣ್ಯದ ಎರಡು ಮುಖವಿದ್ದಂತೆ. ಕೇವಲ ಅಧಿಕಾರಕ್ಕಾಗಿ ಹೋರಾಡುತ್ತಿವೆ ಹೊರತು ಮತದಾರರ ಸಮಸ್ಯೆ ಆಲಿಸಲು ಮುಂದಾಗುತ್ತಿಲ್ಲ ಎಂದು ಆಮ್ ಆದ್ಮಿ ಪಕ್ಷದ ಜಿಲ್ಲಾ ಮಾಧ್ಯಮ ಪ್ರತಿನಿಧಿ ಡಾ. ಕೆ.ಸುಂದರಗೌಡ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಸ್ವಾತಂತ್ರ್ಯ ನಂತರ ದೇಶವನ್ನಾಳಿದ ರಾಜಕೀಯ ಪಕ್ಷಗಳು ಸರ್ವನಾಶ ಮಾಡಲು ಹೊರಟಿವೆ. ಭಾರೀ ಪ್ರಮಾಣದಲ್ಲಿ ಭ್ರಷ್ಟಚಾರವೆಸಗಿ ಮತದಾರರ ತೆರಿಗೆ ಹಣವನ್ನು ಲೂಟಿ ಹೊಡೆದ ಪರಿಣಾಮ ಬಡವರು, ಬಡವರಾಗಿಯೇ ಉಳಿಯುವ ಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

ಭ್ರಷ್ಟಮುಕ್ತ ಭಾರತ ಕಟ್ಟುವ ಆಲೋಚನೆಯನ್ನು ಮೈಗೂಡಿಸಿಕೊಂಡು ದೆಹಲಿಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷ ನೆಲಕಚ್ಚುವಂತೆ ಎಎಪಿ ಶಿಕ್ಷಣ, ಆರೋಗ್ಯ ನೀತಿಯನ್ನು ಆಕಾಶಮಟ್ಟಕ್ಕೆ ಬೆಳೆಸಿದ ಸೂತ್ರಧಾರಿ ನಾಯಕರನ್ನು ಇಡಿ, ಸಿಬಿಐ ಮುಖಾಂತರ ಬಂಧಿಸಿ ಜೈಲಿನಲ್ಲಿ ಇರಿಸಿ ಯಾವುದೇ ಪುರಾವೆಗಳನ್ನು ನೀಡದೇ ಸರ್ವಾಧಿಕಾರ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿದರು.

ವಿಶ್ವಮಟ್ಟದ ಶಿಕ್ಷಣ ನೀತಿ ಮತ್ತು ಶಿಕ್ಷಣದಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ಸರಕಾರಿ ಶಾಲಾ- ಕಾಲೇಜುಗಳಲ್ಲಿ ಸೃಷ್ಟಿಸಿದ ಒಂದೇ ಕಾರಣಕ್ಕಾಗಿ ಇಂದು ದೆಹಲಿಯ ಬಡಕುಟುಂಬದ ಮಕ್ಕಳು ವೈದ್ಯರು, ಇಂಜಿನಿಯಗಳನ್ನು ಸೃಷ್ಟಿಸಲು ಸಾಧ್ಯ ಎಂಬುದನ್ನು ಪರಿಚಯಿಸಿದ ದೆಹಲಿ ಉಪಮುಖ್ಯಮಂತ್ರಿ ಮಾನಿಷ್ ಶಿಶೋಡಿಯಾ ಅವರಿಗೆ ಸುಪ್ರೀಂ ಕೋರ್ಟ್ ಒಂದೂವರೆ ವರ್ಷದ ನಂತರ ಜಾಮೀನು ನೀಡಿದೆ ಎಂದರು.

ಕೋರ್ಟ್‌ನಲ್ಲಿ ಕೇಸಿನ ಬಗ್ಗೆ ಪುರಾವೆ ನೀಡದೇ ದೇಶಕ್ಕಾಗಿ ದುಡಿದ ನಾಯಕರನ್ನು ಜೈಲಿನ ಕತ್ತಲೆ ಕೋಣೆಯಲ್ಲಿಟ್ಟು ಸಾರ್ವಜನಿಕರ ಸೇವೆಗೆ ಸಿಗದೇ ಮಾಡಿರುವುದು ಮಹಾದೊಡ್ಡ ದ್ರೋಹ. ದೇಶದಲ್ಲಿ ಪ್ರಜಾ ಪ್ರಭುತ್ವವು ಬೇರುಮಟ್ಟದಿಂದ ಬೆಳೆಯಬೇಕಾದಲ್ಲಿ ಪ್ರಜೆಗಳೇ ಬೀದಿಗಿಳಿದು ಭ್ರಷ್ಟರನ್ನು ಬಹಿಷ್ಕರಿಸಲು ಮುಂದಾಗಬೇಕು ಎಂದು ತಿಳಿಸಿದರು.

ಸಾರ್ವಜನಿಕರು ಭ್ರಷ್ಟಮುಕ್ತ ಭಾರತದ ಇಚ್ಚಾಶಕ್ತಿ ಬೆಳೆಸಿಕೊಳ್ಳಬೇಕು. ಜನತಾ ನ್ಯಾಯಾಲಯವೇ ದಂಗೆ ಹೇಳುವ ಮುಖಾಂತರ ಪ್ರಜಾಪ್ರಭುತ್ವವನ್ನು ಉಳಿಸಲು ಹೋರಾಟಕ್ಕೆ ಕೈಹಾಕದಿದ್ದಲ್ಲಿ ಬಾಂಗ್ಲಾದೇಶದ ರಾಜಕೀಯ ಸ್ಥಿತಿಯಂತೆ ಭಾರತಕ್ಕೂ ಎದುರಾಗಿ ಜನತೆ ದಂಗೆ ಸೃಷ್ಟಿಸುವ ಮೊದಲು ಶಾಂತಿ, ಅಹಿಂತೆಯ ಪ್ರಜಾಪ್ರಭುತ್ವವನ್ನು ಬೆಳೆಸಲು ಜವಾಬ್ದಾರಿ ಹೊರಬೇಕು ಎಂದರು. ಈ ಸಂದರ್ಭದಲ್ಲಿ ಎಎಪಿ ಜಿಲ್ಲಾಧ್ಯಕ್ಷ ಲಿಂಗಾರಾಧ್ಯ, ಮುಖಂಡರುಗಳಾದ ಮೋಹನ್, ಪ್ರಕಾಶ್, ವಿಲೀಯಂ ಪೆರಾರ ಮತ್ತಿತರರು ಉಪಸ್ಥಿತರಿದ್ದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಆಮ್ ಆದ್ಮಿ ಪಕ್ಷದ ಜಿಲ್ಲಾ ಮಾಧ್ಯಮ ಪ್ರತಿನಿಧಿ ಡಾ. ಕೆ. ಸುಂದರಗೌಡ ಅವರು ಮಾತನಾಡಿದರು.

ಹಿಂದೂಗಳ ಮೇಲಿನ ದಾಳಿಗೆ ಅಸಮಾಧಾನ

ಪುತ್ತೂರು: ವಕ್ಫ್ ಬೋರ್ಡ್ ಹೆಸರಿನಲ್ಲಿ ಕಂಡ ಕಂಡ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಇದನ್ನು ತಡೆಯಲು ಕೇಂದ್ರ ಸರಕಾರ ವಕ್ಫ್ ಕಾನೂನಿನಲ್ಲಿ ತಿದ್ದುಪಡಿ ತರಲು ನಿರ್ಧರಿಸಿದೆ. ಆದರೆ ಈ ವಿಚಾರವನ್ನಿಟ್ಟು ಪ್ರತಿಪಕ್ಷಗಳು ಸದನದಲ್ಲಿ ಗದ್ದಲ ಎಬ್ಬಿಸುತ್ತಿದೆ ಎಂದು ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಹೇಳಿದ್ದಾರೆ.

ತೆಂಕಿಲದ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯ ಸಭಾಂಗಣದಲ್ಲಿ ಮೂರು ದಿನಗಳ ಕಾಲ ನಡೆಯುವ ಅಖಿಲ ಭಾರತೀಯ ವಿಧ್ಯಾರ್ಥಿ ಪರಿಷತ್ ನ ಮಂಗಳೂರು ವಿಭಾಗದ ಅಭ್ಯಾಸ ವರ್ಗಕ್ಕೆ ಚಾಲನೆ ನೀಡಿ ಮಾತನಾಡಿದರು. ವಕ್ಫ್ ಬೋರ್ಡ್ ಕಾನೂನು ತಿದ್ದುಪಡಿ ತಂದರೆ ವಿರೋಧ ಪಕ್ಷ ಮುಸಲ್ಮಾನರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಬೊಬ್ಬೆ ಹೊಡೆಯುತ್ತಿದೆ.

ಮುಸ್ಲಿಮರ ಮೇಲೆ ವಿಶ್ವದ ಎಲ್ಲೇ ದಾಳಿಯಾದರೂ ಪ್ರತಿಪಕ್ಷಗಳು ಸಂಸತ್ತಿನಲ್ಲಿ ಮಾತನಾಡುತ್ತದೆ. ಆದರೆ ಕಳೆದ ಒಂದು ವಾರದಿಂದ ಬಾಂಗ್ಲಾ ದೇಶದಲ್ಲಿ ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಮೇಲೆ ದಾಳಿಯಾಗುತ್ತಿದೆ .ಹೆಣ್ಣುಮಕ್ಕಳ, ಪುರುಷರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಆದರೆ ಕಾಂಗ್ರೆಸ್ ಮತ್ತು ಇತರ ಪ್ರತಿಪಕ್ಷಗಳು ಮೌನವಾಗಿದೆ ಎಂದು ಆರೋಪಿಸಿದರು.

ಹಿಂದೆ ಹಿಜಾಬ್ ವಿಚಾರದಲ್ಲಿ ಉಡುಪಿಯಲ್ಲಿ ಗಲಾಟೆ ನಡೆದಾಗ ಇಡೀ ವಿಶ್ವ ಭಾರತವನ್ನು ಪ್ರಶ್ನಿಸಿತ್ತು, ಸೌದಿ,ಪಾಕಿಸ್ತಾನ ಅಮೇರಿಕಾದಂತಹ ದೇಶಗಳು ಭಾರತವನ್ನು ಪ್ರಶ್ನಿಸಿತ್ತು, ಆದರೆ ಬಾಂಗ್ಲಾದ ಹಿಂದೂಗಳ ಮೇಲೆ ದೌರ್ಜನ್ಯವಾದಾಗ ಯಾರೂ ಮಾತಾಡಿಲ್ಲ, ದೇಶದ ಮುಸ್ಲಿಂ ನಾಯಕರು 2047 ಇಸವಿಗೆ ಭಾರತವನ್ನು ಮುಸ್ಲಿಂ ರಾಷ್ಟ್ರ ಮಾಡುತ್ತೇವೆಂದು ಬಹಿರಂಗ ಹೇಳಿಕೆ ನೀಡುತ್ತಿದ್ದಾರೆ.

ಒವೈಸಿ ಎನ್ನುವ ಸಂಸದ ಮುಂದಿನ ಪ್ರಧಾನಿ ಬುರ್ಖಾ ಧರಿಸಿದ ಮಹಿಳೆ ಎಂದು ಹೇಳುತ್ತಾನೆ. ಆದರೆ ಹಿಂದೂ ನಾಯಕರು ಈ ಬಗ್ಗೆ ಧ್ವನಿ ಎತ್ತುತ್ತಿಲ್ಲ, ಹಿಂದೂಗಳ ಮೇಲೆ ನಿರಂತರ ಆಕ್ರಮಣಗಳು ನಡೆಯುತ್ತಿದೆ. ಹಿಂದೂ ಬದುಕುಳಿದರೆ ಮಾತ್ರ, ಭಾರತ ಬದುಕುತ್ತದೆ ಎಂದರು.

ತೆಂಕಿಲದ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆಯ ಸಭಾಂಗಣದಲ್ಲಿ ಮೂರು ದಿನಗಳ ಕಾಲ ನಡೆಯುವ ಅಖಿಲ ಭಾರತೀಯ ವಿಧ್ಯಾರ್ಥಿ ಪರಿಷತ್‌ನ ಮಂಗಳೂರು ವಿಭಾಗದ ಅಭ್ಯಾಸ ವರ್ಗಕ್ಕೆ ಚಾಲನೆ ನೀಡಿ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಅವರು ಮಾತನಾಡಿದರು

ಮಗು ಮಾರಾಟ: ಪ್ರಕರಣ ದಾಖಲು

ಉಡುಪಿ: ಮಗು ಮಾರಾಟ ಘಟನೆಗೆ ಸಂಬಂಧಿಸಿ ಉಡುಪಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಬಿಯಾ ಬಾನು ಮತ್ತು ಖಾಲಿದ್ ಸಯ್ಯದ್ ಅವರಿಗೆ ಆ.19ರಂದು ಹೆಣ್ಣು ಮಗು ಜನಿಸಿತ್ತು. ಆ ಮಗು ಅವರ ವಶದಲ್ಲಿ ಇಲ್ಲದಿರುವ ಬಗ್ಗೆ ಆ.6ರಂದು ಪೆರಂಪಳ್ಳಿಯ ಅಂಗನವಾಡಿ ಕಾರ್ಯಕರ್ತೆ ಸರಿತಾ ಡಿಸೋಜಾ ಅವರು ಮಕ್ಕಳ ರಕ್ಷಣಾ ಘಟಕಕ್ಕೆ ಮಾಹಿತಿ ನೀಡಿದ್ದರು.

ಅನಂತರ ಮಕ್ಕಳ ರಕ್ಷಣ ಘಟಕದ ಸಾಮಾಜಿಕ ಕಾರ್ಯಕರ್ತರಾದ ಸುರಕ್ಷಾ, ಯೋಗೀಶ್ ಹಾಗೂ ಸರಿತಾ ಡಿಸೋಜಾ ಅವರು ಪೆರಂಪಳ್ಳಿಯ ಶೀಂಬ್ರ, ಭಟ್ರಕೋಡಿಯಲ್ಲಿರುವ ಆರೋಪಿಗಳ ಮನೆಗೆ ಭೇಟಿ ನೀಡಿದ್ದು, ಈ ವೇಳೆ ಮನೆಗೆ ಬೀಗ ಹಾಕಲಾಗಿತ್ತು. ಖಾಲಿದ್‌ಗೆ ಕರೆ ಮಾಡಿದಾಗ ಸ್ವೀಕರಿಸಲಿಲ್ಲ. ಬಳಿಕ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಈ ಬಗ್ಗೆ ಸುರಕ್ಷಾ ಅವರು ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಆ. 7ರಂದು ಆರೋಪಿಗಳನ್ನು ಪೊಲೀಸರು ಪತ್ತೆಹಚ್ಚಿ ಠಾಣೆಗೆ ಕರೆತಂದಿದ್ದರು.

ವಿಚಾರಣೆ ವೇಳೆ ಆರೋಪಿಗಳು ಮಗುವನ್ನು ಮೂಲ್ಕಿಯ ನಿವಾಸಿ ವಾಜಿದ್ ಅವರಿಗೆ ಕಾನೂನು ಬಾಹಿರವಾಗಿ ನೀಡಿರುವುದಾಗಿ ಬೆಳಕಿಗೆ ಬಂದಿದೆ. ಬಳಿಕ ಮಹಿಳಾ ಪೊಲೀಸ್ ಠಾಣೆಯ ಉಪನಿರೀಕ್ಷಕರು ವಾಜಿದ್‌ನ ಬಗ್ಗೆ ವಿಚಾರಣೆ ಮಾಡಿ ಆತನನ್ನು ಠಾಣೆಗೆ ಬರುವಂತೆ ತಿಳಿಸಿದ್ದರು.

ಆತ ಮಗುವಿನೊಂದಿಗೆ ಬಂದಿದ್ದು, ಮಗುವಿನ ಮಾರಾಟದ ಬಗ್ಗೆ ಸತ್ಯಾಸತ್ಯತೆ ತಿಳಿಯದೇ ಇದ್ದುದರಿಂದ ಪ್ರಕರಣ ದಾಖಲಿಸಲು ಸಾಧ್ಯವಾಗಿರಲಿಲ್ಲ. ಪ್ರಸ್ತುತ ಸುರಕ್ಷಾ ಅವರ ದೂರಿನಂತೆ ಉಡುಪಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಬಾಲ ನ್ಯಾಯ ಕಾಯ್ದೆಯಂತೆ ಪ್ರಕರಣ ದಾಖಲಾಗಿದೆ. ಪ್ರಸ್ತುತ ತಾಯಿ-ಮಗುವನ್ನು ಸುರಕ್ಷತೆಯ ದೃಷ್ಟಿಯಿಂದ ಉಡುಪಿಯ ಸಖೀ ಒನ್ ಸ್ಟಾಪ್ ಸೆಂಟರ್‌ಗೆ ದಾಖಲಿಸಲಾಗಿದೆ.

ಸೇನಾ ಸಾಧನಗಳ ತಯಾರಿಕೆಯಲ್ಲಿ ದೇಶ ಸ್ವಾವಲಂಬಿ

ಸತೀಶ್ ಭಂಡಾರಿಗೆ 'ಎಮಿನೆಂಟ್ ಬಂಟ್ ಪರ್ಸನಾಲಿಟಿ ಅವಾರ್ಡ್'

ಮಂಗಳೂರು: ಭಾರತೀಯ ಸೇನೆ ಇಂದು ಸಶಕ್ತವಾಗಿದ್ದು ಯಾವುದೇ ಶತ್ರು ರಾಷ್ಟ್ರವನ್ನು ಬಗ್ಗು ಬಡಿಯಲು ಸಮರ್ಥವಾಗಿದೆ. ಸೇನಾ ಸಾಧನಗಳ ತಯಾರಿಯ ಸಂಶೋಧನೆ, ಅಭಿವೃದ್ಧಿ ಹಾಗೂ ಉತ್ಪಾದನೆಯಲ್ಲಿ ದೇಶ ಶೇ.75ರಷ್ಟು ಸ್ವಾವಲಂಬಿಯಾಗಿದೆ ಎಂದು ಮೇಜರ್ ಜನರಲ್ ಸತೀಶ್ ಭಂಡಾರಿ ಹೇಳಿದರು.

ನಗರದ ಹೋಟೆಲ್ ಮೋತಿ ಮಹಲ್ ಸಭಾಂಗಣದಲ್ಲಿ ಶನಿವಾರ ನಡೆದ ವಿಶ್ವ ಬಂಟ ಪ್ರತಿಷ್ಠಾನ ಟ್ರಸ್ಟ್‌ನ 28ನೇ ವಾರ್ಷಿಕ ಮಹಾಸಭೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಮಿನೆಂಟ್ ಬಂಟ್ ಪರ್ಸನಾಲಿಟಿ ಅವಾರ್ಡ್ ಸ್ವೀಕರಿಸಿ ಮಾತನಾಡಿದ ಅವರು ಸೇನೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಸಹಜವಾಗಿಯೇ ಕಠಿಣ ಸವಾಲುಗಳನ್ನು ಎದುರಿಸಬೇಕಾಗುತ್ತಿದೆ. ಆದರೆ ದೇಶಕ್ಕಾಗಿ ಸೇವೆ ಸಲ್ಲಿಸಿದ ಅನುಭವ ಸದಾ ಸ್ಮರಣೀಯ ಎಂದರು.

ಮಂಗಳೂರು ವಿ.ವಿ.ಯಿಂದ ಗೌರವ ಡಾಕ್ಟರೇಟ್ ಪುರಸ್ಕೃತರಾದ ಉದ್ಯಮಿ ಡಾ.ಕೆ.ಪ್ರಕಾಶ್ ಶೆಟ್ಟಿ ಅವರನ್ನು ಪ್ರತಿಷ್ಠಾನದ ವತಿಯಿಂದ ಸನ್ಮಾನಿಸಲಾಯಿತು. ಬಂಟ ಸಮಾಜದ ಹಿರಿಯರ ಸಾಧನೆಯಿಂದ ಪ್ರೇರಿತನಾಗಿ ನಾನು ಕೂಡಾ ಜೀವನದಲ್ಲಿ ಏನಾದರೂ ಸಾಧಿಸಬೇಕೆಂದು ಬಯಸಿದ್ದೆ. ಹಾದಿ ಕಠಿಣವಾಗಿತ್ತು. ಆದರೆ ಇಂದು ಕನಸು ನನಸಾಗಿದೆ. ಕೇವಲ ಅದೃಷ್ಟವನ್ನು ನಂಬಿದರೆ ಸಾಲದು ಅದನ್ನು ಸಾಧನೆಯಾಗಿ ಪರಿವರ್ತಿಸಬೇಕು ಎಂದು ಸನ್ಮಾನ ಸ್ವೀಕರಿಸಿದ ಡಾ.ಕೆ.ಪ್ರಕಾಶ್ ಶೆಟ್ಟಿ ಹೇಳಿದರು.

ಯಕ್ಷಗಾನ ರಂಗದಲ್ಲಿ 55 ವರ್ಷ ಮಿಕ್ಕಿ ಸೇವೆ ಸಲ್ಲಿಸಿದ ಹಳ್ಳಾಡಿ ಜಯರಾಮ ಶೆಟ್ಟಿ ಅವರಿಗೆ ದಿ.ಡಿ.ಕೆ.ಚೌಟ ದತ್ತಿನಿಧಿಯಿಂದ 25 ಸಾವಿರ ರೂ.ನಗದು, ಫಲಕ ನೀಡಿ ಗೌರವಿಸಲಾಯಿತು. ಕೃಷಿ ಕ್ಷೇತ್ರದ ಸಾಧನೆಗಾಗಿ ಪುಷ್ಪ ಶೆಟ್ಟಿ ಅವರಿಗೆ ದಿ.ಎಣ್ಮಕಜೆ ಕಲಾವತಿ ಶೆಟ್ಟಿ ದತ್ತಿನಿಧಿ ಪ್ರಶಸ್ತಿ , ಸಿಎ ಮನೀಶ್ ಶೆಟ್ಟಿ ಅವರಿಗೆ ಸಿಎ ವೈ.ಆರ್.ಶೆಟ್ಟಿ ದತ್ತಿನಿಧಿ ಪ್ರಶಸ್ತಿ , ಸಿಎ ರೋಶನ್ ಶೆಟ್ಟಿ ಅವರಿಗೆ ಸಿಎ ಗೋಪಾಲ್ .ಬಿ.ಶೆಟ್ಟಿ ದತ್ತಿನಿಧಿ ಪ್ರಶಸ್ತಿ ವಿತರಿಸಲಾಯಿತು.

ವಿಶ್ವ ಬಂಟ ಪ್ರತಿಷ್ಠಾನ ಟ್ರಸ್ಟ್ ಅಧ್ಯಕ್ಷ ಡಾ.ಎ.ಜೆ.ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಸಿಎ ಸುಧೀರ್ ಕುಮಾರ್ ಶೆಟ್ಟಿ , ಉಪಾಧ್ಯಕ್ಷರಾದ ಕುಶಲ್.ಎಸ್.ಹೆಗ್ಡೆ, ಕೆ.ಎಸ್.ಹೆಗ್ಡೆ, ಯೋಜನಾ ನಿರ್ದೇಶಕ ಡಾ.ಬಿ. ಸಂಜೀವ ರೈ, ಖಜಾಂಚಿ ಸಿಎ ಸುದೇಶ್ ಕುಮಾರ್ ರೈ , ಪ್ರೊ.ಜಿ.ಆರ್.ರೈ, ಪಳ್ಳಿ ಕಿಶನ್ ಹೆಗ್ಡೆ ಉಪಸ್ಥಿತರಿದ್ದರು. ಭಾಸ್ಕರ .ರೈ.ಕುಕ್ಕುವಳ್ಳಿ, ಜ್ಯೋತಿ ಪ್ರಸಾದ್ ಹೆಗ್ಡೆ, ಜೈರಾಜ್ .ಬಿ.ರೈ ಮತ್ತು ಆರ್ತಿ ಶೆಟ್ಟಿ ಸನ್ಮಾನಿತರನ್ನು ಪರಿಚಯಿಸಿದರು. ಕಳ್ಳಿಗೆ ತಾರನಾಥ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

ನಗರದ ಹೋಟೆಲ್ ಮೋತಿ ಮಹಲ್ ಸಭಾಂಗಣದಲ್ಲಿ ನಡೆದ ವಿಶ್ವ ಬಂಟ ಪ್ರತಿಷ್ಠಾನ ಟ್ರಸ್ಟ್‌ನ 28ನೇ ವಾರ್ಷಿಕ ಮಹಾಸಭೆಯಲ್ಲಿ ಅವಾರ್ಡ್ ಸ್ವೀಕರಿಸಿ ಮೇಜರ್ ಜನರಲ್ ಸತೀಶ್ ಭಂಡಾರಿ ಅವರು ಮಾತನಾಡಿದರು.

ಶಾಲೆಗೆ ಉಚಿತ ನೋಟ್ ಬುಕ್‌ಗಳ ವಿತರಣೆ

ಚಿಕ್ಕಮಗಳೂರು: ನಗರದ ಹಿರೇಮಗಳೂರಿನ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಶನಿವಾರ ವಿಧಾನ ಪರಿಷತ್ ಸದಸ್ಯ ಡಾ.ಸಿ.ಟಿ.ರವಿ ಜನ್ಮದಿನದ ಅಂಗವಾಗಿ ಬಿಜೆಪಿ ಕಾರ್ಯಕರ್ತರು ಹಾಗೂ ಅಭಿಮಾನಿ ಬಳಗದಿಂದ ಉಚಿತ ನೋಟ್ ಪುಸ್ತಕ, ಲೇಖನಿಗಳನ್ನು ವಿತರಿಸಲಾಯಿತು. ಈ ವೇಳೆ ಮಾತನಾಡಿದ ಬಿಜೆಪಿ ರಾಜ್ಯ ಎಸ್ಸಿ ಮೋರ್ಚಾ ಕಾರ್ಯದರ್ಶಿ ಸೀತರಾಮಭರಣ್ಯ, ಕಳೆದ ತಿಂಗಳು ಶಾಸಕರ ಜನ್ಮದಿನವನ್ನು ಆಚರಿಸಲಾಗಿತ್ತು. ಆ ಸಮಯದಲ್ಲಿ ವಿಪರೀತ ಮಳೆ ಹಾಗೂ ಶಾಲೆಗಳಿಗೆ ರಜೆವಿರುವ ಕಾರಣ ಇಂದು ಶಾಲೆಗೆ ತೆರಳಿ ನೋಟ್ ಪುಸ್ತಕಗಳನ್ನು ವಿತರಿಸಲಾಗಿದೆ ಎಂದರು. ಇದೇ ವೇಳೆ ಶಾಲಾ ಆವರಣದಲ್ಲಿ ಸಸಿ ನಡೆಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಮಾಧ್ಯಮ ಪ್ರಮುಖ್ ಕೇಶವಮೂರ್ತಿ, ಬ್ರಾಹ್ಮಣ ಮಹಾಸಭಾ ನಿರ್ದೇಶಕ ಉದಯಶಂಕರ್‌ಭಟ್, ಬಿಜೆಪಿ ಜಿಲ್ಲಾ ರೈತ ಮೋರ್ಚಾ ಕಾರ್ಯದರ್ಶಿ ಎಂ.ಎಸ್.ನಾಗರಾಜ್, ಸಿಡಿಎ ಮಾಜಿ ಸದಸ್ಯ ರಾಜಕುಮಾರ, ನಗರ ಮಂಡಲ ಉಪಾಧ್ಯಕ್ಷ ರೇವನಾಥ್, ಆಶ್ರಯ ಸಮಿತಿ ಮಾಜಿ ಸದಸ್ಯ ನವೀನ್ ಕುಮಾರ್, ಗ್ರಾಮ ಪಂಚಾಯಿತಿ ಸದಸ್ಯ ಯೋಗೀಶ್, ನಗರ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಧನಂಜಯ್, ಉಪಾಧ್ಯಕ್ಷ ರವಿಕುಮಾರ್, ನಗರ ಯುವ ಮೋರ್ಚಾ ಉಪಾಧ್ಯಕ್ಷ ಅರು ಣ್, ಮುಖಂಡರುಗಳಾದ ಸತೀಶ್ ಕುಪ್ಪೆನಹಳ್ಳಿ, ಜೇಮ್ಸ್, ನಂಜುಂಡಪ್ಪ, ಧರ್ಮರಾಜು, ಗಣೇಶ್, ರಾ ಜು, ಪ್ರದೀಪ್, ವಿಜಯ್ ಹಾಜರಿದ್ದರು.

ನೂತನ ಶಾಲಾ ಕೊಠಡಿಗೆ ಗುದ್ದಲಿ ಪೂಜೆ

ಚಿಕ್ಕಮಗಳೂರು: ತಾಲೂಕಿನ ತೊಗರಿಹಂಕಲ್ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಚಿಕ್ಕಮಗಳೂರು ರೌಂಡ್ ಟೇಬಲ್‌ನಿಂದ 30 ಲಕ್ಷ ರು. ವ್ಯಯಿಸಿ ನೂತನ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಶುಕ್ರವಾರ ಟೇಬಲ್ ಅಧ್ಯಕ್ಷ ರಾಷ್ಟ್ರೀತ್ ಗುದ್ದಲಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ರಾಷ್ಟ್ರೀತ್ ಗ್ರಾಮೀಣ ಮಕ್ಕಳಿಗೆ ಶಾಲೆಯಲ್ಲಿ ಮೂಲಭೂತ ಸೌಕರ್ಯಗಳಿಂದ ವಂಚಿತರಾಗದಂತೆ ಸಮರ್ಪಕ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಸಂಸ್ಥೆಯಿಂದ ನೂತನ ಕೊಠಡಿಗಳ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಸಂಪೂರ್ಣವಾಗಿ ಕೈಜೋಡಿಸಿದೆ ಎಂದು ತಿಳಿಸಿದರು. ಇತ್ತೀಚಿನ ಬೆಳವಣಿಗೆಯಲ್ಲಿ ಗ್ರಾಮೀಣ ಸರಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವುದು ತೀವ್ರ ವಿರಳವಾಗಿದೆ. ಆಂಗ್ಲಶಾಲೆಗಳ ವ್ಯಾಮೋಹದಿಂದ ಪಾಲಕರು ಮರಳಾಗುತ್ತಿದ್ದಾರೆ. ಹೀಗಾಗಿ ಸರಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಹಕಾರದಿಂದ ಗ್ರಾಮದಲ್ಲಿ ಸುಸಜ್ಜಿತ ಕೊಠಡಿಗಳ ನಿರ್ಮಾಣಕ್ಕೆ ಮುಂದಾಗಿದೆ ಎಂದರು. ಈ ಸಂದರ್ಭದಲ್ಲಿ ರೌಂಡ್ ಟೇಬಲ್ ವಲಯ ಮಟ್ಟದ ಅಧ್ಯಕ್ಷ ಕುಮಾರ್ ಪಾಲ್, ರೌಂಡ್ ಟೇಬಲ್ ವಲಯಮಟ್ಟದ ಉಪಾಧ್ಯಕ್ಷ ಸೂಶುತ್, ಕಟ್ಟಡ ಯೋಜನೆ ಮುಖ್ಯಸ್ಥ ವಿನಯ್‌ರಾಜ್, ಶಾಲೆಯ ಮುಖ್ಯಶಿಕ್ಷಕಿ ಹೇಮಲತಾ, ಚಿಕ್ಕಮಗಳೂರು ರೌಂಡ್ ಟೇಬಲ್ ಸದಸ್ಯರುಗಳಾದ ಈಶ್ವರ್ ಸರ್ಜಿ, ವಿನಾಯಕ, ಅನಿಲ್, ಕವನ್, ಶಾಶ್ವತ್, ಸೂರಜ್, ಸಮನ್ವಿತ್, ಗ್ರಾಮಸ್ಥರು ಹಾಜರಿದ್ದರು.

ವಾಹನ ಆರ್‌ಸಿ ನೀಡಲು ಆ.31ರವರೆಗೆ ಅವಕಾಶ

ಉಡುಪಿ: ಹೆಜಮಾಡಿ ಟೋಲ್ ಪ್ಲಾಝಾದಲ್ಲಿ ಟೋಲ್ ವಿನಾಯಿತಿ ಹೊಂದಿರುವ ಸ್ಥಳೀಯ ವಾಹನಗಳ ಮಾಲಕರು ವಾಹನದ ಆರ್. ಸಿ. ಪ್ರತಿ ಸಲ್ಲಿಸಲು ಆ.10 ಅಂತಿಮ ದಿನವಾಗಿತ್ತು. ಈ ಹಿನ್ನೆಲೆಯಲ್ಲಿ ಆ. 9ರ ಸಂಜೆ ಟೋಲ್ ವಿರೋಧಿ ಹೋರಾಟ ಸಮಿತಿ ಅಧ್ಯಕ್ಷ ಶೇಖರ್ ಹೆಜ್ಮಾಡಿ ನೇತೃತ್ವದಲ್ಲಿ ಟೋಲ್ ಮ್ಯಾನೇಜರ್ ತಿಮ್ಮಯ್ಯ ಎ. ಎಸ್. ಅವರನ್ನು ಭೇಟಿಯಾಗಿ ದಿನಾಂಕ ಮುಂದೂಡುವಂತೆ ಮನವಿ ಮಾಡಿಕೊಂಡಿತು. ಈ ಸಂದರ್ಭ ಮಾತನಾಡಿದ ತಿಮ್ಮಯ್ಯ ಜಿಲ್ಲಾಡಳಿತ ತಿಳಿಸಿದಂತೆ ಹಿಂದಿನಂತೆ ಸ್ಥಳೀಯ ವಾಹನಗಳಿಗೆ ವಿನಾಯಿತಿ ನೀಡಲು ನಮ್ಮ ಸಂಸ್ಥೆ ಬದ್ಧವಾಗಿದೆ. ಆದರೆ, ಹೆಜಮಾಡಿ ಗ್ರಾಮವೊಂದರಲ್ಲೇ 2000ಕ್ಕೂ ಹೊಸ ವಾಹನಗಳು ಜುಲೈ ತಿಂಗಳಲ್ಲಿ ಟೋಲ್‌ನಲ್ಲಿ ಸಂಚರಿಸಿದೆ. ಈ ಪೈಕಿ ಹೆಚ್ಚು ನಕಲಿ ದಾಖಲೆಗಳಾಗಿವೆ. ಸ್ಥಳೀಯ ವಾಹನಗಳು ಆರ್. ಸಿ. ಪ್ರತಿ ಒದಗಿಸಿದರೆ ಕಂಪ್ಯೂಟರ್ ಮೂಲಕ ದಾಖಲೆ ಸಂಗ್ರಹಿಸಿ ಅರ್ಹರಿಗೆ ವಿನಾಯಿತಿ ನೀಡಲು ಸಾಧ್ಯವಾಗುತ್ತದೆ. ಆ. 31ರವರೆಗೆ ಅವಕಾಶ ಕಲ್ಪಿಸಲಾಗುವುದು ಎಂದವರು ಹೇಳಿದರು. ಸಮಿತಿಯ ಪದಾಧಿಕಾರಿಗಳಾದ ಪಾಂಡುರಂಗ ಕರ್ಕೇರ, ಮಧು ಅಚಾರ್ಯ ಮೂಲ್ಕಿ, ಸುಧೀರ್ ಕರ್ಕೇರ, ತೇಜಪಾಲ್ ಸುವರ್ಣ, ಸಂತೋಷ್ ಪಡುಬಿದ್ರಿ, ರಮೀಝ್ ಹುಸೈನ್, ಖಾದರ್ ಹೆಮ್ಮಾಡಿ, ಪ್ರಾಣೇಶ್ ಹೆಜ್ಮಾಡಿ, ವಿಕ್ರಮ್ ರಾಜ್ ಸುವರ್ಣ, ಅಹಮ್ಮದ್ ಕಬೀರ್, ಅಬ್ದುಲ್ ರೆಹ್ಮಾನ್, ಹನೀಫ್ ಕನ್ನಂಗಾರ್, ಕಾಸಿಂ ಉಪಸ್ಥಿತರಿದ್ದರು.

ಹೆದ್ದಾರಿ ಸುರಕ್ಷತೆಗೆ ಶೋಕಾಸ್ ನೋಟಿಸ್

ಮಂಗಳೂರು: ಹೆದ್ದಾರಿಗಳಲ್ಲಿರುವ ಸೇತುವೆಗಳ ಸುರಕ್ಷತೆ ಕುರಿತು ವರದಿ ಸಲ್ಲಿಸಲು ನಿರ್ಲಕ್ಷ್ಯ ವಹಿಸಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ಅವರು ಶೋಕಾಸ್ ನೋಟೀಸ್ ಮಾಡಿದ್ದಾರೆ. ಶನಿವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಜಿಲ್ಲೆಯಲ್ಲಿ ರಸ್ತೆ ಮತ್ತು ಸೇತುವೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವ ಕುರಿತು ನಡೆದ ಸಭೆಯಲ್ಲಿ ಅವರು ಶೋಕಾಸ್ ನೋಟೀಸ್ ನೀಡಿದರು. ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿರುವ ಸೇತುವೆಗಳ ಸುರಕ್ಷತೆ ಬಗ್ಗೆ ವರದಿ ನೀಡಲು ಈಗಾಗಲೇ ಸಂಬಂಧಿಸಿದ ಇಲಾಖೆಗಳಿಗೆ ಸೂಚಿಸಲಾಗಿತ್ತು. ಆದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಲೋಕೋಪಯೋಗಿ ಇಲಾಖೆಯು ಸಮರ್ಪಕವಾದ ವರದಿ ಸಲ್ಲಿಸಿರುವುದಿಲ್ಲ. ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುವ ಹೆದ್ದಾರಿಗಳ ಸುರಕ್ಷತೆಯ ಬಗ್ಗೆ ಯಾವುದೇ ರಾಜಿ ಮಾಡಿಕೊಳ್ಳಲಾಗದು ಎಂದು ಅವರು ಹೇಳಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಆನಂದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಡಿಸಿಪಿ (ಸಂಚಾರ) ದಿನೇಶ್ ಕುಮಾರ್, ಎಡಿಸಿ ಸಂತೋಷ್ ಇದ್ದರು.

ಶ್ರೀಜೇಶ್ ಅತ್ಯುತ್ತಮ ವ್ಯಕ್ತಿ, ದಂತಕತೆ. ಅವರನ್ನು ಭಾರತವು 'ಮಹಾ ಗೋಡೆ' ಎಂದು ಕರೆಯುತ್ತದೆ. ಅವರು ತಮ್ಮ ಅತ್ಯುತ್ತಮ ಹಾಕಿಯನ್ನು ಆಡಿದ್ದಾರೆ ಎಂದಷ್ಟೆ ನಾನು ಹೇಳಬಲ್ಲೆ. ಹಲವರಿಗೆ ಸ್ಫೂರ್ತಿಯಾಗಲಿದ್ದಾರೆ.
-ಲಲಿತ್ ಉಪಾಧ್ಯಾಯ, ಹಾಕಿ ಆಟಗಾರ

ಪದಕ ಪಟ್ಟಿ

ಭಾರತ	0	1	5	6
ಚೀನಾ	37	27	23	87
ಅಮೆರಿಕ	33	41	39	113
ಆಸ್ಟ್ರೇಲಿಯಾ	18	17	14	49
ಜಪಾನ್	16	10	13	39
ಫ್ರಾನ್ಸ್	15	21	22	58
ಗ್ರೇಟ್ ಬ್ರಿಟನ್	14	20	24	58
ದಕ್ಷಿಣ ಕೊರಿಯಾ	13	8	8	29
ನೆದರ್ಲೆಂಡ್ಸ್	13	6	11	30
ಜರ್ಮನಿ	12	10	8	30

ಮೈಕ್ರೋ ಮಾಹಿತಿ

ಭಾರತದ ಪರ ಎರಡು ಪದಕ ಗೆದ್ದ ಆಟಗಾರರು

ಹಾಕಿಯಲ್ಲಿ ಭಾರತ ಈವರೆಗೂ 13 ಬಾರಿ ಪದಕ ಗೆದ್ದುದ್ದು, ಒಲಿಂಪಿಕ್ಸ್‌ನಲ್ಲಿ ಭಾರತದ ಪರ ಹೆಚ್ಚು ಪದಕ ಗೆದ್ದ ತಂಡವಾಗಿದೆ.

ನಾರ್ಮನ್ ಪಿಚಾರ್ಡ್
ನಾರ್ಮನ್ ಪಿಚಾರ್ಡ್ ಅವರು 1900ರಲ್ಲಿ ಮೊದಲ ಬಾರಿ ಭಾರತದಿಂದ ಸ್ಪರ್ಧಿಸಿ ಎರಡು ಬೆಳ್ಳಿ ಪದಕಗಳನ್ನು ಗೆದ್ದಿದ್ದರು.

ಶುಶೀಲ್ ಕುಮಾರ್
2008ರ ಬಿಜಿಂಗ್ ಒಲಿಂಪಿಕ್ಸ್‌ನಲ್ಲಿ ಅವರು, 66 ಕೆ.ಜಿ ಕುಸ್ತಿ ವಿಭಾಗದಲ್ಲಿ ಕಂಚು ಗೆದ್ದಿದ್ದರು. 2012ರ ಲಂಡನ್ ಒಲಿಂಪಿಕ್ಸ್ ನಲ್ಲಿ ಅವರು ಅದೇ ವಿಭಾಗದಲ್ಲಿ ಬೆಳ್ಳಿ ಪದಕವನ್ನು ಗೆದ್ದಿದ್ದರು.

ಪಿ.ವಿ.ಸಿಂಧು
2016ರ ರಿಯೋ ಒಲಿಂಪಿಕ್ಸ್‌ನಲ್ಲಿ ವೈಯಕ್ತಿಕ ಬ್ಯಾಡ್ಮಿಂಟನ್ ನಲ್ಲಿ ಬೆಳ್ಳಿ ಗೆದ್ದಿದ್ದರು. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅದೇ ವಿಭಾಗದಲ್ಲಿ ಅವರು ಕಂಚು ಗೆದ್ದಿದ್ದರು.

ನೀರಜ್ ಚೋಪ್ರಾ
2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಜಾವೆಲಿನ್ ಎಸೆತದಲ್ಲಿ ಅವರು ಚಿನ್ನ ಗೆದಿದ್ದರು. 2024 ಈ ಬಾರಿ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದಾರೆ.



ಸಮಾಚಾರ ಸಣ್ಣದಲ್ಲ

ಕೋವಿಡ್ ಮಧ್ಯೆ ಗೆದ್ದ ನೋವಾ ಲೈಲ್ಸ್



ಪ್ಯಾರಿಸ್: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕೋವಿಡ್ ಭೀತಿ ಎದುರಾಗಿದ್ದು, ಅನೇಕರಿಗೆ ಸೋಂಕು ದೃಢಪಟ್ಟಿತ್ತು. ಸದ್ಯಕ್ಕೆ ಕೋವಿಡ್‌ಗೆ ಯಾವುದೇ ನಿರ್ಬಂಧಗಳಿಲ್ಲದಿದ್ದರೂ, ಅನೇಕ ಕ್ರೀಡಾಪಟುಗಳು ಕೋವಿಡ್‌ನೊಂದಿಗೆ ಕಣಕ್ಕೆ ಇಳಿದಿದ್ದಾರೆ. ಅದರಲ್ಲೂ 100 ಮೀಟರ್ಸ್ ಚಾಂಪಿಯನ್ ನೋವಾ ಲೈಲ್ಸ್ ಸಹ ಕೋವಿಡ್ ದೃಢಪಟ್ಟಿದ್ದರೂ ಚಿನ್ನ ಗೆದ್ದಿದ್ದರು. ಆ ಬಳಿಕ 200 ಮೀಟರ್ಸ್ ವಿಭಾಗದಲ್ಲಿ ಕಂಚಿಗೆ ಗೆಲ್ಲುವಲ್ಲಿ ಯಶಸ್ವಿಯಾದರು. ಕೋವಿಡ್ ಇದ್ದರೂ 200 ಮೀಟರ್ ಓಡಿದ್ದರಿಂದ ಸ್ಪರ್ಧೆಯ ನಂತರ ಅವರು ತುಂಬಾ ದಣಿದಿದ್ದರು. ಕೊನೆಗೆ ನಡೆಯಲಾಗದೇ ಗಾಲಿಕುರ್ಚಿಗೆ ಕರೆದುಕೊಂಡು ಹೋಗಲಾಯಿತು ಅಲ್ಲಿ ಕೋವಿಡ್ ಇರುವುದು ತಿಳಿದಿದೆ.

ಕಿರುಕುಳ: ಈಜಿಪ್ಟ್ ಕುಸ್ತಿಪಟು ಬಂಧನ

ಪ್ಯಾರಿಸ್: ಕ್ರೀಡಾಗ್ರಾಮದಲ್ಲಿನ ಆಟಗಾರರನ್ನು ಲೈಂಗಿಕ ಕಿರುಕುಳ ನೀಡಿರುವ ಆರೋಪದ ಮೇಲೆ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಈಜಿಪ್ಟ್ ದೇಶದ ಕುಸ್ತಿಪಟು ಮೊಹಮ್ಮದ್ ಎಲ್ಸಯೀದ್ ಅವರನ್ನು ಫ್ರೆಂಚ್ ರಾಜಧಾನಿಯಲ್ಲಿ ಆರೋಪದ ಮೇಲೆ ಬಂಧಿಸಲಾಗಿದೆ. ಕೆಫೆಯೊಂದರ ಹೊರಗೆ ಅವರು ಯುವತಿಗೆ ಕಿರುಕುಳ ನೀಡಿದ್ದಾರೆ ಎಂಬ ಶಂಕೆ ಮೇಲೆ ಫ್ರೆಂಚ್ ಪೊಲೀಸರು ಶುಕ್ರವಾರ ಮುಂಜಾನೆ ಬಂಧಿಸಿದ್ದಾರೆ ಎಂದು ಪ್ಯಾರಿಸ್ ಪ್ರಾಸಿಕ್ಯೂಟರ್ ಕಚೇರಿ ತಿಳಿಸಿದೆ. ಕೆಫೆಯಲ್ಲಿ ನಿಂತಿದ್ದ ಮಹಿಳೆಗೆ ಕಿರುಕುಳ ನೀಡಿದ ಆರೋಪದ ಮೇಲೆ ಕುಸ್ತಿಪಟುವನ್ನು ಬಂಧಿಸಲಾಗಿದೆ ಎಂದು ಪ್ರಾಸಿಕ್ಯೂಟರ್‌ಗಳು ತಿಳಿಸಿದ್ದಾರೆ. ಎಲ್ಸಯೀದ್ ಶಿಸ್ತು ವಿಚಾರಣೆಯನ್ನು ಎದುರಿಸಲಿದ್ದಾರೆ ಎಂದು ಈಜಿಪ್ಟ್ ಒಲಿಂಪಿಕ್ ಸಮಿತಿ ಘೋಷಿಸಿದೆ, ಆರೋಪಗಳು ನಿಜವೆಂದು ಸಾಬೀತಾದರೆ ಅವರು ಸ್ಪರ್ಧೆಯಿಂದ ಆಜೀವ ನಿಷೇಧಕದ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಸಮಿತಿ ತಿಳಿಸಿದೆ.

ಭಾರತಕ್ಕೆ ಬಂದಿಳಿದ ಹಾಕಿ ತಂಡ | ಎಲ್ಲೆಲ್ಲೂ ಗೆದ್ದ ಸಂಭ್ರಮ | ಧ್ಯಾನ್‌ಚಂದ್ ಅವರಿಗೆ ಗೌರವ ಸಲ್ಲಿಕೆ

ಕಂಚು ವೀರರಿಗೆ ಅದ್ದೂರಿ ಸ್ವಾಗತ

ದೆಹಲಿ: ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಐತಿಹಾಸಿಕ ಕಂಚಿನ ಪದಕ ಗೆದ್ದಿದ್ದ ಭಾರತ ಪುರುಷರ ಹಾಕಿ ತಂಡ, ಈ ಬಾರಿ ಮತ್ತೊಂದು ಕಂಚಿನ ಪದಕ ಗೆಲ್ಲುವ ಮೂಲಕ ಸತತ 2ನೇ ಕಂಚು ಗೆದ್ದ ಸಾಧನೆ ಮಾಡಿದೆ. ಗುರುವಾರ ನಡೆದಿದ್ದ ಕಂಚಿನ ಪದಕ ಸ್ಪರ್ಧೆಯಲ್ಲಿ ಸ್ಪೇನ್ ವಿರುದ್ಧ 2-1 ಗೋಲುಗಳಿಂದ ಗೆದ್ದು ಕಂಚು ತನ್ನದಾಗಿಸಿಕೊಂಡಿತು. ಇದೀಗ ಹಾಕಿ ತಂಡ ತವರಿಗೆ ಬಂದಿಳಿದಿದೆ.

ಶನಿವಾರ ಬೆಳಗ್ಗೆ ದೆಹಲಿಗೆ ಬಂದ ಹಾಕಿ ತಂಡ ವಿಮಾನ ನಿಲ್ದಾಣದಿಂದ ಹೊರಬರುತ್ತಿದ್ದಂತೆ ನೆರೆದಿದ್ದ ಕ್ರೀಡಾಭಿಮಾನಿಗಳು ಆಟಗಾರರಿಗೆ ಹಾರ, ಸಿಹಿ ತಿನಿಸಿ ಅದ್ದೂರಿ ಸ್ವಾಗತ ಕೋರಿ ಸಂಭ್ರಮಿಸಿದರು. ಪ್ಯಾರಿಸ್‌ನಲ್ಲಿ ಕಂಚಿನ ಪದಕ ಗೆಲ್ಲುವ ಮೂಲಕ ಭಾರತ ಹಾಕಿ ತಂಡ 52 ವರ್ಷಗಳ ಬಳಿಕ ಸತತ 2 ಒಲಿಂಪಿಕ್ಸ್‌ಗಳಲ್ಲಿ ಕಂಚಿನ ಪದಕ ಗೆದ್ದ ಸಾಧನೆ ಮಾಡಿತ್ತು. ಭಾರತ ಈ ಮೊದಲು 1968ರ ಮೆಕ್ಸಿಕೋ ಹಾಗೂ 1972ರ ಮ್ಯೂನಿಚ್ ಒಲಿಂಪಿಕ್ಸ್‌ಗಳಲ್ಲಿ ಸತತವಾಗಿ 2 ಕಂಚು ಗೆದ್ದಿತ್ತು. 2021ರ ಟೋಕಿಯೋ ಹಾಗೂ ಈ ಬಾರಿ ಭಾರತ ಸತತವಾಗಿ ಕಂಚು ಗೆದ್ದಿದೆ.

ಸತತ ಎರಡನೇ ಬಾರಿಗೆ ಕಂಚು ಗೆದ್ದ ಖುಷಿಯಲ್ಲಿ ಹಾಕಿ ತಂಡ.

ಎರಡು ಪದಕ ಗೆದ್ದ ಮನುಗೆ ಜನರಿಂದ ಭವ್ಯ ಸ್ವಾಗತ ಮಾಡಲಾಗಿತ್ತು.

ಬರಿಗೈಯಲ್ಲಿ ಬಂದಿಲ್ಲ: ಹರ್ಮನ್

ಈ ಸಂದರ್ಭದಲ್ಲಿ ಮಾತನಾಡಿದ ಭಾರತೀಯ ಪುರುಷರ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್, ದೇಶಕ್ಕಾಗಿ ಪದಕ ಗೆದ್ದಿರುವುದು ದೊಡ್ಡ ವಿಷಯವಾಗಿದೆ. ಫೈನಲ್ ಪ್ರವೇಶಿಸಲು ಪ್ರಯತ್ನಿಸಿದೇವು, ಆದರೆ, ನಮ್ಮ ಕನಸು ನನಸು ಆಗಲಿಲ್ಲ. ಆದರೆ ಬರಿಗೈಯಲ್ಲಿ ಹಿಂದಿರುಗಲಿಲ್ಲ. ಪದಕ ಗೆದ್ದು ವಾಪಸ್ಸಾಗಿದ್ದೇವೆ. ಇದಕ್ಕೆ ಅಪಾರ ಬೆಂಬಲ ನೀಡಿದ ಕೇಂದ್ರ ಸರಕಾರ, ಹಾಕಿ ಇಂಡಿಯಾ ಮತ್ತು ಒಡಿಶಾ ಸರಕಾರಕ್ಕೆ ಧನ್ಯವಾದ ಹೇಳುವುದಾಗಿ ತಿಳಿಸಿದರು.

ಶ್ರೀಜೇಶ್ ಮರಳಿಲ್ಲ

ಭಾರತೀಯ ಹಾಕಿ ತಂಡದ ಪ್ರತಿಯೊಬ್ಬ ಆಟಗಾರರೂ ಭಾರತಕ್ಕೆ ಬಂದಿಳಿದಿದ್ದು, ವಿದಾಯ ಹೇಳಿರುವ ಗೋಲ್ ಕೀಪರ್ ಪಿ.ಆರ್ ಶ್ರೀಜೇಶ್ ಮಾತ್ರ ಪ್ಯಾರಿಸ್‌ನಲ್ಲಿಯೇ ಉಳಿದಿದ್ದಾರೆ. ಸಮಾರೋಪ ಸಮಾರಂಭದಲ್ಲಿ ಭಾರದ ಧ್ವಜಧಾರಿಯಾಗಿ ಆಯ್ಕೆಯಾದ ಕಾರಣ ಅವರು ಈ ಸಮಾರಂಭ ಮುಗಿಸಿ ತವರಿಗೆ ಮರಳಲಿದ್ದಾರೆ. ಭಾನುವಾರ ರಾತ್ರಿ ಸಮಾರೋಪ ಸಮಾರಂಭ ನಡೆಯಲಿದೆ. ಪ್ಯಾರಿಸ್ ಒಲಿಂಪಿಕ್ಸ್ ಮುಕ್ತಾಯದ ಹಂತಕ್ಕೆ ಬಂದಿದೆ.

ಶನಿವಾರ 10ನೇ ದಿನ ಸ್ಪರ್ಧೆಗಳು ನಡೆಯಲಿವೆ. ಆ ದಿನ ಭಾರತಕ್ಕೆ ಹೆಚ್ಚಿನ ಸ್ಪರ್ಧೆಗಳು ಇಲ್ಲ. ಹೀಗಾಗಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಬಹುತೇಕ ಆಟಗಾರರು ಭಾರತಕ್ಕೆ ಬಂದಿಳಿದಿದ್ದಾರೆ.

ಕಂಚಿನೊಂದಿಗೆ ಪೋಸ್ ಕೊಟ್ಟ ನಾಯಕ ಹರ್ಮನ್‌ಪ್ರೀತ್ ಸಿಂಗ್.

ಎರಡು ಕಂಚು ಗೆದ್ದ ಮನು ಭಾಕರ್ ಅವರು ಶ್ರೀಜೇಶ್ ಜತೆ ಧ್ವಜಧಾರಿಯಾಗಲಿದ್ದು, ಅವರು ಮತ್ತೆ ಪ್ಯಾರಿಸ್‌ಗೆ ತಲುಪಲಿದ್ದಾರೆ.

ಪುಣೆಯಲ್ಲಿ ಸ್ವಪ್ನಿಲ್‌ಗೆ ಅಭಿನಂದನೆಯ ಮಹಾಪೂರ

ದಿಗ್ಗಜರ ಮೂರ್ತಿಗೆ ಗೌರವ

ದೆಹಲಿಗೆ ಬಂದಿಳಿದ ಹಾಕಿ ತಂಡವು ದಂತಕತೆ ಮೇಜರ್ ಧ್ಯಾನ್ ಚಂದ್ ಅವರಿಗೆ ಗೌರವ ಸಲ್ಲಿಸಿದರು. ಕ್ರೀಡಾಂಗಣಕ್ಕೆ ಆಗಮಿಸಿದ ತಂಡವು ದಂತಕಥೆಗೆ ಗೌರವ ಸಲ್ಲಿಸಿ, ಕಂಚಿನ ಪದಕದೊಂದಿಗೆ ಫೋಟೋಗೆ ಪೋಸ್ ನೀಡಿದರು. ಈ ವೇಳೆ ಉಪನಾಯಕ ಮತ್ತು ಎರಡು ಬಾರಿ ಕಂಚಿನ ಪದಕ ವಿಜೇತ, ಹಾರ್ದಿಕ್ ಸಿಂಗ್ ಅವರು ಮಾತನಾಡಿ, ತಂಡದೊಳಗಿನ ಒಡನಾಟವನ್ನು ಹೊಗಳಿದರು, ನಾವು ಗೆದ್ದಿದ್ದು ಬಹಳ ಕುಷಿ ತಂದಿದೆ. ಭಾರತ ತಂಡದ ಹಾಕಿ ದಂತಕತೆ ಧ್ಯಾನ್‌ಚಂದ್ ಅವರು ನಮಗೆ ಯಾವಾಗಲೂ ಸ್ಫೂರ್ತಿ ಎಂದಿದ್ದಾರೆ.

ಮನುಗೆ ಭರ್ಜರಿ ಸ್ವಾಗತ

ಈ ಹಿಂದೆ ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದು ಬೀಗಿದ್ದ ಮನು ಹಾಗೂ ಕಂಚು ಗೆದ್ದ ಸ್ವಪ್ನಿಲ್ ಅವರಿಗೆ ಭರ್ಜರಿ ಸ್ವಾಗತ ಕೋರಲಾಗಿತ್ತು. ಗುರುವಾರ ತವರಿಗೆ ಮರಳಿದ ಸ್ವಪ್ನಿಲ್ ಕುಸಾಳೆ ಅವರಿಗೆ ಅದ್ದೂರಿ ಸ್ವಾಗತ ನೀಡಲಾಗಿತ್ತು. ಪುಣೆಯ ವಿಮಾನ ನಿಲ್ದಾಣ ನಿಲ್ದಾಣದಲ್ಲಿ ಅವರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಅದರಂತೆ ಬುಧವಾರ ಬಂದಿಳಿದ ಮನು ಭಾಕರ್ ಅವರಿಗೂ ಸಹ ಭರ್ಜರಿ ಸ್ವಾಗತ ಕೋರಲಾಗಿತ್ತು. ದೆಹಲಿಗೆ ಬಂದಿಳಿದಿದ್ದ ಮನು ಅವರನ್ನು ಜನರು ಕೊಂಡಾಡಿದ್ದರು. ಎರಡು ಪದಕ ಗೆದ್ದ ಮನು ಅವರಿಗೆ ಜನರು ಹಾರ ಹಾಕಿ ಸನ್ಮಾನಿಸಿದರು. ಅಲ್ಲದೆ, ವಿವಿಧ ರೀತಿಯಲ್ಲಿ ಸಂಭ್ರಮ ಪಟ್ಟರು. ಇದಾದ ಬಳಿಕ ಮನು ಅವರಿಗೆ ಬಹುಮಾನವನ್ನು ನೀಡಲಾಗಿತ್ತು.

ಭರವಸೆ ಮೂಡಿಸಿ ಸೋತ ರಿತಿಕಾ

ಪ್ಯಾರಿಸ್: ಮಹಿಳೆಯರ 76 ಕೆ.ಜಿ. ಫ್ರೀಸ್ಟೈಲ್ ವಿಭಾಗದ ಕ್ವಾರ್ಟರ್ ಫೈನಲ್ ನಲ್ಲಿ ಭಾರತದ ಕುಸ್ತಿಪಟು ರಿತಿಕಾ ಹೂಡಾ ಹೋರಾಟ ತೋರಿ ದರೂ ಸೆಮಿಫೈನಲ್‌ಗೆ ಪ್ರವೇಶಿಸುವಲ್ಲಿ ವಿಫಲರಾಗಿದ್ದಾರೆ.

ಅಗ್ರ ಶ್ರೇಯಾಂಕಿತೆ ಕಿರ್ಗಿಸ್ತಾನದ ಐಪೆರಿ ಮೆಡೆಟ್ ಕಿಝಿ ವಿರುದ್ಧ ನಡೆದ ಪಂದ್ಯದಲ್ಲಿ ಆರು ನಿಮಿಷಗಳವರೆಗೂ ರಿತಿಕಾ 1-1ರ ಅಂತರದ ಸಮಬಲ ಸಾಧಿಸಿದರು.

ಇಬ್ಬರೂ ಕುಸ್ತಿಪಟುಗಳು ರಕ್ಷಣಾತ್ಮಕ ಆಟಕ್ಕೆ ಹೆಚ್ಚಿನ ಒತ್ತು ನೀಡಿ ದರು. ಆದರೆ ಕುಸ್ತಿ ನಿಯಮದ ಅನ್ವಯ ಮೆಡೆಟ್ ಮೇಲುಗೈ ಸಾಧಿಸಿ ಮುಂದಿನ ಹಂತಕ್ಕೆ ತೇರ್ಗಡೆ ಪಡೆದರು. ಒಂದು ವೇಳೆ ಮೆಡೆಟ್ ಅವರು ಫೈನಲ್‌ಗೆ ತಲುಪಿದ್ದಲ್ಲಿ ರಿತಿಕಾ ಅವರಿಗೆ ರೆಪಷಾಜ್ ಸುತ್ತಿನಲ್ಲಿ ಸ್ಪರ್ಧಿಸುವ ಅವಕಾಶ ಸಿಗಲಿದೆ. ಇದಕ್ಕೂ ಮೊದಲು ಕುಸ್ತಿಪಟು ರೀತಿಕಾ ಹೂಡಾ ಅವರು ಉತ್ತಮ ಪ್ರದರ್ಶನ ನೀಡಿ, ಹಂಗೇರಿಯ ಬರ್ನಾಡೆಟ್ ನ್ಯಾಗಿ ಅವರ ವಿರುದ್ಧ 12-2 ಅಂತರದಲ್ಲಿ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ಚಿನ್ನ ಗೆದ್ದ ತಮಿರತ್ ತೋಲಾ

ಪ್ಯಾರಿಸ್: ಪುರುಷರ ಮ್ಯಾರಥಾನ್‌ನಲ್ಲಿ ಇಥಿಯೋಪಿಯಾದ ತಮಿರತ್ ತೋಲಾ ಚಿನ್ನ ಗೆದ್ದುಕೊಂಡರು. ಸತತ ಮೂರನೇ ಬಾರಿ ಚಿನ್ನದ ಪದಕ ಗೆಲ್ಲುವ ಇಲ್ಯುಡ್ ಕಿಪ್ಚೊಗೆ ಅವರ ಕನಸು ಶನಿವಾರ ನುಚ್ಚುನೂರಾಯಿತು. ಶನಿವಾರ ನಡೆದ ಮ್ಯಾರಾಥಾನ್‌ನಲ್ಲಿ ತೋಲಾ ಅವರು 42.195 ಕಿ.ಮೀ. (26.21 ಮೈಲಿ) ಓಟವನ್ನು 2 ಗಂಟೆ 06 ನಿಮಿಷ 26 ಸೆಕೆಂಡುಗಳಲ್ಲಿ ಓಟವನ್ನು ಪೂರೈಸಿ ಒಲಿಂಪಿಕ್ ದಾಖಲೆ ಸ್ಥಾಪಿಸಿದರು. ಬೆಳ್ಳಿ ಗೆದ್ದ ಬೆಲ್ಜಿಯಂನ ಬಶೀರ್ ಅಬ್ದಿ ಅವರಿಗಿಂತ 21 ಸೆಕೆಂಡು ಮೊದಲೇ ಗುರಿಮುಟ್ಟಿದರು. ಮೂರು ವರ್ಷ ಹಿಂದೆ ಟೋಕಿಯೊ ಕ್ರೀಡೆಗಳ ಮ್ಯಾರಥಾನ್‌ನಲ್ಲಿ ಅಬ್ದಿ ಕಂಚಿನ ಪದಕ ಗೆದ್ದಿದ್ದು, ಬೆಳ್ಳಿ ಗೆದ್ದಿದ್ದಾರೆ. 2016ರ ರಿಯೊ ಕ್ರೀಡೆಗಳಲ್ಲಿ 10,000 ಮೀ. ಓಟದಲ್ಲಿ ಕಂಚಿನ ಪದಕ ಗೆದ್ದಿದ್ದ ತೊಲಾ ಅವರು ಭಾನುವಾರ 33ನೇ ವರ್ಷದ ಹುಟ್ಟುಹಬ್ಬ ಆಚರಿಸಲಿದ್ದಾರೆ. ಕಳೆದ ವರ್ಷ ಲಂಡನ್ ಮ್ಯಾರಥಾನ್‌ನಲ್ಲಿ ತೊಲಾ ಮೂರನೇ ಸ್ಥಾನ ಪಡೆದಿದ್ದರು. ನ್ಯೂಯಾರ್ಕ್ ಸಿಟಿ ಮ್ಯಾರಥಾನ್‌ನಲ್ಲಿ ದಾಖಲೆಯೊಡನೆ (2:04.58ಸೆ.) ಅಗ್ರಸ್ಥಾನ ಗಳಿಸಿದ್ದರು.

ಅತೀವ ಸಂತೋಷ

ಈ ಬಗ್ಗೆ ಖುಷಿ ವ್ಯಕ್ತ ಪಡಿಸಿದ ಅವರು, 'ನನಗೆ ಇಂದು ಅತೀವ ಸಂತಸವಾಗಿದೆ. ನಾನು 2022ರ ವಿಶ್ವ ಚಾಂಪಿಯನ್ ಆದೆ. ಈಗ ಒಲಿಂಪಿಕ್ ಚಾಂಪಿಯನ್ ಆಗಿದ್ದೇನೆ. ಇದು ನನ್ನ ಜೀವನದ ಅತ್ಯಂತ ಮಹತ್ವದ ದಿನ. ಇದು ನನ್ನ ಗುರಿಯೂ ಆಗಿತ್ತು' ಎಂದು ಪ್ರತಿಕ್ರಿಯಿಸಿದರು. ಇಥಿಯೋಪಿಯಾ ತಂಡದಲ್ಲಿ ನಾನು ಮೀಸಲು ಸ್ಪರ್ಧಿ ಆಗಿದ್ದೆ. ಸಿಸೇ ಗಾಯಾಳು ಆದಾಗ ನನಗೆ ಅವರ ಬದಲು ಅವಕಾಶ ಸಿಕ್ಕಿತು' ಎಂದು ತೋಲಾ ಹೇಳಿದರು.

ನೀರಜ್‌ಗೆ ಶೀಘ್ರ ಶಸ್ತ್ರಚಿಕಿತ್ಸೆ

ಪ್ಯಾರಿಸ್: ತೊಡೆಯ ಸ್ನಾಯುಗಳಿಗೆ ಸಂಬಂಧಿಸಿದ ತೀವ್ರ ಸಮಸ್ಯೆಯನ್ನು ಎದುರಿಸುತ್ತಿದ್ದು, ಶೀಘ್ರದಲ್ಲೇ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗಬಹುದು' ಎಂದು ಬೆಳ್ಳಿ ಗೆದ್ದ ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಹೇಳಿದ್ದಾರೆ.

ನನ್ನ ಮನಸ್ಸಿನಲ್ಲಿ ಬಹಳಷ್ಟು ಇದೆ. ನಾನು ಜಾವೆಲಿನ್ ಎಸೆಯುವಾಗ ಶೇ 60-70ರಷ್ಟು ನನ್ನ ಗಮನವು ಗಾಯದ ನೋವಿನ ಮೇಲೆ ಇರುತ್ತಿತ್ತು. ನಾನು ಗಾಯಗೊಳ್ಳಲು ಬಯಸುವುದಿಲ್ಲ. ನಾನು ಜಾವೆಲಿನ್ ಎಸೆಯಲು ಹೋದಾಗಲೆಲ್ಲಾ ನನ್ನ ವೇಗವು ಕಡಿಮೆಯಾಗಿರುವುದನ್ನು ನೀವು ನೋಡಿದ್ದೀರಿ. ನಾನು ನನ್ನನ್ನು ತಳ್ಳುತ್ತಿದ್ದೆ' ಎಂದು ಅವರು ತಿಳಿಸಿದ್ದಾರೆ. ಶಸ್ತ್ರಚಿಕಿತ್ಸೆಗೆ ಒಳಗಾಗಲು ವೈದ್ಯರು ನನಗೆ ಸಲಹೆ ನೀಡಿ ದ್ದರು. ಆದರೆ, ವಿಶ್ವ ಚಾಂಪಿಯನ್‌ಶಿಪ್‌ಗೆ ಮೊದಲು ಅಥವಾ ನಂತರ ಆ ನಿರ್ಧಾರವನ್ನು ತೆಗೆದುಕೊಳ್ಳಲು ನನಗೆ ಹೆಚ್ಚು ಸಮಯವಿರಲಿಲ್ಲ. ಈ ಒಲಿಂಪಿಕ್ಸ್‌ಗೆ ತಯಾರಿ ಮಾಡಲು ಸಾಕಷ್ಟು ಸಮಯ ತೆಗೆದುಕೊಳ್ಳ ಬೇಕಾಯಿತು' ಎಂದು ಚೋಪ್ರಾ ಹೇಳಿದ್ದಾರೆ. ನಾನು ಶಸ್ತ್ರಚಿಕಿತ್ಸೆಯನ್ನು ಇನ್ನೂ ತಳ್ಳುತ್ತಲೇ ಇದ್ದೇನೆ. ಅದು ಒಳ್ಳೆಯ ಬೆಳವಣಿಗೆಯಲ್ಲ. ಕ್ರೀಡೆಯಲ್ಲಿ ಸುದೀರ್ಘವಾಗಿ ಮುಂದು ವರಿಯಲು ಫಿಟ್ ಮತ್ತು ಆರೋಗ್ಯಕರವಾಗಿರಬೇಕು. ಆದರೆ, ನಾವು ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗದಷ್ಟು ಸ್ಪರ್ಧೆ ಗಳಿತ್ತು. ಈಗ ಸಮಯ ಬಂದಿದ್ದು, ನಮ್ಮ ತಂಡದೊಂದಿಗೆ ಮಾತನಾಡಿ ನಂತರ ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು.

ಪ್ಯಾರಿಸ್ ಒಲಿಂಪಿಕ್ಸ್ ಮುಕ್ತಾಯ | ಇಂದು ವಿವಿಧ ಕಾರ್ಯಕ್ರಮ ಆಯೋಜನೆ

ವಿಜೃಂಭಣೆಯಿಂದ ಸಾಗಲಿರುವ ಸಮಾರೋಪ

ಪ್ಯಾರಿಸ್: ಕಳೆದ ತಿಂಗಳು ಆರಂಭವಾದ ಪ್ಯಾರಿಸ್ ಒಲಿಂಪಿಕ್ಸ್ ಅಂತ್ಯಗೊಂಡಿದ್ದು, ಬೃಹತ್ ಕ್ರೀಡಾಕೂಟ ಯಶಸ್ವಿಯಾಗಿ ಜರುಗಿದೆ. ಜುಲೈ 26ರಂದು ಶುಭಾರಂಭಗೊಂಡ ಪ್ಯಾರಿಸ್ ಒಲಿಂಪಿಕ್ಸ್ ಭಾನುವಾರ ಮುಕ್ತಾಯಗೊಳ್ಳಲಿದೆ. ಈ ಹಿಂದೆ ಲೈವ್ ಸಂಗೀತ ಪ್ರದರ್ಶನಗಳು, ಕಲಾತ್ಮಕ ನೃತ್ಯಗಳು ಮತ್ತು ಸೀನ್ ನದಿಯ ಉದ್ದಕ್ಕೂ ಪ್ರಯಾಣಿಸಿದ ಕ್ರೀಡಾಪಟುಗಳು ಸೇರಿದಂತೆ ಉದ್ಘಾಟನಾ ಸಮಾರಂಭವನ್ನು ಅದ್ದೂರಿಯಾಗಿ ಆಯೋಜಿಸಲಾಗಿತ್ತು. ಅದೇ ರೀತಿ ಸಮಾರೋಪದಲ್ಲಿಯೂ ಹಲವಾರು ವೈವಿಧ್ಯಮಯ ಕಾರ್ಯಕ್ರಮಗಳು ಆಯೋಜನೆಗೊಂಡಿವೆ ಎಂಬುದಾಗಿ ಪ್ಯಾರಿಸ್ ಒಲಿಂಪಿಕ್ಸ್ ಸಂಘಟನಾ ಸಮಿತಿ ಹೇಳಿದೆ. ಕಾರ್ಯಕ್ರಮಗಳ ನಿರ್ದಿಷ್ಟ ವಿವರಗಳು ಲಭ್ಯವಿಲ್ಲದಿದ್ದರೂ ಸಮಾರೋಪ ಸಮಾರಂಭದಲ್ಲಿ ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ ನಡೆಯಲಿದೆ ಎಂಬುದು ಖಾತರಿಯಾಗಿದೆ. 100 ಕ್ಕೂ ಹೆಚ್ಚು ಅಕ್ರೋಬ್ಯಾಟ್‌ಗಳು ಮತ್ತು ವೈಮಾನಿಕ ಪ್ರದರ್ಶನ ಇದರ ಪ್ರಮುಖ ಹೈಲೈಟ್ ಆಗಲಿದೆ. ನಟ ಟಾಮ್ ಕ್ರೂಸ್ 2028 ರ ಲಾಸ್ ಏಂಜಲೀಸ್ ಒಲಿಂಪಿಕ್ಸ್ ಸಮಾರೋಪದಲ್ಲಿ ಸ್ಕೈಟ್‌ಡೈವಿಂಗ್ ಸ್ಟಂಟ್ ಮಾಡಲಿದ್ದಾರೆ ಎಂಬ ವದಂತಿಗಳಿವೆ. ಸಮಾರಂಭದಲ್ಲಿ ಸ್ನೂಪ್ ಡಾಗ್, ಬಿಲ್ಲಿ ಐಲಿಷ್ ಮತ್ತು ರೆಡ್ ಹಾಟ್ ಚಿಲ್ಲಿ ಪೆಪ್ಪರ್ಸ್ ತಂಡಗಳೂ ಕಾಣಿಸಿಕೊಳ್ಳಲಿವೆ ಎಂಬ ವರದಿಗಳು ಹೇಳಿವೆ.

ಪ್ಯಾರಿಸ್‌ನ ಉತ್ತರಕ್ಕಿರುವ ಸ್ಟೇಡ್ ಡಿ ಫ್ರಾನ್ಸ್‌ನಲ್ಲಿ ಭಾನುವಾರ ಮಧ್ಯಾಹ್ನ 3 ಗಂಟೆಗೆ ಸಮಾರೋಪ ಸಮಾರಂಭ ಪ್ರಾರಂಭವಾಗಲಿದೆ. ಇದು ಸಂಜೆ 5:15 ರವರೆಗೆ ಇರುತ್ತದೆ ಎಂದು ನಿರೀಕ್ಷಿಸಲಾಗಿದೆ. ದಿ ಟುನೈಟ್ ಶೋ ನಿರೂಪಕ ಜಿಮ್ಮಿ ಫಾಲನ್ ಮತ್ತು ದೀರ್ಘಕಾಲದ ಕ್ರೀಡಾ ನಿರೂಪಕ ಮೈಕ್ ಟಿರಿಕೊ ಈ ಕಾರ್ಯಕ್ರಮವನ್ನು ಆಯೋಜಿಸಲಿದ್ದಾರೆ.

ಧ್ವಜದ ಮೆರವಣಿಗೆ

ಸಮಾರೋಪ ಸಮಾರಂಭವು ಆಯಾ ದೇಶಗಳ ಧ್ವಜಗಳ ಪರೇಡ್‌ನೊಂದಿಗೆ ಪ್ರಾರಂಭವಾಗುತ್ತದೆ. ಇದರಲ್ಲಿ ಪ್ರತಿ ರಾಷ್ಟ್ರದ ಕ್ರೀಡಾಪಟುಗಳು ತಮ್ಮ ಧ್ವಜದೊಂದಿಗೆ ಕ್ರೀಡಾಂಗಣಕ್ಕೆ ಬರಲಿದ್ದಾರೆ. ಒಲಿಂಪಿಕ್ಸ್ ಗ್ರೀಸ್‌ನಲ್ಲಿ ಹುಟ್ಟಿಕೊಂಡಿದ್ದರಿಂದ, ಗ್ರೀಕ್ ಧ್ವಜವು ಮೆರವಣಿಗೆಯನ್ನು ಮುನ್ನಡೆಸಲಿದೆ. ಆತಿಥೇಯ ದೇಶವು ಕೊನೆಯಲ್ಲಿ ಸಾಗಲಿದೆ ಅಂತಾರರಾಷ್ಟ್ರೀಯ ಒಲಿಂಪಿಕ್ ಸಮಿತಿ ತಿಳಿಸಿದೆ.

ಪದಕಗಳ ಪ್ರಧಾನ

ಭಾನುವಾರ ತಮ್ಮ ಸ್ಪರ್ಧೆಗಳನ್ನು ಮುಕ್ತಾಯಗೊಳಿಸುವ ಕ್ರೀಡಾಪಟುಗಳಿಗೆ ಸಮಾರೋಪ ಸಮಾರಂಭದಲ್ಲಿಯೇ ಅಂತಿಮ ಪದಕ ಪ್ರದಾನ ನಡೆಯಲಿದೆ. ಮಹಿಳೆಯರ ಮ್ಯಾರಥಾನ್, ಪುರುಷರ ಹ್ಯಾಂಡ್ ಬಾಲ್, ಪುರುಷರ ವಾಟರ್ ಪೋಲೊ, ಪುರುಷರ ಮತ್ತು ಮಹಿಳೆಯರ ವೇಟ್ಲಿಫ್ಟಿಂಗ್, ಪುರುಷರ ಮತ್ತು ಮಹಿಳೆಯರ ಕುಸ್ತಿ, ಮಹಿಳಾ ಬ್ಯಾಸ್ಕೆಟ್ ಬಾಲ್, ಮಹಿಳಾ ಪೆಂಟಾಥ್ಲಾನ್, ಮಹಿಳಾ ವಾಲಿಬಾಲ್ ಮತ್ತು ಪುರುಷರ ಮತ್ತು ಮಹಿಳೆಯರ ಸೈಕ್ಲಿಂಗ್ ಫೈನಲ್‌ಗಳು ಭಾನುವಾರ ಕೊನೆಗೊಳ್ಳಲಿವೆ.

ಧ್ವಜ ಹಸ್ತಾಂತರ

ಆತಿಥೇಯ ನಗರದ ಮೇಯರ್ ಒಲಿಂಪಿಕ್ ಧ್ವಜವನ್ನು ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧ್ಯಕ್ಷರಿಗೆ ಹಸ್ತಾಂತರ ಮಾಡಲಿದ್ದಾರೆ. ಅವರು ಅದನ್ನು ಮುಂದಿನ ಆತಿಥೇಯ ನಗರದ ಮೇಯರ್ ನೀಡುತ್ತಾರೆ. ಪ್ಯಾರಿಸ್ ಮೇಯರ್ ಅನ್ನೆ ಹಿಡಾಲ್ಗೊ ಒಲಿಂಪಿಕ್ ಧ್ವಜವನ್ನು ಐಒಸಿ ಅಧ್ಯಕ್ಷ ಥಾಮಸ್ ಬಾಚ್ ಅವರಿಗೆ ಹಸ್ತಾಂತರಿಸಲಿದ್ದಾರೆ.

ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಕುಸ್ತಿಪಟು | ತೂಕ ಇಳಿಸಿಲು ಅತೀವ ಶ್ರಮ

10 ಗಂಟೆಗಳಲ್ಲಿ 4.5 ಕೆಜಿ ತೂಕ ಇಳಿಸಿದ್ದ ಸೆಹ್ರಾವತ್

ಪ್ಯಾರಿಸ್: ಶುಕ್ರವಾರ ನಡೆದಿದ್ದ ಕುಸ್ತಿ ಪಂದ್ಯದಲ್ಲಿ ಭಾರತದ ಅಮನ್ ಸೆಹ್ರಾವತ್ ಅವರು ಕಂಚು ಗೆದ್ದು ಇತಿಹಾಸ ಬರೆದಿದ್ದರು. ಆದರೆ ಈ ಹಿಂದೆ ಅವರೂ ತೂಕದಲ್ಲಿ ಹೆಚ್ಚಾಗಿತ್ತು. ಆದರೆ ಅವರು ಭಾರೀ ಪ್ರಮಾಣದ ತೂಕ ಇಳಿಸಿದ್ದಾರೆ ಎನ್ನಲಾಗಿದೆ. ಕಂಚಿನ ಪದಕದ ಪಂದ್ಯಕ್ಕೂ ಮುನ್ನ ಅಮನ್ ಸೆಹ್ರಾವತ್ ಅವರ ತೂಕವೂ ಕೂಡ ವಿನೇಶ್ ಫೊಗಾಟ್ ಅವರಂತೆ ಸಾಕಷ್ಟು ಹೆಚ್ಚಾಗಿತ್ತು. 57 ಕೆಜಿ ತೂಕ ವಿಭಾಗದಲ್ಲಿ ಸ್ಪರ್ಧಿಸಿದ್ದ ಅಮನ್, ಸೆಮಿಫೈನಲ್ ಪಂದ್ಯದಲ್ಲಿ ಸೋತಾಗ ಅವರ ತೂಕ 4.5 ಕೆಜಿ ಹೆಚ್ಚಾಗಿತ್ತು. ಅಂದರೆ ಅವರು 61.5 ಕೆ.ಜಿ ತೂಗುತ್ತಿದ್ದರು.

ಕಂಚಿನ ಪದಕದ ಪಂದ್ಯದಲ್ಲಿ ಪೋಟೊರ್ ರಿಕೊ ಕುಸ್ತಿಪಟುವನ್ನು 13-5 ರಿಂದ ಏಕಪಕ್ಷೀಯ ರೀತಿಯಲ್ಲಿ ಸೋಲಿಸಿದ ಅಮನ್, ಚೊಚ್ಚಲ ಒಲಿಂಪಿಕ್ಸ್‌ನಲ್ಲೇ ಪದಕಕ್ಕೆ ಮುತ್ತಿಟ್ಟರು. ಆದರೆ ಅಮನ್ ಅವರೂ ತೂಕದ ತೊಂದರೆ ಅನಿಭವಿಸಿದ್ದಾರೆ ಎನ್ನಲಾಗಿದೆ. ಕಂಚಿನ ಪದಕಕ್ಕೂ ಮುನ್ನ ಅಮನ್ ಸೆಹ್ರಾವತ್ ಅವರ ತೂಕವೂ ಕೂಡ ವಿನೇಶ್ ಫೋಗಟ್ ಅವರಂತೆ ಸಾಕಷ್ಟು ಹೆಚ್ಚಾಗಿತ್ತು. 57 ಕೆಜಿ ತೂಕ ವಿಭಾಗದಲ್ಲಿ ಸ್ಪರ್ಧಿಸಿದ್ದ ಅಮನ್, ಸೆಮಿಫೈನಲ್ ಪಂದ್ಯದಲ್ಲಿ ಸೋತಾಗ ಅವರ ತೂಕ 4.5 ಕೆಜಿ ಹೆಚ್ಚಾಗಿತ್ತು. ಹೀಗಾಗಿ ಅಮನ್‌ಗೆ ಕಂಚಿನ ಪದಕ ಸಿಗುವುದು ಅನುಮಾನವಾಗಿತ್ತು. ಆದರೆ ಕೇವಲ 10 ಗಂಟೆಗಳೊಳಗೆ ಅಮನ್ ಬರೋಬ್ಬರಿ 4.5 ಕೆ.ಜಿ ತೂಕವನ್ನು ಇಳಿಸಿಕೊಂಡರು. ತರಬೇತುದಾರರಾದ ಜಗಮಂದರ್ ಸಿಂಗ್ ಮತ್ತು ವೀರೇಂದ್ರ ದಹಿಯಾ, ಒಟ್ಟು 6 ಸದಸ್ಯರ ಕುಸ್ತಿ ತಂಡ ಅಮನ್ ಅವರ ತೂಕವನ್ನು 57 ಕೆ.ಜಿಗೆ ಇಳಿಸುವಲ್ಲಿ ಯಶಸ್ವಿಯಾಯಿತು.



ವಿಶ್ವವಾಣಿ
11.08.2024 ಭಾನುವಾರ

ನದೀಂ ಮತ್ತು ನೀರಜ್!

ಜಾವೆಲಿನ್ ಎಸೆತ ಕ್ರೀಡೆಯಲ್ಲಿ, ಒಮ್ಮೆಗೇ ಸಂಚಲನ ಸೃಷ್ಟಿಯಾಗಿದೆ. ಇದೇ ಮೊದಲ ಬಾರಿಗೆ, ಭಾರತ ಮತ್ತು ಪಾಕಿಸ್ತಾನ ದೇಶಗಳು ಈ ಕ್ರೀಡೆಯಲ್ಲಿ ಒಟ್ಟಿಗೇ ಒಲಿಂಪಿಕ್ಸ್ ಪದಕ ಪಡೆದುಕೊಂಡಿವೆ. ಆರಂಭದಿಂದಲೂ ಯುರೋಪಿಯನ್ ದೇಶಗಳೇ ಪ್ರಾಬಲ್ಯ ಸಾಧಿಸಿದ, ಪದಕಗಳನ್ನು ಬಾಚಿಕೊಳ್ಳುತ್ತಿದ್ದ ಈ ಕ್ರೀಡೆಯಲ್ಲಿ, ಭಾರತ ಉಪಖಂಡದ ಎರಡು ದೇಶಗಳು ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಗೆದ್ದಿರುವುದು ನಿಜಕ್ಕೂ ವಿಶೇಷ ಬೆಳವಣಿಗೆ, ಸಾಧನೆ. ಈ ನಡುವೆ, ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ನಮ್ಮ ದೇಶದ ನೀರಜ್ ಚೋಪ್ರಾ, ಈ ಸಲ ಬೆಳ್ಳಿಗೆ ತೃಪ್ತಿ ಪಟ್ಟುಕೊಳ್ಳಬೇಕಾದ ವಿದ್ಯಮಾನವೂ ನಡೆದಿದೆ. ಈ ಸಲದ ಒಲಿಂಪಿಕ್ಸ್‌ನಲ್ಲಿನ ದೊರಕಿದ ಈ ಫಲಿತಾಂಶಗಳು, ಜಾವಿಲಿನ್ ಎಸೆತ ಕ್ರೀಡೆಯ ಕುರಿತು ನಮ್ಮ ದೇಶದ ಯುವಕ್ರೀಡಾಪಟುಗಳ ಗಮನ ಸೆಳೆದಿದ್ದಂತೂ ಸತ್ಯ.

ಯುರೋಪಿಯನರ ಪಾರಮ್ಯ ಮುರಿದವರು !

» ಶಶಿಧರ ಹಾಲಾಡಿ

ಒಲಿಂಪಿಕ್ಸ್ ಕ್ರೀಡಾಕೂಟ ಪ್ರಾರಂಭವಾದ ನಂತರ, ಇದುವರೆಗೆ ಜಾವೆಲಿನ್ ಎಸೆತ ಕ್ರೀಡೆಯಲ್ಲಿ 69 ಪದಕಗಳನ್ನು ನೀಡಲಾಗಿದೆ; ಇವುಗಳ ಪೈಕಿ 33 ಪದಕಗಳು ಯುರೋಪಿನ ಫಿನ್ಲೆಂಡ್, ನಾರ್ವೆ ಮತ್ತು ಸ್ವೀಡನ್ (ನಾರ್ಡಿಕ್ ದೇಶಗಳು) ಪಾಲಾಗಿವೆ. ಉಳಿದಂತೆ ಜರ್ಮನಿ, ಹಂಗೆರಿ, ಜೆಕ್, ರಷ್ಯಾ, ಮೊದಲಾದ ಯುರೋಪಿಯನ್ ದೇಶಗಳು ಹೆಚ್ಚಿನ ಪದಕಗಳನ್ನು ಗೆದ್ದಿವೆ.

2020ರಲ್ಲಿ, ಮೊದಲ ಬಾರಿಗೆ ಈ ಚಿತ್ರಣ ಸ್ವಲ್ಪ ಬದಲಾಯಿತು. ಟೋಕಿಯೋದಲ್ಲಿ ನಡೆದ ಒಲಿಂಪಿಕ್ಸ್ ಪಂದ್ಯಾವಳಿಯಲ್ಲಿ, ನಮ್ಮ ದೇಶದ ಹೊಸ ತಾರೆಯ ಉದಯವಾಯಿತು. ಅವರೇ ನೀರಜ್ ಚೋಪ್ರಾ. ಜಾವೆಲಿನ್ ಎಸೆತದಲ್ಲಿ ನೀರಜ್ ಚೋಪ್ರಾ ಅವರು ಚಿನ್ನದ ಪದಕ ಪಡೆದರು. ಬೆಳ್ಳಿ ಮತ್ತು ಕಂಚಿನ ಪದಕಗಳು ಜೆಕ್ ರಿಪಬ್ಲಿಕ್ (ಯುರೋಪ್) ಪಾಲಾಯಿತು. ಒಲಿಂಪಿಕ್ಸ್ ಕ್ರೀಡಾಕೂಟಗಳು ಆರಂಭಗೊಂಡು ಶತಮಾನವೇ ಕಳೆದಿದ್ದರು, ಇದೊಂದು ಕ್ರೀಡೆಯಲ್ಲಿ ತನಕ ನಮ್ಮಲ್ಲಿ ಸಾಕಷ್ಟು ಅಜ್ಞಾನ! ಈಗಲೂ, ನಮ್ಮಲ್ಲಿನ ಕೆಲವರಿಗೆ ಜಾವೆಲಿನ್ ಎಸೆತಕ್ಕೂ ಶಾಟ್‌ಪುಟ್ ಎಸೆತಕ್ಕೂ ಸ್ಪಷ್ಟ ವ್ಯತ್ಯಾಸ ಗೊತ್ತಿಲ್ಲ! ಮಾಹಿತಿ ಕೊರತೆಯೇ ಕಾರಣ. ಇಂತಹ ಸ್ಥಿತಿಯಲ್ಲಿ, 2020ರಲ್ಲಿ ನೀರಜ್ ಚೋಪ್ರಾ ಅವರು, ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ ಜಾವೆಲಿನ್ ಎಸೆತದಲ್ಲಿ ಚಿನ್ನ ತಂದುಕೊಟ್ಟದ್ದು ಅತ್ಯಪರೂಪದ ಸಾಧನೆ ಎಂದರೆ ಅತಿಶಯೋಕ್ತಿ ಎನಿಸದು. ಅದರಲ್ಲೂ ಮುಖ್ಯವಾಗಿ, ಯುರೋಪಿಯನ್ ಕ್ರೀಡಾಪಟುಗಳ ಪಾರಮ್ಯ ಇದ್ದ ಈ ಕ್ರೀಡೆಯಲ್ಲಿ, ಅವರನ್ನು ಎದುರಿಸಿ, ನಮ್ಮ ದೇಶದವರು ಚಿನ್ನದ ಪದಕ ಗೆಲ್ಲುವುದಿದೆಯಲ್ಲಾ, ಅದೊಂದೂ ಮಹಾನ್ ಸಾಧನೆಯೇ ಸರಿ.

2024ರ ಪ್ಯಾರಿಸ್ ಒಲಿಂಪಿಕ್ಸ್ ಆರಂಭವಾಗುವ ಮುಂಚೆಯೇ, ನೀರಜ್ ಚೋಪ್ರಾ ಮೇಲೆ ಎಲ್ಲರ ನಿರೀಕ್ಷೆ ಇತ್ತು; ಈ ಸಲವೂ ಅವರು ಚಿನ್ನದ ಪದಕ ಗೆಲ್ಲುತ್ತಾರೆ ಎಂಬ ಭರವಸೆ, ಆಸೆ, ಕಾತುರ, ಅತಿಯಾದ ನಿರೀಕ್ಷೆ! ನೀರಜ್ ಅವರು ನಮ್ಮೆಲ್ಲರ ನಿರೀಕ್ಷೆಯಿಂದಾಗಿ ಅತಿಯಾದ ಒತ್ತಡಕ್ಕೆ ಎದುರಾದರೋ ಏನೋ! ಚಿನ್ನದ ನಿರೀಕ್ಷೆಯಲ್ಲಿರುವ ಭಾರತದ ಪಾಲಿನ ಚಿನ್ನದ ಹುಡುಗ, ಪ್ಯಾರಿಸ್ ಒಲಿಂಪಿಕ್‌ನಲ್ಲಿ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಕೊನೆಯ ಪಕ್ಷ ಇದೊಂದು ವಿಭಾಗದಲ್ಲಾದರೂ ಚಿನ್ನ ಲಭಿಸಿ, ದೇಶದ ಮಾನ ಉಳಿದೀತು, ಕನಿಷ್ಟ ಒಂದು ಚಿನ್ನದ ಪದಕ ಗೆದ್ದು, ಪದಕ ಪಟ್ಟಿಯಲ್ಲಿ ತುಸು ಮೇಲಿನ ಸ್ಥಾನಕ್ಕೆ ಏರಬಹುದು ಎಂಬ ಭಾರತೀಯರ ಆಸೆ ಭಗ್ನವಾಯಿತು.

ಹಾಗೆ ನೋಡಿದರೆ, ಇದರ ಜತೆಯಲ್ಲೇ, ನೀರಜ್ ಚೋಪ್ರಾ ಅವರ ಮೇಲೆ ಹೆಚ್ಚು ಒತ್ತಡ ಹೇರಿದ್ದು ಇನ್ನೊಂದೇ ಘಟನೆ! 2016ರಿಂದ ಜತೆ ಜತೆಯಾಗಿ ಅಲ್ಲಲ್ಲಿ ಸ್ಪರ್ಧಿಸುತ್ತಿದ್ದ, ಯಾವಾಗಲೂ ನೀರಜ್‌ಗಿಂತ ಕೆಳಗಿನ ಸ್ಥಾನದಲ್ಲಿದ್ದ ಪಾಕಿಸ್ತಾನದ ಅರ್ಷದ್ ನದೀಂ ಅವರು, ಮೊನ್ನೆ ನಡೆದ ಒಲಿಂಪಿಕ್ಸ್ ಫೈನಲ್ಸ್‌ನಲ್ಲಿ 92.97 ಮೀಟರ್ ದೂರ ಎಸೆದರು! ಪಕ್ಕದಲ್ಲೇ ನಿಂತಿದ್ದ ನೀರಜ್ ಚೋಪ್ರಾ ಅವರ ಏಕಾಗ್ರತೆಗೆ, ಇದರಿಂದಾಗಿ, ಏಕಾಏಕಿ ಭಂಗವಾಯಿತು! ತನ್ನ ಎದುರೇ ಬೆಳೆದು ಬಂದಿದ್ದ ಹುಡುಗ ಅಷ್ರಫ್ ನದೀಂ, ಸುಲಲಿತವಾಗಿ 92.97 ಮೀಟರ್ ದೂರ ಎಸೆದ ತಕ್ಷಣ, ನೀರಜ್ ಅಪಾರ ಒತ್ತಡಕ್ಕೆ ಒಳಗಾದರು. ನೀರಜ್ ಚೋಪ್ರಾ 89.5 ಮೀಟರ್ ಎಸೆದಿದ್ದರು ನಿಜ, ಆದರೆ, ತನ್ನ ಕಣ್ಣೆದುರೇ ತನ್ನ ಚಿನ್ನದ ಪದಕದ ಸ್ಥಾನವು 3.5 ಮೀಟರ್‌ಗಿಂತಲೂ ಹೆಚ್ಚು ಅಂತರದಿಂದ ತಪ್ಪುತ್ತಿದೆ ಎಂಬ ವಾಸ್ತವವು ಅವರ ಮೇಲೆ ಒತ್ತಡ ಹೇರಿತು.

ಫೈನಲ್‌ನ ಒಟ್ಟು ಆರು ಅವಕಾಶಗಳಲ್ಲಿ, ನಾಲ್ಕು ಬಾರಿ ಎಸೆಯುವಾಗ, ಗೆರೆ ದಾಟಿ ಫೌಲ್ ಆದರು. ಸದ್ಯ ಭಾರತೀಯರ ಭಾಗ್ಯ, ಆ ಒಂದು ಪ್ರಯತ್ನದಲ್ಲಿ 89.5 ಮೀಟರ್ ಎಸೆದು, ಬೆಳ್ಳಿಯನ್ನಾದರೂ ದೊರಕಿಸಿಕೊಟ್ಟರು. ಬಹುಷಃ ಮುಂದಿನ ಒಲಿಂಪಿಕ್ಸ್ ಕ್ರೀಡಾಕೂಟದ ವೇಳೆಗೆ ನೀರಜ್ ಚೋಪ್ರಾ, ನಿವೃತ್ತಿಯ ಹಂತಕ್ಕೆ ಬರುತ್ತಾರೋ ಏನೋ. ನೀರಜ್‌ಗಿಂತ ಸುಮಾರು ಮೂರು ಇಂಚು ಹೆಚ್ಚು ಎತ್ತರವಿರುವ (ಇದೂ ಸಹ ಜಾವೆಲಿನ್ ಎಸೆತದಲ್ಲಿ ಬಹು ನಿರ್ಣಾಯಕ ಅಂಶ) ನದೀಂ ಈಗ ಬರೆದ ದಾಖಲೆಯನ್ನು ನೀರಜ್ ಮುರಿಯುವುದು ಕಷ್ಟವೇ ಸರಿ.

ನೀರಜ್ ಚೋಪ್ರಾ ಅವರನ್ನು ಎರಡನೆಯ ಸ್ಥಾನಕ್ಕೆ ತಳ್ಳಿದ ಅರ್ಷಫ್ ನದೀಂ ಅವರ ಕ್ರೀಡಾ ಚರಿತ್ರೆ ಸ್ವಾರಸ್ಯಕರವಾಗಿದೆ. 6 ಅಡಿ 4 ಇಂಚು ಎತ್ತರವಿರುವ ನದೀಂ, ಇದೊಂದು ಚಿನ್ನದ ಪದಕ ಗೆಲ್ಲುವ ಮೂಲಕ ಅವರ ದೇಶದವರಿಗೆ ಅಪಾರ ಸಂತಸ ತಂದುಕೊಟ್ಟಿದ್ದಾರೆ. ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧೆಯಲ್ಲಿ ಆ ದೇಶಕ್ಕೆ ಇದೇ ಮೊದಲ ಬಾರಿಗೆ ಒಲಿಂಪಿಕ್ಸ್ ಚಿನ್ನದ ಪದಕ ಬಂದಿದೆ. ಪಾಕಿಸ್ತಾನದ ಪಂಜಾಬ್‌ನ ಪಟ್ಟಣವೊಂದರಲ್ಲಿ ಜನಿಸಿದ ಅಷ್ರಫ್ ಅವರಿಗೆ ಅವರ ತಂದೆ ಕ್ರೀಡಾಪಟುವಾಗಲು ಪ್ರೋತ್ಸಾಹ ನೀಡಿದರು. ಕೋಚ್ ಒಬ್ಬರ ಸಹಾಯದಿಂದ ಜಾವೆಲಿನ್ ಎಸೆತದಲ್ಲಿ ಪರಿಣತಿ ಪಡೆದರು. 2020ರ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ನೀರಜ್ ಚೋಪ್ರಾ ಚಿನ್ನದ ಪದಕ ಪಡೆದರೆ, ನದೀಮ 5ನೆಯ ಸ್ಥಾನಕ್ಕೆ ತೃಪ್ತಿ ಪಡೆದರು. ಪಾಕಿಸ್ತಾನದಲ್ಲಿ ಕ್ರೀಡಾ ತರಬೇತಿಗೆ ಹೆಚ್ಚು ಸೌಲಭ್ಯಗಳಿಲ್ಲ; ನೀರಜ್ ಚೋಪ್ರಾ ಅವರಿಗೆ ಪಾಟಿಯಾಲಾ (ಪಂಜಾಬ್)ನ ನೇತಾಜಿ ಸುಭಾಷ್ ಕ್ರೀಡಾ ಅಕಾಡೆಮಿಯಲ್ಲಿ ತರಬೇತಿ ಪಡೆಯುವ ಅವಕಾಶ ದೊರಕಿತ್ತು. ಅಷ್ರಫ್ ನದೀಂ ಅವರು ತಮ್ಮ ಊರಿನ ಸಾಮಾನ್ಯ ಆಟದ ಮೈದಾನಗಳಲ್ಲಿ ಜಾವೆಲಿನ್ ಎಸೆದು ಪ್ರಾಕ್ಟೀಸ್ ಮಾಡುತ್ತಿದ್ದರು ಎಂದು ಅಲ್ಲಿನ ಮಾಧ್ಯಮಗಳು ಬರೆದಿವೆ. ಕ್ರಿಕೆಟ್ ಆಟಗಾರನಾಗಬೇಕೆಂಬ ಕನಸು ಹೊಂದಿದ್ದ ನದೀಮ್, ಜಾವೆಲಿನ್ ಎಸೆತಕ್ಕೆ ಹೊರಳಿಕೊಂಡಿದ್ದೇ, ಅವರನ್ನು ಪಾಕಿಸ್ತಾನದ ಬಂಗಾರದ ಮನುಷ್ಯನನ್ನಾಗಿಸಿತು!

ಚಿನ್ನದ ಪದಕದಿಂದ ವಂಚಿತರಾದ ನೀರಜ್ ಚೋಪ್ರಾ ಅವರು 'ದೈಹಿಕ ನೋವಿನಿಂದ ಬಳಲುತ್ತಿದ್ದೆ, ಅದಕ್ಕೆ ಚಿಕಿತ್ಸೆ ಪಡೆದರೆ ಇನ್ನಷ್ಟು ಸಾಧಿಸಬಲ್ಲೆ; ಪ್ಯಾರಿಸ್‌ನಲ್ಲಿ ಜಾವೆಲಿನ್ ಎಸೆಯುವಾಗ ಸ್ನಾಯುನೋವಿನತ್ತ ಗಮನ ಹೋಗುತ್ತಿತ್ತು' ಎಂಬರ್ಥದ ಮಾಗುತಳನ್ನಾಡಿದ್ದಾರೆ. ಆದರೆ, ಅವರ ಏಕಾಗ್ರತೆಗೆ ನಿಜವಾದ ಭಂಗ ಬಂದದ್ದೇ, ನದೀಂ ಅವರು 92.97 ಮೀಟರ್ ಎಸೆದಾಗ. ನೇರ ಪ್ರಸಾರದಲ್ಲಿ ಗಮನಿಸಿದಂತೆ, ನದೀಂ ಆ ಎಸೆತವನ್ನು ಎಸೆದ ತಕ್ಷಣ ನೀರಜ್ ಅವರು ವಿಚಲಿತರಾಗಿದ್ದು ಸ್ಪಷ್ಟವಾಗಿ ಕಾಣಿಸಿತು; ನಂತರದ ಅವರ ಎಲ್ಲಾ ಎಸೆತಗಳೂ ಫೌಲ್ ಆದವು! ಪಾಪ, ಅದರಲ್ಲಿ ನೀರಜ್ ಅವರ ತಪ್ಪಿಲ್ಲ, 92.97ಗಿಂತ ಹೆಚ್ಚು ದೂರ ಎಸೆಯಬೇಕು ಎಂಬ ಒತ್ತಡ ಹಾಗೆ ಮಾಡಿತ್ತು.

ಜಾವೆಲಿನ್ ಎಸೆತ ಎಂಬ ಕ್ರೀಡೆಗೆ ಒಲಿಂಪಿಕ್ಸ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ಲಗ್ಗೆ ಇಟ್ಟಿವೆ; ಅದರ ಮೇಲಿದ್ದ ಯುರೋಪಿಯನರ ಹಿಡಿತಕ್ಕೆ ಇದೇ ಮೊದಲ ಬಾರಿ ಸವಾಲು ಎಸೆದಿವೆ. ಒಮ್ಮೆಗೇ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ತರುವ ಮೂಲಕ ಹೊಸ ದಾಖಲೆ ಬರೆದಿವೆ.

ನಮ್ಮ ದೇಶದ ಯುವ ಕ್ರೀಡಾಪಟುಗಳು ಮುಂದಿನ ದಿನಗಳಲ್ಲಿ ಈ ಕ್ರೀಡೆಯತ್ತ ಹೆಚ್ಚಿನ ಗಮನ ಹರಿಸಲು ಈ ಅಪರೂಪದ ಸಾಧನೆಯು ಸ್ಫೂರ್ತಿ ತುಂಬುವುದರಲ್ಲಿ ಸಂದೇಹವಿಲ್ಲ.

ದಾಖಲೆ ಹೇಗೆ ಬರೆದರು?

ಅಷ್ರಫ್ ನದೀಂ ಅವರು, ಈ ಒಲಿಂಪಿಕ್ಸ್‌ನಲ್ಲಿ ವಿಶ್ವದಾಖಲೆಯನ್ನು ಬರೆಯಲು ಹೇಗೆ ಸಾಧ್ಯವಾಯಿತು ಎಂಬುದರ ಬಗ್ಗೆ ಸಾಕಷ್ಟು ವಿಶ್ಲೇಷಣೆ ನಡೆದಿದೆ. ನದೀಂ ಅವರು 6 ಅಡಿ 4 ಇಂಚು ಎತ್ತರವಿದ್ದಾರೆ; ಅವರ ತೂಕ 95 ಕಿಲೋ; ಜಾವೆಲಿನ್ ಎಸೆತದಲ್ಲಿ ಇವೆರಡೂ ಪ್ರಮುಖ ಅಂಶಗಳು. ದೇಹದ ಎತ್ತರ ಮತ್ತು ತೂಕದ ಸಹಾಯದಿಂದ, ಜಾವೆಲಿನ್ ಎಸೆಯುವಾಗ ಹೆಚ್ಚಿನ ಎತ್ತರದಲ್ಲಿ ಎಸೆದು, ದೂರಕ್ಕೆ ಕಳಿಸಲು ಸಾಧ್ಯ. ಎತ್ತರ ಜಾಸ್ತಿ ಇದ್ದವರು ಹೆಚ್ಚು ದೂರ ಓಡದೇ, ತಮ್ಮ ಜಾವೆಲಿನ್ ಎಸೆಯಬಹುದು. ಇದೂ ಸಹ ನದೀಂ ಅವರಿಗೆ ಸಹಕಾರಿ. ಕುತೂಹಲಕಾರಿ ವಿಚಾರವೆಂದರೆ, ಈ ಮುಂಚಿನ ಸುಮಾರು 10 ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ, ನೀರಜ್ ಚೋಪ್ರಾ ಅವರನ್ನು ಸೋಲಿಸಲು ನದೀಂರಿಂದ ಸಾಧ್ಯವಾಗಿರಲಿಲ್ಲ!



ಈಟಿ ಎಸೆತ

ಪುರಾತನ ಒಲಿಂಪಿಕ್ಸ್‌ನಲ್ಲಿ, ಸುಮಾರು ಕ್ರಿ.ಪೂ.708 ರಿಂದಲೇ ಜಾವೆಲಿನ್ ಎಸೆತ ಸ್ಪರ್ಧೆ ಇತ್ತು. ಆಧುನಿಕ ಕಾಲದಲ್ಲಿ, 1880ರ ಸಮಯದಲ್ಲಿ ಫಿನ್ಲೆಂಡ್‌ನಲ್ಲಿ ಜಾವೆಲಿನ್ ಎಸೆತವು ಕ್ರೀಡೆಯಾಗಿ ಜನಪ್ರಿಯವಾಗಿತ್ತು. ಆದ್ದರಿಂದಲೇ, 1996ರ ತನಕ, ಒಲಿಂಪಿಕ್ಸ್‌ನಲ್ಲಿ ಫಿನ್ಲೆಂಡ್ ಮತ್ತು ಅದರ ನೆರೆಯ ದೇಶಗಳೇ ಅತಿ ಹೆಚ್ಚು ಪದಕಗಳನ್ನು ಗೆಲ್ಲುತ್ತಿದ್ದವು. ಜಾವೆಲಿನ್‌ನ್ನು ಕನ್ನಡದಲ್ಲಿ ಈಟಿ ಎನ್ನಬಹುದು. ಇದು ಈಟಿ ಎಸೆತದ ಸ್ಪರ್ಧೆ ಎಂದರೂ ಸರಿಯೇ.

ವಿರಾಮ
ಓದುವ ಲೋಕಕ್ಕೆ ಓದುವ ನಿಲ್ದಾಣ

ಇಷ್ಟು ಬೇಗನೆ ಸೇತುವೆ ಅದೇಕೆ ಕುಸಿಯಿತು?



ಕಳೆದ ವಾರ ಕಾಳಿ ಸೇತುವೆ ಕುಸಿಯಿತು. ಜೀವಹಾನಿಯಾಗದೇ ಇರುವುದು ಪುಣ್ಯ. ದೇಶಕ್ಕೆ ಸ್ವಾತಂತ್ರ್ಯ ದೊರೆತು 37 ವರ್ಷಗಳ ನಂತರ ನಿರ್ಮಾಣಗೊಂಡ ಈ ಸೇತುವೆಯ ಜತೆ ಉತ್ತರಕನ್ನಡದ ಜನತೆಗೆ ಭಾವನಾತ್ಮಕ ಸಂಬಂಧವಿದೆ. ಇಷ್ಟು ಬೇಗನೆ ಈ ಸೇತುವೆ ಕುಸಿದ ಸುದ್ದಿಯು ಜನರಲ್ಲಿ ಬೇಸರ ತಂದಿದೆ. ನಮ್ಮ ಜನರು, ತಂತ್ರಜ್ಞರು ನಿರ್ಮಿಸಿದ ಇಂತಹ ಸೇತುವೆಗಳು ಅದೇಕೆ ಇಷ್ಟು ಬೇಗನೆ ಕುಸಿಯುತ್ತಿವೆ?

» ಮೋಹನ ಭಟ್ಟ, ಅಗಸೂರು

ಕಾಳಿ ಸೇತುವೆಯು ಕುಸಿದಿದೆ ಎಂಬುದು, ನಮ್ಮ ರಾಜ್ಯದ ಇತರ ಭಾಗದವರಿಗೆ ಕೇವಲ ಒಂದು ದುರಂತದ ಸುದ್ದಿ ; ಆದರೆ ಉತ್ತರ ಕನ್ನಡದ ಜನರಿಗೆ ಅದರ ಹಿಂದೆ ಇರುವ ಭಾವನಾತ್ಮಕ ಸಂಬಂಧ ಅಪೂರ್ವವಾದುದು.

ಅರವತ್ತರ ದಶಕದಲ್ಲಿ ಕಾರವಾರದಲ್ಲಿ ನಡೆದ ಅ.ಭಾ. ಸಾಹಿತ್ಯ ಸಮ್ಮೇಳನ ನಡೆದಿತ್ತು. ಅದರಲ್ಲಿ ಹಲವು ಕನ್ನಡ ಸಾಹಿತಿಗಳು ಭಾಗವಹಿಸಿದ್ದರು. ಇಡೀ ನಾಡಿಗೆ ಅದೊಂದು ಹೆಮ್ಮೆಯ ಸಮ್ಮೇಳನ ಎನಿಸಿತ್ತು. ಇದು ಪೂರ್ತಿ ಕನ್ನಡ ಭಾಷೆಯಲ್ಲಿ ನಡೆದಿತ್ತು. ಆದರೆ, ಈ ವಿದ್ಯಮಾನವು ಕೆಲವು ಸ್ಥಳೀಯರಲ್ಲಿ ನಿರಾಸೆಯನ್ನು ಮೂಡಿಸಿತ್ತು! ಅವರ ಪ್ರಕಾರ ಸಂಪೂರ್ಣ ಕನ್ನಡದಲ್ಲಿ ನಡೆಯಬಾರದಿತ್ತಂತೆ! ಯಾಕೆಂದರೆ ಮೈಸೂರು ರಾಜ್ಯದಲ್ಲಿ ಕಾರವಾರ ಇದ್ದರೂ, ಮೊದಲಿನಿಂದಲೂ ಅಲ್ಲಿ ಮರಾಠಿಯ ಪ್ರಭಾವ ಹೆಚ್ಚಿತ್ತು. ಕೆಲವು ಜನರಿಗೆ ಕನ್ನಡದ ಸಂಬಂಧವೇ ಇದ್ದಿರಲಿಲ್ಲ. ಕನ್ನಡ ಭಾಷೆಯ ಬಳಕೆಯೂ ತುಸು ಕಡಿಮೆ ಎಂದೇ ಹೇಳಬೇಕು. ಕಾರವಾರಕ್ಕೆ ಗೋವಾ ಮತ್ತು ಬೊಂಬೇದೊಂದಿಗೆ ಸಾಂಸ್ಕೃತಿಕವಾಗಿ ಹೆಚ್ಚು ಬಳಕೆ ಇತ್ತು. ಆಗ ಕನ್ನಡ ಪತ್ರಿಕೆಗಳು ಕಾರವಾರಕ್ಕೆ ಸಂಜೆಯ ಹೊತ್ತಿಗೆ ಬರುತ್ತಿದ್ದವು.

ಕಾರವಾರದ ಆ ಐತಿಹಾಸಿಕ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗೋವಾ ಸಾಂಸ್ಕೃತಿಕ ಕಾರ್ಯಕ್ರಮ, ಕೊಂಕಣಿ ಗೋಷ್ಠಿಯೂ ನಡೆದಿತ್ತು. ಗೋವಾದೊಂದಿಗೆ ನಿಕಟ ಸಾಂಸ್ಕೃತಿಕ ಸಂಬಂಧ ಹೊಂದಿರುವದರಿಂದ, ಕಾಳಿ ನದಿಗೆ ಅಡ್ಡಲಾಗಿ ಹೊಸ ಸೇತುವೆ ನಿರ್ಮಾಣದ ಪ್ರಸ್ತಾವನೆಯನ್ನು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಲಾಯಿತು. ಅದುವರೆಗೆ ಅಲ್ಲಿ ಸೇತುವೆ ಇರಲಿಲ್ಲವಲ್ಲ!

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಕಡಂಗೋಡ್ಲು ಶಂಕರಭಟ್ಟ ಅವರು 'ಕಾರವಾರದ ನೈಸರ್ಗಿಕ ಸೌಂದರ್ಯ ಅಪೂರ್ವವಾದುದು, ಅಭಿವೃದ್ಧಿ ಗಾಗಿ ಸರಕಾರ ಕ್ರಮಕೈಗೊಳ್ಳಬೇಕು. ಕನ್ನಡ ಚಟುವಟಿಕೆಗಳನ್ನು ನಡೆಸಲು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದರು.

ನಿಲ್ಲದ ಕುಂದ

ಕಾಳಿ ಸೇತುವೆಯ ಬಗ್ಗೆ ಪ್ರಸ್ತಾವನೆ ನಡೆದ ದಶಕದ ನಂತರ ಸೇತುವೆಯ ಟೆಂಡರ್ ಕರೆಯಲಾಯಿತು! ಆದರೆ ಕಾಮಗಾರಿ ಪ್ರಾರಂಭಕ್ಕೂ ವಿಳಂಬ ಕಾಡಿತ್ತು. ನದಿಯಲ್ಲಿ ನಿರ್ಮಾಣಹಂತದ ಸೇತುವೆಯ ಸ್ಥಭ ನಿಲ್ಲದೇ , ಗುತ್ತಿಗೆದಾರರು ಕೆಲಸಬಿಟ್ಟರು. ಇನ್ನೊಂದು ಕಂಪನಿ ಬಂದು ನಿರ್ಮಾಣ ಮುಂದುವರಿಸಿತಾದರೂ, ಕಾಮಗಾರಿಯು ಆಮೆ ವೇಗದಲ್ಲಿ ನಡೆಯಿತು. ಬಿ.ಪಿ.ಕದಮ್, ಸಂಸದರು ಹಾಗೂ ನಂತರ ಶಾಸಕರಾದ ಪ್ರಭಾಕರ ರಾಣೆ ಮುಂತಾದವರಿಗೆ ಸಾರ್ವಜನಿಕರು ಮನವಿ ನೀಡಲಾಯಿತು.



'ಕಾಳಿ ಸೇತುವೆ ಯಾವಾಗ?' ಎಂಬ ಕೂಗು ಕೇಳಿ ಬಂತು. ಪತ್ರಿಕೆಗಳಲ್ಲಿಯೂ ಈ ಬಗ್ಗೆ ವಿವರವಾದ ವರದಿಗಳು, ಹಕ್ಕೊತ್ತಾಯಗಳು ಬಂದವು. ಅದುವರೆಗೆ ಕಾಳಿ ನದಿಯ ಸದಾಶಿವಗಡದ ಬದಿಯಲ್ಲಿ ಗೋವಾದಿಂದ ಖಾಸಗಿ ಬಸ್‌ಗಳು ಬಂದು ನಿಲ್ಲುತ್ತಿದ್ದವು. ಈಚೆ ದಡದಲ್ಲಿ ಕರ್ನಾಟಕದ ಬಸ್ಸುಗಳು ಬಂದು ನಿಲ್ಲುತ್ತಿದ್ದವು. ಬಸ್ಸುಗಳನ್ನು ಬಾರ್ಜ ಮೇಲೆ ಏರಿಸಿ, ನದಿ ದಾಟಿಸಬೇಕು! ಎರಡೂ ಬದಿಯಿಂದ ಬಾರ್ಜ ಸಂಚಾರ ಇದ್ದರೂ, ನೀರಿನ ಏರಳಿತಕ್ಕೆ ಅನುಗುಣವಾಗಿ, ಕಡಲಿನ ಬರತ ಇಳಿತದ ಸಮಯಕ್ಕನುಗುಣವಾಗಿ, ಬಾರ್ಜ ಸಂಚಾರ ನಡೆಯುತ್ತಿತ್ತು. ಗೋವಾ ರಾಜ್ಯದ ಮಡಗಾಂವ್ ಅರವತ್ತೇ ಕಿ.ಮಿ. ದೂರವಿದ್ದರೂ, ಕಾರವಾರದಿಂದ ಬೆಳಿಗ್ಗೆ ಹೊರಟರೆ ಈ ಎಲ್ಲ ಅಡಚಣೆಯಿಂದಾಗಿ ಸಂಜೆಯೊಳಗೆ ಅಲ್ಲಿಗೆ ತಲಪುವುದೂ ನಡೆದಿತ್ತು. ಹೀಗಾಗಿ ಸೇತುವೆಯ ಅಗತ್ಯತೆ ದಿನದಿಂದ ದಿನಕ್ಕೆ ಹೆಚ್ಚಾಯಿತು.

ಹೆಚ್ಚಿದ ಒತ್ತಡ

ಕಾರವಾರದ ಸಮೀಪದ ಬಿಣಗಾದಲ್ಲಿ ಬೃಹತ್ ರಾಸಾಯನಿಕ ಕಾರಖಾನೆಯ ಕಾಮಗಾರಿ ಪ್ರಾರಂಭವಾಗಿ ಕೆಲವು ವರ್ಷ ಕಳೆದಿತ್ತು. ವಿಮಾನ ಪ್ರಯಾಣಕ್ಕಾಗಿ ಕಂಪನಿಯ ಅಧಿಕಾರಿಗಳು ಪ್ರಧಾನ ಕಚೇರಿಗೆ ಹೋಗಲು ದೂರದ ಬೆಂಗಳೂರಿಗೆ ಹೋಗುವುದರ ಬದಲು ಸಮೀಪದ ಗೋವಾಕ್ಕೆ ಹೋಗುವದರಿಂದ ಸಮಯ ಉಳಿತಾಯವಾಗುವುದು ಎಂಬ ಕಾರಣದಿಂದ ಅವರಿಂದಲೂ ಸರಕಾರದ ಮೇಲೆ ಒತ್ತಡ ಇತ್ತು. ಇದರೊಂದಿಗೆ ಸೀಬರ್ಡ್ ನೌಕಾನೆಲೆ, ಕೈಗಾ ಅಣು ವಿದ್ಯುತ್ ಸ್ಥಾವರ ಸ್ಥಾಪನೆ ಖಚಿತ ಎಂಬ ಕೇಂದ್ರ, ಸರಕಾರದ ನಿರ್ಧಾರ ಕೂಡ ಸೇತುವೆಯ ಕಾಮಗಾರಿಯು ವೇಗ ಪಡೆಯಲು ಕಾರಣವಾಗಿದೆ.

ಅಂತೂ ಇಂತೂ, ಕೊನೆಗೂ 1984ರಲ್ಲಿ ಸೇತುವೆಯ ಪೂರ್ಣ ಕಾಮಗಾರಿ ಮುಗಿದಿದ್ದರಿಂದ ಸೇತುವೆ ಉದ್ಘಾಟನೆಯ ದಿನಾಂಕ ನಿಗದಿಯಾಯಿತು. ಕಾರವಾರದ ಮತ್ತು ಉತ್ತರ ಕನ್ನಡದ ಜನರಿಗೆ ಅದೊಂದು ಸಂತಸದ ದಿನ. ಆಗಿನ ಲೋಕೋಪಯೋಗಿ ಸಚಿವ ದೇವೇಗೌಡರು, ಜನಪ್ರತಿನಿಧಿಗಳ ಹಾಗೂ ಗೋವಾ ಸರಕಾರದ ಪ್ರತಿನಿಧಿಗಳ ಸಮ್ಮುಖದಲ್ಲಿ ಸೇತುವೆಯ ಮೇಲೆ ಸಂಚಾರ ಪ್ರಾರಂಭವಾಯಿತು. ಜನತೆ ಸಂಭ್ರಮಿಸಿತು.



ನಂತರ, ಅದರ ನಿರ್ಮಾಣದ ಕುರಿತು ಕೆಲವು ಕೊರತೆಗಳು ಕಂಡು ಬಂದು, ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಆದರೆ, ಈ ಬಹುಪಯೋಗಿ ಕಾಳಿ ಸೇತುವೆಯು ಮೊನ್ನೆ ಕುಸಿದಿದೆ. ಕೆಲವೇ ವರ್ಷಗಳ ಹಿಂದೆ ರಾ.ಹೆ. ಚತಷ್ಪುತಕ್ಕೆ ಹಳೆ ಸೇತುವೆಗೆ ಸಮಾನಾಂತರವಾಗಿ ಇನ್ನೊಂದು ಸೇತುವೆ ನಿರ್ಮಾಣದಿಂದಾಗಿ ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗಿಲ್ಲ. ಕೇವಲ 34 ವರ್ಷಗಳಲ್ಲಿ ಈ ಕಬ್ಬಿಣ-ಸಿಮೆಂಟ್ ಸೇತುವೆ ಏಕೆ ಕುಸಿಯಿತು? ನೂರು ವರ್ಷಕ್ಕೂ ಹಿಂದೆ ನಿರ್ಮಾಣಗೊಂಡ ಹಲವು ಸೇತುವೆಗಳು ಇಂದಿಗೂ ಕಾರ್ಯನಿರ್ವಹಿಸುತ್ತಿವೆ! ಆದರೆ, ಸ್ವತಂತ್ರ ಭಾರತದಲ್ಲಿ ನಿರ್ಮಾಣಗೊಂಡ, ನಮ್ಮ ರಾಜ್ಯದ ಪ್ರಮುಖ ಸೇತುವೆಗಳಲ್ಲಿ ಒಂದಾದ ಕಾಳಿ ಸೇತುವೆ ಅದೇಕೆ ಕುಸಿಯಿತು? ನಮ್ಮ ತಂತ್ರಜ್ಞರಿಗೆ ಅಷ್ಟೊಂದು ಪರಿಣತಿ, ಮಾಹಿತಿ, ತಿಳುವಳಿಕೆ, ಇಂಜಿನಿಯರಿಂಗ್ ಕೌಶಲ ಇಲ್ಲವೆ?

ಕಾಳಿ ನದಿಯ ಹಳೆ ಸೇತುವೆ ಮತ್ತು ಕಾರವಾರದ ಜನರ ನಡುವೆ ಭಾವನಾತ್ಮಕ ಸಂಬಂಧವಿದೆ. ಸೇತುವೆಯ ಬೇಡಿಕೆಯಿಂದ ಹಿಡಿದು, ಕಳೆದ ವಾರ ಅದು ಕುಸಿಯುವವರೆಗೂ ಇರುವ ಕಾಲದ ಬೆಸುಗೆ ಅಪೂರ್ವವಾದುದು.

ಪುಸ್ತಕ ವಿಮಾನ

ಕಥೆಗಳ ರೂಪದ ವೃತ್ತಾಂತಗಳು

ಹಿರಿಯ ಸಾಹಿತಿ ಮೊಗಸಾಲೆಯವರ ಹೊಸ ಕಥಾ ಸಂಕಲನ ಹಲವು ಆಯಾಮಗಳ ಕಥೆಗಳನ್ನು ಹೊಂದಿದೆ.

» ಡಾ. ರವಿಶಂಕರ ಜಿ.ಕೆ.

ನಾ. ಮೊಗಸಾಲೆಯವರ ಹೊಸ ಕಥಾ ಸಂಕಲನ 'ಆಗು ನೀ ಅನಿಕೇತನ'ದಲ್ಲಿ ಒಟ್ಟು ಹದಿನೈದು ಸಣ್ಣಕಥೆಗಳಿದ್ದು ಅವುಗಳನ್ನು ಅವರು 'ಸಣ್ಣ ಕತೆಗಳ ರೂಪದ ವೃತ್ತಾಂತಗಳು' ಎಂದು ಕರೆದಿದ್ದಾರೆ. ಈ ಕಥೆಗಳು ಮೊಗಸಾಲೆಯವರ ಕಥನ ಸೃಷ್ಟಿಯ ವೇದಿಕೆಯಂತಿರುವ ಸೀತಾಪುರದಲ್ಲಿ ನಡೆಯುವ ವೃತ್ತಾಂತಗಳಂತಿದ್ದು ಅಲ್ಲಿ ಹೋಟೇಲು ನಡೆಸುತ್ತಿರುವ ಕುಪ್ಪಣ್ಣಯ್ಯನವರ ಪಾತ್ರ ಅವುಗಳಿಗೆಲ್ಲ ಸಾಕ್ಷಿಯಾಗುತ್ತದೆ.

ಮೊದಲ ಕಥೆ ಆಗು ನೀ ಅನಿಕೇತನವು ಸೀತಾಪುರದ ಸಾಮರಸ್ಯದ ಬದುಕಿನ ಜೊತೆಗೆ ಅಲ್ಲಿನ ಮಾನವೀಯತೆಯ ಹಲವು ಮುಖಗಳನ್ನು ಪರಿಚಯಿಸುತ್ತದೆ. ಮನುಷ್ಯನಿಗೆ ಸಹಜವಾಗಿ ಇರಬೇಕಾದ ಒಳ್ಳೆಯತನ, ಪ್ರೀತಿ, ಸಹಬಾಳ್ವೆ, ಪರೋಪಕಾರಿ ಗುಣಗಳನ್ನು ನಾವು ಇಂದು ಮರೆತು ಬಿಟ್ಟಿರುವುದರಿಂದ ಅದನ್ನು ಆದರ್ಶಗಳನ್ನಾಗಿ ವ್ಯಾಖ್ಯಾನಿಸುವ ಸ್ಥಿತಿಯನ್ನು ತಲುಪಿದ್ದೇವೆ. ಆದರೆ ಸಾಮರಸ್ಯ, ಮಾನವೀಯತೆಗಳು ಮನುಷ್ಯನ ಆದರ್ಶವಾಗದೆ ಮನುಷ್ಯನ ಸಹಜಗುಣವಾಗಬೇಕಿದೆ ಎನ್ನುವುದನ್ನು ಈ ಕಥೆ ಪ್ರತಿಪಾದಿಸುತ್ತದೆ. ಈ ಕಥೆಯಲ್ಲಿ ಕರಿಬೇವಿನ ಗಿಡಗಳಿಂದ ಸೊಪ್ಪನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿದ್ದ ಗಾಡಿ ಹುಸೇನಿಯ ಹೆಂಡತಿಗೆ ಕ್ಯಾನ್ಸರ್ ಆವರಿಸಿಕೊಳ್ಳುತ್ತದೆ. ಚಿಕಿತ್ಸಾವೆಚ್ಚ ಭರಿಸಲಾಗದೇ ಕಂಗಾಲಾಗಿದ್ದ ಆತನನ್ನು ನೋಡಿದ ಕುಪ್ಪಣ್ಣಯ್ಯ ಹುಸೇನಿ ಸಾಬಿಯಿಂದ ಹಿಂದೊಮ್ಮೆ ಉಪಕೃತನಾಗಿದ್ದ ಸಿರಿಲ್‌ನಿಂದ ಧನಸಹಾಯ ಮಾಡಿಸುತ್ತಾರೆ. ಸಿರಿಲ್ ತಾನು ಸಹಾಯ ಮಾಡುತ್ತಿರುವುದನ್ನು ತನ್ನ ದೊಡ್ಡತನ ಎಂದು ಹೇಳಿಕೊಳ್ಳದೆ ಹುಸೇನಿಗೆ ನೆರವಾಗುವ ಅವಕಾಶ ಕಲ್ಪಿಸಿಕೊಟ್ಟದ್ದಕ್ಕೆ ಧನ್ಯವಾದ ಸಲ್ಲಿಸುವಲ್ಲಿ ಈ ವೃತ್ತಾಂತದ ಮೂಲ ಆಶಯವಿದೆ.

'ನೀರು ಬಂತು ನೀರು' ಕಥೆಯಲ್ಲಿ ವೆಂಕಪ್ಪಯ್ಯ ಶೀನಪ್ಪಯ್ಯನವರ ನಡುವೆ ಶೀನಪ್ಪಯ್ಯನ ಪತ್ನಿಯ ಜಗಳಗಂಟಿ ಸ್ವಭಾವದ ಕಾರಣದಿಂದಾಗಿ ಹುಟ್ಟಿಕೊಂಡು ಬೆಳೆದಿರುವ ದಾಯಾದಿ ಜಗಳವಿದೆ. 'ಪ್ಲಾಸಿಬೋ' ರೇಬಿಸ್ ಖಾಯಿಲೆ ಮತ್ತು ಅದರ ಆತಂಕದ ಸುತ್ತ ಹೆಣೆಯಲಾದ ಕಥೆ. ರೇಬಿಸ್‌ನ ಕುರಿತಾಗಿ ಸೀತಾಪುರದಲ್ಲಿ ಹುಟ್ಟಿಕೊಂಡ ಭಯ ರಾಜಕೀಯದ ಧಾಳವಾಗಿ ಬದಲಾಗುವ ಚಿತ್ರಣ ಇದರಲ್ಲಿದೆ. ಈ ಎರಡೂ ಪ್ಲಾಸಿಬೋಗಳಿಗೆ ಕುಪ್ಪಣ್ಣಯ್ಯ ಮೂಕಸಾಕ್ಷಿಯಾಗಿಬಿಡುತ್ತಾರೆ. 'ಒಂದು ಕಥಾ ಪ್ರಸಂಗ'ದಲ್ಲಿ ಕುಪ್ಪಣ್ಣಯ್ಯನವರು ಉಪಾಯವಾಗಿ ಕೌಸಲ್ಯಬಾಯಿಯ ಆಭರಣವನ್ನು ಶೀನಪ್ಪಯ್ಯನಿಂದ ಕೊಡಿಸುವುದರ ಚಿತ್ರಣವಿದೆ.

'ಊರುಭಂಗ' ಸ್ತ್ರೀ ಸಬಲೀಕರಣವನ್ನು ಸಮರ್ಥಿಸುವ ಮೊಗಸಾಲೆಯವರ ಕಥೆಗಳಲ್ಲಿ ಮುಖ್ಯವಾಗುತ್ತದೆ. ಸೀತಾಪುರದ ಶ್ಯಾನುಭೋಗರನ್ನು ಧಿಕ್ಕರಿಸುವ ಅಪ್ಪಿಯ ಪಾತ್ರ ಮಹತ್ವದ್ದು. ಆಕೆ ಶ್ಯಾನುಭೋಗರಿಗೆ ಕೊಡುವ ಉತ್ತರ ಬಹಳ ಮಾರ್ಮಿಕವಾದದ್ದು. ''ನೀವು ಗಂಡಸರು ಏನೂ ಮಾಡಬಹುದು ಎನ್ನುವ ಕಾಲ ಮುಗಿಯಿತು ರಾಮಪ್ಪ'' ಎಂದು ಏಕವಚನದಲ್ಲೇ ಸಂಬೋಧಿಸಿ ''ನೀವು ಹಿಂದೆ ನನ್ನಂಥವಳನ್ನು ಇಡಿಸಿಕೊಂಡು ರಾಜ್ಯವಾಳುತ್ತಿದ್ದೀರಿ. ಈಗ ನಾನೂ ನಿಮ್ಮಂಥ ಒಬ್ಬನನ್ನು ಇಡಿಸಿಕೊಂಡ ಧೈರ್ಯದಲ್ಲಿದ್ದೇನೆ. ನೀವು ನನಗೇನಾದರೂ ಮಾಡಿದರೆ ನಾನು ಇಡಿಸಿಕೊಂಡಿರುವ ಆ ಸಾತಂಪ್ಪ ನಿಮ್ಮನ್ನು ಸಿಗಿದು ಹಾಕುತ್ತಾನೆ ಜಾಗ್ರತೆ'' ಎನ್ನುತ್ತಾಳೆ.

ಆಗು ನೀ ಅನಿಕೇತನ
ಲೇ: ಡಾ. ನಾ. ಮೊಗಸಾಲೆ.
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
9448110034

'ಭೂತ' ಕಥೆಯಲ್ಲಿ ಕೆಳವರ್ಗದ ಕೊರಗನ ಸ್ವಾಭಿಮಾನ ವ್ಯಕ್ತವಾಗಿದೆ. ಸೌದೆ ಒಡೆಯುವ ಕಾಯಕ ಮಾಡುವ ಆತ ಯಾರ ಹಂಗಿಗೂ ಒಳಗಾಗದೇ ಬದುಕಬೇಕೆನ್ನುವ ಪ್ರವೃತ್ತಿಯವನು. ಅವನ ಗುಡಿಸಲನ್ನು ಉಪಾಯವಾಗಿ ಸುಟ್ಟುಹಾಕುವ ಯೋಚನೆಯನ್ನು ರೂಪಿಸಿದಾಗ ಆತ ಊರನ್ನು ಬಿಟ್ಟುಹೋಗುವ ಯೋಚನೆ ಮಾಡುತ್ತಾನೆಯೇ ಹೊರತು ಹೆಗ್ಡೆಯವರ ಒಕ್ಕಲಾಗಿರಲು ನಿರ್ಧರಿಸುವುದಿಲ್ಲ. ಅಂತಿಮವಾಗಿ ರಕ್ತೇಶ್ವರಿ ಪಲ್ಕೆಯಲ್ಲಿಯೇ ಹೊಸದಾಗಿ ಮನೆ ನಿರ್ಮಿಸಿಕೊಳ್ಳುವ ಯೋಚನೆಯೊಂದಿಗೆ ಕಥೆ ಕೊನೆಯಾಗುತ್ತದೆ.

'ಬೊಳ್ಳೆಸೊಪ್ಪು' ಮುಸ್ಲಿಂ ಸಮುದಾಯವನ್ನು ಅಪನಂಬಿಕೆಯಿಂದ, ಅನುಮಾನದಿಂದ ನೋಡುವಂಥಾ ಮನೋಸ್ಥಿತಿಯನ್ನು ಬಿಚ್ಚಿಡುತ್ತದೆ. 'ಮನಾಂತರ' ಕಥೆಯಲ್ಲಿ ಮತಾಂತರವಾದರೂ ಮನುಷ್ಯನ ಮೂಲದ ಬೇರುಗಳು ನಾಶವಾಗುದಿಲ್ಲ ಎಂಬ ಅಭಿಪ್ರಾಯ ವ್ಯಕ್ತಗೊಂಡಿದೆ. 'ತನ್ನ ಶಿಲುಬೆ ತಾನೇ ಹೊತ್ತು' ಕಥೆಯಲ್ಲಿ ಅಂತರ್ಧರ್ಮೀಯ ವಿವಾಹವಾಗಿರುವ ಮೇರಿ ಟೀಚರ್ ಪಾತ್ರ ಇದೆ.

ಒಟ್ಟಿನಲ್ಲಿ ಮೊಗಸಾಲೆಯವರ ಕಥಾಜಗತ್ತಿನ ಸೀತಾಪುರದಲ್ಲಿ ಹಲವು ಜಾತಿ, ಮತಗಳ ಜನರು ಸಾಮರಸ್ಯದ ಬದುಕನ್ನು ಬಾಳುತ್ತಿದ್ದಾರೆ. ಅಲ್ಲಿನ ಸ್ತ್ರೀ ಪಾತ್ರಗಳು ತಮಗಾಗುತ್ತಿರುವ ಅನ್ಯಾಯದ ಪ್ರತಿಭಟಿಸಿ ಗೆಲ್ಲಬಲ್ಲಂಥವುಗಳು. ಮೊಗಸಾಲೆಯವರಿಗೆ ಯಾವುದೇ ಪಾತ್ರಗಳ ಗುಣವನ್ನು ಅಳೆಯುವುದಕ್ಕೆ ಜಾತಿ ಅಥವಾ ಧರ್ಮವನ್ನು ಅವಲಂಬಿಸದೆ ಮನುಷ್ಯತ್ವವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತಾರೆ. ಸೀತಾಪುರದೊಳಗಿನ ಸಾಮರಸ್ಯದ ಬದುಕನ್ನು ಕದಡಲು ಒಂದಷ್ಟು ಮಂದಿ ಹೊಂಚು ಹಾಕುವವರಿದ್ದರೂ ಅಲ್ಲಿನ ಸಹಬಾಳ್ವೆಯ ಬದುಕಿಗೆ ಅದು ಯಾವುದೇ ಸಂಚಕಾರ ತರುವುದಿಲ್ಲ.

ಸಾಂಸ್ಕೃತಿಕ ಮಹತ್ವದ ಅನುಭವಗಳು

ಕಾಡಿನಲ್ಲಿ ವಾಸಿಸುವವರ ಬದುಕನ್ನು ಚಲನಶೀಲವಾಗಿ ಗ್ರಹಿಸುವ ಪ್ರಯತ್ನ ಈ ಕೃತಿಯಲ್ಲಿದೆ.



» ಕೆ. ಸತ್ಯನಾರಾಯಣ

ಪೊನ್ನಾಚಿಯವರ ಈ ಅನುಭವ ಕಥನ ತನ್ನ ಸೊಗಸಾದ ನಿರೂಪಣೆ ಮತ್ತು ಓದುಗರಿಗೆ ಪರಿಚಯಿಸುವ ವಿಶಿಷ್ಟ, ವಿಶೇಷ ಅನುಭವಗಳಾಗಿ ಓದುಗರಿಗೆ ಪ್ರಿಯವಾಗಬಲ್ಲದು. ಹೀಗೆ ಓದುಗರಿಗೆ ಪ್ರಿಯವಾಗುವುದರಿಂದಾಚೆಗೂ ಈ ಕೃತಿಗೆ ಸಾಂಸ್ಕೃತಿಕ ಮಹತ್ವವಿದೆ.

ನಿರೂಪಣೆಯಲ್ಲಿ ಪೊನ್ನಾಚಿ ಹಲವು ಪ್ರಕಾರಗಳ ಬರವಣಿಗೆಯನ್ನು ಸಹಜವಾಗಿ ಬೆರೆಸಿ ತಮ್ಮದೇ ಆದ ನಿರೂಪಣಾ ವಿಧಾನವನ್ನು ಕಂಡುಕೊಂಡಿದ್ದಾರೆ. ವ್ಯಕ್ತಿಚಿತ್ರ, ಪ್ರಬಂಧ, ಲಹರಿ, ಕತೆ, ಸಾಂಸ್ಕೃತಿಕ ಚಿಂತನೆ– ಹೀಗೆ ಬೇರೆ ಬೇರೆ ಪ್ರಕಾರಗಳು ಬೆರೆತಿರುವುದರಿಂದ ಬರವಣಿಗೆ ನಿರೂಪಣೆಯ ಹಂಗನ್ನು ಮೀರಿ ಜೀವಂತಿಕೆಯನ್ನು ಸಾಧಿಸಿದೆ.

ಸಮಸ್ಯೆ ಇರುವುದು ಇಂತಹ ಅನುಭವ ಕಥನವನ್ನು ಓದುಗ ಏಕೆ ಓದುತ್ತಾನೆ ಎಂಬುದರಲ್ಲಿ. ಓದಿನ ಸುಖ ಕೊಡುವ ರೋಚಕತೆಗೆ ಮಾತ್ರ ಇದನ್ನ ಓದುತ್ತಾನೆಯೇ? ಓದುಗನಿಗೆ ಈ ಅನುಭವವ ಲಯದೊಡನೆ ಇದಕ್ಕೆ ಕಾರಣವಾಗುವ ಜನವರ್ಗದೊಡನೆ ಇರುವ– ಇರಬೇಕಾದ ಸಂಬಂಧ ಯಾವ ರೀತಿಯದು? ಬರಹಗಾರನಿಗೂ ಕೆಲವು ತೊಡಕುಗಳಿರುತ್ತವೆ. ಭಿನ್ನ ಭಿನ್ನ ಅನುಭವ ಲೋಕದ ನಿರೂಪಣೆಗೆ ಹಸಿವಿರುವ ಓದುಗರಿಗೆ ಓದುವ ಸುಖವನ್ನು ನೀಡುವುದು ಮಾತ್ರ ಬರಹಗಾರನ ಜವಾಬ್ದಾರಿಯೇ? ಈ ರೀತಿಯ ಅನುಭವ ಲೋಕ ಬರಹಗಾರನಿಗೆ ಬರೆಯುವ, ಅಧ್ಯಯನ ಮಾಡುವ ಸಾಮಗ್ರಿ ಮಾತ್ರವೇನು? ಶಿವರಾಮ ಕಾರಂತ, ಬಿ.ಜಿ. ಎಲ್. ಸ್ವಾಮಿ, ತೇಜಸ್ವಿಯವರ ಬರವಣಿಗೆಯ ಹಿನ್ನೆಲೆಯಲ್ಲಿ ಸ್ವಾಮಿಯವರ ಬರವಣಿಗೆಯನ್ನು ಪರಿಶೀಲಿಸಬಹುದು.

ಪೊನ್ನಾಚಿ ಕೂಡ ಈ ಸಮಸ್ಯೆಯನ್ನು ಸೃಜನಶೀಲವಾಗಿ ಎದುರಿಸುವ ಮನೋಭಾವ ತೋರಿದ್ದಾರೆ ಎಂಬುದು ಈ ಪುಸ್ತಕದ ಹೆಗ್ಗಳಿಕೆಯಾಗಿದೆ. ಕಾಡು ಜನರ ಬದುಕನ್ನು ಸ್ಥಾಯಿ ಚಿತ್ರವಾಗಿ ಗಮನಿಸದೆ ಚಲನಶೀಲತೆಯಲ್ಲಿ ಸಂಕೀರ್ಣವಾಗಿ ಗುರುತಿಸಬೇಕೆಂದು ಹೇಳುತ್ತಾರೆ. ಈ ಅವಧಿಯನ್ನು ಒಂದೇ ದೃಷ್ಟಿಕೋನದಲ್ಲಿ ನೋಡುವಂತಿಲ್ಲ. ಯಾವ ಯಾವ ಆಯಾಮದಿಂದಲಾದರೂ ನೋಡಿ ಅರ್ಥೈಸಬಹುದು. (ಪುಟ 65) ಈ ದೃಷ್ಟಿಕೋನದಿಂದಾಗಿ ಇಲ್ಲಿಯ ಸೋಲಿಗರು ದುರಂತ ಪಾತ್ರಗಳಾಗಿ ಮಾತ್ರ ಮೂಡಿ ಬರುವುದಿಲ್ಲ.

ಲೇ: ಸ್ವಾಮಿ ಪೊನ್ನಾಚಿ
ಪ್ರ: ಅಮೂಲ್ಯ ಪುಸ್ತಕ ಬೆಂಗಳೂರು
9448676770

ನಮ್ಮ ನಿಮ್ಮ ಹಾಗೆಯೇ ಆಧುನಿಕತೆಯ ಬಗ್ಗೆ ಹಸಿವು, ಆಕಾಂಕ್ಷೆ, ಗೊಂದಲ ಇರುವ ಸಹಜೀವಿಗಳಾಗಿಯೇ ಮೂಡಿಬರುತ್ತಾರೆ. ಓದುಗನಿಗೆ, ಲೇಖಕನಿಗೆ ಬೇಕಾದ ಪರ್ಯಾಯ ಒಂದನ್ನು ಪ್ರತಿನಿಧಿಸುವ ಕಲ್ಪಿತ ಮಾದರಿಗಳಲ್ಲ. ತಮ್ಮದೇ ಆದ ಹೆಣಗಾಟ, ಸೋಲು ಗೆಲುವು ಇರುವ ನಾಗರಿಕರಾಗಿದ್ದಾರೆ. ಅವರು ಕೂಡ ನಮ್ಮಂತೆಯೇ ಎಂಬ ಭಾವನೆ ಬರುತ್ತದೆ. ಇವರ ಬದುಕು ಹಲವು ಒತ್ತಡಗಳಲ್ಲಿ, ಸೆಳೆತಗಳಲ್ಲಿ ಸಿಕ್ಕಿ ಹಾಕಿಕೊಂಡು ಯಾವುದೇ ಅಧ್ಯಯನದ ಮಾದರಿಗೂ ಸಿಕ್ಕಿ ಹಾಕಿಕೊಳ್ಳದೆ, ಎಲ್ಲಿಂದ ಎಲ್ಲಿಗೋ ಹೋಗತ್ತಿದ್ದರೂ ಸ್ವಂತಿಕೆಯಿಂದ ಕೂಡ ಕೂಡಿರುವದನ್ನು ಪುಸ್ತಕ ದಾಖಲಿಸುತ್ತದೆ.

ಪೊನ್ನಾಚಿಯವರ ಬರವಣಿಗೆ ಮತ್ತು ದೃಷ್ಟಿಕೋನದಲ್ಲಿ ಪ್ರಾಮಾಣಿಕತೆಯಿದೆ. ಇಲ್ಲಿಯ ಪ್ರಪಂಚವನ್ನು ಕುರಿತು ಯಾವ ರೀತಿಯ ದೃಷ್ಟಿಕೋನ ಹೊಂದಿರಬೇಕೆಂಬ ಸಮಸ್ಯೆಯನ್ನು ಎದುರಿಸಿದ್ದಾರೆ. ಹಾಗೆ ಎದುರಿಸುತ್ತಿರುವುದನ್ನು ಮುಚ್ಚುಮರೆಯಿಲ್ಲದೆ ನಿರೂಪಿಸಿದ್ದಾರೆ. ದೀಪಾವಳಿ ಹಬ್ಬ ಕುರಿತ ಬರಲಾದ ನಿರೂಪಣೆಗಳಲ್ಲಿ, ಬಳೆಗಾರ ಚನ್ನಯ್ಯನ ನಿರೂಪಣೆಯಲ್ಲಿ ಸೋಲಿಗರು ಕಾಫಿ ಪ್ಲಾಂಟರ್‌ಗಳಾಗಿ ಪರಿವರ್ತನೆ ಹೊಂದಿದ ಕಥನದಲ್ಲಿ ಲೇಖಕರು ತಳೆಯುವ ಭಿನ್ನ ಭಿನ್ನ ನಿರೂಪಣೆಗಳಲ್ಲಿ ಇದನ್ನು ನೋಡಬಹುದು. 'ಸೋಲಿಗರನ್ನು ಆಧುನಿಕ ಜಗತ್ತಿಗೆ ಒಗ್ಗಿಸಬೇಕಾದ' (ಪುಟ 43) ಅನಿವಾರ್ಯತೆಯಿದೆ ಎಂದು ಹೇಳುತ್ತಾರೆ. 'ಒಂದು ತಲೆಮಾರು ಆಧುನಿಕ ಜಗತ್ತಿಗೆ ಒಗ್ಗಿಕೊಂಡು ತನ್ನ ಸೋಲಿಗತನವನ್ನು ಕಳೆದುಕೊಂಡಿತು' (ಪುಟ 51) ಎಂದು ಕೂಡ ಬರೆಯುತ್ತಾರೆ.

ಇದೇ ರೀತಿಯ ಪ್ರಾಮಾಣಿಕ ನಿರೂಪಣೆಯನ್ನು ಮುಂದುವರೆಯುವುದೆಂದರೆ ಎಂಬ ಅಧ್ಯಾಯದಲ್ಲೂ ಗಮನಿಸಬಹುದು. ಇದನ್ನು ಮೆಚ್ಚುತ್ತಲೆ ನಮ್ಮೆಲ್ಲರಲ್ಲೂ ಇರುವಂತಹ ಒಂದು ಮಾನಸಿಕ ಪ್ರವೃತ್ತಿ ಪೊನ್ನಾಚಿಯವರಲ್ಲೂ ಇದೆ ಎಂಬುದನ್ನು ಕೂಡ ಹೇಳಬೇಕು. ಕಾಡಿನ ಜಗತ್ತನ್ನು ಆಧುನಿಕ ಜಗತ್ತಿಗೆ ಹೋಲಿಸಿ, ಮುಗ್ಧ ಜಗತ್ತು ಎಂದು ಆಗಾಗ್ಗೆಯಾದರೂ ಭಾವಿಸುವ ಪ್ರವೃತ್ತಿ ಈ ಕೃತಿಯಲ್ಲೂ ಅಲ್ಲಲ್ಲಿ ಹಣಕು ಹಾಕುತ್ತದೆ. ಆದರೆ ಈ ರೀತಿಯ ಮುಗ್ಧತೆಯ ಬಯಕೆಯೇ ಓದುಗರಿಗೆ ಕೃತಿಯ ಬಗ್ಗೆ ಆಕರ್ಷಣೆಯನ್ನು ಕೂಡ ಮೂಡಿಸುತ್ತದೆ ಎಂಬುದನ್ನು ಕೂಡ ಮರೆಯಬಾರದು.

ಆತ್ಮೀಯ ಓದಿನ ಅನುಭವವನ್ನು ಓದುಗರಿಗೆ ನೀಡುವ ಈ ಬರವಣಿಗೆಯ ಹಿಂದೆ ಈ ಕಾಡು, ಕಾಡು ಜನರ ಪ್ರಪಂಚವನ್ನು ಪೊನ್ನಾಚಿ ಎಷ್ಟು ಆತ್ಮೀಯವಾಗಿ ಒಳಗಿನಿಂದ ಬಲ್ಲರು ಎಂಬುದನ್ನು ಸೂಚಿಸುವ ಪ್ರಾಣಿಗಳ ಜೀವನ ಶೈಲಿ, ಆಂಗಿಕ ಭಾಷೆ, ಇದರೊಡನೆ ಕಾಡು ಜನರು ಸಾಧಿಸುವ ಸಾಮಿಪ್ಯ ಸಾಮರಸ್ಯ ಎಷ್ಟು ಎಂತಹದು ಎಂಬುದನ್ನು ಕೂಡ ಈ ಬರವಣಿಗೆ ಸೂಚಿಸುತ್ತದೆ.

ಕಾಡು ಹುಡುಗನ ಹಾಡು ಪಾಡು ಎಂಬುದು ಕೃತಿಯ ಶೀರ್ಷಿಕೆ ಆದರೆ ಕಾಡು ಮತ್ತು ಕಾಡು ಜನರ ಹಾಡುಪಾಡನ್ನು ತೇಜಸ್ವಿ, ಜಯದೇವ್ ಇವರ ಮಾದರಿಗಿಂತಲೂ ಭಿನ್ನವಾದ ಒಂದು ದೃಷ್ಟಿಕೋನದಿಂದ ಚಲನಶೀಲವಾಗಿ ಗ್ರಹಿಸುವ ಅಗತ್ಯವನ್ನು ಈ ಕೃತಿ ಸೂಚಿಸುತ್ತದೆ. ಹೊಸ ದೃಷ್ಟಿಕೋನದ ನಿರೂಪಣೆ ಹೇಗಿರಬೇಕು, ಹೇಗಿರಬಹುದು ಎಂಬ ಸೂಚನೆ ಕೂಡ ಪೊನ್ನಾಚಿಯವರ ಬರವಣಿಗೆಯಲ್ಲಿದೆ.

ಖಜಾನೆ ವ್ಯವಸ್ಥಾಪನೆ

» ಸುನೀಲ್ ಹಳೆಯೂರು



ಹಣಕಾಸು, ಬ್ಯಾಂಕಿಂಗ್ ಮತ್ತು ಹಣಕಾಸಿನ ನಿರ್ವಹಣೆ ಎನ್ನುವುದು ಬಹಳ ವಿಸ್ತಾರವಾದ ಕ್ಷೇತ್ರ. ಅದನ್ನು ಅರ್ಥ ಮಾಡಿಕೊಳ್ಳುವುದು ಅಷ್ಟು ಸುಲಭವಾದ ವಿಚಾರವಲ್ಲ. ಈ ವಿಷಯದಲ್ಲಿ ಕನ್ನಡದಲ್ಲಿ ಬರವಣಿಗೆಯೂ ಬಹಳ ಕಡಿಮೆ ಬಂದಿದೆ. ಹಿರಿಯ ಸಾಹಿತಿ ದಿ.ಪೊ ಎಚ್ಚೆಸ್ಕೆ ಬ್ಯಾಂಕಿಂಗ್ ವಿಷಯಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಕನ್ನಡ ಭಾಷೆಯಲ್ಲಿ ಬ್ಯಾಂಕಿಂಗ್‌ಗೆ ಸಂಬಂಧಪಟ್ಟಂತಹ ಪುಸ್ತಕಗಳು ಬಂದಿರಬಹುದಾದರೂ ಅವುಗಳ ಸಂಖ್ಯೆ ಕಡಿಮೆ ಎಂದೇ ಹೇಳಬೇಕು.

ಜಗನ್ನಾಥ್ ಅವರು ರಚಿಸಿದ ಈ ಪುಸ್ತಕವು ಸಾಮಾನ್ಯರಿಗೂ ಅರ್ಥವಾಗುವಂತೆ ಬ್ಯಾಂಕಿಂಗ್, ವಿದೇಶೀ ವಿನಿಮಯ, ಖಜಾನೆ ನಿರ್ವಹಣೆಯಂತಹ ವಿಷಯಗಳನ್ನು ತಿಳಿಸುತ್ತದೆ. ನಮ್ಮ ಬದುಕಿಗೆ ಅಗತ್ಯವಾದ ಬ್ಯಾಂಕಿಂಗ್‌ನ ವಿಚಾರಗಳನ್ನು ತಿಳಿಸಿಕೊಟ್ಟಿರುವುದು ಈ ಕೃತಿಯ ವಿಶಿಷ್ಟತೆ. ಲೇಖಕರಾದ ಜೆ.ಎನ್.ಜಗನ್ನಾಥ್ ಅವರು ಬ್ಯಾಂಕಿಂಗ್‌ನಲ್ಲಿ ಪರಿಣಿತರು, ಖಜಾನೆ ವ್ಯವಸ್ಥಾಪನೆಯಲ್ಲೂ ಅನುಭವಿ. ಬ್ಯಾಂಕ್ ಸೇವೆಯಿಂದ ನಿವೃತ್ತರಾಗಿ, ಐಟಿ ಕ್ಷೇತ್ರದಲ್ಲಿ ವೃತ್ತಿನಿರ್ವಹಿಸಿ, 50 ಕ್ಕೂ ಹೆಚ್ಚು ದೇಶಗಳಿಗೆ ಭೇಟಿಕೊಟ್ಟು ತಮ್ಮ ಕಂಪನಿಯ ಬ್ಯಾಂಕಿಂಗ್ ತಂತ್ರಾಂಶದ ಕುರಿತು ತರಬೇತಿ ನೀಡಿದ್ದಾರೆ. ಈ ಅನುಭವವು ಪುಸ್ತಕ ರಚನೆಗೆ ಕೊಡುಗೆ ನೀಡಿದೆ.

ಬ್ಯಾಂಕ್ ಎಂದರೆ ಹಣದ ಠೇವಣಿಯನ್ನು ತೆಗೆದುಕೊಳ್ಳುವುದು ಮತ್ತು ಸಾಲ ನೀಡುವುದು ಎಂದಷ್ಟೇ ಜನಸಾಮಾನ್ಯರ ಭಾವನೆ. ಆದರೆ ಬ್ಯಾಂಕು ತನ್ನ ಲಾಭಾಂಶವನ್ನು ವಿಸ್ತರಿಸಿಕೊಳ್ಳಲು ಇತರ ಚಟುವಟಿಕೆಗಳಲ್ಲಿಯೂ ತೊಡಗಿಕೊಳ್ಳಬೇಕಾಗುತ್ತದೆ. ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿನ ವಹಿವಾಟು, ಇಂತಹ ಚಟುವಟಿಕೆಗಳಲ್ಲಿ ಪ್ರಮುಖವಾಗಿದೆ. ಖಜಾನೆ ವ್ಯವಸ್ಥಾಪನ ಎಂದರೆ ಏನು? ಬ್ಯಾಂಕು ಸಂಪನ್ಮೂಲಗಳನ್ನು/ ನಿಧಿಗಳನ್ನು , ಅಂತಾರಾಷ್ಟ್ರೀಯ ಅಥವಾ ದೇಶಿಯ ಮಾರುಕಟ್ಟೆಯಲ್ಲಿ ತೊಡಗಿಸಿ ಹೇಗೆ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು, ಇನ್ನಿತರ ಆದಾಯದ ಮೂಲಗಳಿಂದ ಹಣಕಾಸಿನ ಕ್ರೋಡೀಕರಣ ಹೇಗೆ - ಮುಂತಾದ ವಿಷಯಗಳ ಕುರಿತಾದ ಮಾಹಿತಿ ಈ ಪುಸ್ತಕ ನೀಡುತ್ತದೆ.

ಖಜಾನೆ ವ್ಯವಸ್ಥಾಪನೆ (ಟ್ರೆಜರಿ ಆಪರೇಷನ್ಸ್) ಕುರಿತಾದ ಕನ್ನಡದ ಅಪರೂಪದ ಪುಸ್ತಕವಿದು.

ಬ್ಯಾಂಕಿನಲ್ಲಿ ಖಜಾನೆ ವ್ಯವಸ್ಥಾಪನ ಒಂದು ಕೈಪಿಡಿ
ಲೇ: ಡಾ. ಜೆ.ಎನ್.ಜಗನ್ನಾಥ್
ಪ್ರ: ಕದಂಬ ಪ್ರಕಾಶನ
80958 63119

ಲೇಖಕರಾದ ಜಗನ್ನಾಥರು ಹೇಳುವಂತೆ ಖಜಾನೆ ವ್ಯವಸ್ಥಾಪನವು ವಿಶಾಲವಾದ, ಅನೇಕ ಸವಾಲುಗಳನ್ನು ಒಡ್ಡುವ ಕ್ಷೇತ್ರ. ಇದರ ಬಗ್ಗೆ ಕನ್ನಡದಲ್ಲಿ ಬೆರಳೆಣಿಕೆಯಷ್ಟು ಪುಸ್ತಕಗಳು ಬಂದಿವೆ. ಖಜಾನೆ ವ್ಯವಸ್ಥಾಪನೆ ಬಗ್ಗೆ ಕನ್ನಡದಲ್ಲಿ ತಿಳಿದುಕೊಳ್ಳಬಯಸುವವರಿಗಂತೂ ಇದು ದಾರಿದೀಪ. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗುವ ಅರ್ಹತೆಯೂ ಈ ಪುಸ್ತಕಕ್ಕೆ ಇದೆ.

ಲೋಕವ್ಯಾಪ್ತಿಯ ವಿಮರ್ಶೆಗಳು

» ಶಹಾ



'ಇಲ್ಲಿ ಕುಟ್ಸಿ, ಮಿಲನ್ ಕುಂದೇರಾ, ಇಕೊ ಉಂಬರ್ತೊ, ಓರಾನ್ ಪಮುಕ್, ಜೆನ್ನಿ ಎರ್ಪೆನ್‌ಬೆಕ್, ಓಲ್ಗಾ ತೊಗಾರ್ಝುಕ್, ಅದಾನಿಯಾ ಶಿಬ್ಲಿ, ಯೋನ ಫಾಸೆ, ಜಿಯಾ ಹೈದರ್ ರಹಮಾನ್, ಹನೀಫ ಖುರೇಷಿಯಂತಹ ಪ್ರಸಿದ್ಧ ಲೇಖಕರು, ನೊಬೆಲ್ ಪುರಸ್ಕೃತರ ಕುರಿತ ಲೇಖನಗಳಿರುವಂತೆಯೇ, ಭಾರತೀಯರಾ ಅಂಜುಂ ಹಸನ್, ಸೈರಸ್ ಮಿಸ್ತ್ರಿ, ಗೀತಾಂಜಲಿ ಶ್ರೀ, ಅಜಿತ್ ಕುರುಪ್, ಹರೀಶ್ ಎಸ್ ಕೃತಿಗಳ ಕುರಿತ ಲೇಖನಗಳೂ ಇವೆ. ಇಬ್ಬರು ಮೂವರನ್ನು ಹೊರತುಪಡಿಸಿದರೆ ಎಲ್ಲರೂ ಸಮಕಾಲೀನರೇ, ಈಗಲೂ ಬರೆಯುತ್ತಿರುವವರೇ. ಆಸ್ಟ್ರೇಲಿಯಾ, ಬಾಂಗ್ಲಾ, ಪ್ಯಾಲಸ್ತೇನ್, ಟರ್ಕಿ, ಫ್ರಾನ್ಸ್, ಜರ್ಮನಿ ಮುಂತಾಗಿ ವಿವಿಧ ದೇಶಗಳ ಲೇಖಕರು ಇರುವಂತೆಯೇ ಈಶಾನ್ಯ ಭಾರತ, ಮಹಾರಾಷ್ಟ್ರ, ಕೇರಳದ ಲೇಖಕರು ಇಲ್ಲಿದ್ದಾರೆ. ಇವೆಲ್ಲ ವಿವರಗಳಿಂತ ಮುಖ್ಯವಾದದ್ದು ಇಲ್ಲಿ ಉಲ್ಲೇಖಗೊಂಡಿರುವ ಕೃತಿಗಳೆಲ್ಲವೂ ಪ್ರತಿಯೊಬ್ಬರೂ ಓದಲೇಬೇಕಾದಂಥವು, ಬದುಕನ್ನು ಶ್ರೀಮಂತಗೊಳಿಸುವಂಥವು, ಸಾರ್ಥಕಗೊಳಿಸುವಂಥವು ಎಂಬುದರಲ್ಲಿ ಎರಡು ಮಾತಿಲ್ಲ. ಹಾಗಾಗಿಯೇ ಈ ಪುಸ್ತಕಗಳ ಓದು, ಸಾವಿರದ ಒಂದು ಪುಸ್ತಕಗಳ ಓದಿಗೆ ಸಮ ಎಂದು ಯಾವುದೇ ಅನುಮಾನವಿಲ್ಲದೇ ಹೇಳಬಲ್ಲೆ. ಹಾಗಾಗಿಯೇ ಇಂಥ ಅದ್ಭುತ ಕೃತಿಗಳ ಬಗ್ಗೆ ನಿಮ್ಮ ಗಮನ ಹರಿಯುವಂತೆ ಮಾಡುವ ಕಾರಣಕ್ಕೇ ಈ ನನ್ನ ಪುಸ್ತಕಕ್ಕೆ ಕೂಡ ಸಾವಿಲ್ಲದ ಅಮರತ್ವ ಪ್ರಾಪ್ತವಾಗುತ್ತದೆ ಎನ್ನುವ ವಿಶ್ವಾಸ ನನ್ನದು!' (ಬೆನ್ನುಡಿಯಲ್ಲಿ) ಹೀಗೆಂದು ಪುಸ್ತಕದ ಬೆನ್ನುಡಿಯಲ್ಲಿ, ಪುಸ್ತಕದ ಲೇಖಕರಾದ ನರೇಂದ್ರ ಪೈ ಬರೆದುಕೊಂಡಿದ್ದಾರೆ. ಆತ್ಮವಿಶ್ವಾಸದಿಂದ ಹೇಳಿರುವ ಈ ಮಾತುಗಳಲ್ಲಿ ಅತಿಶಯೋಕ್ತಿ ಇಲ್ಲ ಎಂಬ ವಿಚಾರವು, ಪುಸ್ತಕವನ್ನೋದಿದವರಿಗೆ ಮನನವಾದೀತು. ನಮ್ಮ ರಾಜ್ಯದ ಹೊರಗಿನ ಸಾಹಿತ್ಯ ಪ್ರಪಂಚದಲ್ಲಿ ಏನು ನಡೆಯುತ್ತಿದೆ ಎಂಬುದರ ಕಿರು ನೋಟವನ್ನು ಪಡೆಯಲು ಈ ಪುಸ್ತಕ ನಿಜಕ್ಕೂ ಅತ್ಯಂತ ಉಪಯುಕ್ತ.

ಸಾವಿರದ ಒಂದು ಪುಸ್ತಕ
ಲೇ: ನರೇಂದ್ರ ಪೈ
ಪ್ರ: ಪುಸ್ತಕ ಮನೆ ಜೋಡುರಸ್ತೆ
9606474289
ಬೆಲೆ ರು.220/-

ಕನ್ನಡದಲ್ಲಿ ವಿಶ್ವಸಾಹಿತ್ಯಕ್ಕೆ ಹೋಲಿಸುವಂತಹ ಕೃತಿಗಳು ಬರುತ್ತಿಲ್ಲ ಎಂಬ ಮಾತು ಆಗಾಗ ಕೇಳಿಬರುತ್ತಿದೆ. ಇದಕ್ಕೆ ಹಲವು ಕಾರಣಗಳಿರಬಹುದು. ಅವುಗಳಲ್ಲಿ ಒಂದು ಎಂದರೆ, ವಿಶ್ವಸಾಹಿತ್ಯದ ಸಮಗ್ರ ಪರಿಚಯವೇ ನಮ್ಮಲ್ಲಿ ಇಲ್ಲದಿರುವುದು. ನಮ್ಮ ಸಹೋದರ ಭಾಷೆಗಳಲ್ಲಿ, ಹೊರದೇಶಗಳಾದ ಟರ್ಕಿ, ಜರ್ಮನಿ ಮೊದಲಾದ ದೇಶಗಳಲ್ಲಿ, ಸ್ಪ್ಯಾನಿಷ್, ಜಪನೀಸ್, ರಷ್ಯನ್ ಮೊದಲಾದ ಭಾಷೆಗಳಲ್ಲಿ ಹೊರಬರುತ್ತಿರುವ ಉತ್ತಮ ಕೃತಿಗಳ ಪರಿಚಯವನ್ನು ಕನ್ನಡದ ಓದುಗರು ಮಾಡಿಕೊಳ್ಳುವುದು ಅಷ್ಟು ಸುಲಭವಿಲ್ಲ. ಅಂತಹ ಉತ್ತಮ ಕೃತಿಗಳು ಕನ್ನಡಕ್ಕೆ ಅನುವಾದರೆ ಉತ್ತಮ ಅಥವಾ ಇಂಗ್ಲಿಷ್ ಅನುವಾದವನ್ನಾದರೂ ಓದುವ ಅವಕಾಶ ಲಭ್ಯವಾದರೆ, ಅಷ್ಟರ ಮಟ್ಟಿಗಾದರೂ ಸಾಕು. ಆದರೆ, ಅವೆಷ್ಟೋ ಉತ್ತಮ ಕೃತಿಗಳು ಬೇರಾವುದೋ ಭಾಷೆಯಿಂದ ಇಂಗ್ಲಿಷಿಗೋ (ಅಥವಾ ಕನ್ನಡಕ್ಕೋ) ಅನುವಾದಗೊಳ್ಳಲು ಸಾಕಷ್ಟು ವರ್ಷಗಳೇ ಬೇಕಾದೀತು.

ಅಂತಹ ಅತ್ಯಪರೂಪ ಎನಿಸಬಹುದಾದ ಕೃತಿಗಳ ವಿಮರ್ಶೆ, ಪರಿಚಯ ಇಲ್ಲಿದೆ. ಬುಕರ್ ಪ್ರಶಸ್ತಿ ಪಡೆದ ಮೊದಲ ಹಿಂದಿ ಕೃತಿ (ಇಂಗ್ಲಿಷ್ ಅನುವಾದ), ಗೀತಾಂಜಲಿ ಶ್ರೀ ಅವರ 'ಟೂಂಬ್ ಆಫ್ ಸ್ಯಾಂಡ್'ನಂತಹ ಕಾದಂಬರಿಗಳ ವಿಮರ್ಶೆಯನ್ನು ನರೇಂದ್ರ ಪೈಯವರು ಮಾಡಿರುವ ರೀತಿ ವಿಶಿಷ್ಟ, ಅನನ್ಯ. ಕಾದಂಬರಿಯ ಒಳನೋಟಗಳನ್ನು ಚರ್ಚಿಸುವುದರ ಜತೆಯಲ್ಲೇ, ಸಾಮಾನ್ಯ ಓದುಗನಿಗೆ ಈ ಕಾದಂಬರಿಯನ್ನು ಮುಟ್ಟಿಸುವ ಪ್ರಾಮಾಣಿಕ ಪ್ರಯತ್ನವನ್ನೂ ನಡೆಸಿದ್ದಾರೆ. ಆ ಮೂಲಕ ಜಾಗತಿಕ ಸಾಹಿತ್ಯದ ಮಟ್ಟ, ಮಾನದಂಡಗಳು ಕನ್ನಡದ ಓದುಗರಿಗೂ, ಸಾಹಿತ್ಯಾಸಕ್ತರಿಗೂ ಲಭ್ಯವಾಗಲಿ ಎಂಬ ಸದುದ್ದೇಶವಿದೆ.

ವಿಶ್ವಸಾಹಿತ್ಯದ ಪರಿಚಯ ಮಾಡಿಕೊಳ್ಳಬಯಸುವ ಕನ್ನಡಿಗರೆಲ್ಲರೂ ಓದಲೇಬೇಕಾದ ಹೊಸ ಪುಸ್ತಕವಿದು ಎಂಬುದು ಸ್ಪಷ್ಟ.

ಕಷ್ಟದ ಬದುಕಿನ ಕಥೆಗಳು

» ಅಪರ್ಣಾ ಹೆಗಡೆ

ಉಪರಿ
ಕಥಾ ಸಂಕಲನ
ಲೇ: ಅಜಿತ್ ಹರೀಶಿ
ಪ್ರ: ವೀರಲೋಕ ಬೆಂಗಳೂರು
7022122121

ಬದುಕು ಹೂವಿನ ಹಾದಿಯಲ್ಲ, ನಿರಂತರ ಹೋರಾಟ. ಬದುಕಿಗಾಗಿ, ಉಳಿವಿಗಾಗಿ ಕ್ಲಿಷ್ಟ ಪರಿಸ್ಥಿತಿಗಳನ್ನ ಎದುರಿಸ ಬೇಕಾಗುತ್ತದೆ ಹಾಗೂ ಅದರಿಂದ ಪಾಠ ಕಲಿತು ಜೀವನದಲ್ಲಿ ಬದಲಾಗಬೇಕು. ಇಂತಹ ಸಂಕೀರ್ಣ ಹಂತಗಳ ಸುತ್ತ ಹೆಣೆದಿರುವ ಕಥೆಗಳು 'ಉಪರಿ' ಯಲ್ಲಿವೆ. ಉಪರಿ ಒಂದು ಆಪ್ತ ಸಮಾಲೋಚಕ, ಮನೋ ಚಿಕಿತ್ಸಕ ಕೃತಿ. ಡಾರ್ವಿನ್ನನ ವಾದದಂತೆ ಬದುಕಿನ ಹೋರಾಟದಲ್ಲಿ ಯಾರು ಬಲಿಷ್ಠರಿರುತ್ತಾರೋ ಅವರು ಉಳಿಯುತ್ತಾರೆ ಎನ್ನುವಂತೆ ಬದುಕಿನಲ್ಲಿ ಬರುವಂತಹ ಕಷ್ಟಕ್ಕೆ ಹೆದರಿ ಬೆನ್ನಾಗದೆ ಎದೆಯೊಡ್ಡಿ, ಮನಸ್ಸನ್ನ ಕಲ್ಲಾಗಿಸಿ, ಯುದ್ಧಕ್ಕೆ ಸಜ್ಜಾದರೆ ಬದುಕು ಒಂದು ಅಂದದ ಕವಿತೆಯಾಗಿ ಮಾರ್ಪಡುವುದು ಸತ್ಯ. ಮನಸ್ಸೇ ಎಲ್ಲದಕ್ಕೂ ಕಾರಣ. ಮನಸ್ಸಿದ್ದರೆ ಮಾರ್ಗ ಎಂಬುದು ಓದುಗನಿಗೆ ಅರಿವಾಗುವಂತೆ ಸಹಜತೆಯಲ್ಲಿ ಕಥೆಗಳ ರಚನೆ ಮತ್ತು ಮುಕ್ತಾಯ ಸುಂದರವಾಗಿದೆ. ಓದುಗನಲ್ಲಿ ಒಂದು ಕಥೆಗಾರನ ಉದಯವಾಗುವಂತೆ ಮಾಡುತ್ತದೆ 'ಉಪರಿ' ಕಥಾಸಂಕಲನ.

ಮನಕಲಕುವ ವಾಸ್ತವ ಅಂಶಗಳನ್ನ ಒಳಗೊಂಡ ಹಳ್ಳಿಯ ನೈಜತೆಯ ಜೊತೆಗೆ ಮಹಾನಗರದ ಸಿನಿಮಾ ನಾಯಕನ ಜೀವನದ ಕಥೆಗಳನ್ನ ಕೂಡ ಇಲ್ಲಿ ಕಾಣಬಹುದು. ಓದುತ್ತ, ಓದುತ್ತ ಓದುಗನಲ್ಲಿ ಪ್ರಶ್ನೆಗಳು ಏಳುತ್ತವೆ. ಆದರೆ ಆ ಪ್ರಶ್ನೆಗಳಿಗೆಲ್ಲ ಓದುಗನೆ ಕೊನೆಯಲ್ಲಿ ಉತ್ತರ ಕಂಡುಕೊಳ್ಳುವಂತೆ ಮಾಡುವುದು 'ಉಪರಿ'. ಇದೊಂದು ಪ್ರಯೋಗಾತ್ಮಕ ಕಥಾಸಂಕಲನ. ದಿನ ದಿನದ ಹಾದಿ ಸುಖಕರವಲ್ಲ. ಇಲ್ಲಿ ನೋವು, ನಿಂದನೆ, ಅಪಮಾನ, ಅಪಹಾಸ್ಯದಿಂದ ಕೂಡಿದ ಕಹಿಗಳೇ ಬಹಳ. ಇಂತಹ ಕಹಿಯಲ್ಲಿಯೂ ಸಿಹಿಯಾಗಿಸಿಕೊಂಡು ಆತ್ಮ ವಿಶ್ವಾಸ ಕುಗ್ಗದಂತೆ ನಡೆಯುವುದೇ ಬದುಕು. ಇಲ್ಲಿನ ಎಂಟು ಕಥೆಗಳನ್ನು ಎಂಟು ತತ್ವಗಳ ರೂಪದಲ್ಲಿ ಕಾಣಬಹುದು. ಭಯವನ್ನ ತೊರೆಯುವುದು, ನಿರೀಕ್ಷೆಗಳ ಬಿಡುವುದು, ಸಮಾಜದ ಹುಚ್ಚಿಗೆ ತಟಸ್ಥರಾಗುವುದು, ವ್ಯಸನಗಳಿಂದ ಮುಕ್ತನಾಗುವ ಬಗೆ, ಕಳೆದದ್ದರ ಬಗ್ಗೆ ಚಿಂತಿಸುವುದಕ್ಕಿಂತ ಇರುವುದನ್ನ ಸ್ವೀಕರಿಸುವುದು, ತಪ್ಪುಗಳನ್ನ ತಿದ್ದಿಕೊಳ್ಳುವುದು, ಕ್ಷಮಿಸುತ್ತಾ ಬದುಕನ್ನ ನಡೆಸುವುದು ಹಾಗೂ ಎಲ್ಲವನ್ನ ಎಲ್ಲರನ್ನ ಪ್ರೀತಿಸುವುದು.

ನೋವು ಎಲ್ಲರಿಗೂ ಇದೆ. ಆ ನೋವಿನಲ್ಲೂ ನಲಿವನ್ನ ಕಾಣುವುದು ಹೇಗೆ ಎಂದು ಕಥೆಗಳ ರೂಪದಲ್ಲಿ ಓದುಗರಿಗೆ ತಿಳಿಸುವ ಪರಿ ಸೊಗಸಾಗಿದೆ. ಕಥೆಗಳು ಕೇವಲ ಮನೋರಂಜನೆಯಲ್ಲ ಅಲ್ಲೊಂದು ತತ್ವ, ಸಮಾಜಕ್ಕೆ ಒಂದು ಸಂದೇಶ ಹೇಳುವವು ಇಲ್ಲಿನ ಕಥೆಗಳು.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಆತ್ಮನಿವೇದನೆ
(ಬನ್ನಂಜೆ ಗೋವಿಂದಾಚಾರ್ಯರು ನಿವೇದಿಸಿದ ಆತ್ಮಕಥನ)
ನಿರೂಪಣೆ : ಬನ್ನಂಜೆ ಗೋವಿಂದಾಚಾರ್ಯರು
ಬರೆಹ : ವೀಣಾಬನ್ನಂಜೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 360/-

2

ಕುಡಿಯೋಣು ಬಾರಾ
(ಗುಂಡಿನ ಕುರಿತ 'ಸಾಂಸ್ಕೃತಿಕ'ಹರಟೆ)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 300/-

3

ಸತ್ಕುಲ ಪ್ರಸೂತರು
(ಗುರುಪ್ರಸಾದರ ಹೊಸ ಕಾದಂಬರಿ)
ಲೇ:ಗುರುಪ್ರಸಾದ ಕಾಗಿನೆಲೆ
ಪ್ರ: ಅಂಕಿತಪುಸ್ತಕ, ಬೆಂಗಳೂರು
ಬೆಲೆ : ರೂ 295/-

4



ಮ್ಯಾಜಿಕ್ ಸೌಟು
(ಕಥಾಸಂಕಲನ)
ಲೇ: ಪೂರ್ಣಿಮಾ ಮಾಳಗಿಮನಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 180/-

5



ಛತ್ರಪತಿ ಶಿವಾಜಿ
(ಧರ್ಮಾತೀತ ಸೆಕ್ಯುಲರ್ ರಾಜ)
ಲೇ:ರಣಜಿತ್ ದೇಸಾಯಿ
ಅನು : ರಾಹು
ಪ್ರ: ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 1200/-

6

ಪಾಕಿಸ್ತಾನದ ಐ.ಎಸ್.ಐ
(ಪಾಕಿಸ್ತಾನದ ಬೇಹುಗಾರಿಕಾ ಇಲಾಖೆಯನ್ನು ಕುರಿತು)
ಲೇ:ಡಾ। ಡಿ.ವಿ.ಗುರುಪ್ರಸಾದ್
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 295/-

7



ತೇಜಸ್ವಿ ಕೆಲವು ಪ್ರಸಂಗಗಳು
(ತೇಜಸ್ವಿ ಕುರಿತ ಕೆಲವು ಬರಹಗಳು)
ಲೇ:ಡಾ। ಎಚ್. ಎಸ್. ಸತ್ಯನಾರಾಯಣ
ಪ್ರ: ಅಲಂಪು ಪ್ರಕಾಶನ, ಮಾಲೂರು
ಬೆಲೆ : ರೂ 150/-

8

ಅಟ್ರಾಸಿಟಿ
(ಗುರುಪ್ರಸಾದರ ಭಿನ್ನ ಕಾದಂಬರಿ)
ಲೇ:ಗುರುಪ್ರಸಾದ್ ಕಂಟಲಗೆರೆ
ಪ್ರ: ಆದಿಜಂಬೂ ಪ್ರಕಾಶನ, ಕಂಟಲಗೆರೆ
ಬೆಲೆ : ರೂ 130/-

9



ವೈದ್ಯ ವೃತ್ತಿಯ ನೀತಿ ಮತ್ತು ತತ್ವ
(ಒಬ್ಬ ಒಳ್ಳೆಯ ವೈದ್ಯನಾಗುವುದು ಹೇಗೆ?)
ಲೇ:ಪ್ರೊ। ಎಂ. ಶಾಂತಾರಾಂ ಶೆಟ್ಟಿ
ಅನು : ಡಾ। ನಾ. ಸೋಮೇಶ್ವರ
ಪ್ರ: ಬಹುರೂಪಿ, ಬೆಂಗಳೂರು
ಬೆಲೆ : ರೂ 200/-

10



ಶ್ರೀ ಹರಿಚರಿತೆ
(ಬೃಹಚ್ಛಂದಸ್ಸಿನ ಮಹಾಕಾವ್ಯ)
ಲೇ:ಪು.ತಿ.ನರಸಿಂಹಾಚಾರ್
ಪು.ತಿ.ನ. ಟ್ರಸ್ಟ್, ಬೆಂಗಳೂರು
ಬೆಲೆ : ರೂ 100/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ಒಡನಾಟ
» ಶ್ರೀಧರಮೂರ್ತಿ ಎನ್.ಎಸ್.

ವಿಜ್ಞಾನ ಬರಹಕ್ಕೆ ಹೊಸ ರೂಪ ಕೊಟ್ಟವರು



'ನಾಕ್ಷತ್ರಿಕ ಪಾಕಶಾಲೆಯಲ್ಲಿ ಗುರುತ್ವ ಎಂಬ ಬಾಣಸಿಗ ಬೈಜಿಕ ಕುಲುಮೆಯನ್ನು ಹೋಮಿಸಿ, ಪ್ರೋಟಾನ್, ನ್ಯೂಟ್ರಾನ್, ಎಲೆಕ್ಟ್ರಾನ್ ಕಣಗಳನ್ನು ಬೇಯಿಸಿ, ಭಕ್ಷ್ಯ ಭೋಜ್ಯಗಳನ್ನು ತಯಾರಿಸುತ್ತಾನೆ!'
- ಜಿ.ಟಿ.ಎನ್.

ಪ್ರಖ್ಯಾತ ವಿಜ್ಞಾನ ಲೇಖಕ ಜಿ.ಟಿ.ನಾರಾಯಣ ರಾಯರು ನನ್ನ ತಂದೆಯವರ ಸ್ನೇಹಿತರು. ಬಾಲ್ಯದಿಂದಲೇ ಅವರ ಪತ್ರಗಳನ್ನು ನಾನು ಕುತೂಹಲದಿಂದ ನೋಡುತ್ತಿದ್ದೆ. ಅವರದೇ ಆದ ವಿಶಿಷ್ಟ ಶೈಲಿ, ಮೋಡಿ ಅಕ್ಷರ ಸದಾ ನೆನಪಿನಲ್ಲಿ ಉಳಿಯುವಂತಹದು.

ಇಂತಹ ಜಿ.ಟಿ.ಎನ್. ನನ್ನ ಜೊತೆ ಕೂಡ ನಿರಂತರ ಪತ್ರ ವ್ಯವಹಾರ ನಡೆಸಿದ್ದರು, ಅದರಲ್ಲಿಯೂ 'ವಿಜ್ಞಾನ ಸಾಹಿತ್ಯ ರಚನೆಯಲ್ಲಿ ನನಗೆ ಪ್ರತಿಸ್ಪರ್ಧಿಗಳೇ ಇಲ್ಲ' ಎಂದು ಆತ್ಮವಿಶ್ವಾಸದಿಂದ ಹೇಳುತ್ತಿದ್ದ ಅವರು, ನನ್ನಂತಹ ಎಳೆಯನನ್ನು ಸಮಾನವಾಗಿ ಪರಿಗಣಿಸಿದ್ದರು ಎನ್ನುವುದು ಭಾವನಾತ್ಮಕವಾಗಿ ಧನ್ಯತೆಯನ್ನು ನೀಡುವ ಸಂಗತಿ.

ಇದಕ್ಕೆ ಕಾರಣವಾಗಿದ್ದು ಅವರ ಒಂದು ಲೇಖನ. 'ಮಕರ ಸಂಕ್ರಾತಿಯನ್ನು ನಾವು ಅರ್ಥವಿಲ್ಲದೆ ಆಚರಿಸುತ್ತಿದ್ದೇವೆ. ಕ್ರಿ.ಪೂ 2050ರಿಂದ ಕ್ರಿ.ಶ 100ರ ನಡುವೆ ಜನವರಿ 14ಕ್ಕೆ ದಕ್ಷಿಣಾಯಣ ಅಂತ್ಯ ಆಗುತ್ತಿತ್ತು. ಈಗ ಅದು ಡಿಸಂಬರ್ 22ರಂದಾಗುತ್ತಿದೆ' ಎಂಬುದು ಅವರ ಲೇಖನದ ಸ್ವಾರಾಂಶ. ಅದಕ್ಕೆ 'ನಾನು ಮಕರ ಸಂಕ್ರಮಣ ಮಾತ್ರವಲ್ಲದೆ ನಮ್ಮ ಎಲ್ಲಾ ಸಂಕ್ರಮಣಗಳೂ ಹೀಗೆ ಬರುತ್ತವೆ. ಇದೊಂದೇ ಕಾರಣಕ್ಕೆ ನಮ್ಮ ಪಂಚಾಂಗ ಅವೈಜ್ಞಾನಿಕ ಎನ್ನಲಾಗದು' ಎಂದು ಪ್ರತಿ ಲೇಖನ ಬರೆದೆ. ಅದು ಹಲವು ಪತ್ರಗಳ ವ್ಯವಹಾರಕ್ಕೆ ವ್ಯಾಪಿಸಿತು. ಇದರ ಸ್ವಾರಾಂಶವನ್ನು ಹೀಗೆ ಹೇಳ ಬಹುದು. ಭೂಮಿ ತನ್ನ ಸುತ್ತಲೂ ಸುತ್ತುತ್ತದೆ, ಹಾಗೆ ಸೂರ್ಯನ ಸುತ್ತಲೂ ಸುತ್ತುತ್ತದೆ, ಈ ಎರಡೂ ಚಲನೆಗಳು ಎಲ್ಲರಿಗೂ ಗೊತ್ತು. ಇದಲ್ಲದೆ ಭೂಮಿಗೆ ಇನ್ನೊಂದು ಚಲನೆ ಇದೆ. ಅದು ವಿಷವಚ್ಚಲನೆ (ಪ್ರಿಸೆಷನ್ ಆಫ್ ಇಕ್ವಿನಾಸ್); ಇದರಿಂದಲೇ ಋತುಗಳು ಸಂಭವಿಸುತ್ತವೆ. ಭೂಮಿ ತನ್ನ ಕಕ್ಷಾ ಬಿಂದುವಿನಿಂದ 70.6 ವರ್ಷಕ್ಕೆ ಒಂದು ದಿನದಷ್ಟು ಹಿಂದೆ ಸರಿಯುತ್ತದೆ. ಈ ವ್ಯತ್ಯಾಸವನ್ನು ಸರಿದೂಗಿಸುವುದು ಜಗತ್ತಿನ ಎಲ್ಲಾ ಕ್ಯಾಲೆಂಡರ್‌ಗಳ ನಿರ್ಮಾತೃಗಳು ಎದುರಿಸಿದ ಸಮಸ್ಯೆ. ಅದಕ್ಕೆ ಭಾರತೀಯರು ಹಬ್ಬಗಳಿಗೆ ಅನುಕೂಲವಾಗುವಂತೆ 'ನಿರಯನ' ಎಂಬ ಊಹಾತ್ಮಕ ರೇಖೆಯನ್ನು ಎಳೆದರು. ವಿಷವಚ್ಚಲನೆಗೆ ಅನುಗುಣವಾಗಿ ಸಾಯನ ಎಂಬ ಇನ್ನೊಂದು ರೇಖೆ ಎಳೆದರು. ಇದರಿಂದ ಲೆಕ್ಕ ವೈಜ್ಞಾನಿಕವಾಗುವುದು ಸಾಧ್ಯವಾಗಿದೆ.

ಈ ಪತ್ರ ವ್ಯವಹಾರದಿಂದ ನನಗೆ ಇನ್ನೊಂದು ಬಗೆಯಲ್ಲಿ ಲಾಭವಾಯಿತು. ವಿಜ್ಞಾನದ ವಿದ್ಯಾರ್ಥಿಯಲ್ಲದ ನನಗೆ ಖಗೋಳ ಶಾಸ್ತ್ರದ ಪಾಠವನ್ನು ಜಿ.ಟಿ.ಎನ್. ಕಲಿಸಿದರು. ಯಾವ ವಿಷವಚ್ಚಲನೆ ಪಂಚಾಂಗ ಕರ್ತಗಳಿಗೆ ಶಾಪವೋ ಅದು ಖಗೋಳ ವಿಜ್ಞಾನಿಗಳಿಗೆ ವರ. ಏಕೆಂದರೆ ಆಕಾಶಕಾಯಗಳ ಸ್ವರೂಪ ತಿಳಿಯಲು ಅದು ಸಹಕಾರಿ. ಈ ನೆಲೆಯಲ್ಲಿ ಅವರು ಹಲವು ವಿಷಯಗಳನ್ನು ನನಗೆ ಕಲಿಸಿದರು. ಈ ನೆಲೆಯಲ್ಲಿ ಅವರು ಪಕ್ಕಾ ಮಾಸ್ತರರು ಜಿ.ಟಿ.ಎನ್. ಆಕಾಶವೀಕ್ಷಣೆಯ ದೃಷ್ಟಿಯಿಂದ ಹಲವಾರು ಶಿಷ್ಯರನ್ನು ತಯಾರು ಮಾಡಿದ ದ್ರೋಣಾಚಾರ್ಯರು. ಅದನ್ನು ಅವರು ನಮ್ಮ ಪುರಾಣದ ಕತೆಗಳೊಂದಿಗೆ ಸ್ವಾರಸ್ಯಕರವಾಗಿ ಹೇಳುತ್ತಿದ್ದರು. ಅವರು ಬರೆದ 'ನೋಡೋಣು ಬಾ ನಕ್ಷತ್ರ' ಈ ಮಾರ್ಗದಲ್ಲಿ ಆಚಾರ್ಯ ಕೃತಿ ಎಂದೇ ಹೇಳ ಬೇಕು

ಸೆಪ್ಟೆಂಬರ್ 9, 1926ರಂದು ಜನಿಸಿದ ಜಿ.ಟಿ.ಎನ್. ಎಸ್.ಎಸ್.ಎಲ್.ಸಿ.ಯಲ್ಲಿ ಮೊದಲ ಸ್ಥಾನ ಪಡೆದವರು, ಪದವಿ ಪಡೆದಿದ್ದು ಮಂಗಳೂರಿನ ಅಲೂಷಿಯಸ್ ಕಾಲೇಜಿನಲ್ಲಿ; ಗಣಿತದಲ್ಲಿ ಸ್ನಾತಕೊತ್ತರ ಪದವಿಯನ್ನು ಪಡೆದಿದ್ದು ಮದ್ರಾಸಿನಲ್ಲಿ. ಸಂಗೀತದ ಆಕರ್ಷಣೆ ಆರಂಭವಾಗಿದ್ದೂ ಕೂಡ ಅಲ್ಲಿಯೇ. ಬೆಂಗಳೂರು ಸರ್ಕಾರಿ ಕಾಲೇಜಿನಲ್ಲಿ ಬೋಧಿಸುವಾಗಲೇ ಹನ್ನೆರಡನೇ ಮೈಸೂರು ಬ್ಯಟಾಲಿಯನ್ ಎನ್.ಸಿ.ಸಿ.ಯನ್ನು ಮುನ್ನಡೆಸಿದ ಜಿ.ಟಿ.ಎನ್., ಶಿಸ್ತಿಗೆ ಇನ್ನೊಂದು ಹೆಸರಾಗಿದ್ದರು. ಟಿ.ಆರ್.ಅನಂತರಾಮು ಅವರು ಬರೆದಂತೆ ಅವರ ವಿದ್ಯಾರ್ಥಿಗಳು ಈಗ ಅನೇಕ ಉನ್ನತ ಹುದ್ದೆಗಳಲ್ಲಿದ್ದರೂ, ಜಿ.ಟಿ.ಎನ್. ಎಂಬ ಹೆಸರು ಕೇಳಿದೊಡನೆ ಅಟೆನ್ಷನ್ ಭಂಗಿಯಲ್ಲಿ ನಿಲ್ಲುತ್ತಿದ್ದರು. ಅವರು ಬರೀ ಗಣಿತವನ್ನಷ್ಟೇ ಕಲಿಸಲಿಲ್ಲ, ಕಾಣಿಸಿದ್ದು ಜೀವನದರ್ಶನವನ್ನು.

ಕನ್ನಡದ ಓದುಗರಿಗೆ ಇವರು 80ಕ್ಕೂ ಮಿಕ್ಕಿ ಕೃತಿಗಳನ್ನು ನೀಡಿದ್ದಾರೆ. ಆರು ದಶಕಗಳ ಕಾಲದ ನಿರಂತರವಾಗಿ ಅವರು ಬರೆಯುತ್ತಲೇ ಹೋದರು. ಚಿಕಾಗೋದಲ್ಲಿದ್ದ ನೋಬೆಲ್ ಪ್ರಶಸ್ತಿ ಪುರಸ್ಕೃತ, ಭಾರತ ಸಂಜಾತ ಖಗೋಳ ವಿಜ್ಞಾನಿ ಸುಬ್ರಹ್ಮಣ್ಯನ್ ಚಂದ್ರಶೇಖರ್ ಅವರ ಸಂದರ್ಶನ (1995)ಕ್ಕಾಗಿ ಜಿ.ಟಿ.ಎನ್. ಮಾಡಿಕೊಂಡ ತಯಾರಿಯೇ ಒಂದು ರೋಚಕ ಅನುಭವ. ಆನಂತರ ಅವರನ್ನು ಕುರಿತ ಕೃತಿಯೂ ಬಂತು. ಅದರ ಹಿಂದೆಯೇ 'ಸಪ್ತಸಾಗರದಾಚೆಯೆಲ್ಲೋ' ಎಂಬ ಪ್ರವಾಸದ ಅನುಭವಗಳ ಕೃತಿಯೂ ಬಂತು.

ಅವರು ನೊಬಲ್ ಪ್ರಶಸ್ತಿ ವಿಜೇತ ಸಿ.ವಿ.ರಾಮನ್ ಅವರನ್ನು ಸಂದರ್ಶಿಸಲು ಹೋದಾಗ 'ಭೌತವಿಜ್ಞಾನದ ಹಿನ್ನೆಲೆ ಇಲ್ಲದೆ ನಿಮಗೆ ಸಂದರ್ಶನ ನೀಡುವುದಿಲ್ಲ' ಎಂದು ಕಟುವಾಗಿ ಹೊರ ಕಳುಹಿಸಿದ್ದರಂತೆ, ನಂತರ ಅವರೇ ಕರೆದು ಸಂದರ್ಶನ ನೀಡುವಾಗ, ಜಿ.ಟಿ.ಎನ್. ಅವರು, 'ರಾಮನ್ ಎಫೆಕ್ಟ್'ನ್ನು ಅರೆದು ಕುಡಿದಿದ್ದನ್ನು ಕಂಡು ಬೆರಗಾಗಿದ್ದರಂತೆ – ಇಂತಹ ಹತ್ತಾರು ಪ್ರಸಂಗಗಳನ್ನು ಅವರ ಬಾಯಿಯಲ್ಲಿ ಕೇಳಿದ್ದೇ ವಿಶಿಷ್ಟವಾದ ಅನುಭವ.

ಜಿ.ಟಿ.ಎನ್. ವಿಜ್ಞಾನ ಬರವಣಿಗೆಗೆ ಹೊಸ ರೂಪ ಕೊಟ್ಟವರು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ನಿಘಂಟು, ನವಕರ್ನಾಟಕ ಪ್ರಕಟಿಸಿದ ವಿಜ್ಞಾನ ಪದವಿವರಣ ಕೋಶಕ್ಕೆ ಅವರ ಕೊಡುಗೆ ದೊಡ್ಡದು. ಚಿಕ್ಕದಾದ ಪರಿಣಾಮಕಾರಿಯಾದ ವಾಕ್ಯಗಳು ಅವರ ಶೈಲಿ. ಅವರಿಂದ ಹತ್ತಾರು ಲೇಖನಗಳನ್ನು ಬರೆಸಿರುವ ನಾನು, ಅವರಲ್ಲಿ ಕಂಡಿದ್ದು ವ್ಯಾಕರಣ ಚಿನ್ಹೆಗಳ ಕುರಿತ ಕಾಳಜಿ. ಕೊಂಚ ತಪ್ಪಾದರೂ ಕಿಡಿ ಕಿಡಿಯಾಗುತ್ತಿದ್ದರು. ಕೆಲವು ಪತ್ರಿಕೆಗಳು ಅವರಿಂದಲೇ ಕರಡಚ್ಚು ತಿದ್ದಿಸಿ ನಂತರ ಪ್ರಕಟಿಸುತ್ತಿದ್ದದ್ದೂ ಉಂಟು.

ಅತ್ರಿಸೂನು ಎಂಬ ಹೆಸರಿನಲ್ಲಿ ಕವಿತೆಗಳನ್ನು ಬರೆಯುತ್ತಿದ್ದ ಅವರಿಗೆ ಅಪಾರವಾದ ಸಾಹಿತ್ಯದ ಓದು ಕೂಡ ಇತ್ತು. 'ಶ್ರೀ ರಾಮಾಯಣ ದರ್ಶನಂನಲ್ಲಿ ವೈಜ್ಞಾನಿಕಾಂಶಗಳು'ದಂತಹ ಲೇಖನವನ್ನು ಅವರಲ್ಲದೆ ಇನ್ಯಾರೂ ಬರೆಯಲಾರರು. 'ನಾಕ್ಷತ್ರಿಕ ಪಾಕಶಾಲೆಯಲ್ಲಿ ಗುರುತ್ವ ಎಂಬ ಬಾಣಸಿಗ ಬೈಜಿಕ ಕುಲುಮೆಯನ್ನು ಹೋಮಿಸಿ, ಪ್ರೋಟಾನ್, ನ್ಯೂಟ್ರಾನ್, ಎಲೆಕ್ಟ್ರಾನ್ ಕಣಗಳನ್ನು ಬೇಯಿಸಿ, ಭಕ್ಷ್ಯ ಭೋಜ್ಯಗಳನ್ನು ತಯಾರಿಸುತ್ತಾನೆ.' ಇಂತಹ ಉಪಮೆಗಳು ಅವರಿಂದಲ್ಲದೆ ಇನ್ಯಾರಿಂದ ಬರಲು ಸಾಧ್ಯ!

ಶೀರ್ಷಿಕೆಗಳನ್ನು ನೀಡುವಲ್ಲಿ ಕೂಡ ಅವರದೇ ಮಾದರಿ. ನಾನು ಎಸ್.ಜಾನಕಿಯವರ ಬಗ್ಗೆ ಬರೆಸಿದಾಗ 'ಮೂಡಣ ಮನೆಯ ಮುತ್ತಿನ ನೀರಿನ ಎರಕಾವ ಹೊಯ್ದವರು' ಎಂದು ಶೀರ್ಷಿಕೆಯನ್ನು ಕೊಟ್ಟಿದ್ದರು.

ಸಂಗೀತ ಅವರ ಇನ್ನೊಂದು ಆಸಕ್ತಿಯ ಕ್ಷೇತ್ರ. ಹಿಂದೂ ಪತ್ರಿಕೆಗೆ ಅವರು ಸಂಗೀತ ವಿಮರ್ಶೆ ಬರೆಯುತ್ತಿದ್ದರು. ಮೈಸೂರಿನ ವೀಣೆ ಶೇಷಣ್ಣ ಭವನದ ನಿರ್ಮಾಣದಲ್ಲಿ ಅವರ ಪಾತ್ರ ದೊಡ್ಡದು. ಸಂಗೀತ ಅವರ ಮಟ್ಟಿಗೆ ತಪಸ್ಸಿನ ಹಾಗೆ, ಕೊಂಚ ಸದ್ದು ಕೇಳಿ ಬಂದರೂ 'ಸಭಾಭವನದಿಂದ ನಿರ್ಗಮಿಸಿ' ಎಂದು ಹೇಳುವ ತಾಕತ್ತು ಅವರಿಗಿತ್ತು. ಅವರ ಜೊತೆಗೆ ಒಮ್ಮೆ ಔಡವ ರಾಗಗಳ ಬಗ್ಗೆ ಚರ್ಚಿಸುವ ಸದಾವಕಾಶ ನನಗೆ ಲಭಿಸಿತ್ತು. ಆಗ ಅವರು ಅಭೇರಿ ಹೇಗೆ ಔಡವ ಸಂಪೂರ್ಣ ರಾಗ ಎಂದು ವಿವರಿಸಿದ್ದನ್ನು ನಾನು ಯಾವತ್ತೂ ಮರೆಯಲಾರೆ.

ಹಲವು ವಿಶಿಷ್ಟ ನೆಲೆಗಳನ್ನು ಒಳಗೊಂಡಿದ್ದ ಅವರ ಆತ್ಮಕತೆ 'ಮುಗಿಯದ ಪಯಣ'ಈ ಕೃತಿ ಹೊರ ಬಂದ ಕೆಲವೇ ದಿನಕ್ಕೆ 2008ರ ಜೂನ್ 27ರಂದು ತಮ್ಮ ಪಯಣವನ್ನು ಮುಗಿಸಿದರು.

ಕ್ಯಾಲಿಫೋರ್ನಿಯ ರಾಜ್ಯದ ಐವತ್ತು ಮಹಿಳಾ ಮುಂದಾಳುಗಳಲ್ಲಿ ಒಬ್ಬರಾಗಿ ಗುರುತಿಸಲ್ಪಟ್ಟಿರುವ ಸ್ನೇಹ ನರಹಳ್ಳಿಯವರು ಕನ್ನಡದ ಕುವರಿ ಎಂಬುದು ಹೆಮ್ಮೆಯ ವಿಷಯ.

ಅಮೆರಿಕದಲ್ಲಿ ಕನ್ನಡಿತಿಯ ಸಾಧನೆ

» ಉಮಾ ರಾಜಣ್ಣ

ಅಪ್ಪಟ ಕನ್ನಡಿತಿ ಸ್ನೇಹ ನರಹಳ್ಳಿ ಅವರು, 2004ನೆಯ ಸಾಲಿನ ಅಮೆರಿಕದ ಕ್ಯಾಲಿಫೋರ್ನಿಯ ರಾಜ್ಯದ ಪ್ರಮುಖ 50 ಮಹಿಳಾ ಮುಂದಾಳುಗಳಲ್ಲಿ ಒಬ್ಬರಾಗಿ ಪ್ರಶಸ್ತಿ ಪುರಸ್ಕೃತರಾಗಿರುವುದು ಹೆಮ್ಮೆಯ ಸಂಗತಿ. ಸತತವಾಗಿ ಕಳೆದ ಏಳು ವರ್ಷಗಳಿಂದಲೂ ಕ್ಯಾಲಿಫೋರ್ನಿಯಾ ರಾಜ್ಯವು ವಿಶ್ವಮಟ್ಟದಲ್ಲಿ ಐದನೆಯ ಮುಖ್ಯ ಆರ್ಥಿಕ ವ್ಯವಸ್ಥೆ ಎಂದು ಪರಿಗಣಿಸಲ್ಪಟ್ಟಿರುವುದರಿಂದ ಈ ಪ್ರಶಸ್ತಿಗೆ ವಿಶೇಷ ಮಹತ್ವವಿದೆ.

ಕನ್ನಡ ಪರಿಸರದಲ್ಲಿ ಹುಟ್ಟಿ ಬೆಳೆದು, ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದ ಸ್ನೇಹ, ಉನ್ನತ ಶಿಕ್ಷಣಕ್ಕಾಗಿ ಅಮೆರಿಕಕ್ಕೆ ಹೋದವರು. ಅನೇಕ ದೇಶಗಳ ಪ್ರತಿಭಾವಂತರು ನೆಲಸಿರುವ ನಾಡಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಾಡಿರುವ ಈ ಸಾಧನೆ ಪ್ರತಿಭೆ ಮತ್ತು ಪರಿಶ್ರಮಕ್ಕೆ ಸಂದ ಗೌರವವಾಗಿದೆ. ಸ್ನೇಹಾರನ್ನು ನಾನು ಚಿಕ್ಕಂದಿನಿಂದ ಬಲ್ಲೆ. ಸ್ವಭಾವತಃ ಸಂಕೋಚದ ಹುಡುಗಿ. ಗೆಳತಿಯರ ನಡುವೆ ಮೌನಗೌರಿಯಂತಿರುತ್ತಿದ್ದ, ಆಕೆ ನಾನು ಮೊನ್ನೆ ಅಭಿನಂದಿಸಲು ಕರೆ ಮಾಡಿದಾಗ ಅರಳು ಹುರಿದಂತೆ ಮಾತನಾಡಿದಾಗ ನನಗೆ ಒಂದು ಕ್ಷಣ ಅಚ್ಚರಿಯೆನ್ನಿಸಿತು. ನಾನು ಬೆರಗಿನಿಂದ 'ನೀವು ಅದೇ ಸ್ನೇಹಾನಾ?' ಎಂದು ಕೇಳಿದಾಗ 'ನಿಮಗೆ ನಾನು ಅದೇ ಸ್ನೇಹ ಆಂಟಿ, ಆದರೆ ಹೊರಜಗತ್ತಿನಲ್ಲಿ ನಾನು ಬಹಳಷ್ಟು ಬದಲಾಗಿದ್ದೇನೆ, ಪರಿಸ್ಥಿತಿಗೆ ತಕ್ಕಂತೆ ಬದಲಾಗಬೇಕಾಯಿತು' ಎಂದು ನಕ್ಕರು.

ಕವಿಯಾಗಿ ಸ್ನೇಹ

ಅವರ ಯಶಸ್ಸಿನ ಪಯಣದ ಹಾದಿ ನನಗೆ ಸಾಧನೆ ಮಾಡಬಯಸುವ ಯಾರಿಗಾದರೂ ಮಾದರಿಯೆನ್ನಿಸಿತು. ಅವರು ಇತ್ತೀಚೆಗೆ ಪ್ರಕಟಿಸಿರುವ 'ನಾಟ್ ದ ಲೌಡೆಸ್ಟ್ ಪರ್ಸನ್ ಇನ್ ದ ರೂಮ್' ಕವನ ಸಂಕಲನದಲ್ಲಿ ವ್ಯಕ್ತಿ ಹಾಗೂ ಪರಿಸರದ ನಡುವಿನ ಸಂಘರ್ಷವನ್ನು ಚಿತ್ರಿಸಿರುವ ಬಗೆ ನೆನಪಾಯಿತು. ಸ್ನೇಹಾ ವೃತ್ತಿಯಲ್ಲಿ ಉನ್ನತ ನೆಲೆಗೆ ಏರಿ ವ್ಯಾವಹಾರಿಕ ಜಗತ್ತಿನಲ್ಲಿ ಯಶಸ್ಸಿಗೆ ಬೇಕಾದ ಎಲ್ಲ ಸೂತ್ರಗಳನ್ನು ಸಮರ್ಥವಾಗಿ ಅಳವಡಿಸಿಕೊಂಡಿದ್ದರೂ ತನ್ನ ಮನಸ್ಸಿನ ಸೂಕ್ಷ್ಮತೆಯನ್ನು, ಮೌನದಲ್ಲಿ ಮಾತ್ರ ಕೇಳಿಸುವ ಅಂತಃಕರಣದ ದನಿಗಳನ್ನು ಆಲಿಸುವ ಶಕ್ತಿಯನ್ನು ಕಳೆದುಕೊಂಡಿಲ್ಲವೆಂಬುದನ್ನು ಗಮನಿಸಿದಾಗ ಅವರ ಬಗ್ಗೆ ಗೌರವಪೂರ್ಣ ಮೆಚ್ಚುಗೆ ಮೂಡಿತು.

ಅಮೆರಿಕದ ಕಾರ್ನೆಜಿ ಮೆಲನ್ ವಿಶ್ವವಿದ್ಯಾಲಯದಲ್ಲಿ ಉನ್ನತ ಶಿಕ್ಷಣ ಪಡೆದಿರುವ ಸ್ನೇಹ ನರಹಳ್ಳಿ ಅಲ್ಲಿನ ಸಿಯರ್ಸ್, ವಾಲ್‌ಮಾರ್ಟ್ ಮೊದಲಾದ ಕಂಪೆನಿಗಳಲ್ಲಿ ಕೆಲಸ ಮಾಡಿ ಈಗ ಸೆಫೋರ ಎಂಬ ಕಂಪೆನಿಯಲ್ಲಿ ಉಪಾಧ್ಯಕ್ಷೆಯಾಗಿ, ಆಧುನಿಕ ತಂತ್ರಜ್ಞಾನವನ್ನು ಉತ್ಪಾದನಾ ಹಾಗೂ ಮಾರುಕಟ್ಟೆಯ ವಲಯದಲ್ಲಿ ಯಶಸ್ವಿಯಾಗಿ ಅಳವಡಿಸಿ ಸಾಗುತ್ತಿರುವ ಹೊಸ ತಲೆಮಾರಿನ ಪ್ರತಿನಿಧಿಯಾಗಿದ್ದಾರೆ. ಅವರೊಡನೆ ಮಾತನಾಡಿದಾಗ ಭಿನ್ನ ಪರಿಸರದಲ್ಲಿ ಅವರು ಎದುರಿಸಿದ ಸಂಸ್ಕೃತಿ ಸಂಘರ್ಷ, ಎಷ್ಟೇ ಆಧುನಿಕವೆನ್ನಿಸಿದರೂ ಇಂದಿಗೂ ಪುರುಷ ಸಮಾಜದಲ್ಲಿ ಮಹಿಳೆಯೊಬ್ಬಳು ಎದುರಿಸಬೇಕಾದ ಸವಾಲುಗಳು, ತೀವ್ರಗತಿಯಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನ ಹಾಗೂ ಸಮಾಜದ ಮನೋವಲಯದರೂಢಿಯ ಗತಿಗಳ ಸಂಬಂಧ, ಉತ್ಪಾದಿತ ವಸ್ತುಗಳನ್ನು ಇವು ತಮ್ಮ ಬದುಕಿಗೆ ಅತ್ಯಗತ್ಯ ಎಂಬಂತೆ ಗ್ರಾಹಕರ ಮನಸ್ಸಿನಲ್ಲಿ ಮೂಡಿಸುವ ತಂತ್ರಗಳು, ನಾಗರಿಕ ಸಮಾಜದ ಬಯಕೆ ಆಕಾಂಕ್ಷೆಗಳ ಸ್ವರೂಪ ಹಾಗೂ ಮಾರುಕಟ್ಟೆಗಳ ಹೆಣಿಗೆ – ಹೀಗೆ ಅನೇಕ ಸಂಗತಿಗಳು ಪ್ರಸ್ತಾಪಿತವಾದವು.

ಕನ್ನಡದ ಪ್ರಸಿದ್ಧ ವಿಮರ್ಶಕರಾದ ನರಹಳ್ಳಿ ಬಾಲಸುಬ್ರಹ್ಮಣ್ಯ ಹಾಗೂ ಖ್ಯಾತ ಲೇಖಕಿ ರಜನಿ ನರಹಳ್ಳಿ ದಂಪತಿಯ ಮಗಳಾದ ಸ್ನೇಹಾ ಸಾಂಪ್ರದಾಯಿಕ ಪ್ರತಿಭೆ ಹಾಗೂ ಆಧುನಿಕ ತಂತ್ರಜ್ಞಾನಗಳ ಆಳವಾದ ಜ್ಞಾನ ಎರಡನ್ನೂ ಒಳಗೊಂಡು ತನ್ನಕಾಲದ ಸ್ತ್ರೀ ಸಂಕುಲ ಎದುರಿಸುತ್ತಿರುವ ಸವಾಲುಗಳಿಗೆ ಪರಿಹಾರದ ಸಾಧ್ಯತೆಗಳನ್ನು ಅರಸುತ್ತಿರುವ ಒಬ್ಬ ಸಾಮಾಜಿಕ ಚಿಂತಕಿಯಾಗಿ ಗುರುತಿಸಿಕೊಂಡಿದ್ದಾರೆ. ಜಾಗತಿಕ ನೆಲೆಯಲ್ಲಿ ಕನ್ನಡ ಮನಸ್ಸಿನ ಚಿಂತನೆಗಳನ್ನು ಬಿತ್ತುತ್ತಿರುವ ಸ್ನೇಹ ನರಹಳ್ಳಿ ಅವರ ಈ ಸಾಧನೆ ನಿಜಕ್ಕೂ ವಿಶೇಷ ಎನಿಸಿದೆ.

ಸಿಂಹಬಲ ನೀಡಿದ ಷೇರು ಮಾರುಕಟ್ಟೆ

ಮುಂಬಯಿ ಎಂದಾಕ್ಷಣ ನೆನಪಾಗುವುದು ಅಲ್ಲಿನ ಷೇರು ಮಾರುಕಟ್ಟೆ, ಗೂಳಿ ಮತ್ತು ಕರಡಿ!

ಮುಂಬಾಪುರಿ
» ಕಲಾ ಭಾಗ್ವತ್

ಭಾರತದ ವಾಣಿಜ್ಯ ಹಾಗೂ ಆರ್ಥಿಕ ರಾಜಧಾನಿ ಮುಂಬೈಯಲ್ಲಿ ಸದಾಕಾಲವೂ ಹಣಸಂಪತ್ತು ಆಟ, ಓಟ, ನೋಟ, ಕಾಟ, ಕೂಟ ಇತ್ಯಾದಿಯಾಗಿ ಟಕಾರಗಳನ್ನು ಟಂಕಿಸಿಕೊಂಡ ಕ್ರಿಯಾಪದಗಳೊಂದಿಗೆ ಚಲನಶೀಲವಾಗಿಯೇ ಇರುತ್ತದೆ. ವೃತ್ತಿಯ ನೆಪದಲ್ಲಿ ವಾಣಿಜ್ಯ ಕಟ್ಟಡಗಳೊಳಗೆ ಕುಳಿತು ದಿನ ಪೂರ್ತಿ ವ್ಯಾಪಾರ ವಹಿವಾಟುಗಳಲ್ಲಿ ತೊಡಗಿಕೊಳ್ಳುವ ಲಕ್ಷಗಟ್ಟಲೆ ಮುಂಬೈವಾಸಿಗಳು ಒಂದಲ್ಲ ಒಂದು ಬಗೆಯ ದುಡ್ಡಿನಾಟದಲ್ಲಿ ತೊಡಗಿಕೊಂಡೇ ಇರುತ್ತಾರೆ.

ಮುಂಬಯಿಯ ಬೇರೆ ಬೇರೆ ವರ್ಗದವರ ಜೊತೆಗೆ ಹಣವು ನಡೆಸುವ ಸಂವಹನವು ಭಿನ್ನವಾಗಿರುವುದು. ಇಲ್ಲಿ ಮಧ್ಯಮ ವರ್ಗದ ಮನೆಗಳಲ್ಲೂ ಮಹಾಲಕ್ಷ್ಮಿಯು ಸ್ವಚ್ಛಂದವಾಗಿ ಸಂಚರಿಸುತ್ತಾಳೆ. ತರಕಾರಿ, ಹಣ್ಣು, ಬೇಲ್ ಪುರಿ ಮಾರುವ ಭೈಯಾ, ಆಟೋ ಚಾಲಕರಂಥವರು ಐನೂರರ ನೋಟು ಕೊಟ್ಟರೆ ಮೇಡಂ ಚುಟ್ಟಾ ದೀಜಿಯೇ ಎನ್ನುತ್ತಾರೆ. ಚಿಲ್ಲರೆ ಇಲ್ಲ ಎಂದು ಹೇಳಿದ ಕ್ಷಣದಲ್ಲೇ ಅದನ್ನು ಹುಡುಕಲು ಕಿಸೆಯೊಳಗಿನ ಹಣವನ್ನು ನಿಧಾನಕ್ಕೆ ಮೇಲೆತ್ತಿದಾಗ ಕೈಯಲ್ಲಿ ಹಿಡಿಯಲಿಕ್ಕಾಗದಷ್ಟು ಐನೂರರ ನೋಟುಗಳ ಕಟ್ಟೇ ಕಾಣುತ್ತದೆ. ಅವುಗಳ ನಡುವೆ ಎಲ್ಲೋ ನುಸುಳಿಕೊಂಡಿರುವ ಹತ್ತು, ಇಪ್ಪತ್ತು, ಐವತ್ತರ ನೋಟುಗಳು ಬಿಡುವಿಲ್ಲದೇ ಕೈಯಿಂದ ಕೈಗೆ ದಾಟಿಕೊಳ್ಳುತ್ತಲೇ ದಿನ ಕಳೆಯುತ್ತವೆ. ಇತ್ತೀಚೆಗಂತೂ ಈ ಚಿಲ್ಲರೆ ವ್ಯವಹಾರಗಳಿಗೂ ಸ್ಕ್ಯಾನ್ ಕೋಡನ್ನು ಎದುರಿಗೆ ಹಿಡಿದುಬಿಡುವವರೇ ಹೆಚ್ಚು. ಮುಂಬೈಯ ಜೇಬಿನಲ್ಲಿ ಝುಣ ಝುಣ ಸದ್ದು ಕೇಳುವ ದಿನಮಾನವು ಆಗಲೇ ಜಾರಿ ಹೋಯಿತು ಸ್ವಾಮೀ. ಇಲ್ಲಿ ಈಗ ಮಹಾಲಕ್ಷ್ಮಿಯು ಗುಪ್ತಗಾಮಿನಿಯಾಗಿದ್ದಾಳೆ.

ಏನನ್ನೇ ಆದರೂ ಹಂಚಿ ತಾನು ಮಿಂಚುವ ದೊಡ್ಡ ಗುಣದ ಮುಂಬಯಿಯು ಹಂಚಲಿಕ್ಕಾಗಿ ಮಾರುಕಟ್ಟೆಯನ್ನೇ ಹೊಂದಿರುವುದು ವಿಶೇಷ. ಇದು ಪಂಚಗಕಜ್ಜಾಯದಂತೇ ಹಂಚುವ ಉದಾರ ಮಾರುಕಟ್ಟೆಯಲ್ಲ. ಬದಲಾಗಿ ಒಂದು ನಿರ್ದಿಷ್ಟವಾದ ದೊಡ್ಡ ವ್ಯಾಪಾರದಲ್ಲಿ ಚಿಕ್ಕ ಮಾಲೀಕತ್ವವನ್ನು ನೀಡುವ ಮಾರುಕಟ್ಟೆ. ಇಲ್ಲಿ ಕಟ್ಟಿದ ಹಗ್ಗದ ಮೇಲೆ ಹೂಡಿಕೆದಾರರು ನಡೆಯುತ್ತಾರೆ. ಕೌಶಲ್ಯವಿರದವರು ಧಪ್ಪನೆ ಬಿದ್ದು ಕೈ ಕಾಲು ಮುರಿದುಕೊಳ್ಳುತ್ತಾರೆ. ಸುತ್ತಲಾವರಿಸಿದ ಸಮುದ್ರದ ಉಬ್ಬರ ಇಳಿತಗಳಂತೆ ಈ ವ್ಯವಹಾರ. ಈಜು ಬಂದರೆ ಮಾತ್ರ ನೀರಿಗಿಳಿಯಬೇಕು ಇಲ್ಲಿ. ಇಲ್ಲವಾದರೆ ಮುಳುಗುವ ಸಂಭವವೇ ಹೆಚ್ಚು.

ಇಡೀ ಭಾರತದ ಷೇರು ವ್ಯವಹಾರವನ್ನು ನಿಯಂತ್ರಿಸುವ ಕೇಂದ್ರವಾದ ಬಾಂಬೆ ಸ್ಟಾಕ್ ಎಕ್ಸ್ಚೇಂಜ್ (ಬಿ ಎಸ್ ಇ). ಇದು ದಕ್ಷಿಣ ಮುಂಬೈಯ ಫೋರ್ಟ್ ಪರಿಸರದಲ್ಲಿರುವ ಇಪ್ಪತ್ತೊಂಬತ್ತು ಮಹಡಿಯ ಕಟ್ಟಡ. ಏಷ್ಯಾ ಖಂಡದ ಅತಿ ಹಳೆಯ ಹಾಗೂ ಭಾರತದ ಮೊದಲ ಶೇರುಪೇಟೆಯೆಂಬ ಹೆಗ್ಗಳಿಕೆಯನ್ನು ಹೊಂದಿರುವ ಈ ಷೇರು ಮಾರುಕಟ್ಟೆಯು ಗೂಳಿ ಜಿಗಿತ, ಸೆನ್ಸೆಕ್ಸ್ ಭಾರಿ ಕುಸಿತ, ದಾಖಲೆಯ ಚೇತರಿಕೆ, ಪುನಃ ಜಿಗಿತ ಕಂಡ ಸೆನ್ಸೆಕ್ಸ್, ದಾಖಲೆಯ ಏರಿಕೆ ಇಂತಹ ಹೇಳಿಕೆಗಳೊಂದಿಗೆ ಇಡೀ ದೇಶದ ಜನತೆಯನ್ನು ಕುಣಿಸುತ್ತದೆ. ಹೂಡಿಕೆದಾರರು ಬೆಳಿಗ್ಗೆ 9.30ರಿಂದ ಅಪರಾಹ್ನ 3.30ರ ತನಕ ತಮ್ಮ ಒಂದು ದೃಷ್ಟಿಯನ್ನು ಮುಂಬೈಯತ್ತ ನೆಡುವಂತೆ ಮಾಡಿದೆ. ಹಣದ ವಹಿವಾಟಿನ ಈ ಅಧಿಕೇಂದ್ರದಲ್ಲಿ ಕ್ಷಣ ಕ್ಷಣಕ್ಕೂ ಉಂಟಾಗುವ ಕಂಪನಗಳು ಇಡೀ ದೇಶದವರ ಹೃದಯ ಬಡಿತವನ್ನು, ನಾಡಿಮಿಡಿತವನ್ನು ಏರುಪೇರಾಗಿಸುತ್ತವೆ. ಇದರ ಚಲನೆಯು ಪಾದರಸದಂತೆ ಚುರುಕಾಗಿರುತ್ತದೆ.

ದೇಶದ ಯಾವುದೋ ಒಂದು ಮೂಲೆಯಲ್ಲಿ ನಡೆದ ಘಟನೆಯು ಸ್ಟಾಕ್ ಎಕ್ಸ್ಚೇಂಜ್ ಮೇಲೆ ಪ್ರಭಾವ ಬೀರುತ್ತದೆ. ಬಡವರಾದವರು ಚಿಟಿಕೆ ಹೊಡೆಯುವಷ್ಟರಲ್ಲಿ ಶ್ರೀಮಂತರಾಗುತ್ತಾರೆ ಮತ್ತು ಶ್ರೀಮಂತರು ಎಲ್ಲವನ್ನೂ ಕಳೆದುಕೊಂಡು ಬಡವರಾಗುತ್ತಾರೆ. ಒಂದು ಕಂಪನಿಯು ಬಂದ ಹಣವನ್ನು ಅಭಿವೃದ್ಧಿಗಾಗಿ ಬಳಸಿಕೊಳ್ಳುತ್ತದೆ. ಬೆಳವಣಿಗೆಯಾದ ಬಳಿಕ ಅಥವಾ ಅಧಿಕ ಲಾಭವಾದಾಗ ಆ ಲಾಭವನ್ನು ಗ್ರಾಹಕರಿಗೆ ಹಂಚುತ್ತದೆ. ಅಂತಹ ಕಂಪೆನಿಗಳ ಷೇರುಗಳ ಬೆಲೆಗಳು ನಿರಂತರವಾಗಿ ಏರುತ್ತಾ ಇರುವ ಸಂದರ್ಭದಲ್ಲಿ ಹೂಡಿಕೆದಾರರು ಮಾರುಕಟ್ಟೆಯ ಮೇಲೆ ನಿರೀಕ್ಷೆಗಳನ್ನು ಹಣದ ಹರಿವಿಗೆ ಅನುವು ಮಾಡಿಕೊಡುತ್ತಾರೆ. ಆಗ ಷೇರುದಾರರಿಗೆ ಹೆಚ್ಚಿನ ಲಾಭವಾಗುತ್ತದೆ. ಇದು ಅಲ್ಪಸಮಯದಲ್ಲೂ ಆಗಬಹುದು. ಅಥವಾ ಸುಧೀರ್ಘ ಸಮಯದ ನಂತರವೂ ಆಗಬಹುದು. ಕಾರಣಾಂತರದಿಂದ ಕಂಪನಿ ನಷ್ಟದಲ್ಲಿದ್ದರೆ ಅದರ ಋಣಾತ್ಮಕ ಪರಿಣಾಮವೂ ಷೇರುಗಳ ಬೆಲೆಗಳ ಮೇಲೆಯೇ. ಹಣವನ್ನು ಕಳೆದುಕೊಳ್ಳುವುದೆಂದರೆ ಅದೇ. ಒಟ್ಟಿನಲ್ಲಿ ಇದೊಂದು ದುಡ್ಡಿನಾಟ.

ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್ 1850 ರಲ್ಲಿ ಟೌನ್ ಹಾಲ್ ನ ಎದುರಿಗಿರುವ ಆಲದ ಮರದಡಿಯಲ್ಲಿ ಇಪ್ಪತ್ತೆರಡು ಜನ ಗುಜರಾತಿ ಮತ್ತು ಪಾರ್ಸಿ ದಲ್ಲಾಳಿಗಳ ಬಳಗದಿಂದ ಆರಂಭವಾಯಿತು.1875 ರಲ್ಲಿ ಒಂದು ಬಾಡಿಗೆ ಕೋಣೆಯಲ್ಲಿ ದಲ್ಲಾಳಿಗಳಲ್ಲೊಬ್ಬರಾದ ಹತ್ತಿ ವ್ಯಾಪಾರಿಯಾಗಿದ್ದ ಪ್ರೇಮ್ ಚಂದ್ ರಾಯ್ ಚಂದ್ ಅವರಿಂದ ದ ನೇಟಿವ್ ಷೇರ್ ಆಂಡ್ ಸ್ಟಾಕ್ ಬ್ರೋಕರ್ಸ್ ಅಸೋಸಿಯೇಷನ್ ಎಂಬ ಹೆಸರಿನಲ್ಲಿ ಸ್ಥಾಪಿತವಾಯಿತು. 1957 ರ ಹೊತ್ತಿಗೆ ಭಾರತ ಸರ್ಕಾರವು ಇದನ್ನು ಭಾರತದ ಮೊದಲ ಷೇರು ವಿನಿಮಯ ಕೇಂದ್ರವೆಂದು ಗುರುತಿಸಿತು ಮತ್ತು ಅಧಿಕೃತ ವ್ಯಾಪಾರದ ಹಕ್ಕುಗಳನ್ನು ನೀಡಿತು. ಇದು ಇನ್ನಷ್ಟು ಹೂಡಿಕೆದಾರರು ಮತ್ತು ವ್ಯಾಪಾರಿಗಳನ್ನು ಆಕರ್ಷಿಸಿತು. ಮುಂದಿನ ದಿನಗಳಲ್ಲಿ ಬಾಂಬೆ ಸ್ಟಾಕ್ ಎಕ್ಸ್ಚೇಂಜ್, ಭಾರತದ ಹಣಕಾಸು ಮಾರುಕಟ್ಟೆಗಳ ಕೇಂದ್ರವಾಗಿದೆ, ಸಾರ್ವಜನಿಕ ವಲಯದ ಕಂಪನಿಗಳು ಮತ್ತು ಖಾಸಗಿ ವ್ಯವಹಾರಗಳೆರಡರಿಂದಲೂ ವಿವಿಧ ರೀತಿಯ ಷೇರುಗಳನ್ನು ಹೊಂದಿದೆ. ಮಾರುಕಟ್ಟೆಯಲ್ಲಿ ಬಂಡವಾಳ ಮತ್ತು ಕಂಪನಿಗಳ ಸಂಖ್ಯೆಗೆ ಸಂಬಂಧಿಸಿದಂತೆ ಇದು ಪ್ರಸ್ತುತ ಏಷ್ಯಾದ ಪ್ರಮುಖ ವಿನಿಮಯ ಕೇಂದ್ರಗಳಲ್ಲಿ ಒಂದಾಗಿದೆ. ಷೇರು ಮಾರುಕಟ್ಟೆಯ ಬೆಳವಣಿಗೆಯ ಸಂಕೇತವೇ ಬಿಎಸ್ ಇ ಕಟ್ಟಡದಿದಿರು ಕೊಬ್ಬಿನಿಂದ ನಿಂತ ಹಿತ್ತಾಳೆಯ ಗೂಳಿಯ ಪ್ರತಿಮೆ. ಸೆನ್ಸೆಕ್ಸ್ ಮುಂದೆ ಬಂದೊದಗಿದ ಹಲವಾರು ಬಿಕ್ಕಟ್ಟುಗಳನ್ನು ಎದುರಿಸಿಯೂ ಎದ್ದು ನಿಂತು ಭಾರತದ ಆರ್ಥಿಕ ಕೇಂದ್ರವಾಗಿ ಉಳಿದುಕೊಂಡಿದೆ. ಮುಂಬಯಿಗೆ ಸಿಂಹ ಬಲವನ್ನು ನೀಡಿದೆ.

ಸೂಟ್‌ಕೇಸ್‌ನಲ್ಲಿ ಹಣ!

ರಾಜಕಾರಣಿಯ ಆಪ್ತನೊಬ್ಬ ಹಣ ತುಂಬಿದ ಸೂಟ್‌ಕೇಸ್‌ಗಳೊಂದಿಗೆ ಪರಾರಿಯಾಗಿದ್ದ ಸುದ್ದಿ ಬಿತ್ತರಗೊಂಡಿತ್ತು. ಆ ಹಣ ಯಾರಿಗೆ ಸಿಗುತ್ತದೆ ಎಂಬ ಕುತೂಹಲ, ಕಾತರ.


ಲಹರಿ
» ಗಿರೀಶ್ ಕುಂಬಾರ

ಎಲೆಕ್ಷನ್ ಜೋರಾಗಿತ್ತು. ಪ್ರಚಾರದ ಅಬ್ಬರ ಭರ್ಜರಿಯಾಗಿತ್ತು. ವಿವಿಧ ಭಾಗಗಳಲ್ಲಿ ಚುನಾವಣೆಗೆ ನಿಂತ ಕ್ಯಾಂಡಿಡೇಟ್‌ಗಳ ಸುತ್ತ ಅವರ ಆಪ್ತರು ಸುತ್ತುತ್ತಿದ್ದರು. ನೀತಿಸಂಹಿತೆ ಘೋಷಣೆಗೆ ಸಂಬಂಧಿಸಿದಂತೆ ಮಾಧ್ಯಮ, ಪತ್ರಿಕೆಗಳಲ್ಲಿ ಸುದ್ದಿಗಳು ಬಿತ್ತರಗೊಳ್ಳುತ್ತಿದ್ದವು. ಇದೇ ವೇಳೆಯಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದ ಯುವ ರಾಜಕಾರಣಿಯೊಬ್ಬರ ಪ್ರೀತಿ ಪಾತ್ರ ಆಪ್ತನೊಬ್ಬ ಅಪಾರ ಹಣದೊಂದಿಗೆ ಪರಾರಿಯಾಗಿದ್ದ. ಈ ಸುದ್ದಿ ರಾಜ್ಯಮಟ್ಟದಲ್ಲಿ ವ್ಯಾಪಕವಾಗಿ ಹರಡಿತ್ತು!

ಊರ ಹಬ್ಬದ ನಿಮಿತ್ಯ ಒಂದು ವಾರ ರಜೆ ಪಡೆದಿದ್ದ ನಾನು, ಎರಡು ವಾರದ ಮೊದಲೇ ಟ್ರೈನ್ ಟಿಕೆಟ್ ಬುಕ್ ಮಾಡಿದ್ದೆ. ರೇಲ್ವೆ ಸ್ಟೇಶನ್ ಕಡೆ ಹೆಜ್ಜೆ ಹಾಕಬೇಕೆನ್ನುವಷ್ಟರಲ್ಲಿಯೇ ಸ್ನೇಹಿತ, ಆತನಿಗೆ ಪರಿಚಯವಿದ್ದ ಆಟೋ ಚಾಲಕನಿಗೆ ಇವರನ್ನು ರೇಲ್ವೆ ಸ್ಟೇಶನ್ ಬಳಿ ಬಿಡಿ ಎಂದು ಹೇಳಿದ.

ಚಾಲಕ ನನ್ನನ್ನು ತನ್ನ ಆಟೋದಲ್ಲಿ ಕುರಿಸಿಕೊಂಡು ಸ್ಟೇಶನ್ ಕಡೆ ಮುಖ ಮಾಡಿ ಎರಡು ನಿಮಿಷವಾಗಿರಲಿಲ್ಲ, ಅದೇ ಮಾರ್ಗದಲ್ಲಿ ಒಬ್ಬಾತ ಆರು ಪೆಟ್ಟಿಗೆಗಳು ಹಾಗೂ ಒಂದು ಸೂಟ್‌ಕೇಸ್‌ನ್ನು ಇಟ್ಟುಕೊಂಡು ನಾನು ಹೋಗುತ್ತಿದ್ದ ಆಟೋಕ್ಕೆ ಕೈ ಸನ್ನೆ ಮಾಡಿದ. ಆಟೋವನ್ನು ನಿಲ್ಲಿಸಿದ ಚಾಲಕ ಎಲ್ಲಿಗೆ ಎಂದು ಕೇಳಿದ! ಆತ ರೇಲ್ವೆ ಸ್ಟೇಶನ್ ಎಂದು ಉತ್ತರಿಸಿದ. ನೋಡೋಕೆ ಸುಂದರವಾಗಿದ್ದ, ಬಹು ಭಾಷಿಕನಂತೆ ಕಾಣುತ್ತಿದ್ದ. ಆಟೋ ಚಾಲಕ ನನ್ನ ಬಳಿ 'ಸಾರ್..! ನೀವೊಬ್ಬರೆ ಇದ್ದಿರಿ; ಇತನನ್ನು ಕುರಿಸಿಕೊಳ್ಳಲೆ?' ಎಂದ. ನಾನು ಹೂಂಗುಟ್ಟಿದೆ.

ಹಿಂದೆ ಮುಂದೆ ಸ್ಥಳವಿದ್ದ ಕಡೆಯೆಲ್ಲೆಲ್ಲಾ ಪೆಟ್ಟಿಗೆಗಳನ್ನು ಇಟ್ಟು, ಸೂಟ್‌ಕೇಸ್‌ನ್ನು ನನ್ನ ತೊಡೆಯ ಮೇಲಿಟ್ಟ. ಆ ಸೂಟ್‌ಕೇಸ್ ಬಾರವಿದ್ದು ಒಂದು ಬದಿ, ಪಾರದರ್ಶಕ ಪ್ಲಾಸ್ಟಿಕ್‌ನಿಂದ ತಯಾರಿಸಲ್ಪಟ್ಟಿತ್ತು. ಒಳಗೆ ಹಣದಂತೆ ಏನೋ ಕಾಣಿಸುತ್ತಿತ್ತು! ಆದರೆ ಸ್ಪಷ್ಟವಾಗಿ ಕಾಣಿಸಲಿಲ್ಲ. ನಾನು ಆಶ್ಚರ್ಯಚಕಿತನಾದೆ. ನನ್ನನ್ನು ಗುರಾಯಿಸುತ್ತಾ, ಇದ್ದ ಸ್ವಲ್ಪ ಜಾಗದಲ್ಲಿಯೇ ಕುಳಿತುಕೊಂಡ. ಅವನನ್ನು ಹತ್ತಿಸಿಕೊಂಡು ಶರವೇಗದಲ್ಲಿ ಆಟೋವನ್ನು ಓಡಿಸುತ್ತಾ ಸ್ಟೇಶನ್ ಎದುರಿಗೆ ಬಂದು, ಆಟೋ ನಿಲ್ಲಿಸಿ 'ಸಾರ್! ನಿಮ್ಮ ಸ್ಟಾಪ್ ಬಂದಿದೆ. ಇಳಿಯಿರಿ' ಎಂದು ಆಟೋ ಚಾಲಕನು ನಮ್ರತೆಯಿಂದ ಕೇಳಿಕೊಂಡ.

ನನ್ನನ್ನು ಇನ್ನೊಂದು ಬದಿಗೊತ್ತಿದ್ದ ಅವನು ತಾನು ಆಸೀನನಾದ ಸ್ಥಳದಿಂದ ಇಳಿದು ಒಂದೊಂದೇ ಪೆಟ್ಟಿಯನ್ನು ನೆಲದ ಮೇಲೆ ಇಟ್ಟು, ನನ್ನ ಕೈಲಿದ್ದ ಸೂಟ್‌ಕೇಸ್‌ನ್ನು ಪಡೆದುಕೊಳ್ಳುತ್ತಿರುವಾಗ ಧಡೂತಿ ದೇಹದವನೊಬ್ಬ ಆಗಮಿಸಿದ. ಆಗಮಿಸಿದ್ದೇ ತಡ ನನ್ನ ಜೊತೆಗೆ ಪೆಟ್ಟಿಯೊಟ್ಟಿಗೆ ಬಂದವನೊಂದಿಗೆ ಅದ್ಯಾವ್ದೋ ಭಾಷೆಯಲ್ಲಿ ಭಯಭೀತನಾಗಿರುವಂತೆ ಮಾತನಾಡುತ್ತಿದ್ದ. ಇವನು ಬೆವರುತ್ತಾ ಅವನೊಂದಿಗೆ ಅದೇನೇನೋ ವಿವರಿಸುತ್ತಾ, ಆಟೋ ಚಾಲಕನಿಗೆ ಆಟೋಚಾರ್ಜ ಕೊಟ್ಟು ಲಗುಬಗೆಯಿಂದ ಇಬ್ಬರು ಲಗೇಜ್‌ಗಳನ್ನು ರೇಲ್ವೆ ಸ್ಟೇಶನ್ನಿನೊಳಗೆ ತೆಗೆದುಕೊಂಡು ಹೋದರು.

ನಾನು ಹೋರಡಬೇಕೆಂದಿದ್ದ ಟ್ರೈನ್ ಬಂದೆಬಿಟ್ಟಿತು. ನನ್ನ ಸೀಟ್ ಇಬ್ಬರು ಕೂರುವ ಸ್ಥಳದಲ್ಲಿ ನಿಗದಿಯಾಗಿತ್ತು. ಮನಸ್ಸಲ್ಲಿ ನಿರಾಳವಾಯಿತು. ಎರಡು ಸೀಟ್‌ನ್ನು ಒಂದು ಮಾಡಿಕೊಂಡು ನನ್ನ ಲಗೇಜ್‌ನ್ನು ಇಟ್ಟು ಪ್ರೇಶ್‌ಅಪ್ ಆಗಲು ವಾಶ್ರೂಮ್‌ಗೆ ಹೋಗಿ ಬರುವಷ್ಟರಲ್ಲಿ, ನಾನು ಅರ್ಥಂಬರ್ಥ ಅನುಮಾನ ಪಟ್ಟ ವ್ಯಕ್ತಿಗಳು ನನ್ನ ಪಕ್ಕದಲ್ಲಿರುವ ಎದರುಬದುರಿನ ಸೀಟಿನಲ್ಲಿ ಆಸೀನರಾಗಿದ್ದರು. ಸೀಟಿನ ಮಧ್ಯ ಸ್ಥಳವಿರುವಲ್ಲಿ ತಮ್ಮ ಆರು ಪೆಟ್ಟಿಗಳು ಹಾಗೂ ಅದರ ಮೇಲೆ ಸೂಟ್‌ಕೇಸ್‌ನ್ನು ಇಟ್ಟುಕೊಂಡು ಯಾರೊಂದಿಗೋ ಫೋನಿನಲ್ಲಿ ಗಂಭಿರವಾಗಿ ಮಾತಿಗಿಳಿದಿದ್ದರು!

ಪತ್ರಿಕೆಯಲ್ಲಿ ಮೊದಲೇ ಅಪಾರ ಹಣದೊಂದಿಗೆ ಪರಾರಿ ಎಂದು ಓದಿದ್ದ ನನಗೆ ಇವರೇ, ಅವರೇನು! ಅನ್ನುವಷ್ಟು ಅನುಮಾನ ಕಾಡಿದರೂ, ನನಗ್ಯಾಕ್ ಬೇಕು ಊರು ಉಸಾಬರಿ ಎನ್ನುತ್ತಾ ನನ್ನ ಪಾಡಿಗೆ ನಾನು ಕಾದಂಬರಿಯೊಂದನ್ನು ಓದತೊಡಗಿದೆ. ನಿದ್ದೆಯ ಮಂಪರು ಆವರಿಸುತ್ತಿತ್ತು. ಪಾರ್ಸೆಲ್ ಕಟ್ಟಿಸಿಕೊಂಡು ತಂದಿದ್ದ ಊಟವನ್ನು ಮಾಡಿ ಮಲಗಿಕೊಂಡಾಗ ರಾತ್ರಿ 11 ಗಂಟೆಯಾಗಿತ್ತು. ಬೋಗಿಯ ಎಲ್ಲಾ ಜನರು ಆದಾಗಲೇ ನಿದ್ರೆಗೆ ಜಾರಿದ್ದರೇ, ಇವರಿಬ್ಬರು ನನಗರ್ಥವಾಗದ ಭಾಷೆಯಲ್ಲಿ ಏನೇನೋ ಪಿಸುಗುಡುತ್ತಿದ್ದರು. ಸ್ವಲ್ಪ ಸ್ವಲ್ಪ ಕೇಳುತ್ತಿತ್ತು. ಆದಾದ ನಂತರ ಏಕಾಏಕಿ ಸದ್ದು ಇಲ್ಲದಂತಾಯಿತು!

ಹೊತ್ತುಕೊಂಡಿದ್ದ ಹೊದಿಕೆಯನ್ನು ಸ್ವಲ್ಪ ಜಾರಿಸಿ ಒಳುಗಣ್ಣಲ್ಲಿ ನೋಡಿದೆ. ಘಾಡ ನಿದ್ರೆಯಲ್ಲಿದ್ದರು. ಮಗ್ಗಲು ಬದಲಿಸಿ ಮಲಗಿದೆ. ರೈಲು ತನ್ನ ಪಾಡಿಗೆ ತಾನು ಚಲಿಸುತ್ತಿತ್ತು. ಒಮ್ಮೆಲೆ ದಫ್ ಎಂದು ಏನೋ ಬಿದ್ದ ಶಬ್ದವಾಯಿತು. ಎಚ್ಚರಗೊಂಡು ನೋಡಿದೆ. ನೋಟಿನ ಕಂತೆಯ ಸೂಟ್‌ಕೇಸ್ ಪೆಟ್ಟಿಗೆಯ ಮೇಲಿಂದ ಉರುಳಿಕೊಂಡು ಬಿದ್ದಿತ್ತು. ಅದರೊಳಗಿದ್ದ ನೋಟುಗಳು ಚೆಲ್ಲಾಪಿಲ್ಲಿಯಾಗಿ ಹರಡಿದ್ದವು. ನಿಧಾನವಾಗಿ ಎದ್ದು ಅವರನ್ನು ನೋಡಿದೆ. ಅವರಿಬ್ಬರೂ ತಮಗರಿವಿಲ್ಲದಂತೆ ಮಲಗಿಕೊಂಡಿದ್ದರು. ನನ್ನ ಸೀಟಿನಿಂದ ಕೆಳಗಿಳಿದು ತುದಿಗಾಲಲ್ಲಿ ಮಂಡಿಯೂರಿ ಕುಳಿತು, ಕೆಳಗೆ ಬಿದ್ದಿದ್ದ ನೋಟುಗಳ ಕಂತೆಯನ್ನು ಆರಿಸಿಕೊಂಡೆ! ಒಂದಷ್ಟು ನೋಟುಗಳನ್ನು ಆರಿಸಿ, ನನ್ನ ಬ್ಯಾಗ್‌ಗೆ ತುಂಬಿಕೊಂಡು, ಹೊದಿಕೆ ಹೊದ್ದು ಮಲಗಿದೆ. ಅವರಿಬ್ಬರೂ ಇನ್ನೂ ಗಾಢ ನಿದ್ದೆಯಲ್ಲಿದ್ದರು.

ಎಷ್ಟೋ ಹೊತ್ತಾಯಿತು. ಪಕ್ಕದಲ್ಲೇ ರೈಲಿನ ಹಾರ್ನ್ ಕೇಳಿಸಿತು. ಇದ್ದಕ್ಕಿದ್ದಂತೆ ನನಗೆ ಎಚ್ಚರವಾಯಿತು. ಗರಬಡಿದವನಂತೆ ಎದ್ದುಕುಳಿತೆ! ಅದಾಗಲೇ ಬೆಳಕಾಗತೊಡಿತ್ತು. ರೈಲು ಒಂದು ನಿಲ್ದಾಣದಲ್ಲಿ ನಿಂತಿತ್ತು. ಅವರಿಬ್ಬರೂ ಅದಾಗಲೇ ಎದ್ದು ಕುಳಿತಿದ್ದರು. ಸೂಟ್‌ಕೇಸುಗಳು ಇದ್ದಲ್ಲೇ ಇದ್ದವು. ನನಗೊಂದು ಸುಂದರ ಕನಸು ಬಿದ್ದಿತ್ತು, ಅಷ್ಟೆ! ಸಮಾಧಾನದಿಂದ ನಿಟ್ಟುಸಿರು ಬಿಟ್ಟೆ.

ಗುರ್ಗಿ ಗಿಡದ ಅಕ್ಷೋಹಿಣಿ ಇಂಬಳಗಳಿಗೆ ರಕ್ತದಾನ!

ಕಲ್ಪನೆ ಬುಡಮೇಲು ಮಾಡಿ, ಆ ಕಾಡ ಜಗುಲಿಗೂ ಕಾಲಿಟ್ಟಿವೆ ನೂರಾರು ರೆಸಾರ್ಟ್‌ಗಳು, ಸಾವಿರಾರು ಹೋಂ ಸ್ಟೇಗಳು. ಹಸಿರ ಕಾಡಿನ ನಡುವೆ ಅಲ್ಲಲ್ಲಿ ಕಾಂಕ್ರಿಟ್ ಕಾಡು. ಮಾಡಿ, ನೋಡಿಕೊಂಡು ಮಾಡಿ, ಆದರೆ ನಮ್ಮ ಪರಿಸರವ ಹಾಳುಗೆಡುಹದಿರಿ ಎಂಬ ಪುಟ್ಟ ಬೇಡಿಕೆ ನನ್ನದು.



ಅಚ್ಚರಿಗೊಳಿಸಿದ ಡ್ರಾಸಿರ

ಬೆಟ್ಟದೊಡಲಿನ ಅಚ್ಚರಿಗಳ ಬಯಲು ಮಾಡಲು ಒಂಟಿಯಾಗಿ ಅಲೆಯಬೇಕು. ಸೊಬಗಿನೊಂದಿಗೆ ಸೋಜಿಗಗಳು ತನ್ನಿಂದ ತಾನೇ ತೆರೆದುಕೊಳ್ಳುವುದು. ಹೊಸ ಹೊಸ ಹೊಳಹುಗಳು ಸಿಗುವವು. ಜನುಮದಲ್ಲೊಮ್ಮೆ ಕೀಟಾಹಾರಿ ಸಸ್ಯವನು ಅದರ ಆವಾಸದಲ್ಲೇ ನೋಡಬೇಕು, ಅದರ ವಿವರ ಕಲೆಹಾಕಬೇಕು ಎಂಬ ಕನಸಿತ್ತು. ನೆಲದ ಮೇಲೆ ಡ್ರಾಸಿರಗಳು ಪ್ರತ್ಯಕ್ಷವಾಗಿ ಅಚ್ಚರಿ ಮೂಡಿಸಿದವು. ಬಪ್ಪರೆ ಮಗನೆ, ನನ್ನ ಅದೃಷ್ಟಕ್ಕೆ ನಾನೇ ಪುಳಕಗೊಂಡೆ. ಕೆಂಬಣ್ಣದ ಹೂವಿಗೊಂದು ಜುಟ್ಟೊಂದು ಬಂದಂತೆ ಸಣ್ಣ ಕುಡಿಯಿಂದ ಅಲಂಕೃತಗೊಂಡ ಅದರ ಮೈಯ ಮೇಲೆ ಸಣ್ಣ ಸಣ್ಣ ರೋಮಗಳು. ಮುಟ್ಟಿದರೆ ಎಲ್ಲಿ ಉದರುವುದೋ ಎಂಬಷ್ಟು ಚಿಕ್ಕವು. ಹೂವೆಂದು ಲಾಸ್ಯವಾಡಲು ಬಂದ ದುಂಬಿಗಳು ಅಪರಾಧ ಮಾಡಿದ ಖೈದಿಯಂತೆ ಸಿಕ್ಕಿಬಿದ್ದು ಒದ್ದಾಡುತಲಿದ್ದವು. ಇನ್ನೆಂದೂ ಈ ತಪ್ಪು ಮಾಡೊಲ್ಲವೆಂದು ಆರ್ತವಾಗಿ ಬೇಡುತಲಿದ್ದವು. ಆದರೆ, ಸಮಯ ಮೀರಿತ್ತು; ಬೇಡಿಕೆಗೆ ಬೆಲೆಯಿಲ್ಲ! ಡ್ರಾಸಿರಕ್ಕೆ ಕರುಣೆ ಇಲ್ಲ. ತುಂಬಾ ಹೊತ್ತು ಅವನ್ನೇ ನೋಡುತ್ತಾ ಕುಳಿತೆ.

ಬಯಲ ಜಗಲಿಗೆ ಬಂದ ಸೂರ್ಯ ಗುಟ್ಟಾಗಿ ಹೂಗಳ ಮಧುವ ಹೀರುತಲಿದ್ದ. ಕಾಫೀ ಪ್ಲಾಂಟೇಷನ್‌ನಲ್ಲಿ ಅಲ್ಲಲ್ಲಿ ಬಿಸಿಲ ಚಾಪೆ. ಮೂಡಿಗೆರೆಯಿಂದ ನಮ್ಮ ತೇರು ಹೊರಟಿದ್ದು ಜೇನು ಕಲ್ಲು ಗುಡ್ಡಕ್ಕೆ. ಉಜಿರೆಯ ಗೆಳೆಯನ ಮನೆಗೆ ಹೋದಾಗ ಅಕಸ್ಮಾತ್ತಾಗಿ ನೆನಪಾದ ಜೇನುಕಲ್ಲು ಗುಡ್ಡ ಹತ್ತುವ ಉಮೇದು ಮಾಡಿದೆವು. ನೂರಾರು ಚಾರಣ ದಾರಿಗಳಲ್ಲಿ ಇದು ತುಸು ವಿಶಿಷ್ಟ. ತೇಜಸ್ವೀ ಕತೆಗಳಲ್ಲಿ ಕಂಡ ಊರುಗಳೆಲ್ಲಾ ಅಂದು ಮೆರವಣಿಗೆ ಹೊರಟಿದ್ದವು. ತೇಜಸ್ವಿ ಬರೆಹದ ನೆನಪಿನ ಆಗಸದಲ್ಲಿ, ಚದುರಿದ ಊರುಗಳು ಒಂದರ ಹಿಂದೆ ಒಂದು ಚಿತ್ತಾರ ಕೆತ್ತಿದ್ದವು.

» ಶ್ರೀಧರ ಎಸ್. ಸಿದ್ದಾಪುರ

ಕಾಫಿ ನಾಡು ಗೋಪ್ರೋ ಕ್ಯಾಮರದಲ್ಲಿ ಚಿತ್ರಿತವಾಗುತ್ತಿತ್ತು. ಪ್ರತಿ ತಿರುವು, ಮಂಡಾಳೆ ಹಾಕಿ ಹೊರಟ ಜನರೆಲ್ಲಾ ಗೋಪ್ರೋ ಕ್ಯಾಮರದಲ್ಲಿ ಬಂದಿ. ನಮ್ಮೊಂದಿಗೆ ಬಹುದೂರ ಕಂಪೆನಿ ನೀಡಿದ ಜೇನು ಕಲ್ಲು ಗುಡ್ಡ, ಈಗ ಅದಾವುದೋ ಬೆಟ್ಟದ ಹಿಂದೆ ಮರೆಯಾಗಿ ಹೋಗಿತ್ತು.

ಮೂಡಿಗೆರೆಯಿಂದ ಖಾನಾಪುರದ ದಾರಿ ಹಿಡಿದು ಅಲ್ಲಿ ಬಲಕ್ಕೆ ಹೊರಳಿಕೊಳ್ಳಬೇಕು. ಅಲ್ಲಲ್ಲಿ ಚದುರಿದ ಮನೆಗಳ ನಡುವೆ ಅನಂತದ ಓಟ. ಜನರೇ ಜಗತ್ತಿನಿಂದ ಕಣ್ಮರೆಯಾದಂತೆ ಭ್ರಮಿಸಬಹುದಾದ ಭ್ರಾಮಕ ಜಗತ್ತಿನಲ್ಲಿ ಒಂಟಿ ಬುಲೆಟ್‌ನ ಸದ್ದು. ಗದ್ದೆಯಂಚಿನ ದಾರಿಗಳಲ್ಲಿ ನಮ್ಮ ಒಂಟಿ ಸಲಗ.

ವಿಚಿತ್ರ ಹೆಸರುಗಳ ಊರಿನಲ್ಲಿ

ಯಾವ ಮನೆ ಹಾಳ ಈ ಹೆಸರಿಟ್ಟನೋ ಭಗವಂತ ಬಲ್ಲ - ಬೂದಿಹಾಳ! ಬೂದಿಹಾಳ ಊರಿನಲ್ಲಿ ಎಡಕ್ಕೆ ತಿರುಗಿ ಬೈಕ್‌ನ ಕೀಲಿ ತಿರುವಿ ಸುಮ್ಮನಿರಿಸುತ್ತಲೇ ಸಾವಿರ ಜೀರುಂಡೆಗಳು ಮಾಲ್‌ಕೌಂಸ್ ರಾಗದಲ್ಲಿ ತಮ್ಮ ಆರ್ಕೆಸ್ಟ್ರಾ ಶುರು ಮಾಡಿದವು. ಇಂತಹುದೇ ನೂರಾರು ವಿಚಿತ್ರ ಹೆಸರಿನ ಊರುಗಳ ಹಿಂದೆ ಬೀಳಬೇಕು. ಮೂಲ ಕೆದಕಬೇಕು. ಮೊನ್ನೆ ಸಾಗರ ಕಡೆ ಹೋದಾಗ ಸಿಂಗಾಪುರವೊಂದು ಕಾಣಿಸಿತು! ಶರಧಿ ಆಚೆಗಿನ ಸಿಂಗಾಪುರವಲ್ಲ, ಸಾಗರ ಸನಿಹದ ಸಿಂಗಾಪುರ. ನಮ್ಮ ಬೆಂಗಳೂರಿನಲ್ಲಿ, ಅತ್ತ ತೆಲಂಗಾಣದಲ್ಲೂ ಸಿಂಗಾಪುರವಿದೆಯೆಂದು ಗೂಗಲ್ ಆಂಟಿ ತೋರಿಸಿಕೊಟ್ಟಳು. ನಮ್ಮ ರಾಜ್ಯದ ಮೂಲೆ ಮೂಲೆಗಳಲ್ಲಿ ಸಿಂಗಾಪುರ, ಸಿಂಗನ ಮನೆ, ಸಿಂಗನ ಗುಡ್ಡೆಗಳಿವೆ!

ದಾರಿ ಯಾವುದಯ್ಯ ?

ಒಂಟಿ ಮನೆಯ ಯಜಮಾನನಲ್ಲಿ 'ಹೊಯ್, ಜೇನುಕಲ್ಲು ಗುಡ್ಡಕ್ಕೆ ಹೋಪುದು ಹ್ಯಾಂಗೆ?' ಎಂದರೆ ತನ್ನ ಉಬ್ಬಸಮಯ ಉಸಿರನ್ನು ಮೇಲೆ ಕೆಳಕ್ಕೆ ಒಯ್ದು ತನ್ನ ವಿಶಿಷ್ಟ ಕನ್ನಡದಲ್ಲಿ ದಾರಿ ಉಸುರಿದ. ಜೊತೆಗೆ, 'ಅಲ್ಲೇನೈತೆ ಸ್ವಾಮಿ?' ಎಂದುಸುರಿ ನಿರುಸ್ಸಾಹ ಗೊಳಿಸಿದ. ಜನ ಸಂಪರ್ಕದಿಂದ ಬಲು ದೂರ ಬದುಕುವ ಇವರ ಬದುಕೊಂದು ಅಚ್ಚರಿ. ಜನ ಸಮುದ್ರದ ನಡುವೆ ಇದ್ದರೂ ನಮ್ಮಂತವರು ಸದಾ ಒಂಟಿ! ಅವರಿಗೆ ಇಲ್ಲಿಂದ ಹೇಗಾದರೂ ಮಾಡಿ ತಪ್ಪಿಸಿಕೊಂಡು ಹೋದರೆ ಸಾಕು ಸಾಕೆನಿಸುತ್ತಿತ್ತು. ನಮ್ಮಂತಹವರು ಮಾತ್ರ ಕಾಡರಸಿ ಹೊರಡುವವರು.

ಕಲ್ಪನೆ ಬುಡಮೇಲು ಮಾಡಿ, ಆ ಕಾಡ ಜಗುಲಿಗೂ ಕಾಲಿಟ್ಟಿವೆ ನೂರಾರು ರೆಸಾರ್ಟ್‌ಗಳು, ಹೋಂ ಸ್ಟೇಗಳು. ಹಸಿರ ಕಾಡಿನ ನಡುವೆ ಅಲ್ಲಲ್ಲಿ ಕಾಂಕ್ರಿಟ್ ಕಾಡು. ಮಾಡಿ, ನೋಡಿಕೊಂಡು ಮಾಡಿ, ಆದರೆ ನಮ್ಮ ಪರಿಸರವ ಹಾಳುಗೆಡುಹದಿರಿ ಎಂಬ ಪುಟ್ಟ ಬೇಡಿಕೆ ನನ್ನದು.

ಭಯಾನಕವಾದ ಸಮಾನವಾದ ದಾರಿಯನ್ನು ತೋರಿ ನಮ್ಮಿಬ್ಬರನ್ನು ಸಾಗಹಾಕಿದ ಆಸಾಮಿ ನಾಪತ್ತೆ. ತೀವ್ರ ಕೊರಕಲಿನ ಇಳಿಜಾರು ಹಾದಿ. ಹಾದಿಗುಂಟ ಹಾಸಿದ ಮರಗಳ ಚಪ್ಪರ. ಸಹಸ್ರ ಸಹಸ್ರ ಜೀರುಂಡೆಗಳು ಪಿಟೀಲು ಹಿಡಿದು ನಮ್ಮ ಆಗಮನವನ್ನು ಸಂಭ್ರಮಿಸತೊಡಗಿದವು. ಕೆಲವೊಮ್ಮೆ ಏಕತಾಳ, ಕೆಲವೊಮ್ಮೆ ದ್ವಿತಾಳ. ನೂರಾರು ಕೀಟಗಳೂ ನಮ್ಮ ಜೊತೆಗೇ ಪ್ರಯಾಣ ಹೊರಟಿದ್ದವು. ಕಕ್ಕೆ ಮುಂತಾದ ಮರಗಳ ಪುಟ್ಟ ವಿಶ್ವವಿದ್ಯಾಲಯ ತೆರೆದುಕೊಂಡಿತು. ಇಲ್ಲಿನ ಜೀವ ವೈವಿಧ್ಯ, ಬೆರಗು ಮೂಡಿಸುವಂತಹದು. ಅಧ್ಯಯನ ಕಾರರಿಗೆ ಪಂಥಾಹ್ವಾನ.

ಗೆಳೆಯನೊಂದಿಗೆ ಹರಟುತ್ತಾ ಗುಡ್ಡ ಏರತೊಡಗಿದೆ. ಗೋವುಗಳ ನಾದದ ಜೊತೆಗೆ ಗೋಪಾಲಕನ ಸದ್ದು ಕಿವಿ ತುಂಬಿತ್ತು. ಪ್ರಾರಂಭದಲ್ಲಿ ಚಿಕ್ಕ ಕಾಡು, ಎರಡು ಗುಡ್ಡಗಳು ಸಂಧಿಸುವ ಜಾಗ. ಕಾಲಿಗೆ ಇಂಬಳಗಳ ಮುತ್ತಿಗೆ. ನಮ್ಮಿಂದ ನಿರಂತರ ರಕ್ತದಾನ. ಮೇಲೇರುತ್ತಲೇ ಕಾಲಿಗೆ ಮುತ್ತಿದ ಇಂಬಳವನ್ನು ಉದುರಿಸಲು ಅವುಗಳ ಮೇಲೆ ನಶ್ಯ ಹುಡಿಯ ಸನ್ಮಾನ ಮಾಡಿದೆ. ಸನ್ಮಾನಕ್ಕೆ ತಲೆಬಾಗಿ ಖುಷಿ ಪಟ್ಟವು, ಉದುರಿ

ಬಿದ್ದು ಹೋದವು!

ಗುರ್ಗಿ ಗಿಡದ ಅಕ್ಷೋಹಿಣಿ ಸೈನ್ಯವೇ ನಮ್ಮ ಮುಂದೆ. ಕಕ್ಕೆ ಮುಂತಾದ ಮರಗಳ ಸಂದೊಯಲ್ಲಿ ನುಸುಳಬೇಕಾಯಿತು. ಶೋಲಾ ಕಾಡಿನ ನಡುವೆ ಹುದುಗಿಸಿಟ್ಟ ಬೆಟ್ಟ ಕಾಣದೇ ದಾರಿ ತಪ್ಪಿದ ಮಕ್ಕಳಾದೆವು. ಸಾವಿರಾರು ದಾರಿಗಳಲ್ಲಿ ಸೋತ ಕಣ್ಣು ಕಕ್ಕೆ ಮರಗಳ ಕಾಡುಗಳಲ್ಲಿ ಕಳೆದು ಪಳೆಯುಳಿಕೆಯಾಗಬೇಕು.

ದಾರಿಯುದ್ದಕ್ಕೂ ಆನೆ, ಕಾಡುಕೋಣಗಳ ಲದ್ದಿ; ಹಿಂದೊಮ್ಮೆ ಕುಮಾರ ಪರ್ವತದ ತಪ್ಪಲಿನಲಿ ಆನೆಯ ಆರ್ಭಟದ ನೆನಪು ಮೂಡಿ, ಬೆನ್ನು ಹುರಿಯಲ್ಲೊಂದು ಸಣ್ಣ ಭಯ ಹುಟ್ಟಿಸಿತು. ಈ ಭಯವೇ ಸುತ್ತಲಿನ ಪ್ರಾಣಿ ಪಕ್ಷಿ ಗಿಡ ಗಂಟೆಗಳ ಭಾವವನ್ನು ಆಸ್ವಾದಿಸದಂತೆ ಪ್ರತಿಬಂಧಿಸಿತು. ಭಯವಿಲ್ಲದ ಸ್ಥಿತಿಯೇ ಅನುಭವಗಳ ಸಾಣೆ. ಭಯವ ಹಿಮ್ಮೆಟ್ಟಿಸಿದರೆ ಗೆಲುವಿನ ದರ್ಶನ.

ಮೂಡಿತೊಂದು ಬೆಳ್ಳಿ ಕಿರಣ



ಜೇನು ಕಲ್ಲು ಗುಡ್ಡ ದೂರದಿಂದಲೇ ಕಿಸಕ್ಕನೇ ನಕ್ಕು ತನ್ನಲ್ಲೇ, 'ಬೇಕಾ ಬಡ್ಡಿ ಮಗನೇ?' ಎಂದತಾಯ್ತು. ನನ್ನ ಜೊತೆಗೇ ಅಸಂಖ್ಯಾತ ಹುಳು ಹುಪ್ಪಟೆಗಳೂ ಜೇನುಕಲ್ಲು ಗುಡ್ಡಕ್ಕೆ ಪ್ರವಾಸ ಹೊರಟಿದ್ದವು! ಜೀರುಂಡೆಗಳು ತಮಾಷೆಯಾಗಿ ನಕ್ಕವು. ಅಗೋಚರ ದಾರಿಯಲಿ ಅರ್ಧ ಗಂಟೆಯ ತೀವ್ರ ಹುಡುಕಾಟದ ನಂತರ ಬೆಳ್ಳಿ ಕಿರಣದ ಟಿಸಿಲು. ಬೆಟ್ಟದ ಕಿರು ದಾರಿ ತೆರೆದುಕೊಳ್ಳುತ್ತಲೇ ಸುತ್ತಲಿನ ಚರಾಚರಗಳೆಲ್ಲಾ ಸಜೀವಗೊಂಡವು. ಸುಮ್ಮನಾದ ಜೀರುಂಡೆಗಳು ಒಂದೇ ಸಲಕ್ಕೆ ತಮ್ಮ ಮೊದಲಿನ ಮಾಲ್ಕಂಸ್ ರಾಗವನ್ನು ಬಾರಿಸತೊಡಗಿದವು. ರಾಗದಲ್ಲಿ ಕರಗಿ ಮುಂದಡಿ ಇಟ್ಟೆವು. ಲಯಕ್ಕೆ ಮರಳಿದವು. ಪೊದೆ ಜಾತಿಯ ಮರಗಳು ತೆಳುವಾಗುತ್ತಾ ಸಾಗಿ ಶಿಖರಾಗ್ರ ಕಾಣತೊಡಗಿತ್ತು.

ನೀಲಿ ಹೊತ್ತ ಆಗಸದಡಿಯಲಿ ಹೂ ಹಾಸಿಗೆಯಂತಹ ಹುಲ್ಲ ಮೇಲಿನ ಸುಂದರ ಪ್ರಯಾಣ. ಸ್ವಾಗತಕ್ಕೆ ನೀಲ ಮತ್ತು ಗಾಢ ಗುಲಾಲಿಯ ಕರ್ಣ ಕುಂಡಲ ಗಿಡಗಳು ಪೂರ್ಣ ಕುಂಭ ಹಿಡಿದು ಬಂದಿದ್ದವು. ನೀಲ ಕುರುಂಜಿ ಎಂಬ ವಿಶಿಷ್ಟ ಹೂವಿನ ನೆನಪಾಯಿತು. ಕೂಡಲೇ ಸಂಶೋಧನೆಗೆ ಇಳಿದೆ. ಮತ್ತೊಮ್ಮೆ ಬಂದು ಸಂಶೋಧಕನಾಗುವಿಯಂತೆ ಎಂದು ಗೆಳೆಯ ಕಾಲೆಳೆದನಾದುದರಿಂದ ಬೆಟ್ಟದೆಡೆಗೆ ಹೊರಳುವವನಾದೆ. ಗಾಳಿಯ ಕಣ ಕಣದಲ್ಲೂ ಹೂವ ಗಂಧ. ಚೇತೋಹಾರಿ ಚೆಲುವಿನ ಗುಚ್ಛ. ದಾರಿಯುದ್ದಕ್ಕೂ ತಂಪು ಗಾಳಿಯ ಸಾಂತ್ವನ. ಬಲದ ದಿಕ್ಕಿಗೆ ತೀವ್ರ ಕಣಿವೆ. ದೂರದಲ್ಲೆಲ್ಲೋ ಪ್ರಪಾತದ್ಲಿ ಎರಡು ಒಂಟಿ ಮನೆಗಳು. ನಿರ್ಮಲವಾಗಿ ಬದುಕುವ ಇವರ ಜೀವನೋತ್ಸಾಹ. ಇಲ್ಲಗಳ ನಡುವೆಯೂ ನಗುವ ನಯನಗಳು ನಗರವಾಸಿಗಳಾದ ನಮ್ಮ ನಿದ್ದೆ ಕೆಡಿಸಿದವು. ಆಗಾಗ ಕೇಳಿಬರುವ ದನಗಳ ಕೊರಳ ನಿನಾದ. ಜೇನಿಗೆ ಮುತ್ತಿಡುವ ದುಂಬಿಗಡಣ. ಇಂಗ್ಲೀಷ್‌ನ ಎಲ್ ಆಕಾರದಲ್ಲಿ ಹರವಿನಿಂತ ಗುಡ್ಡ. ಗುಡ್ಡಗುಂಟ ಕೇವಲ ಎರಡೇ ಎರಡು ಇಳಿಜಾರು. ಬಾಕಿ ಎಲ್ಲವೂ ಆರೋಹಣ. ಈ ಗುಡ್ಡ ಜೇನುಕಲ್ಲು ಹೇಗಾಯಿತು ಎಂದು ಚಿಂತಿಸುತ್ತಾ ಮೇಲೇರಿದೆ.

ನೆತ್ತಿಯಲಿ ನಿಂತು

ನಿರಹಂಕಾರಿ ಗುಡ್ಡದ ನೆತ್ತಿಯಲಿ ನಿಂತಾಗ ಸೂರ್ಯನು ನಡು ನೆತ್ತಿಯ ಮೇಲೆ ಕತ್ತಿ ಝಳಪಿಸುತಲಿದ್ದ. ಬೆಟ್ಟದ ವಿಹಂಗಮತೆಗೆ ಹೃದಯ ಅದಾವುದೋ ಮಧುರ ರಾಗ ಹಚ್ಚಿ ಹಾಡುತ್ತಿತ್ತು. ಹುಲ್ಲಿನ ಚಾದರ ಹೊದ್ದ ಶಿಖರಗಳು ಮೆರವಣಿಗೆ ಹೊರಟಿದ್ದವು. ಹಸಿರು ಜುಟ್ಟು ಬಿಟ್ಟ ನೂರಾರು ಸುಂದರಾಂಗನೆಯರು ಸುತ್ತಲೂ ನೆರೆದಿದ್ದರು! ಅದರಲ್ಲೊಂದು ಎತ್ತಿನ ಭುಜ. ಎಂತಹ ಎಂಟೆದೆಯ ಬಂಟನನ್ನು ಬೆದರಿಸುವ ಅದರ ನೆತ್ತಿ ಇಲ್ಲಿಂದ ನಿಚ್ಚಳ. ಜಾರದಂತೆ ಸಮತೋಲನ ಕಾಪಾಡಿಕೊಂಡು ನೆತ್ತಿಯ ಸವರಿ ಬಂದವನೇ ವಿಕ್ರಮಾದಿತ್ಯ! ನೆತ್ತಿ ಮೇಲಿನ ಹುಲ್ಲ ಹಾಸಿಗೆಯಲಿ ಒಂದರ್ಧ ಗಂಟೆ ವಿರಮಿಸಿ ಬುತ್ತಿಗಂಟಿನೊಡನೆ ಹೊರಟು ಬಿಟ್ಟೆವು. ಮಾತಿಗೆ ಸೋತ ಪದಗಳು ಬೆಟ್ಟದ ಪದತಲದಲಿ ಒಮ್ಮೆಗೇ ಬಿದ್ದವು.

ಬೆಟ್ಟದ ತುದಿಗೆ ಒಂದು ಸಲಾಂ ಹೇಳಿ ಇಳಿಯತೊಡಗಿದೆವು. ಹೊಟ್ಟೆ ಎಕ್ ದಂ ಚುರುಗುಟ್ಟುತ್ತಲಿತ್ತು ಬೆನ್ನ ಚೀಲದಲ್ಲಿದ್ದ ಪಲಾವಿನ ಪರಿಮಳಕ್ಕೆ ಮನಸೋತು ಮನಸೋ ಇಚ್ಛೆ (ಕೇವಲ 2 ಪ್ಲೇಟ್) ತಿಂದು ಕೆಳಗಿಳಿದೆವು. ಯಾವುದೇ ಪ್ಲಾಸ್ಟಿಕ್ ಪಳೆಯುಳಿಕೆನ್ನುಳಿಸದೇ ಸುಂದರ ನೆನಪುಗಳನ್ನು ಮಾತ್ರ ಉಳಿಸಿಕೊಂಡು ಬಂದೆವು. ತಾನೆಷ್ಟೇ ಏರಿದರೂ ತನ್ನ ಹಿರಿತನವ ಎಲ್ಲೂ ಸಾರದ ನಿರಂಹಕಾರಿ ಈ ಗುಡ್ಡ. ಸುಮ್ಮನಿದ್ದು ನಮಗೆ ಅನೇಕ ಪಾಠ ಕಲಿಸಿತ್ತು. ಭರ್ಜರಿ ಭೋಜನದ ತರುವಾಯ ನಮ್ಮನ್ನು ಬೀಳ್ಕೊಟ್ಟಿತು. ಮತ್ತೆ ಮತ್ತೆ ನನ್ನೆದೆಯದಲ್ಲಿ ಜೇನುಕಲ್ಲು ಗುಡ್ಡ ಮಾಲ ಕೌಂಸ್ ರಾಗ ಹೊಮ್ಮಿಸುತ್ತಲೇ ಇದೆ. ನಿಮ್ಮೆದೆಯ ರಾಗ ಕೇಳಲು ಒಮ್ಮೆ ಒಂಟಿಯಾಗಿ ಭೇಟಿ ಕೊಡಿ.

(ಚಿತ್ರಗಳು : ಲೇಖಕರವು)

ನಾನು ಪ್ರೀತಿಸಿದ ವ್ಯಕ್ತಿಗೆ ಅದಾಗಲೇ ಮದುವೆಯಾಗಿದೆ!

Ask the Editor

» ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಪ್ರಣೀತಾ (ಇಮೇಲ್ ಮೂಲಕ)

● **ಸಂಪಾದಕರೇ, ನನಗೆ ಇಪ್ಪತ್ತೆಂಟು ವರ್ಷ. ಖಾಸಗಿ ಕಂಪನಿಯಲ್ಲಿ ಉದ್ಯೋಗದಲ್ಲಿದ್ದೇನೆ. ಕಳೆದ ನಾಲ್ಕು ತಿಂಗಳುಗಳಿಂದ ನನ್ನೊಂದಿಗೆ ಕೆಲಸ ಮಾಡುವವನೊಬ್ಬನನ್ನು ಪ್ರೀತಿಸಲಾರಂಭಿಸಿದೆ. ಆತ ಬೇರೆ ಜಾತಿಯವನಾದರೂ, ನನ್ನ ತಂದೆ-ತಾಯಿಯನ್ನು ಒಪ್ಪಿಸಿದೆ. ಆದರೆ ಇತ್ತೀಚೆಗೆ ನನಗೆ ತಿಳಿದು ಬಂದ ಸಂಗತಿಯೆಂದರೆ, ಆತನಿಗೆ ಈಗಾಗಲೇ ಒಂದು ಮದುವೆಯಾಗಿದೆ ಎಂಬುದು. ಈ ವಿಷಯ ಗೊತ್ತಾದ ನಂತರದಿಂದ ನಾನು ಮಾನಸಿಕವಾಗಿ ಬಹಳ ಘಾಸಿಗೊಳಗಾಗಿದ್ದೇನೆ. ಇಂಥ ವ್ಯಕ್ತಿ ಜತೆ ನಾನು ಒಡನಾಟವನ್ನು ಮುಂದುವರಿಸಬೇಕಾ ಅಥವಾ ಅವನನ್ನು ಮುಲಾಜಿಲ್ಲದೇ ತಿರಸ್ಕರಿಸಬೇಕಾ?**

-ಪ್ರಣೀತಾ ಅವರೇ, ನೀವು ಪ್ರೀತಿಸುವ ವ್ಯಕ್ತಿ ತನಗೆ ಈಗಾಗಲೇ ಮದುವೆಯಾಗಿರುವ ವಿಷಯವನ್ನು ಮುಚ್ಚಿಟ್ಟಿದ್ದಾನೆ. ಇದು ನಂಬಿಕೆ ದ್ರೋಹ. ಇಂಥ ಅಸಹ್ಯದ ವ್ಯಕ್ತಿಯ ಜತೆ ಒಡನಾಟವನ್ನು ಮುಂದುವರಿಸಬೇಕಾ ಎಂದು ಕೇಳುತ್ತೀರಲ್ಲ? ಆ ವ್ಯಕ್ತಿಯನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಿ. ಆತನಿಗೆ ಮದುವೆಯಾಗಿದ್ದು ನಿಮಗೆ ಗೊತ್ತಾಗದಿದ್ದರೆ, ಆತ ನಂಬಿಸಿ ನಿಮ್ಮನ್ನೂ ವಿವಾಹವಾಗಿ, ಮೊದಲ ಪತ್ನಿಯನ್ನೂ ವಂಚಿಸುತ್ತಿದ್ದ. ಆತನದು ಪ್ರೀತಿಯಲ್ಲ, ವಂಚನೆ. ನಿಸ್ಸಂದೇಹವಾಗಿ, ಆತ ತೀರಾ ಅಪಾಯಕಾರಿ ಮನುಷ್ಯ. ಪ್ರೀತಿಯ ಬೆಲೆ ಗೊತ್ತಿಲ್ಲದ. ಅಂಥವರ ಬಗ್ಗೆ ತಿರಸ್ಕಾರ ಇಟ್ಟುಕೊಳ್ಳದಿದ್ದರೆ, ನಿಮ್ಮಂಥ ಅಮಾಯಕ ಹುಡುಗಿಯರು ಮೋಸ ಹೋಗುತ್ತಾರೆ.

ಬಿಜೆಪಿ ಜತೆ ಸರಕಾರ ನಡೆಸಿ, ಅಧಿಕಾರ ಕೊಡುವಾಗ ಅವರಿಗೆ ಕೈಕೊಟ್ಟು, ನಂತರ ಕಾಂಗ್ರೆಸ್ ಜತೆ ಸೇರಿ ಸರಕಾರ ಮಾಡಿದ, ನಂತರ ಆ ಪಕ್ಷವನ್ನೂ ಬೈದು, ಈಗ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡ ಜೆಡಿಎಸ್ ನಡೆಯನ್ನು ರಾಜಕಾರಣದಲ್ಲಿ ಮಾತ್ರ ಸಹಿಸಿಕೊಳ್ಳಬಹುದು. ರಾಜಕಾರಣ ಬಿಟ್ಟು, ನಮ್ಮ ಜೀವನದಲ್ಲಿ ಇಂಥ ಹುಚ್ಚು ನಡೆಯನ್ನು ಸಹಿಸಿಕೊಳ್ಳುವುದುಂಟಾ? ಅದೆಷ್ಟೇ ಬಾರಿ ತನ್ನ ಪೊರೆಯನ್ನು ಕಳಚಿದರೂ ಹಾವು ಹಾವೇ. ಜೀವನದಲ್ಲಿ ಒಮ್ಮೆ ಯಾರಿಂದಲಾದರೂ ಕಚ್ಚಿಸಿಕೊಂಡು, ಅವರನ್ನು ಪುನಃ ಒಳಗೆ ಬಿಟ್ಟುಕೊಳ್ಳುವಾಗ ಸಾಕಷ್ಟು ಸಲ ಯೋಚಿಸಬೇಕು. ಒಂದೇ ಹಾವಿನಿಂದ ಎರಡೆರಡು ಬಾರಿ ಕಚ್ಚಿಸಿಕೊಳ್ಳಬಾರದು.

ಪತ್ನಿಯಿರುವಾಗಲೇ ಇನ್ನೊಬ್ಬ ಹುಡುಗಿಯನ್ನು ಪ್ರೀತಿಸಿ, ಮದುವೆಯಾಗಲು ಮುಂದಾದ ನಿಮ್ಮ ಪ್ರಿಯಕರ ಮುಂದೆ ನಿಮಗೂ ಮೋಸ ಮಾಡಲು ಹೇಸುವ ವ್ಯಕ್ತಿಯಲ್ಲ. ಅಂಥ ವ್ಯಕ್ತಿಯನ್ನು ತಿರಸ್ಕರಿಸುವುದಷ್ಟೇ ಅಲ್ಲ, ಪೊಲೀಸ್ ಕೇಸ್ ಹಾಕಿ ಪಾಠ ಕಲಿಸಬೇಕು. ನಿಮ್ಮಂಥವರು ಮರ್ಯಾದೆಗೆ ಅಂಜಿ ಅಂಥವನನ್ನು ಸುಮ್ಮನೆ ಬಿಡುತ್ತೀರಿ. ಆತನ ಹೆಂಡತಿ, ಅವನ ತಂದೆ-ತಾಯಿ, ಬಂಧು-ಬಳಗಕ್ಕೂ ಈ ವಿಷಯವನ್ನು ತಿಳಿಸಿ. ನಿಮ್ಮ ಆಫೀಸಿನಲ್ಲೂ ಆತನ ಮಹಾತ್ಮೆಯನ್ನು ಡಂಗುರ ಸಾರಿ. ಚಪಲ ಚನ್ನಿಗರಾಯನಿಗೆ 'ಶೆಡ್ ದರ್ಶನ' ಮಾಡಿಸುವ ಅಗತ್ಯವಿಲ್ಲ. ಆದರೆ ಬಿಸಿಬಿಸಿ ಕಜ್ಜಾಯದ ರುಚಿಯನ್ನಾದರೂ ತೋರಿಸದೇ ಬಿಡಬೇಡಿ.

ಮಣ್ಣೂರು ರಾಜಾನಂದ, (ಇಮೇಲ್ ಮೂಲಕ)

● **ಸಂಪಾದಕರೇ, ನನ್ನದೊಂದು ವಿಚಿತ್ರ ಸಮಸ್ಯೆ. ನನಗೆ ತಲೆದಿಂಬು ಬದಲಾದರೆ ನಿದ್ದೆ ಬರುವುದಿಲ್ಲ. ನೆಂಟರ ಮನೆಗೆ ಹೋದಾಗ, ಹೋಟೆಲ್-ರೆಸಾರ್ಟುಗಳಿಗೆ ಹೋದಾಗ ದಿಂಬಿನ ಕಾರಣದಿಂದ ನಿದ್ದೆಯೇ ಬರುವುದಿಲ್ಲ. ತಾಸುಗಟ್ಟಲೆ ಹಾಸಿಗೆ ಮೇಲೆ ಹೊರಳಾಡುತ್ತೇನೆ. ಏನು ಮಾಡುವುದು ಎಂಬುದು ತಿಳಿಯುತ್ತಿಲ್ಲ.**

-ರಾಜಾನಂದ ಅವರೇ, ಒಂದು ಸುಂದರ ನಿದ್ದೆಯನ್ನು ಕೆಡಿಸಲು ತಲೆದಿಂಬು ಸಾಕು. ಅದಕ್ಕೆ ಅಂಥ ಶಕ್ತಿಯಿದೆ. ಮೆತ್ತನೆಯ ಹಾಸಿಗೆಯಿದ್ದರೂ, ಒರಟು ಅಥವಾ ಗಟ್ಟಿಯಾದ ತಲೆದಿಂಬು ಸುಖ ನಿದ್ದೆಗೆ ಕಂಟಕವಾಗಬಲ್ಲುದು. 'ರೀಪೋಸ್' ಹಾಸಿಗೆ ಕಂಪನಿಯ ರಾಮನಾಥ ಭಟ್ ಅವರನ್ನು ಕೇಳಿದರೆ, ನಿದ್ದೆಗೂ, ಹಾಸಿಗೆಗೂ, ದೇಶದ ಜಿಡಿಪಿಗೂ ನೇರ ಸಂಬಂಧ ಇದೆ ಎಂದು ಹೇಳುತ್ತಾರೆ. ಅದು ನಿಜ ಕೂಡ.

ತಲೆದಿಂಬಿನ ವಿಷಯವಾಗಿ ನೀವು ಹೇಳುವಂತೆ, ಅನೇಕರು ಹೇಳುವುದನ್ನು ಕೇಳಿದ್ದೇನೆ. ಕೆಲವರು ಒಂದು ತಲೆದಿಂಬಿಗೆ ಫಿಕ್ಸ್ ಆಗಿರುತ್ತಾರೆ. ಅದನ್ನೇ ರೂಢಿಸಿಕೊಂಡಿರುತ್ತಾರೆ. ಅವರಿಗೆ ಬೇರೆ ತಲೆದಿಂಬು ಕಿರಿಕಿರಿಯುಂಟು ಮಾಡುತ್ತದೆ. ಇನ್ನು ಕೆಲವರಿಗೆ ಮಲಗುವ ಸ್ಥಳ ಬದಲಾದರೂ ನಿದ್ದೆ ಬರುವುದಿಲ್ಲ. ಆದರೆ ನಿರಂತರ ಪ್ರವಾಸ ಮಾಡುವವರು ಈ ಸಮಸ್ಯೆಗೆ ಬಹಳ ಬೇಗ ಹೊಂದಿಕೊಳ್ಳುತ್ತಾರೆ. ತಲೆದಿಂಬು ಬದಲಾದರೆ ನಿದ್ದೆ ಬರದವರು ಬೇರೆ ಊರುಗಳಿಗೆ ಹೋಗುವಾಗ, ತಮ್ಮ ತಲೆದಿಂಬುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಇದು ಎಲ್ಲ ಸಂದರ್ಭಗಳಲ್ಲೂ ಸಾಧ್ಯವಾಗಲಿಕ್ಕಿಲ್ಲ. ಅದರಲ್ಲೂ ವಿಶೇಷವಾಗಿ, ಹೊರ ರಾಜ್ಯ, ದೇಶಗಳಿಗೆ ಹೋಗುವಾಗ, ತಲೆದಿಂಬನ್ನು ತೆಗೆದುಕೊಂಡು ಹೋಗಲು ಆಗಲಿಕ್ಕಿಲ್ಲ. ಆಗಲೂ ಈ ಸಮಸ್ಯೆ ತಲೆದೋರಬಹುದು.

ಸಾಮಾನ್ಯವಾಗಿ ಉತ್ತಮ ಅಥವಾ ಸ್ಟಾರ್ ಹೋಟೆಲುಗಳಲ್ಲಿ ಮೆತ್ತನೆಯ ನಾಲ್ಕೈದು ಬಗೆಯ ತಲೆದಿಂಬುಗಳನ್ನು ಇಟ್ಟಿರುತ್ತಾರೆ. ಕೆಲವು ಲಾಡ್ಜ್ ಗಳಲ್ಲಿ ತಲೆದಿಂಬಿಗೆ ಹೆಚ್ಚಿನ ಮಹತ್ವವನ್ನು ಕೊಡುವುದಿಲ್ಲ. ಕಾಸಿಗೆ ತಕ್ಕ ಹಾಸಿಗೆ, ದಿಂಬು. ನೆಂಟರ ಮನೆಗೆ ಹೋದಾಗಲೂ ಇಂಥ ಸಮಸ್ಯೆ ಎದುರಾಗಬಹುದು.

ಅಷ್ಟಕ್ಕೂ ಇದು ಬರೀ ದಿಂಬಿನ ಸಮಸ್ಯೆಯೊಂದೇ ಅಲ್ಲ. ನಿಮ್ಮ ಕುತ್ತಿಗೆ, ಮಲಗುವ ಭಂಗಿ, sleep order ಸಮಸ್ಯೆಯೂ ಆಗಿರಬಹುದು. ಅಂಥ ಸಂದರ್ಭದಲ್ಲಿ ನೀವು ವೈದ್ಯರನ್ನು ಸಂಪರ್ಕಿಸುವುದು ಲೇಸು. ತಲೆದಿಂಬಿನದು ನಿರ್ಲಕ್ಷಿಸುವಷ್ಟು ಸಣ್ಣ ಸಮಸ್ಯೆ ಅಲ್ಲ. ''Sleep is the best meditation'' ಎಂದು ಧರ್ಮಗುರು ದಲೈ ಲಾಮಾ ಅವರಂಥ ವ್ಯಕ್ತಿಗಳು ಹೇಳುವುದನ್ನು ಕೇಳಿದ್ದೇನೆ.

ಇನ್ನೊಂದು ಮಾತನ್ನು ಹೇಳುತ್ತೇನೆ-ಪತ್ನಿಯ ಜತೆ ಮಲಗುವುದನ್ನು ರೂಢಿಸಿಕೊಳ್ಳಿ. ಯಾವ ತಲೆದಿಂಬಿನ ಅಗತ್ಯವೂ ಇರುವುದಿಲ್ಲ!

ಮಂಜುನಾಥ ದೇವಾಡಿಗ, ಅಂಕೋಲಾ

● **ಭಟ್ರೇ, ನಾನು ಬೆಂಗಳೂರಿನಲ್ಲಿ ಆರು ವರ್ಷಗಳ ಕಾಲ ಇದ್ದು, ಕಳೆದ ಎಂಟು ತಿಂಗಳ ಹಿಂದೆ ನನ್ನೂರಿಗೆ ವಾಪಸ್ ಬಂದಿದ್ದೇನೆ. ಇತ್ತೀಚೆಗೆ ಮದುವೆಯಾಗಿ ಈಗ ಹಳ್ಳಿಯಲ್ಲಿ ವಾಸಿಸುತ್ತಿದ್ದೇನೆ. ಸಾಯಂಕಾಲ ವಾಕಿಂಗ್ ಹೋಗುವಾಗ ನನ್ನ ಪತ್ನಿಯ ಕೈ ಹಿಡಿದು ಹೋದರೆ, ಊರಿನವರೆಲ್ಲ ನಮ್ಮನ್ನು ವಿಚಿತ್ರವಾಗಿ ನೋಡುತ್ತಾರೆ. 'ನಮ್ಮೂರಿನಲ್ಲಿ ಹೆಂಡತಿಯನ್ನು ಪ್ರೀತಿಸುವವನು ಇವನೊಬ್ಬನೇ' ಎಂದು ವ್ಯಂಗ್ಯವಾಗಿ ಆಡಿಕೊಳ್ಳುತ್ತಾರೆ. ನನ್ನ ಪತ್ನಿಯ ಕೈಹಿಡಿದು ವಾಕಿಂಗ್ ಹೋಗುವುದು ತಪ್ಪಾ?**

-ಮಂಜುನಾಥ ಅವರೇ, ನಿಮ್ಮ ಹೆಂಡತಿಯ ಕೈಹಿಡಿದು ವಾಕಿಂಗ್ ಹೋಗುವುದು ಖಂಡಿತವಾಗಿಯೂ ತಪ್ಪಲ್ಲ, ಬೇರೆಯವರ ಹೆಂಡತಿಯ ಜತೆ ಹಾಗೆ ಮಾಡುವುದು ತಪ್ಪು. ಎಷ್ಟೇ ಪ್ರೀತಿ-ಅನ್ಯೋನ್ಯ ಇದ್ದರೂ, ನಮ್ಮ ದೇಶದ ಹಳ್ಳಿಗಳಲ್ಲಿ ಯಾರೂ ಅವರ ಹೆಂಡತಿಯ ಕೈ ಹಿಡಿದು ಹೋಗುವುದಿಲ್ಲ. ಅಮೆರಿಕ ಅಧ್ಯಕ್ಷ ಯಾವತ್ತೂ ಅವನ ಪತ್ನಿಯ ಕೈ ಹಿಡಿದೇ ಬರುತ್ತಾನೆ, ಹೋಗುತ್ತಾನೆ. ಅಲ್ಲಿ ಪತ್ನಿಯ ಕೈ ಹಿಡಿಯದಿದ್ದರೆ, ಏನೋ ಐಬು ಹುಡುಕುತ್ತಾರೆ. ನಮ್ಮಲ್ಲಿ, ಅದರಲ್ಲೂ ಹಳ್ಳಿಗಳಲ್ಲಿ ಆ ರೀತಿ ರಿವಾಜು ಇಲ್ಲವೇ ಇಲ್ಲ. ಹೀಗಾಗಿ ನಿಮ್ಮಿಬ್ಬರನ್ನು ನಿಮ್ಮೂರಿನ ಜನ ವಿಚಿತ್ರವಾಗಿ ನೋಡಿ ಆಡಿಕೊಳ್ಳುತ್ತಿರಬಹುದು.

ಇಷ್ಟಾಗಿಯೂ ಹೇಳುತ್ತೇನೆ, ನೀವು ಮಾಡುತ್ತಿರುವುದು ತಪ್ಪೇನಲ್ಲ. ಅದು ಅಶ್ಲೀಲ ನಡೆಯಲ್ಲ. ಅಷ್ಟಕ್ಕೂ ಹೆಂಡತಿಯ ಕೈ ಹಿಡಿಯಬೇಕಾದವನು ಗಂಡನೇ ಅಲ್ಲವೇ? ನಿಮ್ಮೂರಿನ ಜನ ಹಾಗೆ ಮಾಡದಿರುವುದರಿಂದ ಅವರಿಗೆ ಇದು ತುಸು ವಿಚಿತ್ರವಾಗಿ ಕಾಣುತ್ತಿರಬಹುದು. ಜನ ಆಡಿಕೊಳ್ಳುತ್ತಾರೆಂದು ನೀವು ನಿಮ್ಮ ಧೋರಣೆ ಅಥವಾ ವರ್ತನೆಯನ್ನು ಬದಲಿಸಬೇಕಿಲ್ಲ. ಕ್ರಮೇಣ ನಿಮ್ಮೂರಿನ ಜನರಿಗೆ ಇದು ಸಹಜ ಎನಿಸಬಹುದು, ಅವರೂ ಅಡ್ಜಸ್ಟ್ ಆಗಬಹುದು.

ಆದರೆ ಎಷ್ಟೆಂದರೂ ನನ್ನ ಪತ್ನಿಯಲ್ಲವೇ ಎಂದು ನಾಲ್ಕು ಜನರ ಮುಂದೆ ಊರಿನ ಬೀದಿಯಲ್ಲಿ ತಬ್ಬಿ, ಚುಂಬಿಸಲು ಹೋಗಬೇಡಿ. ನಿಮ್ಮ ನಡೆ ಹೆಂಡತಿಯ ಕೈ ಹಿಡಿದು ನಡೆಯುವುದಕ್ಕಷ್ಟೇ ಸೀಮಿತವಾಗಿರಲಿ, ಸಾಕು.

ವಿಜಯ್ ಶಬಾದಿ, ಮೈಸೂರು

● **ಭಟ್ರೇ, ನಮ್ಮ ಮನೆಯಲ್ಲಿ ನಾವೆಲ್ಲರೂ ಹಿರಿಯರಿಗೆ ಬಹುವಚನ ಕೊಟ್ಟೇ ಮಾತಾಡುತ್ತೇವೆ. ಕೆಲಸಗಾರರಿಗೂ 'ಹೋಗಿ, ಬನ್ನಿ, ಮಾಡಿ' ಎಂದೇ ಬಹುವಚನದಲ್ಲಿ ಹೇಳುತ್ತೇವೆ. ಅಪ್ಪಿತಪ್ಪಿ ಏಕವಚನ ಪ್ರಯೋಗಿಸಿದರೆ, ನನ್ನ ತಂದೆಯವರು ರೇಗುತ್ತಾರೆ. ಕಿರಿಯರಿಗೂ ಏಕವಚನ ಬಳಸಕೂಡದು ಎಂದು ಅವರು ಹೇಳುತ್ತಾರೆ. ಆದರೆ ಇತ್ತೀಚೆಗೆ ಸರಕಾರದ ಜವಾಬ್ದಾರಿ ಸ್ಥಾನದಲ್ಲಿರುವವರು ಏಕವಚನದಲ್ಲಿ ಬೈದುಕೊಳ್ಳುವುದನ್ನು ಗಮನಿಸುತ್ತಿದ್ದೇನೆ. ಸಾರ್ವಜನಿಕ ಜೀವನದಲ್ಲಿ ಮೇಲ್ಪಂಕ್ತಿ ಹಾಕುವ ನಾಯಕರ ಈ ನಡೆ ತಪ್ಪು ಸಂದೇಶವನ್ನು ರವಾನಿಸುವುದಿಲ್ಲವೇ? ಈ ನಾಯಕರಿಗೆ ನೀವಾದರೂ ಬುದ್ಧಿ ಹೇಳಬಾರದಾ?**

-ವಿಜಯ್ ಅವರೇ, ನಿಮಗೆ ನಿಮ್ಮ ತಂದೆ-ತಾಯಿ ಉತ್ತಮ ಸಂಸ್ಕಾರ ಕೊಟ್ಟಿದ್ದಾರೆ ಎಂಬುದು ಇದರಿಂದ ಗೊತ್ತಾಗುತ್ತದೆ. ನಮಗಿಂತ ಚಿಕ್ಕವರಿಗೂ ಬಹುವಚನ ಕೊಡುವುದು ಒಳ್ಳೆಯದೇ. 'ಎನಗಿಂತ ಕಿರಿಯರಿಲ್ಲ' ಎಂದು ಭಾವಿಸಿದರೆ ಎಲ್ಲರಿಗೂ ಗೌರವ ಕೊಟ್ಟೇ ಮಾತಾಡಬೇಕೆನಿಸುತ್ತದೆ. ಬಹುವಚನ ಯಾವತ್ತೂ ನಮಗೆ ಶೋಭೆ. ನಿಮಗಿಂತ ಕಿರಿಯರಾದರೂ ಅವರ ಸ್ಥಾನಮಾನದಿಂದ ಕೆಲವರಿಗೆ ಏಕವಚನ ಪ್ರಯೋಗಿಸಲು ಆಗುವುದಿಲ್ಲ. ಹೀಗಾಗಿ ಬಹುವಚನ ಪ್ರಯೋಗ ಯಾವತ್ತೂ ಒಳ್ಳೆಯದೇ.

ಆದರೆ ಇತ್ತೀಚಿನ ದಿನಗಳಲ್ಲಿ ನಮ್ಮ ನಾಯಕರು, ಸಚಿವರು ಮತ್ತು ಜವಾಬ್ದಾರಿ ಸ್ಥಾನದಲ್ಲಿರುವವರು ಏಕವಚನದಲ್ಲಿ ಬೈದುಕೊಳ್ಳುವುದನ್ನು ನಾನೂ ಗಮನಿಸಿದ್ದೇನೆ. ಇದು ಅವರ ಬೌದ್ಧಿಕ ಮಟ್ಟವನ್ನು ತೋರಿಸುತ್ತದೆ. ಸಾರ್ವಜನಿಕ ಜೀವನದ ಪಾವಿತ್ರ್ಯ ಕಾಪಾಡುವ ದೃಷ್ಟಿಯಿಂದಲಾದರೂ ಅವರು ಬಹುವಚನ ಪ್ರಯೋಗ ಮಾಡಬಹುದಿತ್ತು. ಆದರೆ ಕೆಲವರು ತೀರಾ ಪರ್ಸನಲ್ ಮಟ್ಟಕ್ಕೆ ಹೋಗುತ್ತಾರೆ. When you have no basis for an argument, abuse the plaintiff in singularಎಂಬ ಮಾತಿದೆ. ಪ್ರಾಯಶಃ ಅವರಿಗೆ ಏಕವಚನ ಪ್ರಯೋಗವೇ ಹೆಚ್ಚು ಸಮಾಧಾನ ಮತ್ತು ಸಂತಸ ನೀಡುತ್ತಿರಬೇಕು. ಅವರು ಜನ ಏನು ಭಾವಿಸುತ್ತಾರೆ ಎಂಬ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿರಲಿಕ್ಕಿಲ್ಲ.

ಕೆಲವೊಮ್ಮೆ ಮಹಾಭಂಡರಿಗೆ ಬಹುವಚನದ ಮಹತ್ವ ಅರ್ಥವಾಗುವುದಿಲ್ಲ. 'ಕತ್ತೆಗೇನು ಗೊತ್ತು ಕಸ್ತೂರಿಯ ಸುವಾಸನೆ' ಎಂಬ ಮಾತನ್ನು ಕೇಳಿರಬಹುದು. ಅಂಥವರಿಗೆ ಅವರವರ ಯೋಗ್ಯತೆಗೆ ಅನುಸಾರವಾಗಿ 'ವಚನ'ವನ್ನು ಬಳಸಬೇಕಾಗುತ್ತದೆ. ಬಳಸಿದ 'ವಚನ'ದಿಂದ ಅವರಿಗೆ ಅವರ ಸ್ಥಾನವನ್ನು ತೋರಿಸಿಕೊಟ್ಟಂತಾದೀತು.

ಹೀಗಾಗಿ ಕೆಲವೊಮ್ಮೆ ಏಕವಚನ ಅನಿವಾರ್ಯ ಎಂದು ನಾಯಕರು ಭಾವಿಸಿರಬಹುದು. 'ವಚನ'ಭ್ರಷ್ಟರಾದವರಿಗೆ ವಚನದ ಮಹತ್ವ ಗೊತ್ತಾಗುವುದಿಲ್ಲ.

ಯಾರು ಏಕವಚನ ಬಳಸುತ್ತಾರೋ, ಅವರು ತಮಗೆ ಎಲ್ಲರೂ ಬಹುವಚನದಲ್ಲೇ ಪ್ರತಿಕ್ರಿಯಿಸಬೇಕೆಂದು ಮಾತ್ರ ನಿರೀಕ್ಷಿಸಬಾರದು. ಏಕವಚನದಲ್ಲಿ ವಾಪಸ್ ಕೊಟ್ಟರೆ ಸ್ವೀಕರಿಸಬೇಕು, ಸಹಿಸಿಕೊಳ್ಳಬೇಕು. ಕಾರಣ ನೀವು ಏನನ್ನು ಕೊಡುತ್ತೀರೋ, ಅದೇ ವಾಪಸ್ ಬರುತ್ತದೆ. ನೀವಾದರೂ ಈ ನಾಯಕರಿಗೆ ಬುದ್ಧಿ ಹೇಳಬಾರದಾ ಎಂದು ಕೇಳಿದ್ದೀರಿ. ನಮ್ಮ ನಾಯಕರಿಗೆ ಗೊತ್ತಿಲ್ಲದಿರುವುದು ಏನಿದೆ? ಅವರು ತ್ರಿಕಾಲ ಜ್ಞಾನಿಗಳು. ಅವರಿಗೆ ಬುದ್ಧಿ ಹೇಳುವವರಿಗೆ ಬುದ್ಧಿ ಇಲ್ಲ!

ಪ್ರಕಾಶ ಹೆಗಡೆ, (ಇಮೇಲ್ ಮೂಲಕ)

● **ಭಟ್ಟರೇ, ಕೆಲವರು ನಿಗದಿತ ಸಮಯಕ್ಕೆ ಸರಿಯಾಗಿ ಯಾವುದೇ ಮೀಟಿಂಗ್‌ಗಳಿಗೆ ಬರುವುದಿಲ್ಲ. ಇನ್ನು ಪ್ರಶ್ನಿಸಿದರೆ, ಸಮಯಕ್ಕೆ ಸರಿಯಾಗಿ ಬಂದರೆ ಅವನಿಗೆ ಕೆಲಸವಿಲ್ಲ ಎಂದುಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಅದೂ ಅಲ್ಲದೇ ಈಗ ಸಮಯ ಪ್ರಜ್ಞೆ ಎನ್ನುವುದು out of fashion ಅಂತಾರೆ. ಇಂಥವರಿಗೆ ಹೇಗೆ ಸಮಯ ಪಜ್ಞೆಯ ಬಗ್ಗೆ ತಿಳಿಹೇಳುವುದು ?**

-ಪ್ರಕಾಶ ಅವರೇ, ಸಮಯಪಾಲನೆ (Punctuality)ಯ ಮುಖ್ಯ ಸಮಸ್ಯೆ ಅಂದ್ರೆ, ಈ ಶ್ರೇಷ್ಠ ಗುಣವನ್ನು ಪ್ರಶಂಸಿಸಲು ಯಾರೂ ಅಲ್ಲಿ ಇಲ್ಲದಿರುವುದು. ಇದು ವಕ್ರತುಂಡೋಕ್ತಿ ಅಲ್ಲ. ವಾಸ್ತವ ಕೂಡ. ಹಾಗೆಂದು ಸಮಯಪಾಲನೆಗೆ ಮಹತ್ವ ನೀಡಬಾರದು ಎಂದಲ್ಲ. ಅದು ಯಾವತ್ತಿದ್ದರೂ ಮಹಾನ್ ಗುಣ. ಅದು ಎಂದೂ out of fashion ಆಗಲು ಸಾಧ್ಯವಿಲ್ಲ. ಸಮಯಪಾಲನೆ ಅಂದ್ರೆ, ನಮ್ಮ ಮಾತಿನ ಪ್ರಕಾರ ನಡೆಯುವುದು. ನಾವು ನೀಡಬೇಕಾದ ಮೌಲ್ಯಕ್ಕೆ ಗೌರವ ಕೊಡುವುದು. Punctuality is not about being on time. It is basically about respecting your own commitments ಎಂಬ ಮಾತನ್ನು ಕೇಳಿರಬಹುದು.

ಉಪರಾಷ್ಟ್ರಪತಿಯಾಗಿ ನಿವೃತ್ತರಾದ ವೆಂಕಯ್ಯ ನಾಯ್ಡು ಅವರು ಯಾವತ್ತೂ ಸಮಯಕ್ಕೆ ಬಹಳ ಮಹತ್ವವನ್ನು ನೀಡುತ್ತಿದ್ದರು. ಯಾವ ಕೆಲಸವನ್ನೂ ಕೊನೆ ಕ್ಷಣದಲ್ಲಿ ಮಾಡಬಾರದು ಎಂದು ಹೇಳುತ್ತಿದ್ದರು. ವಿಮಾನ ಅಥವಾ ರೈಲಿನಲ್ಲಿ ಪ್ರಯಾಣಿಸಬೇಕಾದಾಗ, ನಿಲ್ದಾಣಕ್ಕೆ ಕನಿಷ್ಠ ಅರ್ಧ-ಮುಕ್ಕಾಲು ಗಂಟೆ ಮುಂಚಿತವಾಗಿ ಹೋಗಿ ಕುಳಿತುಕೊಳ್ಳುತ್ತಿದ್ದರು. ಇಲ್ಲಿ ಮಾಡುವ ಕೆಲಸವನ್ನು ಅಲ್ಲಿ ಮಾಡಿದರಾಯಿತು ಎಂದು ಹೇಳುತ್ತಿದ್ದರು.

ಇದೇ ರೀತಿ ಉದ್ಯಮಿ ವಿಜಯ ಸಂಕೇಶ್ವರರು, ಮಠಾಧಿಪತಿಗಳಾದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಎಂ.ಶ್ರೀನಿವಾಸ ಅವರು. ಅದೆಷ್ಟೇ ಟ್ರಾಫಿಕ್ ಜಾಮ್ ಇರಲಿ, ಇವರಿಗೆ ಅದು ಅನ್ವಯವಾಗುವುದಿಲ್ಲ. Punctuality is the soul of respect ಎಂದು ಇವರು ಭಾವಿಸಿದಂತಿದೆ. ಹೀಗಾಗಿ ಸಮಯಪಾಲನೆಗೆ ಎಲ್ಲಿಲ್ಲದ ಮಹತ್ವ ಕೊಡುತ್ತಾರೆ. ಬೇರೆಯವರನ್ನು ಕಾಯಿಸುವುದೆಂದರೆ ದೊಡ್ಡಸ್ತಿಕೆಯನ್ನು ಮೆರೆಯುವುದು ಎಂದು ಕೆಲವರು ತಪ್ಪಾಗಿ ಭಾವಿಸಿರುತ್ತಾರೆ. ಅಂಥವರು ಮನಸ್ಸಿಗೆ ಬಂದ ಸಮಯಕ್ಕೆ ಹೋಗುತ್ತಾರೆ. ಅದು ಅವರ ವ್ಯಕ್ತಿತ್ವವನ್ನು ಹರಾಜು ಮಾಡುತ್ತದೆ ಎಂಬುದು ಗೊತ್ತಿರುವುದಿಲ್ಲ. ಜೀವನದಲ್ಲಿ ಸಮಯಕ್ಕೆ ಮಹತ್ವ ಕೊಡದವನು, ಜೀವನದಲ್ಲಿ ಮುಂದೆ ದೊಡ್ಡ ಬೆಲೆ ತೆರುತ್ತಾನೆ. ಕಾರಣ ಜೀವನದಲ್ಲಿ ಎಲ್ಲವನ್ನೂ ಖರೀದಿಸಬಹುದು, ದುಬಾರಿ ವಾಚನ್ನೂ. ಆದರೆ ಸಮಯವನ್ನಲ್ಲ. ಸಕಾಲಕ್ಕೆ ಬೆಲೆ ಕೊಡದವರಿಗೆ ಕಾಲವೇ ಬುದ್ಧಿ ಕಲಿಸುತ್ತದೆ. ಸುಮಾರು ನಾನೂರು ವರ್ಷಗಳ ಹಿಂದೆಯೇ ಕವಿ, ನಾಟಕಕಾರ, ಸಾಹಿತಿ ವಿಲಿಯಮ್ ಷೇಕ್ಸ್‌ಪಿಯರ್ Better three hours too soon than a minute too late ಎಂದು ಹೇಳಿದ್ದನ್ನು ಆಗಾಗ ನೆನಪಿಸಿಕೊಂಡರೂ ಸಾಕು.